

ಮೈಸೂರು ಮಿತ್ರ

ಮೈಸೂರು–ಮಂಡ್ಯ–ಚಾಮರಾಜನಗರ–ಕೊಡಗು–ಹಾಸನ

ಬೆಳಗಿನ ಪ್ರಾದೇಶಿಕ ದಿನಪತ್ರಿಕೆ

46

ಅಕ್ಟೋಬರ್ 31 ಶುಕ್ರವಾರ 2025

ಮೈಸೂರು ಸುದ್ದಿ: ದೂರವಾಣಿ: 2496520/21/26/27/28 ಜಾಹೀರಾತು: 2496522/23
ನಗರ ಕಚೇರಿಗಳು: ಕೆ.ಆರ್.ಸರ್ಕಲ್, ವಿಶ್ವೇಶ್ವರಯ್ಯ ಕಟ್ಟಡ Ph: 2431774, ಡಿ.ದೇವರಾಜ ಅರಸು ರಸ್ತೆ, Ph: 2428695
ಸುದ್ದಿ ಜಾಹೀರಾತಿಗಾಗಿ–ಮಂಡ್ಯ: 8762960325, ಚಾಮರಾಜನಗರ: 9242265657, ಕೊಡಗು: 9731469871

ಸಂಪುಟ: 46 | ಸಂಚಿಕೆ: 193 | ಪುಟಗಳು: 12
ಸುದ್ದಿ, ಫೋಟೋಗೆ: news@mysurumithra.com
ಜಾಹೀರಾತು: ad@mysurumithra.com, website: www.mysurumithra.com


₹4



ನ.21 ಇಲ್ಲವೇ 26ಕ್ಕೆ ಮುಖ್ಯಮಂತ್ರಿಯಾಗಿ

ಡಿಕೆಶಿ ಪದಗ್ರಹಣ?

● ರಾಜ್ಯದ 34ನೇ ಮುಖ್ಯಮಂತ್ರಿ ಪದಗ್ರಹಣಕ್ಕೆ ಮುಹೂರ್ತ ನಿಗದಿ ● ನ.11ಕ್ಕೆ ದೆಹಲಿಗೆ ಡಿಸಿಎಂ ಡಿಕೆಶಿ ಭೇಟಿ; ಈಗಾಗಲೇ ವರಿಷ್ಠರೊಂದಿಗೆ ನಿರಂತರ ಸಂಪರ್ಕ



ಬೆಂಗಳೂರು, ಅ.30(ಕೆಎಂಶಿ)– ಸಿದ್ದರಾಮಯ್ಯ ಆಪ್ತ ಸಚಿವರು ಎಷ್ಟೇ ಅಪಸ್ವರ ಎತ್ತಿದರೂ ಉಪ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಮುಖ್ಯಮಂತ್ರಿಯಾಗಿ ನ.21 ಇಲ್ಲವೇ 26ಕ್ಕೆ ಅಧಿಕಾರ ವಹಿಸಿ ಕೊಳ್ಳುವ ಮುಹೂರ್ತ ಫಿಕ್ಸ್ ಆಗಿದೆ.

ನಿರ್ದಿಷ್ಟ ದಿನ ಮತ್ತು ಶುಭ ಗಳಿಗೆಯ ಮಾಹಿತಿಯನ್ನು ಶಿವಕುಮಾರ್, ಭಕ್ತಿ–ಭಾವದಿಂದ ನಂಬಿರುವ ತುಮಕೂರು ಜಿಲ್ಲೆಯ ಮಠದ ಗುರುಗಳು, 21 ಹಾಗೂ 26 ಸೇರಿದಂತೆ ನಾಲ್ಕು ದಿನಗಳ ಶುಭ ಗಳಿಗೆಯ ಮುಹೂರ್ತ ನಿಗದಿಪಡಿಸಿದ್ದಾರೆ.

ಬರುವ ನವೆಂಬರ್ 20ಕ್ಕೆ ಸಿದ್ದರಾಮಯ್ಯ ಮುಖ್ಯಮಂತ್ರಿಯಾಗಿ ಎರಡೂವರೆ ವರ್ಷ ಅವಧಿ ಪೂರ್ಣಗೊಳ್ಳಲಿದೆ. ಸಿದ್ದರಾಮಯ್ಯ ಮುಖ್ಯಮಂತ್ರಿಯಾಗಿ ಅಧಿಕಾರ ವಹಿಸಿ ಕೊಳ್ಳುವುದಕ್ಕೂ ಮುನ್ನ ವರಿಷ್ಠರ ಸಮ್ಮುಖದಲ್ಲಿ ತಲಾ ಎರಡೂವರೆ ವರ್ಷಗಳ ಅಧಿಕಾರಾವಧಿ ಸೂತ್ರ ರೂಪಿಸಲಾಗಿತ್ತು.

ಅವರ ಅಧಿಕಾರಾವಧಿ ಪೂರ್ಣಗೊಳ್ಳುವ ಸಮಯ ಹತ್ತಿರವಾಗುತ್ತಿದ್ದಂತೆ ಶಿವಕುಮಾರ್, ಕಳೆದ ಎರಡು ತಿಂಗಳಿನಲ್ಲಿ ಎರಡು–ಮೂರು ಬಾರಿ ಖಾಸಗಿ ಕಾರ್ಯ ಕ್ರಮ ಹೆಸರಿನಲ್ಲಿ ದೆಹಲಿಗೆ ತೆರಳಿ ವರಿಷ್ಠರನ್ನು ತೆರೆಮರೆಯಲ್ಲಿ ಭೇಟಿ ಮಾಡಿದ್ದರು.

ಪಕ್ಷದ ಅಧಿನಾಯಕಿ ಸೋನಿಯಾ ಗಾಂಧಿ, ಪ್ರಿಯಾಂಕಾ ಗಾಂಧಿ ವಾದ್ರಾ ಸೇರಿದಂತೆ ಹಲವು ಹಿರಿಯ ಮುಖಂಡರು ನೀಡಿರುವ ಭರವಸೆಯಂತೆ ಶಿವಕುಮಾರ್ ಮುಖ್ಯಮಂತ್ರಿಯಾಗಿ ಅಧಿಕಾರ ಸ್ವೀಕರಿಸಲು ವೇದಿಕೆ ಸಿದ್ಧಪಡಿಸಿಕೊಳ್ಳುತ್ತಿದ್ದಾರೆ.

ಕಳೆದ ಎರಡು–ಮೂರು ದಿನಗಳ ಹಿಂದೆ ಹಠಾತ್ತನೆ ದೆಹಲಿಗೆ ತೆರಳಿದ್ದ ಶಿವ ಕುಮಾರ್ ಕೆಲವು ನಾಯಕರನ್ನು ಭೇಟಿ ಮಾಡಿದ್ದರು, ಇದರ ನಂತರ ಮುಖ್ಯ ಮಂತ್ರಿ ಗಾದಿಗೇರುವುದು ಖಾತ್ರಿಯಾಗಿದೆ.

ಈ ಎಲ್ಲಾ ಬೆಳವಣಿಗೆ ಹಿನ್ನೆಲೆಯಲ್ಲಿ ರಾಜ್ಯದ 34ನೇ ಮುಖ್ಯಮಂತ್ರಿಯಾಗಿ ಹಾಗೂ 24ನೇ ಮುಖ್ಯಮಂತ್ರಿ ವ್ಯಕ್ತಿಯಾಗಿ ಶಿವಕುಮಾರ್ ಅಧಿಕಾರ ಸ್ವೀಕರಿಸಲು ಅಣಿಯಾಗಿದ್ದಾರೆ.


ಈ ಬೆಳವಣಿಗೆಗೆ ಪುಷ್ಟಿ ಎಂಬಂತೆ ಶಿವಕುಮಾರ್ ಅವರ ಫೇಸ್‌ಬುಕ್ ಹಾಗೂ ಇನ್‌ಸ್ಟಾಗ್ರಾಂ ಸಾಮಾಜಿಕ ಜಾಲತಾಣ ಖಾತೆಯಲ್ಲಿ ಇಂದು ಮುಂಜಾನೆ ಪೋಸ್ಟ್ ಒಂದು ಹಾಕಿದ್ದು, ಅದರಲ್ಲಿ ಸಂಕ್ಷಿಪ್ತವಾಗಿ ವ್ಯಕ್ತಿ ಪರಿಚಯವನ್ನು ಇಂಗ್ಲೀಷ್‌ನಲ್ಲಿ ನೀಡಲಾಗಿದೆ. ಬಿಹಾರ ವಿಧಾನಸಭಾ ಚುನಾವಣೆಯ ಎರಡನೇ ಹಾಗೂ ಕೊನೆಯ ಹಂತದ ಮತದಾನ ನಡೆಯುವ ನ.11 ರಂದು ಶಿವಕುಮಾರ್ ದೆಹಲಿಗೆ ತೆರಳಲಿದ್ದಾರೆ. ಚುನಾವಣಾ ಪ್ರಚಾರ ಮುಗಿದು ಎಲ್ಲ ವರಿಷ್ಠ ನಾಯಕರು ದೆಹಲಿಗೆ ಹಿಂದಿರುಗಿರುತ್ತಾರೆ, ಇದೇ ಸಮಯದಲ್ಲೇ ಅಧಿಕಾರ ಹಸ್ತಾಂತರ ಹಾಗೂ ಅಧಿಕಾರ ಸ್ವೀಕಾರ ಸಮಯ ಸೇರಿದಂತೆ ಎಲ್ಲವೂ ನಿಗದಿಯಾಗಲಿದೆ ಎಂದು ಮೂಲಗಳು ತಿಳಿಸಿವೆ.

ಬಹುತೇಕ ಸಚಿವರಿಗೆ ಕೊಕ್: ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ, ಮುಖ್ಯಮಂತ್ರಿ ಸಿದ್ದರಾಮಯ್ಯ ■6ನೇ ಪುಟಕ್ಕೆ



ಟಿಪ್ಪರ್–ಕಾರು ಮುಖಾಮುಖಿ ಡಿಕ್ಕಿ: ಹುಣಸೂರು ಗ್ರಾಪಂ ಸದಸ್ಯ ಸಜೀವ ದಹನ


ಚಂದ್ರಶೇಖರ್



ಹುಣಸೂರು/ಮಂಡ್ಯ, ಅ.30– ಇನ್ನೋವಾ ಕಾರು ಮತ್ತು ಟಿಪ್ಪರ್ ನಡುವೆ ಸಂಭವಿಸಿದ ಮುಖಾಮುಖಿ ಡಿಕ್ಕಿಯಾಗಿ ಕಾರು ಹೊತ್ತಿ ಉರಿದು ಗ್ರಾಮ ಪಂಚಾಯಿತಿ ಸದಸ್ಯರೊಬ್ಬರು ಸಜೀವವಾಗಿ ದಹನವಾಗಿರುವ ದುರಂತವೊಂದು ಮಂಡ್ಯ ಜಿಲ್ಲೆ, ಶ್ರೀರಂಗಪಟ್ಟಣ ತಾಲೂಕು ಪಂಪ್ ಹೌಸ್–ಪಾಲಹಳ್ಳಿ ನಡುವೆ ಹೊಸಹಳ್ಳಿ ಬಳಿ ತಡ ರಾತ್ರಿ ಸಂಭವಿಸಿದೆ.

ಹುಣಸೂರು ತಾಲೂಕು ಮೂಕನಹಳ್ಳಿಯ ಪಂಚಾಯ್ತಿ ಪ್ರಧಾನರಾಗಿದ್ದ ದಿವಂಗತ ಎಂ.ಎಂ.ಶೆಟ್ಟಿಗೌಡರ ಪುತ್ರ ಚಂದ್ರಶೇಖರ್(49) ದುರಂತದಲ್ಲಿ ಸಾವನ್ನಪ್ಪಿದ ದುರ್ದೈವಿ. ಚಂದ್ರಶೇಖರ್, ಮಂಡ್ಯ ಬಳಿಯ ಗ್ರಾಮವೊಂದರಲ್ಲಿ ನಡೆದ ನ್ಯಾಯ ಪಂಚಾಯ್ತಿಯಲ್ಲಿ ಪಾಲ್ಗೊಂಡು ತಮ್ಮ ಇನ್ನೋವಾ ಕಾರಿ(ಕೆಎ 51 ಎಂಬಿ 6478) ನಲ್ಲಿ ಹುಣಸೂರಿಗೆ ಹಿಂತಿರುಗುತ್ತಿದ್ದಾಗ ಎದುರಿನಿಂದ ಬಂದ ಟಿಪ್ಪರ್ ಡಿಕ್ಕಿ ಹೊಡೆದಿದೆ. ಡಿಕ್ಕಿ ಹೊಡೆದ ರಭಸಕ್ಕೆ ಇನ್ನೋವಾ ಕಾರು ಬೆಂಕಿ ಹೊತ್ತಿಕೊಂಡು ಧಗ–ಧಗನೇ ಉರಿಯಲಾರಂಭಿಸಿದೆ. ಡ್ರೈವರ್ ಸೀಟ್‌ನಲ್ಲಿ ■6ನೇ ಪುಟಕ್ಕೆ

ಪತಿಯ ಮುಗಿಸಲು ಪತ್ನಿ ಮಾಸ್ಟರ್ ಮೈಂಡ್!

● ಸರ ಕಳವು ನೆಪದಲ್ಲಿ ಇರಿದು ಪರಾರಿ ಪ್ರಕರಣಕ್ಕೆ ಭಾರೀ ಟ್ವಿಸ್ಟ್ ● ಕೌಟುಂಬಿಕ ಕಲಹದ ಹಿನ್ನೆಲೆಯಲ್ಲಿ ಹತ್ಯೆಗೆ ನಡೆಸಿದ ಸಂಚು ಬಯಲು


ಸಂಗೀತಾ ಸಂಜಯ್ ವಿಘ್ನೇಶ್

ನಂಜನಗೂಡು: ಚಿನ್ನದ ಸರ ಕೀಳುವ ನೆಪದಲ್ಲಿ ಚಾಕುವಿನಿಂದ ಬೈಕ್ ಸವಾರನಿಗೆ ಇರಿದು ಪರಾರಿಯಾಗಿದ್ದ ಪ್ರಕರಣವನ್ನು ಪೊಲೀಸರು ಭೇದಿಸುವಲ್ಲಿ ಯಶಸ್ವಿಯಾಗಿದ್ದಾರೆ. ಕೌಟುಂಬಿಕ ಕಲಹದಿಂದ ಪತಿಯನ್ನು ಮುಗಿಸಲು ಪತ್ನಿಯೇ ತನ್ನ ಸಹೋದರ ಹಾಗೂ ಆತನ ಸಹಚರರನ್ನು ಬಳಸಿಕೊಂಡು ದರೋಡೆ ಸನ್ನಿವೇಶ ಸೃಷ್ಟಿಸಿರುವುದು ಬೆಳಕಿಗೆ ಬಂದಿದೆ.

ಈ ಸಂಬಂಧ ತಾಲೂಕಿನ ಆಲಂಬೂರು ಗ್ರಾಮದ ಸಂಗೀತಾ (34), ಆಕೆಯ ಸಹೋದರ ಸಂಜಯ್ (18), ನಂಜನಗೂಡು ನಗರದ ರಾಮಸ್ವಾಮಿ ಲೇಔಟ್ ನಿವಾಸಿ ವಿಘ್ನೇಶ್(20) ಹಾಗೂ ಕೃತ್ಯದಲ್ಲಿ ಭಾಗಿಯಾಗಿದ್ದ ಅಪ್ರಾಪ್ತ ಬಾಲಕನೋರ್ವ ಸೇರಿದಂತೆ ನಾಲ್ವರನ್ನು ಪೊಲೀಸರು ಬಂಧಿಸಿ ಕೋರ್ಟ್‌ಗೆ ಹಾಜರುಪಡಿಸಿದ್ದರು, ಈಗ ಅವರನ್ನು ನ್ಯಾಯಾಂಗ ಬಂಧನಕ್ಕೆ ಒಪ್ಪಿಸಲಾಗಿದೆ.

ವಿವರ: ತಾಲೂಕಿನ ಹದಿನಾರು ಗ್ರಾಮದ ನಿವಾಸಿ ರಾಜೇಂದ್ರ, ತನ್ನ ಪತ್ನಿ ದೇವನೂರು ಗ್ರಾಮ ಪಂಚಾಯತಿ ಯಲ್ಲಿ ಕಂಪ್ಯೂಟರ್ ಆಪರೇಟರ್ ಆಗಿ ಕರ್ತವ್ಯ ನಿರ್ವಹಿಸುತ್ತಿರುವ ಸಂಗೀತಾರ ಜೊತೆ ಸ್ಕೂಟರ್‌ನಲ್ಲಿ ಅಕ್ಟೋಬರ್ 26ರ ಸಂಜೆ ಆಕೆಯ ಸ್ನೇಹಿತೆಯ ಮನೆಗೆ ತೆರಳಿದ್ದು, ಬಳಿಕ ವಾಪಸ್ ಊರಿಗೆ ಹಿಂತಿರುಗುತ್ತಿದ್ದ ವೇಳೆ ಹಂಡುವಿನಹಳ್ಳಿ ಬಡಾವಣೆ ■6ನೇ ಪುಟಕ್ಕೆ



ಪ್ರಕಾಶ್ ರಾಜ್, ವಿಜಯಲಕ್ಷ್ಮಿ ಸಿಂಗ್, ಮೈಮ್, ರಹಮತ್ ತರಿಕೆರೆ ಸೇರಿ 70 ಮಂದಿಗೆ ರಾಜ್ಯೋತ್ಸವ ಪ್ರಶಸ್ತಿ


ಪ್ರಕಾಶ ರಾಜ್ | ವಿಜಯಲಕ್ಷ್ಮಿ ಸಿಂಗ್ | ಪ್ರೊ. ರಾಜೇಂದ್ರ ಚೆನ್ನಿ | ಮೈಮ್ ರಮೇಶ್ | ರಹಮತ್ ತರೀಕೆರೆ

ಬೆಂಗಳೂರು, ಅ.30(ಕೆಎಂಶಿ)– ಚಿತ್ರ ಕಲಾವಿದರಾದ ಪ್ರಕಾಶ ರಾಜ್, ವಿಜಯ ಲಕ್ಷ್ಮೀ ಸಿಂಗ್, ಸಾಹಿತಿಗಳಾದ ಪ್ರೊ. ರಾಜೇಂದ್ರ ಚೆನ್ನಿ, ರಹಮತ್ ತರೀಕೆರೆ ಸೇರಿದಂತೆ ವಿವಿಧ ಕ್ಷೇತ್ರಗಳಲ್ಲಿ ಗಣನೀಯ ಸೇವೆ ಸಲ್ಲಿಸಿದ 70 ಮಹನೀಯರು ಪ್ರಸಕ್ತ ಸಾಲಿನ ರಾಜ್ಯೋತ್ಸವ ಪ್ರಶಸ್ತಿಗೆ ಭಾಜನರಾಗಿದ್ದಾರೆ.

ಸುದ್ದಿಗೋಷ್ಠಿಯಲ್ಲಿಂದು ಕನ್ನಡ ಮತ್ತು ಸಂಸ್ಕೃತಿ ಸಚಿವ ಶಿವರಾಜ್ ತಂಗಡಗಿ ಪ್ರಶಸ್ತಿ ಪಟ್ಟಿ ಪ್ರಕಟಿಸಿ, ನವೆಂಬರ್ 1ರಂದು ಕನ್ನಡ ರಾಜ್ಯೋತ್ಸವದಂದು ನಡೆಯಲಿರುವ ಸಮಾರಂಭದಲ್ಲಿ ಮುಖ್ಯಮಂತ್ರಿ ಸಿದ್ದರಾಮಯ್ಯ, ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಪ್ರಶಸ್ತಿ ವಿಜೇತರಿಗೆ ಚಿನ್ನದ ಪದಕ ನೀಡಿ ಗೌರವಿಸಲಿದ್ದಾರೆ.

ಜಿಲ್ಲಾವಾರು ಸಾಮಾಜಿಕ ಪರಿಪಾಲನೆ ಅಡಿ ಪ್ರಶಸ್ತಿಗೆ ಆಯ್ಕೆ ಮಾಡಲಾಗಿದೆ, ಪ್ರಶಸ್ತಿ ಇತಿಹಾಸದಲ್ಲೇ ಮೊದಲ ಬಾರಿಗೆ ಸಮಗಾರ ಹರಳಯ್ಯ ಸಮುದಾಯದ ಇಬ್ಬರು ಪ್ರತಿಭೆಗಳನ್ನು ಪ್ರಶಸ್ತಿಗೆ ಆಯ್ಕೆ ಮಾಡಲಾಗಿದೆ

ಮೊದಲೇ ನಿರ್ಧರಿಸಿದಂತೆ ಈ ಬಾರಿ ಯಾವುದೇ ಸಂಘ ಸಂಸ್ಥೆಗಳಿಗೆ ಪ್ರಶಸ್ತಿ ನೀಡಿಲ್ಲ, 12 ಮಹಿಳೆಯರಿಗೆ ಈ ಬಾರಿ ಪ್ರಶಸ್ತಿ ಲಭಿಸಿದೆ

ಮೈಸೂರಿನ ಡಾ.ಎನ್.ಎಸ್.ರಾಮೇಗೌಡ, ಅಂಶಿ ಪ್ರಸನ್ನಕುಮಾರ್, ಎಲ್.ಮಹದೇವಪ್ಪ ಉಡಿಗಾಲ, ಪ್ರೊ.ಕೆ.ರಾಮಮೂರ್ತಿರಾವ್, ಯೋಗೇಂದ್ರ, ಎಲ್.ಹೇಮಾಶೇಖರ್‌ಗೆ ರಾಜ್ಯೋತ್ಸವ ಪುರಸ್ಕಾರ

ಚಾಮರಾಜನಗರದ ರಾಮೇಗೌಡ, ಮಂಡ್ಯದ ಎಂ.ಸಿದ್ದರಾಜು, ಕೊಡಗಿನ ವಿಜಯಲಕ್ಷ್ಮೀ ಸಿಂಗ್, ಡಾ.ಜಬೀನಾ, ಹಾಸನದ ಎಂ.ಸಿ.ರಂಗಸ್ವಾಮಿ, ಗುಂಡೂರಾಜ್‌ಗೆ ಪುರಸ್ಕಾರ


ಡಾ.ರಾಮೇಗೌಡ | ಅಂಶಿ ಪ್ರಸನ್ನಕುಮಾರ್ | ಮಹದೇವಪ್ಪ | ಪ್ರೊರಾಮಮೂರ್ತಿರಾವ್ | ಯೋಗೇಂದ್ರ | ಹೇಮಾ ಶೇಖರ್

ಮೈಸೂರು, ಅ.30(ಎಸ್‌ಬಿಡಿ)– ಮೈಸೂರು ವಿಭಾಗದ ಒಟ್ಟು 12 ಮಂದಿ ವಿವಿಧ ಕ್ಷೇತ್ರದ ಸಾಧಕರು ಈ ಬಾರಿಯ ಕನ್ನಡ ರಾಜ್ಯೋತ್ಸವ ಪ್ರಶಸ್ತಿಗೆ ಭಾಜನರಾಗಿದ್ದಾರೆ.

ಮೈಸೂರಿನವರಾದ ಎಲ್.ಮಹದೇವಪ್ಪ ಉಡಿಗಾಲ ಅವರು ಜಾನಪದ ಕ್ಷೇತ್ರದಿಂದ, ಪ್ರೊ.ಕೆ.ರಾಮಮೂರ್ತಿ ರಾವ್ ನೃತ್ಯ ಕ್ಷೇತ್ರದಿಂದ, ಹಿರಿಯ ಪತ್ರಕರ್ತ ಅಂಶಿ ಪ್ರಸನ್ನ ಕುಮಾರ್ ಮಾಧ್ಯಮ ಕ್ಷೇತ್ರದಿಂದ, ಡಾ.ಎನ್.ಎಸ್.ರಾಮೇಗೌಡ ಶಿಕ್ಷಣ ಕ್ಷೇತ್ರದಿಂದ, ಎಂ.ಯೋಗೇಂದ್ರ ಕ್ರೀಡಾ ಕ್ಷೇತ್ರದಿಂದ, ಶ್ರೀಮತಿ ಎಲ್.ಹೇಮಾ ಶೇಖರ್ ಕರಕುಶಲ ಕ್ಷೇತ್ರದಿಂದ ಪ್ರಶಸ್ತಿಗೆ ಆಯ್ಕೆಯಾಗಿದ್ದಾರೆ. ಹಾಗೆಯೇ ಕೊಡಗು ಜಿಲ್ಲೆಯಿಂದ ಚಲನಚಿತ್ರ ಕ್ಷೇತ್ರದಿಂದ ವಿಜಯಲಕ್ಷ್ಮೀಸಿಂಗ್, ಕ್ರೀಡೆಯಿಂದ ಡಾ.ಜಬೀನಾ ಎನ್.ಎಂ(ಯೋಗ), ಚಾಮರಾಜನಗರದ ■6ನೇ ಪುಟಕ್ಕೆ

ಕನ್ನಡ ರಾಜ್ಯೋತ್ಸವ ಪ್ರಶಸ್ತಿ ವಿಜೇತರ ಪಟ್ಟಿ

ಸಾಹಿತ್ಯ: ಪ್ರೊ. ರಾಜೇಂದ್ರ ಚೆನ್ನಿ (ಶಿವಮೊಗ್ಗ), ತುಂಬಾಡಿ ರಾಮಯ್ಯ (ತುಮಕೂರು), ಪ್ರೊ. ಅರ್.ಸುನಂದಮ್ಮ (ಚಿಕ್ಕಬಳ್ಳಾಪುರ), ಡಾ. ಎಚ್.ಎಲ್ ಪುಷ್ಪ (ತುಮಕೂರು), ರಹಮತ್ ತರೀಕೆರೆ (ಚಿಕ್ಕಮಗಳೂರು), ಹ.ಮ.ಪೂಜಾರ (ವಿಜಯಪುರ).

ಜಾನಪದ: ಬಸಪ್ಪ ಭರಮಪ್ಪ ಚೌಡ್ಕಿ (ಕೊಪ್ಪಳ), ಬಿ. ಟಾಕಪ್ಪ ಕಣ್ಣೂರು (ಶಿವಮೊಗ್ಗ), ಸಣ್ಣಿಂಗಪ್ಪ ಸತ್ತೆಪ್ಪ ಮುಶೆನ್ನಗೋಳ (ಬೆಳಗಾವಿ), ಹನುಮಂತಪ್ಪ, ಮಾರಪ್ಪ ಚೀಳಂಗಿ (ಚಿತ್ರದುರ್ಗ), ಎಂ.ತೋಪಣ್ಣ (ಕೋಲಾರ), ಸೋಮಣ್ಣ ದುಂಡಪ್ಪ ಧನಗೊಂಡ (ವಿಜಯಪುರ), ಶ್ರೀಮತಿ ಸಿಂಧು ಗುಜರನ್ (ದಕ್ಷಿಣ ಕನ್ನಡ), ಎಲ್.ಮಹದೇವಪ್ಪ ಉಡಿಗಾಲ (ಮೈಸೂರು).

ಸಂಗೀತ: ದೇವೇಂದ್ರಕುಮಾರ ಪತ್ತಾರ್ (ಕೊಪ್ಪಳ), ಮಡಿವಾಳಯ್ಯ ಸಾಲಿ (ಬೀದರ್).

ನೃತ್ಯ: ಪ್ರೊ.ಕೆ.ರಾಮಮೂರ್ತಿರಾವ್ (ಮೈಸೂರು)

ಚಲನಚಿತ್ರ /ಕಿರುತೆರೆ: ಪ್ರಕಾಶ್ ರಾಜ್ (ದಕ್ಷಿಣ ಕನ್ನಡ), ಶ್ರೀಮತಿ ■2ನೇ ಪುಟಕ್ಕೆ

ಹಿರಿಯ ನಟಿ ಉಮಾಶ್ರೀಗೆ ಡಾ. ರಾಜ್‌ಕುಮಾರ್ ಪ್ರಶಸ್ತಿ

ನಂಜುಂಡೇಗೌಡರಿಗೆ ಪುಟ್ಟಣ್ಣ ಕಣಗಾಲ್; ರಿಚರ್ಡ್ ಕ್ಯಾಸ್ಟಲಿನೋಗೆ ಡಾ. ವಿಷ್ಣುವರ್ಧನ್ ಪ್ರಶಸ್ತಿ


ಉಮಾಶ್ರೀ | ನಂಜುಂಡೇಗೌಡ | ರಿಚರ್ಡ್ ಕ್ಯಾಸ್ಟಲಿನೋ

ಬೆಂಗಳೂರು, ಅ.30– ರಾಜ್ಯ ಸರ್ಕಾರದಿಂದ ಕೊಡಮಾಡುವ ಡಾ.ರಾಜ್‌ಕುಮಾರ್ ಪ್ರಶಸ್ತಿ, ಡಾ.ವಿಷ್ಣುವರ್ಧನ್ ಪ್ರಶಸ್ತಿ ಹಾಗೂ ಪುಟ್ಟಣ್ಣ ಕಣಗಾಲ್ ಪ್ರಶಸ್ತಿಗೆ ಹೆಸರು ಪ್ರಕಟ ಮಾಡಲಾಗಿದೆ. ಹಿರಿಯ ನಟಿ ಉಮಾಶ್ರೀ ಅವರಿಗೆ 2019ರ ಸಾಲಿನ ಡಾ. ರಾಜ್‌ಕುಮಾರ್ ಪ್ರಶಸ್ತಿ, ನಿರ್ದೇಶಕ ಎನ್‌ಆರ್ ನಂಜುಂಡೇಗೌಡ ಅವರಿಗೆ ಪುಟ್ಟಣ್ಣ ಕಣಗಾಲ್ ಪ್ರಶಸ್ತಿ ಘೋಷಣೆ ಮಾಡಲಾಗಿದೆ. ಅದರೊಂದಿಗೆ ರಿಚರ್ಡ್ ಕ್ಯಾಸ್ಟಲಿನೋ ಅವರಿಗೆ ಡಾ. ವಿಷ್ಣುವರ್ಧನ್ ಪ್ರಶಸ್ತಿ ಪ್ರಕಟಿಸಲಾಗಿದೆ. ಈ ಮೂರೂ ಪ್ರಶಸ್ತಿಗಳು ■6ನೇ ಪುಟಕ್ಕೆ

ಮೈಸೂರಿನ 31 ಬ್ಯಾಂಕ್‌ನಲ್ಲಿ ವಾರಸುದಾರರಿಲ್ಲದ 157 ಕೋಟಿ ನೆನಗುದಿಗೆ!

ಕ್ಲೇಮ್ ಪಡೆಯದ ಸ್ವತ್ತುಗಳ ತ್ವರಿತ ಇತ್ಯರ್ಥಕ್ಕಾಗಿ ಅಭಿಯಾನ: ಲೀಡ್ ಬ್ಯಾಂಕ್ ಮ್ಯಾನೇಜರ್ ಕೃಷ್ಣಮೂರ್ತಿ ಮಾಹಿತಿ

- 'ನಿಮ್ಮ ಹಣ, ನಿಮ್ಮ ಹಕ್ಕು' ಅಭಿಯಾನ
- ನವೆಂಬರ್ 3ರಂದು ಮೆಗಾ ಕ್ಯಾಂಪ್
- ಬ್ಯಾಂಕ್‌ಗಳ ವಹಿವಾಟು, ಠೇವಣಿ ಹೆಚ್ಚಳ

ಮೈಸೂರು, ಅ.30(ಬಿಎಲ್‌ಯು)– ಕೇಂದ್ರ ಹಣಕಾಸು ಇಲಾಖೆಯ ಸೂಚನೆಯಂತೆ ಹಣಕಾಸು ವಲಯದಲ್ಲಿ ಕ್ಲೇಮ್ ಪಡೆಯದ ಸ್ವತ್ತುಗಳ ತ್ವರಿತ ಇತ್ಯರ್ಥಕ್ಕಾಗಿ 'ನಿಮ್ಮ ಹಣ, ನಿಮ್ಮ ಹಕ್ಕು' ಎರಡು ತಿಂಗಳ ಅಭಿಯಾನ ನಡೆಸಲಾಗುವುದು ಎಂದು ಲೀಡ್ ಬ್ಯಾಂಕ್ ಮ್ಯಾನೇಜರ್ ಎಸ್.ಪಿ. ಕೃಷ್ಣಮೂರ್ತಿ ತಿಳಿಸಿದರು.

ಮೈಸೂರು ಜಿಲ್ಲಾ ಪಂಚಾಯತ್‌ನ ಅಬ್ದುಲ್ ನಜೀರ್ ಸಾಬ್ ಸಭಾಂಗಣದಲ್ಲಿ ಇಂದು ಲೀಡ್ ಬ್ಯಾಂಕ್ ಆಯೋಜಿಸಿದ್ದ ಜಿಲ್ಲಾ ಸಮಾಲೋಚನಾ ಸಮಿತಿ ಹಾಗೂ ಜಿಲ್ಲಾ ಮಟ್ಟದ ಪ್ರಗತಿ ಪರಿಶೀಲನಾ ಸಮಿತಿಯ ತ್ರೈಮಾಸಿಕ ಸಭೆಯಲ್ಲಿ ಈ ವಿಚಾರ ತಿಳಿಸಿದರು. ಮೈಸೂರು ಜಿಲ್ಲೆಯ ಸರ್ಕಾರಿ ಹಾಗೂ ಖಾಸಗಿ ಸ್ವಾಮ್ಯದ 31 ಬ್ಯಾಂಕ್‌ಗಳ 534 ಶಾಖೆಗಳಲ್ಲಿ ವಾರಸುದಾರರಿಲ್ಲದ (Unclaimed Depoits) 5,05,424 ಅಕೌಂಟ್‌ಗಳಲ್ಲಿ 157.35 ಕೋಟಿ ಹಣವಿದೆ. ಈ ಖಾತೆಗಳ ಗ್ರಾಹಕರ ಪತ್ತೆ ಮತ್ತು ಇತ್ಯರ್ಥಕ್ಕೆ ಅಭಿಯಾನ ಮಾಡಲಾಗುತ್ತಿದೆ. ಈ ಮೂಲಕ ದಿನಕ್ಕೆ ಕನಿಷ್ಟ 100 ಖಾತೆಗಳಂತೆ ಈ ಕೆಲಸ ಮಾಡಿ ಮುಗಿಸಬೇಕು ಎಂದು ಗಡುವು ನೀಡಿದರು.

ಅಲ್ಲದೆ ಅಭಿಯಾನದ ವೇಳೆ ನವೆಂಬರ್ 3 ರಂದು ಮೆಗಾ ಕ್ಯಾಂಪ್ ಆಯೋಜಿಸಲಾಗುವುದು. ಈ ವೇಳೆ ಬ್ಯಾಂಕ್‌ಗಳು ಇಂತಹ ಗ್ರಾಹಕರನ್ನು ಕರೆ ತಂದು ಇತ್ಯರ್ಥ ಮಾಡಬೇಕು ಎಂದು ಕೃಷ್ಣಮೂರ್ತಿ ಅವರು ತಿಳಿಸಿದರು. ಬ್ಯಾಂಕ್‌ಗಳ ಠೇವಣಿಗಳಲ್ಲಿ 5,858 ಕೋಟಿ ಹೆಚ್ಚಾಗಿದ್ದು, ಕಳೆದ ವರ್ಷಕ್ಕಿಂತ ಈ ಬಾರಿ ಶೇ. 9.13ರಷ್ಟು ಬೆಳವಣಿಗೆಯಾಗಿದೆ. ಸಾಲದ ಪ್ರಮಾಣ ಕೂಡ ಹೆಚ್ಚಾಗಿದ್ದು, 4,166.98 ಕೋಟಿ ನೀಡಲಾಗಿದೆ. ಇದು ಕಳೆದ ವರ್ಷಕ್ಕಿಂತ ಈ ಬಾರಿ ಶೇ.7.78ರಷ್ಟು ■6ನೇ ಪುಟಕ್ಕೆ



ಮೈಸೂರು ಜಿಲ್ಲಾ ಪಂಚಾಯತ್‌ನ ಅಬ್ದುಲ್ ನಜೀರ್ ಸಾಬ್ ಸಭಾಂಗಣದಲ್ಲಿ ಗುರುವಾರ ಲೀಡ್ ಬ್ಯಾಂಕ್ ಆಯೋಜಿಸಿದ್ದ ಜಿಲ್ಲಾ ಸಮಾಲೋಚನಾ ಸಮಿತಿ ಹಾಗೂ ಜಿಲ್ಲಾ ಮಟ್ಟದ ಪ್ರಗತಿ ಪರಿಶೀಲನಾ ಸಮಿತಿಯ ತ್ರೈಮಾಸಿಕ ಸಭೆಯಲ್ಲಿ ಸಂಸದ ಯದುವೀರ್ ಅವರು ಹಣಕಾಸು ವಲಯದಲ್ಲಿ ಕ್ಲೇಮ್ ಪಡೆಯದ ಸ್ವತ್ತುಗಳ ದಕ್ಷ ಮತ್ತು ತ್ವರಿತ ಇತ್ಯರ್ಥಕ್ಕಾಗಿ 'ನಿಮ್ಮ ಹಣ, ನಿಮ್ಮ ಹಕ್ಕು' ಅಭಿಯಾನದ ಪೋಸ್ಟರ್ ಬಿಡುಗಡೆ ಮಾಡಿದರು.

ಗ್ಯಾರಂಟಿ ಬಿಟ್ಟರೆ ರಸ್ತೆ ಗುಂಡಿ ಮುಚ್ಚಲು ಹಣವಿಲ್ಲ!

ರಾಜ್ಯ ಸರ್ಕಾರದ ವಿರುದ್ಧ ಸಂಸದ ಯದುವೀರ್ ವಾಗ್ದಾಳಿ

ಮೈಸೂರು, ಅ.30(ಬಿಎಲ್‌ಯು)– ರಾಜ್ಯ ಕಾಂಗ್ರೆಸ್ ಸರ್ಕಾರದಲ್ಲಿ ಗ್ಯಾರಂಟಿ ಬಿಟ್ಟರೆ ಏನು ಇಲ್ಲ. ರಸ್ತೆಗಳ ಗುಂಡಿ ಮುಚ್ಚಲು ಕೂಡ ಸರ್ಕಾರದಲ್ಲಿ ಹಣವಿಲ್ಲದ ಹೀನಾಯ ಪರಿಸ್ಥಿತಿ ಇದೆ ಎಂದು ಸಂಸದ ಯದುವೀರ್ ಕೃಷ್ಣದತ್ತ ಚಾಮರಾಜ ಒಡೆಯರ್ ದೂರಿದರು.

ಮೈಸೂರು ಜಿಲ್ಲಾ ಪಂಚಾಯತ್‌ನಲ್ಲಿ ಇಂದು ಲೀಡ್ ಬ್ಯಾಂಕ್ ಸಭೆಯಲ್ಲಿ ಪಾಲ್ಗೊಂಡ ನಂತರ ಪತ್ರಕರ್ತರೊಂದಿಗೆ ಮಾತನಾಡಿದ ಅವರು, ಗ್ಯಾರಂಟಿ ಯೋಜನೆ ಬಿಟ್ಟರೆ ಯಾವ ಯೋಜನೆಯೂ ಅನುಷ್ಠಾನಗೊಳ್ಳುತ್ತಿಲ್ಲ. ಇದರಿಂದ ಈ ಸರ್ಕಾರದ ಅಭಿವೃದ್ಧಿ ಶೂನ್ಯವಾಗಿದೆ ಎಂದು ಆಪಾದಿಸಿದರು. ಕೇಂದ್ರ ಸರ್ಕಾರದ ಪಿತೂರಿಯಿಂದ ಕರ್ನಾಟಕದ ಕೈಗಾರಿಕೆಗಳು ■6ನೇ ಪುಟಕ್ಕೆ

ಪಿಎಂ ಸ್ವನಿಧಿ ವಿಶ್ವಕರ್ಮ ಯೋಜನೆಯ ತಿರಸ್ಕೃತ ಅರ್ಜಿ ಪುನರ್ ಪರಿಶೀಲಿಸಿ

ಕೇಂದ್ರ ಸರ್ಕಾರದ ಪ್ರಧಾನ ಮಂತ್ರಿ ಸ್ವನಿಧಿ ವಿಶ್ವಕರ್ಮ ಯೋಜನೆಯಡಿ ಫಲಾನುಭವಿಗಳು ಸಲ್ಲಿಸಿರುವ ಅರ್ಜಿಗಳು ತಿರಸ್ಕೃತಗೊಳ್ಳುವ ಪ್ರಮಾಣ ಹೆಚ್ಚಾಗುತ್ತಿದೆ. ಈ ಹಿನ್ನೆಲೆ ತಿರಸ್ಕೃತ ಅರ್ಜಿಗಳನ್ನು ಪುನರ್ ಪರಿಶೀಲನೆ ಮಾಡಿ ಅರ್ಹ ಅರ್ಜಿಗಳನ್ನು ಪರಿಗಣಿಸಬೇಕು ಎಂದು ಸಂಸದ ಯದುವೀರ್ ಅವರು ಬ್ಯಾಂಕ್‌ಗಳಿಗೆ ಸೂಚನೆ ನೀಡಿದರು.

ಪ್ರಗತಿ ಪರಿಶೀಲನಾ ಸಭೆಯಲ್ಲಿ ಪಾಲ್ಗೊಂಡಿದ್ದ ಬ್ಯಾಂಕ್ ಅಧಿಕಾರಿಗಳಿಂದ ಅಂಕಿ ಅಂಶ ಸಹಿತ ಮಾಹಿತಿ ಪಡೆದ ಯದುವೀರ್ ಅವರು, ಫಲಾನುಭವಿಗಳ ಅರ್ಜಿ ತಿರಸ್ಕೃತಗೊಳಿಸುವ ಮುನ್ನ ಪರಿಶೀಲನೆ ಮಾಡಬೇಕು. ಯಾವುದೇ ಕಾರಣಕ್ಕೂ ಸಕಾರಣವಿಲ್ಲದೆ ಅರ್ಜಿಗಳನ್ನು ತಿರಸ್ಕರಿಸ ಬಾರದು ಎಂದು ಸಲಹೆ ನೀಡಿದರು.

ತರುವಾಯ ಮಾತನಾಡಿದ ಲೀಡ್ ಬ್ಯಾಂಕ್ ಮ್ಯಾನೇಜರ್ ಕೃಷ್ಣಮೂರ್ತಿ ಅವರು, ಪಿ.ಎಂ.ವಿಶ್ವಕರ್ಮ ಯೋಜನೆಯಲ್ಲಿ 24,199 ಅರ್ಜಿ ಸಲ್ಲಿಕೆಯಾಗಿದ್ದು, ಇದರಲ್ಲಿ 5,566 ಫಲಾನುಭವಿಗಳಿಗೆ 43.11 ಕೋಟಿ ಸಾಲ ಮಂಜೂರು ಮಾಡಲಾಗಿದೆ. ಆದರೆ ಕೆಲವು ಕಾರಣಗಳಿಂದ 17,225 ಅರ್ಜಿ ತಿರಸ್ಕೃತಗೊಂಡಿದೆ ಎಂದು ಹೇಳಿದರು. ಯಾವ ವೃತ್ತಿ ಆಧಾರದ ಮೇಲೆ ಸಾಲಕ್ಕೆ ಅರ್ಜಿ ಸಲ್ಲಿಸಿದ್ದಾರೆ ಎಂದು ಪರಿಶೀಲನೆ ಮಾಡಬೇಕು. ಈ ಮೂಲಕ ತಲತಲಾಂತರಗಳಿಂದ ಕುಲ ಕಸುಬು ಮಾಡಿಕೊಂಡು ಬಂದಿರುವ ಕುಟುಂಬಗಳ ಫಲಾನುಭವಿಗಳಿಗೆ ಸಾಲ ನೀಡಬೇಕು ಎಂದು ■6ನೇ ಪುಟಕ್ಕೆ

ಮೈಸೂರು ಮಿತ್ರ

ಶುಕ್ರವಾರ 31 ಅಕ್ಟೋಬರ್ 2025

ಕನ್ನಡದ ಘನತೆ, ಅಸ್ಮಿತೆ ವರ್ಧಿಸಿದವರು ಮಹಾಕವಿ ಕುವೆಂಪು

ಡಾ.ನಿಶ್ಚಲಾ ನಂದನಾಥ ಸ್ವಾಮೀಜಿ ಬಣ್ಣನೆ



ವಿಶ್ವಮಾನವ ಕುವೆಂಪು ಕ್ಷೇಮಾಭಿವೃದ್ಧಿ ಟ್ರಸ್ಟ್ ವತಿಯಿಂದ ಮೈಸೂರಿನ ಜಲದರ್ಶಿನಿಯಲ್ಲಿ ಪೂರ್ವಭಾವಿ ಸಭೆ ನಡೆಯಿತು.

ಮೈಸೂರು,ಅ.30–ಭಾರತೀಯ ಶ್ರೇಷ್ಠ ಸಾಹಿತ್ಯ ಪರಂಪರೆಯಲ್ಲಿ ಕನ್ನಡದ ಘನತೆ ಮತ್ತು ಅಸ್ಮಿತೆ ವರ್ಧಿಸಿದವರು ಮಹಾಕವಿ ಕುವೆಂಪು ಎಂದು ವಿಶ್ವ ಒಕ್ಕಲಿಗರ ಮಹಾ ಸಂಸ್ಥಾನ ಮಠದ ಪೀಠಾಧಿಪತಿ ಡಾ.ನಿಶ್ಚಲಾ ನಂದನಾಥ ಸ್ವಾಮೀಜಿ ಬಣ್ಣಿಸಿದರು.

ಕುವೆಂಪು ಅವರಿಗೆ 'ಭಾರತ ರತ್ನ' ಪ್ರಶಸ್ತಿಯನ್ನು ಕೇಂದ್ರ ಸರ್ಕಾರ ನೀಡಬೇಕೆಂಬ ಒತ್ತಾಯದ ಹಿನ್ನೆಲೆಯಲ್ಲಿ ಡಿ.12ರಂದು ದೆಹಲಿಯ ಕರ್ನಾಟಕ ಭವನದಲ್ಲಿ ನಡೆಯಲಿರುವ ವಿಚಾರ ಸಂಕಿರಣ, ಪುಸ್ತಕಗಳ ಲೋಕಾರ್ಪಣೆ ಹಾಗೂ ಸಾಕ್ಷ್ಯಚಿತ್ರ ಪ್ರದರ್ಶನ ಸಮಾರಂಭದ ಹಿನ್ನೆಲೆಯಲ್ಲಿ ವಿಶ್ವಮಾನವ ಕುವೆಂಪು ಕ್ಷೇಮಾಭಿವೃದ್ಧಿ ಟ್ರಸ್ಟ್ ವತಿಯಿಂದ ನಗರದ ಜಲದರ್ಶಿನಿಯಲ್ಲಿ ನಡೆದ ಪೂರ್ವಾಭಾವಿ ಸಭೆಯ ಅಧ್ಯಕ್ಷತೆ ವಹಿಸಿ ಅವರು ಮಾತನಾಡಿದರು.

ವೈಚಾರಿಕತೆ, ವೈಜ್ಞಾನಿಕತೆ, ಸಾಮರಸ್ಯದ ಅಂಶಗಳು ಕುವೆಂಪು ಅವರ ಸಾಹಿತ್ಯದಲ್ಲಿ ದಟ್ಟವಾಗಿವೆ. ಪ್ರಸ್ತುತ ಜಗತ್ತಿಗೆ ಈ ಮೂರು ವಿಚಾರಗಳ ಅಗತ್ಯ ತುಂಬಾ ಇದೆ. ಆದ್ದರಿಂದ ಇಡೀ ಜಗತ್ತೇ ಮೆಚ್ಚಬಹುದಾದ ವಿಚಾರ ಪರಂಪರೆಯನ್ನು ನೀಡಿದ ಶ್ರೇಷ್ಠ ಕವಿ ಕುವೆಂಪು ಅವರಿಗೆ ಭಾರತ ರತ್ನ ಪ್ರಶಸ್ತಿಯ ಮನ್ನಣೆ ದೊರೆಯಲೇಬೇಕಿದೆ ಎಂದು ಪ್ರತಿಪಾದಿಸಿದರು.

ವಿಶ್ವಮಾನವ ಕುವೆಂಪು ಕ್ಷೇಮಾಭಿವೃದ್ಧಿ ಟ್ರಸ್ಟ್ ಅಧ್ಯಕ್ಷ ಹೆಚ್.ಕೆ.ರಾಮು ಮಾತನಾಡಿ, ಕುವೆಂಪು ಅವರಿಗೆ ಭಾರತ ರತ್ನ ಪ್ರಶಸ್ತಿಗೆ ಒತ್ತಾಯಿಸುವ ದಿಕ್ಕಿನಲ್ಲಿ ಡಿ.12ರಂದು ದೆಹಲಿಯ ಕರ್ನಾಟಕ ಸಂಘದಲ್ಲಿ ಕುವೆಂಪು ಸಾಹಿತ್ಯ ಕುರಿತು ಸಂಕಿರಣ, ತ್ರಿಭಾಷಾ ಪುಸ್ತಕಗಳ ಲೋಕಾರ್ಪಣೆ ಹಾಗೂ ಸಾಕ್ಷ್ಯಚಿತ್ರ ಪ್ರದರ್ಶನ ಹಮ್ಮಿಕೊಳ್ಳಲು ಸಿದ್ಧತೆ ನಡೆಯುತ್ತಿದೆ ಎಂದು ಸಭೆಗೆ ಮಾಹಿತಿ ನೀಡಿದರು.

ಅಂದು ನಡೆಯುವ ಕಾರ್ಯಕ್ರಮಕ್ಕೆ ಡಾ. ನಿರ್ಮಲಾನಂದನಾಥ ಸ್ವಾಮೀಜಿ, ಶಿವರಾತ್ರಿ ದೇಶಿಕೇಂದ್ರ ಸ್ವಾಮೀಜಿ, ಮಾಜಿ ಪ್ರಧಾನಿ ಹೆಚ್.ಡಿ.ದೇವೇಗೌಡ, ಕೇಂದ್ರ ಸಚಿವರಾದ ಹೆಚ್.ಡಿ.ಕುಮಾರಸ್ವಾಮಿ, ಪ್ರಹ್ಲಾದ್ ಜೋಷಿ, ವಿ.ಸೋಮಣ್ಣ, ಶೋಭಾ ಕರಂದ್ಲಾಜೆ, ಮುಖ್ಯಮಂತ್ರಿ ಸಿದ್ಧರಾಮಯ್ಯ, ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಸೇರಿದಂತೆ ಮೊದಲಾದ ಗಣ್ಯರನ್ನು ಆಹ್ವಾನಿಸಲಾಗಿದೆ ಎಂದು ತಿಳಿಸಿದರು.

ಸಭೆಯಲ್ಲಿ ಹಿರಿಯ ಸಾಹಿತಿ ಡಾ.ಸಿ.ಪಿ. ಕೃಷ್ಣಕುಮಾರ್ ಮೈಸೂರು ವಿಶ್ವವಿದ್ಯಾನಿಲಯದ ಪ್ರಸಾರಾಂಗದ ವಿಶ್ರಾಂತ ನಿರ್ದೇಶಕ ಪ್ರೊ.ಕೆ.ಟಿ.ವೀರಪ್ಪ, ವಿಶ್ರಾಂತ ಅಪರ ಜಿಲ್ಲಾಧಿಕಾರಿ ಕೆ.ಎಂ.ಚಂದ್ರೇಗೌಡ, ಸಾಹಿತಿಗಳಾದ ಡಾ.ಸಿ.ನಾಗಣ್ಣ, ಟಿ.ಸತೀಶ್ ಜವರೇಗೌಡ, ಡಾ.ಹಾಲತಿ ಸೋಮಶೇಖರ್, ಜಿಲ್ಲಾ ಕಸಾಪ ಅಧ್ಯಕ್ಷ ಮಡ್ಡೀಕೆರೆ ಗೋಪಾಲ್, ಕರ್ನಾಟಕ ಮುಕ್ತ ವಿಶ್ವವಿದ್ಯಾಲಯದ ವಿಶ್ರಾಂತ ಕಲಪತಿ ಡಾ.ಎನ್.ಎಸ್.ರಾಮೇಗೌಡ, ಕೃಷಿ ವಿಜ್ಞಾನಿ ಡಾ.ವಸಂತಕುಮಾರ್ ತಿಮಕಾಪುರ, ದಲಿತ ಸಾಹಿತ್ಯ ಅಕಾಡೆಮಿಯ ರಾಜ್ಯ ಪ್ರಧಾನ ಕಾರ್ಯದರ್ಶಿ ಸಂಪತ್ ಕುಮಾರ್ ಮೊದಲಾದವರು ಸಭೆಯಲ್ಲಿ ಮಾತನಾಡಿ ತಮ್ಮ ಸಲಹೆಗಳನ್ನು ನೀಡಿದರು.

ಮೈಸೂರು ವಿವಿ ಪ್ರಸಾರಂಗದ ನಿರ್ದೇಶಕ ಡಾ.ನಂಜಯ್ಯ ಹೊಂಗನೂರು, ಜಿಲ್ಲಾ ಶರಣ ಸಾಹಿತ್ಯ ಪರಿಷತ್ತಿನ ಅಧ್ಯಕ್ಷ ಎಂ.ಚಂದ್ರಶೇಖರ್, ಯುವ ಕವಿಗಳಾದ ದೇವರಾಜ್, ಎಸ್.ಶಿವರಂಜನ್, ಡಾ.ಬಿ. ಬಸವರಾಜು, ಮುಖಂಡರಾದ ಜೆ.ಜವರೇಗೌಡ, ಹೆಚ್.ಎಲ್.ಯಮುನಾ, ಸುಶೀಲಾ ನಂಜಪ್ಪ, ಮಿರ್ಲೆ ಅಣ್ಣೇಗೌಡ, ವಕೀಲ ಗಂಗಾಧರಗೌಡ ಇನ್ನಿತರರು ಪೂರ್ವಭಾವಿ ಸಭೆಯಲ್ಲಿ ಉಪಸ್ಥಿತರಿದ್ದರು.

ಸಿದ್ದರಾಮಯ್ಯ ಸಿಎಂ ಅವಧಿ ಪೂರ್ಣಗೊಳಿಸಲು ಕಾಂಗ್ರೆಸ್ ವರಿಷ್ಠರು ಅವಕಾಶ ನೀಡಬೇಕು

ರಾಜ್ಯ ದಲಿತ ಹಿಂದುಳಿದ ಅಲ್ಪಸಂಖ್ಯಾತ ವೇದಿಕೆ ಆಗ್ರಹ



ರಾಜ್ಯ ದಲಿತ ಹಿಂದುಳಿದ ಅಲ್ಪಸಂಖ್ಯಾತ ವೇದಿಕೆ ವತಿಯಿಂದ ವಿವಿಧ ಸಮುದಾಯದ ಮುಖಂಡರು ಸಭೆ ನಡೆಸಿ, ಸಿದ್ದರಾಮಯ್ಯ ಅವರಿಗೆ 5 ವರ್ಷ ಮುಖ್ಯಮಂತ್ರಿಯಾಗಿ ಪೂರ್ಣಗೊಳಿಸಲು ಅವಕಾಶ ಕಲ್ಪಿಸಬೇಕೆಂದು ಒತ್ತಾಯಿಸಿದರು.

ಮೈಸೂರು,ಅ.30(ಜಿಎ)–ಮುಖ್ಯಮಂತ್ರಿ ಸಿದ್ದರಾಮಯ್ಯ ಅವರ ಮುಖ್ಯಮಂತ್ರಿ ಅವಧಿ ಪೂರ್ಣಗೊಳಿಸಲು ಕಾಂಗ್ರೆಸ್ ವರಿಷ್ಠರು ಅವಕಾಶ ನೀಡಬೇಕು ಎಂದು ರಾಜ್ಯ ದಲಿತ ಹಿಂದುಳಿದ ಅಲ್ಪಸಂಖ್ಯಾತ ವೇದಿಕೆ ಆಗ್ರಹಿಸಿದೆ.

ಮೈಸೂರಿನ ಜೆಎಸ್ಎಸ್ ವಿದ್ಯಾಪೀಠದ ಮುಂಭಾಗವಿರುವ ಬಸವ ಪುತ್ಥಳಿ ಆವರಣದಲ್ಲಿ ರಾಜ್ಯ ದಲಿತ ಹಿಂದುಳಿದ ಅಲ್ಪಸಂಖ್ಯಾತ ವೇದಿಕೆ ವತಿಯಿಂದ ವಿವಿಧ ಸಮುದಾಯದ ಮುಖಂಡರ ಸಭೆ ನಡೆಸಿ, ಈ ವೇಳೆ ಸಿದ್ದರಾಮಯ್ಯ ಅವರಿಗೆ ಐದು ವರ್ಷ ಮುಖ್ಯಮಂತ್ರಿಯಾಗಿ ಪೂರ್ಣಗೊಳಿಸಲು ಅವಕಾಶ ಕಲ್ಪಿಸಬೇಕೆಂದು ಒತ್ತಾಯಿಸಿದರು.

ಈ ವೇಳೆ ಮಾಧ್ಯಮಗಳೊಂದಿಗೆ ವೇದಿಕೆ ಅಧ್ಯಕ್ಷ ಪಿ.ಜಯರಾಜ್ ಹೆಗಡೆ ಮಾತನಾಡಿ, ಮುಖ್ಯಮಂತ್ರಿ ಬದಲಾವಣೆ ಬಗ್ಗೆ ಕಾಂಗ್ರೆಸ್ ಶಾಸಕರು, ವಿರೋಧ ಪಕ್ಷದ ನಾಯಕರು ನಿತ್ಯವೂ ಹೇಳಿಕೆ ನೀಡುತ್ತಿದ್ದಾರೆ. ಈ ಹಿನ್ನೆಲೆಯಲ್ಲಿ ಕಾಂಗ್ರೆಸ್ ವರಿಷ್ಠರು ಈ ಎಲ್ಲಾ ಗೊಂದಲಕ್ಕೆ ತೆರೆ ಎಳೆದು ಸಿದ್ದರಾಮಯ್ಯ ಅವರನ್ನು ಪೂರ್ಣ ಅವಧಿಗೆ ವಿಸ್ತರಿಸಬೇಕು. ಸದ್ಯದಲ್ಲಿಯೇ ರಾಜ್ಯ ಪ್ರವಾಸ ಕೈಗೊಂಡಿರುವ ರಾಹುಲ್ ಗಾಂಧಿ ಅವರಿಗೆ ಈ ಬಗ್ಗೆ ವೇದಿಕೆ ಮನವಿ ಸಲ್ಲಿಸಲಾಗುತ್ತದೆ. ಎಂದರು.

ಮಾಜಿ ಮುಖ್ಯಮಂತ್ರಿ ಡಿ.ದೇವರಾಜ ಅರಸು ಅವರ ನಂತರ ಸಿದ್ದರಾಮಯ್ಯ ಅವರು ರಾಜ್ಯದಲ್ಲಿರುವ ಎಲ್ಲಾ ಸಮುದಾಯಗಳನ್ನು ಗಣನೆಗೆ ತೆಗೆದುಕೊಂಡು ವಿಶೇಷ ಅನುದಾನ, ನಿಗಮ ಮಂಡಳಿಗಳನ್ನು ಸ್ಥಾಪಿಸುವ ಮೂಲಕ ಸಮುದಾಯದ ಏಳಿಗೆಗೆ ಶ್ರಮಿಸಿದ್ದಾರೆ. ಮತ್ತೊಂದೆಡೆ ಗ್ಯಾರಂಟಿ ಯೋಜನೆಗಳನ್ನು ನೀಡಿ ಹಣಕಾಸನ್ನು ಸರಿದೂಗಿಸುತ್ತಿದ್ದಾರೆ. ಈ ಹಿನ್ನೆಲೆಯಲ್ಲಿ 2028ರ ಚುನಾವಣೆ ನಂತರ ಡಿ.ಕೆ.ಶಿವಕುಮಾರ್ ಅವರು ಮುಖ್ಯಮಂತ್ರಿ ಆಗಲಿ. ಅವರು ಸಹ ಪಕ್ಷ ಅಧಿಕಾರಕ್ಕೆ ತರುವಲ್ಲಿ ಶ್ರಮಿಸಿದ್ದಾರೆ ಎಂದು ತಿಳಿಸಿದರು.

ವೇದಿಕೆ ಪ್ರಧಾನ ಕಾರ್ಯದರ್ಶಿ ಕಂಸಾಳೆ ರವಿ ಮಾತನಾಡಿ, ಮುಖ್ಯಮಂತ್ರಿ ಸಿದ್ದರಾಮಯ್ಯರನ್ನು ಸಿಎಂ ಸ್ಥಾನದಿಂದ ಕೆಳಗೆ ಇಳಿಸಿದ ನಂತರ ಕಾಂಗ್ರೆಸ್ ಕಷ್ಟದ ಪರಿಸ್ಥಿತಿಗೆ ತಲುಪಲಿದೆ. ಈ ಸಂಬಂಧ ಪಕ್ಷದ ವರಿಷ್ಠರಿಗೆ ಗಮನ ಸೆಳೆಯಲು ಶೀಘ್ರದಲ್ಲಿಯೇ ದೆಹಲಿ ಚಲೋ ಮಾಡಲು ವೇದಿಕೆ ನಿರ್ಧರಿಸಿದೆ ಎಂದರು.

ಬಿಹಾರ್ ಚುನಾವಣೆ ಸನಿಹದಲ್ಲಿದೆ. ಈ ಸಂದರ್ಭದಲ್ಲಿ ಸಿಎಂ ಬದಲಾವಣೆಯಾದರೆ, ಬಹಳ ಕಷ್ಟವಾಗಲಿದೆ. ಸಿದ್ದರಾಮಯ್ಯ ಅವರಿಗೆ ಅಹಿಂದ ಮತದಾರರ ಬೆಂಬಲ ರಾಜ್ಯದಲ್ಲಿ ಮಾತ್ರವಲ್ಲ, ಹೊರರಾಜ್ಯಗಳಲ್ಲಿಯೂ ಇದೆ. ಅವರ ಸುದೀರ್ಘ ರಾಜಕೀಯ ಪಯಣದಲ್ಲಿ ಒಂದು ಕಪ್ಪು ಚುಕ್ಕಿ ಇಲ್ಲ. ಈ ಎಲ್ಲಾ ಅಂಶಗಳಿಂದ ಅವರು ಐದು ವರ್ಷ ಪೂರ್ಣಗೊಳಿಸಿದರೆ, ರಾಜ್ಯದ ಅಹಿಂದ ವರ್ಗಕ್ಕೆ ಸಹಕಾರಿಯಾಗಲಿದೆ ಎಂದರು. ಈ ವೇಳೆ ಜಿಲ್ಲಾ ಮಡಿವಾಳ ಸಂಘದ ಅಧ್ಯಕ್ಷ ಸತ್ಯನಾರಾಯಣ್, ಯಾದವ ಗೊಲ್ಲ ಯುವ ಸಮಿತಿಯ ಶ್ರೀಕಾಂತ, ಅಲೆಮಾರಿ, ಅರೆ ಅಲೆಮಾರಿ ಸಮಿತಿ ಜಿಲ್ಲಾಧ್ಯಕ್ಷ ರಾಮಕೃಷ್ಣ, ಪೌರ ಕಾರ್ಮಿಕರ ಮಹಾಸಂಘದ ಆರ್ಟಿಸ್ಟ್ ನಾಗರಾಜು ಮತ್ತಿತರರು ಉಪಸ್ಥಿತರಿದ್ದರು.

ಡಾ.ವೀರೇಂದ್ರ ಹೆಗ್ಗಡೆ ಅವರಿಗೆ ಸನ್ಮಾನ...



ಮೈಸೂರಿಗೆ ಆಗಮಿಸಿದ ಶ್ರೀ ಕ್ಷೇತ್ರ ಧರ್ಮಸ್ಥಳದ ಧರ್ಮಾಧಿಕಾರಿಗಳಾದ ಡಾ.ವೀರೇಂದ್ರ ಹೆಗ್ಗಡೆ ಅವರನ್ನು 58ನೇ ಪೀಠಾಭಿಷೇಕ ಪ್ರಯುಕ್ತ ಮಾಜಿ ಸಚಿವ ಕೋಟೆ ಎಂ.ಶಿವಣ್ಣ ಆತ್ಮೀಯವಾಗಿ ಸನ್ಮಾನಿಸಿದರು. ಈ ವೇಳೆ ಜಿಪಂ ಮಾಜಿ ಸದಸ್ಯ ಬಿ.ವಿ.ಬಸವರಾಜು, ಜಿಲ್ಲಾ ಹಾಪ್‌ಕಾಮ್ಸ್ ಅಧ್ಯಕ್ಷ ಬಿ.ಪಿ.ಬೋರೇಗೌಡ, ಜೈನ್ ಸಮಾಜದ ಮುಖಂಡ ಪದ್ಮ ಪ್ರಸಾದ್, ಮುಖಂಡರಾದ ಕೆ.ರಮೇಶ್, ಗಿರಿಪ್ರಸಾದ್, ಪ್ರಕಾಶ್, ಚಂದ್ರಶೇಖರ್ ಇನ್ನಿತರರು ಉಪಸ್ಥಿತರಿದ್ದರು.

ಉಚಿತ ತರಬೇತಿಗೆ ಅರ್ಜಿ ಆಹ್ವಾನ

ಮೈಸೂರು,ಅ.30–ವಿಕಲಚೇತನರಿಗೆ ಉದ್ಯೋಗ ಕೇಂದ್ರಿತ ಉಚಿತ ತರಬೇತಿಗೆ ಸಮರ್ಥನಂ ಅಂಗವಿಕಲರ ಸಂಸ್ಥೆ ಅರ್ಜಿ ಆಹ್ವಾನಿಸಲಾಗಿದೆ. ದೈಹಿಕ, ದೃಷ್ಟಿ, ವಾಕ್–ಶ್ರವಣ ನ್ಯೂನತೆ ಇರುವ ವಿಕಲಚೇತನರು ಅರ್ಜಿ ಸಲ್ಲಿಸಬಹುದು. ಕನಿಷ್ಠ 10ನೇ ತರಗತಿ ಉತ್ತೀರ್ಣರಾಗಿರಬೇಕು, 18ರಿಂದ 30 ವರ್ಷದ ಒಳಗಿನ ವಯಸ್ಸಿನ ವಿಕಲಚೇತನರು ಅರ್ಜಿ ಸಲ್ಲಿಸಬಹುದು. ಮಾಹಿತಿಗಾಗಿ 9449864699, 080–6833399 ಸಂಪರ್ಕಿಸಿ.

ಐವರು ಗಣ್ಯರಿಗೆ ಸನ್ಮಾನ

ಮೈಸೂರು, ಅ.30– ಕನ್ನಡ ಪರ ಸಂಘಟನೆಯ ನಾಗರಿಕ ಹಿತರಕ್ಷಣಾ ವೇದಿಕೆಯ ಮೈಸೂರು ನಗರ ಮತ್ತು ಜಿಲ್ಲಾ ಘಟಕದ ವತಿಯಿಂದ ಕನ್ನಡ ರಾಜ್ಯೋತ್ಸವದ ಪ್ರಯುಕ್ತ ವಿವಿಧ ಕ್ಷೇತ್ರದ ಗಣ್ಯರಿಗೆ ವಿವಿಧ ಬಿರುದುಗಳೊಂದಿಗೆ ರಾಜ್ಯೋತ್ಸವ ಪ್ರಶಸ್ತಿ ನೀಡಿ, ಅಭಿನಂದಿಸಲಾಗುವುದು.

ನಗರದ ಚಾಮರಾಜ ಒಡೆಯರ್ ವೃತ್ತದ ಬಳಿಯ ಡಾ.ರಾಜ್‌ಕುಮಾರ್ ಉದ್ಯಾನವನದ ಪ್ರತಿಮೆ ಮುಂಭಾಗ ನ.1ರ ಬೆಳಗ್ಗೆ 11.30ಕ್ಕೆ ನಡೆಯಲಿರುವ ರಾಜ್ಯೋತ್ಸವ ಹಾಗೂ ವೇದಿಕೆಯ 36ನೇ ವಾರ್ಷಿಕೋತ್ಸವ ಸಮಾರಂಭದಲ್ಲಿ ಕರ್ನಾಟಕ ಗಾಂಧಿ ಸ್ಮಾರಕ ನಿಧಿ ಅಧ್ಯಕ್ಷರೂ ಆದ ಶೇಷಾದ್ರಿಪುರಂ ಶಿಕ್ಷಣ ಸಂಸ್ಥೆ ಗೌರವ ಪ್ರಧಾನ ಕಾರ್ಯದರ್ಶಿ ನಾಡೋಜ ಡಾ.ವೂಡೆ ಪಿ.ಕೃಷ್ಣ ಸೇರಿದಂತೆ ಐವರನ್ನು ಸನ್ಮಾನಿಸಲಾಗುವುದು.

ಸಮಾಜ ಸೇವಕ ಧರ್ಮೇಂದರ್ ಸುಂದರ್ ಬಾಬು ಅವರಿಗೆ 'ಜನಸೇವಾ ಧುರೀಣ', ಸ್ತ್ರೀರೋಗ ತಜ್ಞೆ ಡಾ.ಜ್ಯೋತಿ ಉಮೇಶ್ ಅವರಿಗೆ 'ಮಹಿಳಾ ವೈದ್ಯ ಜನಸೇವಾ ರತ್ನ', ಕ್ಯಾನ್ಸರ್ ರೋಗ ತಜ್ಞ ಡಾ.ಎಂ.ಎಸ್.ಗಿರೀಶ್ ಅವರಿಗೆ 'ವೈದ್ಯ ಸೇವಾ ರತ್ನ', ಪಿ.ಎಸ್.ಬಾಲಾಜಿ ಅವರಿಗೆ 'ಸಮಾಜ ಸೇವಾ ಧ್ರುವತಾರೆ' ಬಿರುದು ಪ್ರದಾನ ಮಾಡಲಾಗುವುದು ಎಂದು ವೇದಿಕೆ ಅಧ್ಯಕ್ಷ ಮಂಜುನಾಥ್(ಮಿಲ್ಕ್ ಮಂಜು) ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಆಡು ಮೇಯಿಸುತ್ತಿದ್ದ ವೃದ್ಧೆ ಸರ ಅಪಹರಣ



ಸಿದ್ದಮ್ಮ

ಮೈಸೂರು, ಅ. 30 (ಆರ್‌ಕೆ)– ಕುಡುಗೋಲು ಕೇಳುವ ನೆಪದಲ್ಲಿ ಯುವಕನೋರ್ವ ಹೊಲದಲ್ಲಿ ಆಡು ಮೇಯಿಸುತ್ತಿದ್ದ ವೃದ್ಧೆಯ ಚಿನ್ನದ ಸರ ಕಸಿದು ಪರಾರಿಯಾಗಿರುವ ಘಟನೆ ಮೈಸೂರು ತಾಲೂಕು ಹೊಸಹುಂಡಿ ಗ್ರಾಮದ ಬಳಿ ಗುರುವಾರ ಮಧ್ಯಾಹ್ನ ಸಂಭವಿಸಿದೆ. ಹೊಸಹುಂಡಿ ಗ್ರಾಮದ ಸಿದ್ದಮ್ಮ (70) ಚಿನ್ನದ ಸರ ಕಳೆದುಕೊಂಡವರು. ಗುರುವಾರ ಮಧ್ಯಾಹ್ನ ತನ್ನ ಜಮೀನಿನಲ್ಲಿ ಆಡು ಮೇಯಿಸುತ್ತಿದ್ದಾಗ ಸುಮಾರು 25ರಿಂದ 30 ವರ್ಷದ ಯುವಕನೋರ್ವ ಕುಡುಗೋಲು ಕೇಳುವ ನೆಪದಲ್ಲಿ ತನ್ನ ಬಳಿ ಬಂದ. ನಿನಗೇಕೆ ಕುಡುಗೋಲು ಬೇಕು ಎಂದು ಕೇಳುತ್ತಿದ್ದಂತೆಯೇ ಎರಡೂ ಕೈಗಳನ್ನು ಹಿಡಿದು ಕುತ್ತಿಗೆಯಲ್ಲಿದ್ದ 30 ಗ್ರಾಂ ಚಿನ್ನದ ಸರ ಕಿತ್ತುಕೊಂಡು ಪರಾರಿಯಾದ ಎಂದು ಸಿದ್ದಮ್ಮ ತಿಳಿಸಿದ್ದಾರೆ. ಮಾಹಿತಿ ತಿಳಿದ ದಕ್ಷಿಣ ಠಾಣೆ ಪೊಲೀಸರು ಸ್ಥಳ ಮಹಜರು ಮಾಡಿ ಪ್ರಕರಣ ದಾಖಲಿಸಿಕೊಂಡು ಆರೋಪಿ ಪತ್ತೆಗೆ ಜಾಲ ಬೀಸಿದ್ದಾರೆ.

ಒಂದನೇ ಪುಟದಿಂದ

ಕನ್ನಡ ರಾಜ್ಯೋತ್ಸವ ಪ್ರಶಸ್ತಿ ವಿಜೇತರ ಪಟ್ಟಿ

ವಿಜಯಲಕ್ಷ್ಮೀ ಸಿಂಗ್ (ಕೊಡಗು).

ಆಡಳಿತ: ಹೆಚ್. ಸಿದ್ದಯ್ಯ ಭಾ.ಆ.ಸೇ(ನಿ) (ಬೆಂಗಳೂರು ದಕ್ಷಿಣ (ರಾಮನಗರ).

ವೈದ್ಯಕೀಯ: ಡಾ. ಆಲಮ್ಮ ಮಾರಣ್ಣ (ತುಮಕೂರು), ಡಾ. ಜಯರಂಗನಾಥ್ (ಬೆಂಗಳೂರು ಗ್ರಾಮಾಂತರ).

ಸಮಾಜ ಸೇವೆ: ಶ್ರೀಮತಿ ಸೂಲಗಿತ್ತಿ ಈರಮ್ಮ (ವಿಜಯನಗರ), ಶ್ರೀಮತಿ ಫಕ್ಕೀರಿ (ಬೆಂಗಳೂರು ಗ್ರಾಮಾಂತರ), ಶ್ರೀಮತಿ ಕೋರಿನ್ ಆಂಟೊನಿಯಟ್ ರಸ್ಕೀನಾ (ದಕ್ಷಿಣ ಕನ್ನಡ), ಡಾ. ಎನ್. ಸೀತಾರಾಮ ಶೆಟ್ಟಿ (ಉಡುಪಿ), ಕೋಣಂದೂರು ಲಿಂಗಪ್ಪ (ಶಿವಮೊಗ್ಗ).

ಸಂಕೀರ್ಣ: ಉಮೇಶ ಪಂಬದ (ದಕ್ಷಿಣ ಕನ್ನಡ), ಡಾ. ರವೀಂದ್ರ ಕೋರಿಶೆಟ್ಟರ್ (ಧಾರವಾಡ), ಕೆ.ದಿನೇಶ್ (ಬೆಂಗಳೂರು), ಶಾಂತರಾಜು (ತುಮಕೂರು), ಜಾಫರ್ ಮೊಹಿಯುದ್ದೀನ್ (ರಾಯಚೂರು), ಪೆನ್ನ ಓಬಳಯ್ಯ (ಬೆಂಗಳೂರು ಗ್ರಾಮಾಂತರ), ಶಾಂತಿ ಬಾಯಿ (ಬಳ್ಳಾರಿ), ಮಂಡಲೀಕ ಶಾಸ್ತ್ರೀ(ಬುಡಬುಡಕೆ) (ಬೆಳಗಾವಿ).

ಹೊರನಾಡು/ ಹೊರದೇಶ: ಜಕರಿಯ ಬಜಪೆ (ಸೌದಿ), ಪಿ.ವಿ.ಶೆಟ್ಟಿ (ಮುಂಬೈ).

ಪರಿಸರ: ರಾಮೇಗೌಡ (ಚಾಮರಾಜನಗರ), ಮಲ್ಲಿಕಾರ್ಜುನ ನಿಂಗಪ್ಪ (ಯಾದಗಿರಿ).

ಕೃಷಿ: ಡಾ. ಎಸ್.ವಿ.ಹಿತ್ತಲಮನಿ (ಹಾವೇರಿ), ಎಂ.ಸಿ. ರಂಗಸ್ವಾಮಿ (ಹಾಸನ).

ಮಾಧ್ಯಮ: ಕೆ.ಸುಬ್ರಮಣ್ಯ (ಬೆಂಗಳೂರು), ಅಂಶಿ ಪ್ರಸನ್ನಕುಮಾರ್ (ಮೈಸೂರು), ಬಿ.ಎಂ.ಹನೀಫ್ (ದಕ್ಷಿಣ ಕನ್ನಡ), ಎಂ.ಸಿದ್ಧರಾಜು (ಮಂಡ್ಯ).

ವಿಜ್ಞಾನ ಮತ್ತು ತಂತ್ರಜ್ಞಾನ: ರಾಮಯ್ಯ (ಚಿಕ್ಕಬಳ್ಳಾಪುರ), ಏರ್ ಮಾರ್ಷಲ್ ಫಿಲಿಪ್ ರಾಜಕುಮಾರ್ (ದಾವಣಗೆರೆ), ಡಾ. ಆರ್.ವಿ.ನಾಡಗೌಡ (ಗದಗ).

ಸಹಕಾರ: ಶೇಖರ ಗೌಡ ವಿ. ಮಾಲೀಪಾಟೀಲ್.

ಯಕ್ಷಗಾನ: ಕೋಟಾ ಸುರೇಶ್ ಬಂಗೇರ (ಉಡುಪಿ), ಐರ್ಬೈಲ್ ಆನಂದ ಶೆಟ್ಟಿ(ಉಡುಪಿ), ಕೃಷ್ಣ ಪರಮೇಶ್ವರ ಹೆಗಡೆ (ಕೆ.ಪಿ.ಹೆಗಡೆ).

ಬಯಲಾಟ: ಗೊಂಡೂರಾಜ್ (ಹಾಸನ).

ರಂಗಭೂಮಿ: ಎಚ್.ಎಂ.ಪರಮಶಿವಯ್ಯ (ರಾಮನಗರ), ಎಲ್.ಬಿ.ಶೇಖ್ (ವಿಜಯಪುರ), ಬಂಗಾರಪ್ಪ ಕುದಾನ್ ಪುರ (ಬೆಂಗಳೂರು), ಮೈಮ್ ರಮೇಶ್ (ದಕ್ಷಿಣ ಕನ್ನಡ), ಡಿ. ರತ್ನಮ್ಮ ದೇಸಾಯಿ (ರಾಯಚೂರು).

ಶಿಕ್ಷಣ: ಡಾ.ಎಂ.ಆರ್. ಜಯರಾಂ (ಬೆಂಗಳೂರು), ಡಾ. ಎನ್.ಎಸ್.ರಾಮೇಗೌಡ (ಮೈಸೂರು), ಎಸ್.ಬಿ.ಹೊಸಮನಿ (ಕಲಬುರಗಿ), ಶ್ರೀಮತಿ ರಾಜಶ್ರೀ ನಾಗರಾಜು (ಬೆಳಗಾವಿ).

ಕ್ರೀಡೆ: ಆಶಿಶ್ ಕುಮಾರ್ ಬಲ್ಲಾಳ್ (ಬೆಂಗಳೂರು), ಎಂ.ಯೋಗೇಂದ್ರ (ಮೈಸೂರು), ಡಾ. ಜಬೀನಾ ಎನ್.ಎಂ. (ಕೊಡಗು).


ನ್ಯಾಯಾಂಗ: ನ್ಯಾ.ಪಿ.ಬಿ.ಬಜಂತ್ರಿ (ಬಾಗಲಕೋಟೆ).

ಶಿಲ್ಪಕಲೆ: ಬಸಣ್ಣ ಮೋನಪ್ಪ ಬಡಿಗೇರ (ಯಾದಗಿರಿ), ನಾಗಲಿಂಗಪ್ಪ ಜಿ. ಗಂಗೂರ (ಬಾಗಲಕೋಟೆ).

ಚಿತ್ರಕಲೆ: ಬಿ.ಮಾರುತಿ (ವಿಜಯನಗರ).

ಕರಕುಶಲ: ಶ್ರೀಮತಿ ಎಲ್. ಹೇಮಾಶೇಖರ್ (ಮೈಸೂರು).

ಮೈಸೂರು ಹಾಗೂ ಸುತ್ತಮುತ್ತ ಇಂದು...



ಇಂದಿನ ಪಂಚಾಂಗ

31.10.2025 ಶುಕ್ರವಾರ, ಮಳೆ ನಕ್ಷತ್ರ: ಸ್ವಾತಿ 24.10.2025 ರಿಂದ 05.11.2025
ವಿಶ್ವಾವಸು ನಾಮ ಸಂವತ್ಸರ, ದಕ್ಷಿಣಾಯನ, ಶರದ್ ಋತು, ಕಾರ್ತಿಕ ಮಾಸ, ಶುಕ್ಲ ಪಕ್ಷ,
ತಿಥಿ: ದಶಮಿ, ನಕ್ಷತ್ರ: ಧನಿಷ್ಠ, ರಾಹುಕಾಲ: ಬೆಳಗ್ಗೆ 9 ರಿಂದ 10.30 ರವರೆಗೆ

■ **ಶ್ರೀ ಮಲೆ ಮಹದೇಶ್ವರ ಸ್ವಾಮಿ ದೇವಸ್ಥಾನ ಟ್ರಸ್ಟ್:** 48ನೇ ವರ್ಷದ ಕಾರ್ತಿಕ ಮಾಸದ ಶ್ರೀ ಮಲೆ ಮಹದೇಶ್ವರಸ್ವಾಮಿ ಜಾತ್ರಾ ಮಹೋತ್ಸವ, 27ನೇ ವರ್ಷದ ಮಹಾಕುಂಭಾಭಿಷೇಕ ಮತ್ತು 11ನೇ ವರ್ಷದ ಹಾಲರವಿ ಉತ್ಸವ, ಬೆಳಗ್ಗೆ 10 ರಿಂದ ಉಚಿತ ಆರೋಗ್ಯ ತಪಾಸಣೆ ಮತ್ತು ಔಷಧಿ ವಿತರಣೆ ಶಿಬಿರ, ಮಧ್ಯಾಹ್ನ 12ಕ್ಕೆ ಮಹಾ ಅನ್ನಸಂತರ್ಪಣೆ, ವರಲಕ್ಷ್ಮಿ ಸಂಗೀತ ಕಲಾವಿದರಿಂದ ಭಜನೆ, ಉದ್ಘಾಟನೆ : ವಿಧಾನ ಪರಿಷತ್ ಸದಸ್ಯ ಡಾ. ಯತೀಂದ್ರ ಸಿದ್ದರಾಮಯ್ಯ, ಉಪಸ್ಥಿತರು : ಜಿಲ್ಲಾ ಆರೋಗ್ಯಾಧಿಕಾರಿ ಡಾ. ಕುಮಾರಸ್ವಾಮಿ, ಡಾ. ಮದನ್‌ಲಾಲ್, ಸುಯೋಗ್ ಆಸ್ಪತ್ರೆಯ ಡಾ. ಪಿ. ಜಯಕುಮಾರ್, ಹೊಸಮಠದ ಪೀಠಾಧ್ಯಕ್ಷ ಶ್ರೀ ಚಿದಾನಂದ ಸ್ವಾಮೀಜಿಯವರಿಗೆ ಗುರುವಂದನಾ ಕಾರ್ಯಕ್ರಮ, ಸಾನ್ನಿಧ್ಯ : ಶ್ರೀ ಸೋಮನಾಥ ಸ್ವಾಮೀಜಿ, ಶ್ರೀ ಶಿವಾನಂದಪುರಿ ಸ್ವಾಮೀಜಿ, ಶ್ರೀ ಶಾಂತಮಲ್ಲಿಕಾರ್ಜುನ ಸ್ವಾಮೀಜಿ, ಅಭಿನಂದನಾ ಕಾರ್ಯಕ್ರಮ, ಮಾಜಿ ವಿಧಾನ ಪರಿಷತ್ ಸದಸ್ಯ ಡಾ. ಡಿ. ಮಾದೇಗೌಡ, ಮಾಜಿ ವಿಧಾನ ಪರಿಷತ್ ಸದಸ್ಯರಾದ ಸಂದೇಶ್ ನಾಗರಾಜ್, ಶಿವಕುಮಾರ್, ಸಂಜೆ 7ಕ್ಕೆ ಶ್ರೀ ಸ್ವರಸಂಗಮ ಕಲಾವಿದರಿಂದ ಭಜನೆ, ಸ್ಥಳ: ದೇವಸ್ಥಾನದ ಪ್ರಾಂಗಣ, ಗರಡಿಕೇರಿ, ಲಷ್ಕರ್ ಮೊಹಲ್ಲಾ.

■ **ಜೆಎಸ್‌ಎಸ್ ವೈದ್ಯಕೀಯ ಮಹಾವಿದ್ಯಾಲಯ, ಸಮುದಾಯ ವೈದ್ಯಶಾಸ್ತ್ರ ವಿಭಾಗ, ಜೆಎಸ್‌ಎಸ್ ಉನ್ನತ ಶಿಕ್ಷಣ ಮತ್ತು ಸಂಶೋಧನಾ ಅಕಾಡೆಮಿ, ಇಂಡಿಯನ್ ಅಸೋಸಿಯೇಷನ್ ಆಫ್ ಪ್ರಿವೆಂಟಿವ್ ಅಂಡ್ ಸೋಷಿಯಲ್ ಮೆಡಿಸಿನ್ ಕರ್ನಾಟಕ ಸ್ಟೇಟ್ ಚಾಪ್ಟರ್ :** ಅಂತರರಾಷ್ಟ್ರೀಯ ಸಿಎಂಇ ಕಾರ್ಯಕ್ರಮ, ಮುಖ್ಯ ಅತಿಥಿಗಳು : ಇನ್ಫೋಸಿಸ್ ಗ್ಲೋಬಲ್ ಎಜುಕೇಶನ್ ಸೆಂಟರ್‌ನ ಉಪಾಧ್ಯಕ್ಷ ಕೆಎಸ್. ಸುಂದರ್, ಅಧ್ಯಕ್ಷತೆ : ಜೆಎಸ್‌ಎಸ್ ಎಎಚ್‌ಇಆರ್‌ನ ಉಪಕುಲಪತಿ ಡಾ.ಎಚ್. ಬಸವನಗೌಡಪ್ಪ, ಅತಿಥಿಗಳು : ಜೆಎಸ್‌ಎಸ್ ವೈದ್ಯಕೀಯ ಕಾಲೇಜಿನ ಪ್ರಾಂಶುಪಾಲ ಡಾ. ಡಿ. ನಾರಾಯಣಪ್ಪ, ಇಂಡಿಯನ್ ಅಸೋಸಿಯೇಷನ್ ಆಫ್ ಪ್ರಿವೆಂಟಿವ್ ಅಂಡ್ ಸೋಷಿಯಲ್ ಮೆಡಿಸಿನ್ ಕರ್ನಾಟಕ ಸ್ಟೇಟ್ ಚಾಪ್ಟರ್ ಅಧ್ಯಕ್ಷ ಡಾ. ಸುನಿಲ್ ಕುಮಾರ್ ಡಿ.ಆರ್., ಸ್ಥಳ: ಜೆಎಸ್‌ಎಸ್ ವೈದ್ಯಕೀಯ ಕಾಲೇಜು ಮೂರನೇ ಮಹಡಿ ಗ್ಯಾಲರಿ–6, ಬೆಳಗ್ಗೆ 9.30ಕ್ಕೆ.

■ **ಜೆಎಸ್‌ಎಸ್ ಆಯುರ್ವೇದ ಆಸ್ಪತ್ರೆ:** ಬೆಳಗ್ಗೆ 6.30ರಿಂದ ದೇಹ–ಮನಸ್ಸುಗಳ ಆರೋಗ್ಯಕ್ಕಾಗಿ ಯೋಗಾಭ್ಯಾಸ ತರಗತಿ, ಬೆಳಗ್ಗೆ 9.30ರಿಂದ ಲಕ್ವ/ಪ್ಯಾರಲಿಸಿಸ್ ಚಿಕಿತ್ಸಾ ಶಿಬಿರ, ಕಾರ್ನಿಯಾದ ಅಪಾರದರ್ಶಕತೆ/ ಕಣ್ಣಿನ ಹೂ (ಕಾರ್ನಿಯಲ್ ಒಪೇಸಿಟಿ), ಚಿಕಿತ್ಸಾ ಶಿಬಿರ, ಸ್ಥಳ: ಜೆಎಸ್‌ಎಸ್ ಆಯುರ್ವೇದ ಆಸ್ಪತ್ರೆ, ಆಲನಹಳ್ಳಿ.

■ **ಕಾವೇರಿ ಆಯುರ್ವೇದ ಆಸ್ಪತ್ರೆ:** ಮಹಿಳಾ ಮಾನಸಿಕ ಆರೋಗ್ಯ ಮತ್ತು ಭಾವನಾತ್ಮಕ ಸ್ವ–ಆರೈಕೆ ಶಿಬಿರ, ಗರ್ಭಸಂಸ್ಕಾರ, ಉಬ್ಬಿದ ರಕ್ತನಾಳ, ಮೊಡವೆಗಳಿಗೆ ಉಚಿತ ತಪಾಸಣೆ ಮತ್ತು ಚಿಕಿತ್ಸಾ ಶಿಬಿರ, ಸ್ಥಳ: ಕಾವೇರಿ ಆಯುರ್ವೇದ ಆಸ್ಪತ್ರೆ, ಕೆಬಿಎಲ್ ಲೇಔಟ್, ಬೆಳಗ್ಗೆ 10 ಗಂಟೆಗೆ.

■ **ಮೈಸೂರು ಆರ್ಗನೈಸೇಷನ್ ಆಫ್ ಜೆನಿಟೋ ಯೂರಿನರಿ ಸರ್ಜನ್ಸ್ (ಮೈಸೋಗಸ್) :** ಮೂತ್ರ ಶಾಸ್ತ್ರ ಶಸ್ತ್ರ ಚಿಕಿತ್ಸಕರ ಸಂಘದ 30ನೇ ವಾರ್ಷಿಕ ಸಮ್ಮೇಳನ, ಸ್ಥಳ: ನಾರ್ತ್ ಅವೆನ್ಯೂ, ಹೆಬ್ಬಾಳು, ಬೆಳಗ್ಗೆ 10ಕ್ಕೆ.

■ **ರಾಮ್‌ಸನ್ಸ್ ಬೊಂಬೆ ಮನೆ:** ದಸರೆಯ ಬೊಂಬೆ ಪ್ರದರ್ಶನದ 21ನೇ ಅವತರಣಿಕೆ, ಸ್ಥಳ: ರಾಮ್‌ಸನ್ಸ್ ಬೊಂಬೆ ಮನೆ, ನಜರ್‌ಬಾದ್ ಮುಖ್ಯ ರಸ್ತೆ, ಬೆಳಗ್ಗೆ 10ರಿಂದ.

■ **ಸಮುದಾಯ ಕರ್ನಾಟಕ, ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಕನ್ನಡ ಅಭಿವೃದ್ಧಿ ಪ್ರಾಧಿಕಾರ, ಮೈಸೂರು ವಿಶ್ವವಿದ್ಯಾನಿಲಯ ಸಂಶೋಧಕರ ಸಂಘ, ಕಾವಾ ಅಲ್ಯೂಮಿನಿ ಅಸೋಸಿಯೇಷನ್, ಮೈಸೂರು ಜಿಲ್ಲಾ ಹವ್ಯಾಸಿ ರಂಗಕರ್ಮಿಗಳ ವೇದಿಕೆ, ಪ್ರಗತಿಪರ ಸಂಘಟನೆಗಳ ಒಕ್ಕೂಟ :** ಮನುಷ್ಯತ್ವದೆಡೆಗೆ ಸಮುದಾಯ–50, ಸಮುದಾಯ ಮೈಸೂರು ರಂಗೋತ್ಸವ, ಬೆಳಗ್ಗೆ 10 ರಿಂದ 4 ರವರೆಗೆ ಮನುಷ್ಯತ್ವದೆಡೆಗೆ ಸಮುದಾಯ – ಕಲಾಶಿಬಿರ, ಉದ್ಘಾಟನೆ: ಕರ್ನಾಟಕ ಲಲಿತಕಲಾ ಅಕಾಡೆಮಿ ಮಾಜಿ ಅಧ್ಯಕ್ಷ ಎಂ.ಎಸ್. ಮೂರ್ತಿ, ಉಪಸ್ಥಿತರು: ಕೆ.ಸಿ.ಮಹದೇವಶೆಟ್ಟಿ, ಶಿವಕುಮಾರ ಕೆಸರಮಡು, ಆರ್.ಹೆಚ್. ಮಂಜುಪ್ರಸಾದ್, ಬಿ.ಐ. ಈಳಿಗೇರ, ಜನಾರ್ಧನ್ ಕೆ.ಜಿ.ಎಫ್., ಸಂಜೆ 5ಕ್ಕೆ ದೇವಾನಂದ ವರಪ್ರಸಾದ್ ಮತ್ತು ತಂಡದ ದೇವಾನಂದ ವರಪ್ರಸಾದ್, ಜಯಶಂಕರ ಮೇಸ್ತ್ರಿ, ನಾರಾಯಣಸ್ವಾಮಿ, ಸಿ.ಎಂ. ನರಸಿಂಹಮೂರ್ತಿ, ಶುಭರಾಘವೇಂದ್ರ ತನುಶ್ರೀ ಅವರಿಂದ ಜನಪದ–ಜನಪರ ಗೀತ ಗಾಯನ, ಸಂಜೆ 6ಕ್ಕೆ ಉದ್ಘಾಟನೆ: ಕರ್ನಾಟಕ ನಾಟಕ ಅಕಾಡೆಮಿ ಮಾಜಿ ಅಧ್ಯಕ್ಷ ಪ್ರೊ.ಕೆ.ಮರುಳಸಿದ್ದಪ್ಪ, ಆಶಯ ನುಡಿ: ಪ್ರೊ.ಎಸ್.ಜಿ.ಸಿದ್ದರಾಮಯ್ಯ, ಉಪಸ್ಥಿತರು : ಶ್ರೀನಿವಾಸ್ ಜಿ. ಕಪ್ಪಣ್ಣ, ಮಾವಳ್ಳಿ ಶಂಕರ್, ನಂದಾ ಹಳೆಮನೆ, ಪ್ರೊ.ಕೆ.ಪಿ.ವಾಸುದೇವನ್, ಶಶಿಧರ್ ಜೆ.ಸಿ., ಸಿ.ಕೆ. ಗುಂಡಣ್ಣ, ಸವಿತಾ ಪ. ಮಲ್ಲೇಶ್, ಅಧ್ಯಕ್ಷತೆ: ಹೆಚ್. ಜನಾರ್ಧನ್ (ಜನ್ನಿ), ರಂಗ ಗೌರವ : ಶ್ರೀಮತಿ ರಾಮೇಶ್ವರಿ ವರ್ಮ, ಅಬ್ದುಲ್ ರಹಮಾನ್ ಪಾಷಾ, ರವೀಶ್, ಜಿಪಿಐಇಆರ್ ರಂಗ ತಂಡದಿಂದ ವಾರ್ಡ್ ನಂ.6 ನಾಟಕ ಪ್ರದರ್ಶನ, ನಿರ್ದೇಶನ: ಮೈಮ್ ರಮೇಶ್, ಸ್ಥಳ: ಕಲಾಮಂದಿರ ಆವರಣ.

■ **ಮೈಸೂರು ವಿಶ್ವವಿದ್ಯಾನಿಲಯ, ಬಟಾನಿಕಲ್ ಸೊಸೈಟಿ :** ಬಟಾನಿಕಲ್ ಸೊಸೈಟಿ ಚಟುವಟಿಕೆಗಳು ಮತ್ತು ನ್ಯಾಷನಲ್ ಅಕಾಡೆಮಿ ಆಫ್ ಸೈನ್ಸಸ್ ಫೆಲೋ ಪ್ರಶಸ್ತಿ ಪಡೆದ ಡಾ. ಕೆ.ಎನ್. ಅಮೃತೇಶ್ ಅವರಿಗೆ ಸನ್ಮಾನ ಸಮಾರಂಭ, ಉದ್ಘಾಟನೆ : ಡಾ. ಆರ್. ನಂದಕುಮಾರ್, ಅಧ್ಯಕ್ಷತೆ : ಡಾ. ರಾಜ್‌ಕುಮಾರ್ ಹೆಚ್. ಗರಂಪಲ್ಲಿ, ಉಪಸ್ಥಿತರು : ಡಾ. ಜಿ.ಆರ್. ಜನಾರ್ಧನ್, ಸ್ಥಳ: ಲೀನಿಯಸ್ ಸಭಾಂಗಣ, ಮಾನಸಗಂಗೋತ್ರಿ, ಬೆಳಗ್ಗೆ 10.30ಕ್ಕೆ.

■ **ಶಾಸ್ತ್ರೀಯ ಕನ್ನಡ ಅತ್ಯುನ್ನತ ಅಧ್ಯಯನ ಕೇಂದ್ರ, ಭಾರತೀಯ ಭಾಷಾ ಸಂಸ್ಥಾನ :** ಶಾಸ್ತ್ರೀಯ ಕನ್ನಡ ಭಾಷಾ ಮಾನ್ಯತಾ ದಿನಾಚರಣೆ, ಪ್ರಾಸ್ತಾವಿಕ ನುಡಿ: ಕೇಂದ್ರದ ಯೋಜನಾ ನಿರ್ದೇಶಕ ಪ್ರೊ. ಎನ್.ಎಂ. ತಳವಾರ, ಉದ್ಘಾಟನೆ: ಸಂಸ್ಕೃತ ವಿವಿ ವಿಶ್ರಾಂತ ಕುಲಪತಿ ಪ್ರೊ.ಮಲ್ಲೇಪುರಂ ಜಿ.ವೆಂಕಟೇಶ, ಹಾರೈಕೆಯ ನುಡಿ: ಪ್ರೊ.ಪಿ.ಆರ್.ಧರ್ಮೇಶ್ ಫರ್ನಾಂಡೀಸ್, ಅಧ್ಯಕ್ಷತೆ: ಸಂಸ್ಥಾನ ಪ್ರಭಾರ ನಿರ್ದೇಶಕರಾದ ಪ್ರೊ. ಉಮಾರಾಣಿ ಪಪ್ಪುಸ್ವಾಮಿ, ಸ್ಥಳ: ಸಂಸ್ಥೆಯ ಸಭಾಂಗಣ, ಭಾರತೀಯ ಭಾಷಾ ಸಂಸ್ಥಾನ, ಬೆಳಗ್ಗೆ 10.45ಕ್ಕೆ.

■ **ತಾಮರ ಇನ್ಸ್‌ಟಿಟ್ಯೂಟ್ ಆಫ್ ಎಜುಕೇಷನ್ ಅಂಡ್ ವಾಲೆಂಟರಿ ಸರ್ವೀಸ್ ಟ್ರಸ್ಟ್ :** ತಾಮರ ಆರ್ಥೋಟಿಕ್ ಪ್ರಾಸ್ತೋಟಿಕ್ ಅಂಡ್ ರಿಸರ್ಚ್ ಸೆಂಟರ್ ಉದ್ಘಾಟನಾ ಸಮಾರಂಭ, ಉದ್ಘಾಟನೆ: ಶಾಸಕ ಕೆ.ಹರೀಶ್‌ಗೌಡ, ಅಧ್ಯಕ್ಷತೆ : ಡಿಸಿಪಿ ಕೆ.ಸುಂದರರಾಜ್, ಮುಖ್ಯ ಅತಿಥಿಗಳು: ಹೆಚ್ಚುವರಿ ಆಯುಕ್ತ ಜಿ. ಸೋಮಶೇಖರ್, ಡಾ.ನೀಲನಗೌಡ ಪಾಟೀಲ್, ಕವೀಶ್ ಗೌಡ, ಪೊಂಜಾಂಡ ಗಣಪತಿ, ಎಸ್.ಬಿ.ಎಂ. ಮಂಜು, ಸ್ಥಳ: 244, ವಿವೇಕಾನಂದ ರಸ್ತೆ, ಬೃಂದಾವನ ಬಡಾವಣೆ, ರೋಟರಿ ಶಾಲೆ ಎದುರು, ಬೆಳಗ್ಗೆ 11ಕ್ಕೆ.

■ **ಮೈಸೂರು ವಿಶ್ವವಿದ್ಯಾನಿಲಯ ವೃತ್ತಿ ಕೇಂದ್ರ, ಅರ್ಥಶಾಸ್ತ್ರ ಮತ್ತು ಸಹಕಾರ ಅಧ್ಯಯನ ವಿಭಾಗ :** ಪ್ಲಾನಿಂಗ್ ಫೋರಂ ಉದ್ಘಾಟನೆ ಹಾಗೂ ಸ್ಪರ್ಧಾತ್ಮಕ ಪರೀಕ್ಷೆಯ ಬಗ್ಗೆ ಅರಿವು ಮೂಡಿಸುವ ಕಾರ್ಯಕ್ರಮ, ಅಧ್ಯಕ್ಷತೆ : ಶ್ರೀಮತಿ ಸವಿತಾ ತಿಮ್ಮಯ್ಯ, ಉದ್ಘಾಟನೆ : ಮೈಸೂರು ವಿವಿ ಕುಲಸಚಿವೆ ಶ್ರೀಮತಿ ಎಂ.ಕೆ. ಸವಿತಾ, ಮುಖ್ಯ ಅತಿಥಿಗಳು : ವೃತ್ತಿ ಕೇಂದ್ರ ಸಂಯೋಜಕರಾದ ಆರ್. ಮಹೇಶ್, ಡಾ. ಎಂ.ಬಿ. ಸುರೇಶ್, ಗಿರೀಶ್ ಭಾಗ, ಡಿ. ರವಿಕುಮಾರ್, ಸ್ಥಳ: ಮಾನವಿಕ ಸಭಾಂಗಣ, ಮಾನಸಗಂಗೋತ್ರಿ, ಬೆಳಗ್ಗೆ 11ಕ್ಕೆ.

■ **ಸಾಧನಾ ಮಂದಿರ :** ಪೂಜ್ಯ ಸ್ವಾಮಿ ಹಂಸಾನಂದ ಅವರಿಂದ ಸರಸ್ವತಿ ಪೂಜಾ, ಸಂಜೆ 6 ರಿಂದ ಕನ್ನಡ ಸಾಹಿತ್ಯ ಪರಿಷತ್ ಜಿಲ್ಲಾ ಸಾಹಿತ್ಯ ಭವನ, ವಿಜಯನಗರ 1ನೇ ಹಂತ; ಸಂಜೆ 7.15 ರಿಂದ ಶ್ರೀ ಸಪ್ತಮಾತೃಕಾ ದೇವಸ್ಥಾನಂ, ವಿಜಯನಗರ 3ನೇ ಹಂತ.

■ **ಮೈಸೂರು ವಿಶ್ವವಿದ್ಯಾನಿಲಯ, ಗ್ರಂಥಾಲಯ ಮತ್ತು ಮಾಹಿತಿ ವಿಜ್ಞಾನ ಅಧ್ಯಯನ ವಿಭಾಗ :** ಮೈಸೂರು ವಿವಿ ಗ್ರಂಥಾಲಯ ಮತ್ತು ಮಾಹಿತಿ ವಿಜ್ಞಾನ ವಿದ್ಯಾರ್ಥಿಗಳ ಸಂಘ 'ಮುಲಿಸಾ' ಉದ್ಘಾಟನಾ ಸಮಾರಂಭ, ಉದ್ಘಾಟನೆ : ಮೈಸೂರು ವಿವಿ ಕುಲಸಚಿವೆ ಶ್ರೀಮತಿ ಎಂ.ಕೆ. ಸವಿತಾ, ಮುಖ್ಯ ಅತಿಥಿಗಳು : ಮಾಜಿ ಕುಲಪತಿ (ಪ್ರಭಾರ) ಪ್ರೊ. ಟಿ.ಕೆ. ಉಮೇಶ್, ಅಧ್ಯಕ್ಷತೆ : ಹಿರಿಯ ಪ್ರಾಧ್ಯಾಪಕ ಪ್ರೊ. ಎನ್.ಎಸ್. ಹರಿನಾರಾಯಣ, ಸ್ಥಳ: ಡಾ. ಎಸ್.ಆರ್. ರಂಗನಾಥನ್ ಸಭಾಂಗಣ, ಮಾನಸಗಂಗೋತ್ರಿ, ಮಧ್ಯಾಹ್ನ 3.30ಕ್ಕೆ

■ **ಕರ್ನಾಟಕ ಸ್ಟೇಟ್ ಕ್ರಿಕೆಟ್ ಅಸೋಸಿಯೇಷನ್, ಮೈಸೂರು ವಲಯ :** ಪ್ರಶಸ್ತಿ ಪ್ರದಾನ ಸಮಾರಂಭ, ಮುಖ್ಯ ಅತಿಥಿಗಳು : ಕೆಎಸ್‌ಸಿಎ ಇಂಟೀರಿಮ್ ಸದಸ್ಯರಾದ ಸಂಜೈ ಪಾಲ್, ಎಂ.ಎಸ್. ವಿನಯ್, ಜಂಟಿ ಕಾರ್ಯದರ್ಶಿ ಶವಿರ್ ತಾರಾಪೊರೆ, ಇಂಟೀರಿಮ್ ಖಜಾಂಚಿ ಕೆ.ವಿ. ಮಂಜುನಾಥ್ ರಾಜು, ಸ್ಥಳ: ನೃತ್ಯೋತ್ಸವ, ಬಲ್ಲಾಳ್ ಸರ್ಕಲ್ ಹತ್ತಿರ, ಸಂಜೆ 4.30ಕ್ಕೆ.

■ **ಗಾನಭಾರತೀ :** ಎಂ. ನಾರಾಯಣ ಡೋಂಗ್ರೆ ಅವರ ನೆನಪಿನಲ್ಲಿ ಕಾರ್ಯಕ್ರಮ, ವಿದುಷಿ ಕು. ಟಿ.ಎ. ಕೀರ್ತನ ಅವರಿಂದ ಗಾಯನ, ರೂಪನಗುಡಿ ರತ್ನತೇಜ–ಪಿಟೀಲು, ಬಿ. ಭುವನ್ ರವಿಶಂಕರ್–ಮೃದಂಗ, ಸ್ಥಳ: ವೀಣೆ ಶೇಷಣ್ಣ ಭವನ, ಆದಿಚುಂಚನಗಿರಿ ರಸ್ತೆ, ಕುವೆಂಪುನಗರ, ಸಂಜೆ 6 ರಿಂದ.

■ **ಸ್ವರಾಮೃತ ಮೆಲೋಡೀಸ್ :** ಗಾನ ವಿಶಾರದ ಡಾ. ಪಿ.ಬಿ. ಶ್ರೀನಿವಾಸ್ ಅವರು ಹಾಡಿದ ಕನ್ನಡ, ತಮಿಳು ಮತ್ತು ತೆಲುಗು ಸುಮಧುರ ಚಿತ್ರಗೀತೆಗಳ ಗಾಯನ ಸಂಜೆ, ಇಳಿದು ಬಾ ತಾಯಿ ಇಳಿದು ಬಾ, ಸ್ಥಳ: ನಾದಬ್ರಹ್ಮ ಸಂಗೀತ ಸಭಾ, ಜೆಎಲ್‌ಬಿ ರಸ್ತೆ, ಸಂಜೆ 5ಕ್ಕೆ.

■ **ನೃತ್ಯ ವಿದ್ಯಾಪೀಠ :** ಸಂಜೆ 5.15 ರಿಂದ ವಿದ್ವಾನ್ ಪ್ರಸನ್ನ ಭಟ್ಟ ಅವರಿಂದ ಶ್ರೀ ನಟರಾಜ ಪೂಜೆ – ಕಿಂಕಿಣಿ ಪೂಜೆ – ವೇದಘೋಷ, ಸಂಜೆ 5.30ರಿಂದ ಶ್ರೀಮತಿ ಶೋಭಾ ಬಾಲಕೃಷ್ಣ ಮತ್ತು ಜಿ.ಎಂ. ಬಾಲಕೃಷ್ಣ ಅವರಿಂದ ನರ್ತನ ಪರ್ವ, ಕು. ವಿದುಷಿ ನಿಶ್ಚಿತ ಕೃಷ್ಣ ಅವರಿಂದ ಭರತನಾಟ್ಯ ರಂಗ ಪ್ರವೇಶ, ಸಂಜೆ 7 ರಿಂದ ಸಭಾ ಕಾರ್ಯಕ್ರಮ, ಅಧ್ಯಕ್ಷತೆ : ಸಂಸದ ಯದುವೀರ್ ಕೃಷ್ಣದತ್ತ ಚಾಮರಾಜ ಒಡೆಯರ್, ಮುಖ್ಯ ಅತಿಥಿಗಳು : ಸಂಗೀತ ವಿವಿ ಕುಲಪತಿ ಪ್ರೊ. ನಾಗೇಶ್ ವಿ. ಬೆಟ್ಟಕೋಟೆ, ವಿಶೇಷ ಆಹ್ವಾನಿತರು : ಕರ್ನಾಟಕ ಬ್ಯಾಂಕ್ ಮ್ಯಾನೇಜರ್ ಕೆ.ಎಸ್. ಮಂಜುನಾಥ್, ಉಪಸ್ಥಿತರು : ನೃತ್ಯ ವಿದ್ಯಾಪೀಠ ಸಂಸ್ಥಾಪಕ ನಿರ್ದೇಶಕ ಗುರು ವಿದುಷಿ ಸಿ.ಎನ್. ಅನಿತಾ, ಸ್ಥಳ: ಜಗನ್ನಾಥ ಸೆಂಟರ್ ಫಾರ್ ಆರ್ಟ್ ಅಂಡ್ ಕಲ್ಚರ್, ವಿಜಯನಗರ.

■ **ಚಿನ್ಮಯ ಮಿಷನ್, ಶ್ರೀ ಗುರುದೇವ ದತ್ತ ಸನ್ನಿಧಿ :** ಗೀತಾಜ್ಞಾನಯಜ್ಞ, ಪೂಜ್ಯ ಸ್ವಾಮಿ ಗಹನಾನಂದ ಅವರಿಂದ ಭಗವದ್ಗೀತೆಯ 3ನೇ ಅಧ್ಯಾಯ ಕರ್ಮಯೋಗ ಕುರಿತು ಪ್ರವಚನ, ಸ್ಥಳ: ಶಿವಾನಂದ ಜ್ಞಾನಾಲಯ, ಜೆಎಲ್‌ಬಿ ರಸ್ತೆ, ಲಕ್ಷ್ಮೀಪುರಂ, ಸಂಜೆ 6.30 ರಿಂದ.

ಮೈಸೂರು ಆಕಾಶವಾಣಿ



ಬೆಳಗ್ಗೆ: 6.10 ಚಿಂತನ, 6.15 ಗೀತಾರಾಧನ, 6.35 ಮತ್ತು ಸಂಜೆ 6.10 ಸ್ವಾತಂತ್ರ್ಯ ದೀಪ ಸ್ವರಾಜ್ಯ ಸೇನಾನಿಗಳ ಕುರಿತ ಬಾನುಲಿ ಸರಣಿ, ಪ್ರಸ್ತುತಿ : ನಿತೀಶ್ ಡಂಬಳ್, 6.40 ಅರಿವಿನ ಶಿಖರ–ಸರ್ವಜ್ಞನ ತ್ರಿಪದಿಗಳನ್ನಾಧರಿಸಿದ ಬಾನುಲಿ ಸರಣಿ, ಗಾಯನ–ಜಿ. ಪುಷ್ಪಲತಾ, ವ್ಯಾಖ್ಯಾನ–ಪ್ರೊ. ಮೈಸೂರು ಕೃಷ್ಣಮೂರ್ತಿ, 6.50 ರೈತರಿಗೆ ಸಲಹೆ, 7.15 ಭಾವಗೀತೆಗಳು, 8.30 ಕನ್ನಡ ಚಿತ್ರಗೀತೆಗಳು, 9.05 ಸ್ತನ ಕ್ಯಾನ್ಸರ್ ಜಾಗೃತಿ ಪ್ರಾಯೋಜಿತ ಕಾರ್ಯಕ್ರಮ, 9.10 ನಮ್ಮ ಆರೋಗ್ಯ–ವಿಶ್ವ ಸ್ಟ್ರೋಕ್ ದಿನಾಚರಣೆಯ ಸಂದರ್ಭದಲ್ಲಿ ಪಾರ್ಶ್ವವಾಯು ಅಂದರೆ ಸ್ಟ್ರೋಕ್ ಕಾರಣಗಳು ಮತ್ತು ಚಿಕಿತ್ಸೆ ಕುರಿತು ನರರೋಗ ಮತ್ತು ರಕ್ತನಾಳ ತಜ್ಞರಾದ ಮೈಸೂರಿನ ಡಾ. ರೂಪಾ ಶೇಷಾದ್ರಿ ಅವರೊಂದಿಗೆ ಮಾತುಕತೆ.ಇವರೊಂದಿಗೆ ಭಾಗವಹಿಸುತ್ತಾರೆ–ಬೇದ್ರೆ ಮಂಜುನಾಥ್ ನಂತರ ಹಿರಿಯ ನಾಗರಿಕರ ಹೃದಯದ ಆರೋಗ್ಯ ಕುರಿತು ತಿಳಿಸಿಕೊಡಲಿದ್ದಾರೆ ಮಂಡ್ಯದ ಇಂಟರ್‌ವೆನ್ಷನಲ್ ಕಾರ್ಡಿಯಾಲಜಿಸ್ಟ್ ಡಾ.ಹೇಮಾ ಎಸ್. ಇವರೊಂದಿಗೆ ಭಾಗವಹಿಸುತ್ತಾರೆ–ಡಾ. ಕುಲದೀಪ್ ಎನ್., 9.30 ಗಾಂಧೀ ಸ್ಮೃತಿ, 9.35 ಕನ್ನಡ ಚಿತ್ರಗೀತೆಗಳು, 10.00 ಕರ್ನಾಟಕ ಶಾಸ್ತ್ರೀಯ ಸಂಗೀತ–ಟಿ.ವಿ. ಶಂಕರ್ ನಾರಾಯಣ–ಹಾಡುಗಾರಿಕೆ, 11.00 ನಿಮ್ಮೊಂದಿಗೆ ಮೈಸೂರು ಆಕಾಶವಾಣಿ ಕಾಮನ ಬಿಲ್ಲು ಬದುಕಿನ ಬಣ್ಣಗಳ ಚಿತ್ತಾರ, ಪ್ರಸ್ತುತಿ : ಜಿ. ಎನ್. ಮಂಜುನಾಥ್

ಮಧ್ಯಾಹ್ನ : 12.05 ವನಿತಾ ವಿಹಾರ, 12.35 ದೇವರನಾಮ, 12.45 ಕಾದಂಬರಿ ವಿಹಾರ, 1.00 ಪ್ರಗತಿ ಪಥ– ಕೇಂದ್ರ ಸರ್ಕಾರದ ವಿವಿಧ ಅಭಿವೃದ್ಧಿ ಯೋಜನೆಗಳ ಸರಣಿ, 1.20 ಭಾವಗೀತೆಗಳು, 1.30 ಸಂದೇಶ ಆಧಾರಿತ ಶ್ರೋತೃಗಳ ಮೆಚ್ಚಿನ ಚಿತ್ರಗೀತೆಗಳ ಕಾರ್ಯಕ್ರಮ, 2.40 ದಾರಿ ದೀಪ–ಪ್ರಾಯೋಜಿತ ಕಾರ್ಯಕ್ರಮ. ಪ್ರಾಯೋಜಕರು: FEBA India, 2.55 ಸಿರಿಗನ್ನಡಂ ಗೆಲ್ಗೆ, ಪ್ರಸ್ತುತಿ: ಜಿ.ಕೆ.ರವೀಂದ್ರಕುಮಾರ್, 3.00 ಕರ್ನಾಟಕ ಶಾಸ್ತ್ರೀಯ ಸಂಗೀತ–ನಿಲಯದ ಕಲಾವಿದರಿಂದ ವಾದ್ಯವೃಂದ, 4.00 ಮಹಿಳಾರಂಗ–ಮಹಿಳಾ ಸಾಹಿತ್ಯರಂಗ–ಮಹಿಳೆಯರ ಪತ್ರಗಳನ್ನಾಧರಿಸಿದ ಸಾಹಿತ್ಯ ಕಾರ್ಯಕ್ರಮ, ಪ್ರಸ್ತುತಿ–ದಿಗ್ವಿಜಯ್ ಬಿ, ಸಹನ ಹಾಗೂ ನೇತ್ರಾ .ಕೆ., 4.30 ವೃತ್ತಿ ಮಾರ್ಗದರ್ಶನ–ಭೌತಶಾಸ್ತ್ರ ಅಂದರೆ ಫಿಸಿಕ್ಸ್ ವಿಷಯದಲ್ಲಿ ಇರುವ ಅಧ್ಯಯನ, ಸಂಶೋಧನೆ ಮತ್ತು ವೃತ್ತಿಪರ ಅವಕಾಶಗಳು ಕುರಿತು ಮೈಸೂರಿನ ಮಹಾರಾಣಿ ಮಹಿಳಾ ಕಾಲೇಜಿನ ಸ್ನಾತಕೋತ್ತರ ಭೌತಶಾಸ್ತ್ರ ವಿಭಾಗದ ಪ್ರೊಫೆಸರ್ ಹಾಗೂ ಡೀನ್ ಅಕಾಡೆಮಿಕ್ಸ್ ಡಾ. ಎಚ್.ಆರ್. ಶ್ರೀಪಾದ್ ಅವರೊಂದಿಗಿನ ಮಾತುಕತೆ. ಇವರೊಂದಿಗೆ ಭಾಗವಹಿಸುತ್ತಾರೆ–ಬೇದ್ರೆ ಮಂಜುನಾಥ್, 6.50 ಕೃಷಿರಂಗ, ಕೃಷಿ ಇಲಾಖೆ ಅಭಿವೃದ್ಧಿ ಯೋಜನೆಗಳು ಈ ಕುರಿತು ಮಂಡ್ಯ ಜಿಲ್ಲಾ ಜಂಟಿ ಕೃಷಿ ನಿರ್ದೇಶಕ ವಿ.ಎಸ್.ಅಶೋಕ್ ಅವರೊಂದಿಗೆ ಸಂದರ್ಶನ, 7.45ಕನ್ನಡದಲ್ಲಿ ಭಾಷಣ, 8.00 ಸಂಧ್ಯರಾಗ, 8.30 ಹಿಂದಿ ಚಿತ್ರಗೀತೆಗಳು, 9.30 ಕರ್ನಾಟಕ ಶಾಸ್ತ್ರೀಯ ಸಂಗೀತ–ಜಿ. ಎಸ್. ಕಮಲ ಮತ್ತು ಜಿ.ಎಸ್.ರಾಜಲಕ್ಷ್ಮಿ –ಯುಗಳ ಹಾಡುಗಾರಿಕೆ, 10.00 ಜನಪದ ಸಂಗೀತ, 10.30 ಸವಿನೆನಪು

ಸರ್ದಾರ್ ವಲ್ಲಭಭಾಯ್ ಪಟೇಲ್ ಜನ್ಮ ದಿನದ ಹಿನ್ನೆಲೆ

ಕರ್ನಾಟಕ ಪೊಲೀಸ್ ಅಕಾಡೆಮಿ ವತಿಯಿಂದ ಏಕತಾ ಓಟದ ಮೂಲಕ ಏಕತೆ ಸಂದೇಶ

●ಓಟದಲ್ಲಿ ಜರ್ಮನ್ ಪೊಲೀಸ್ ಅಧಿಕಾರಿಗಳು ಸೇರಿ ನೂರಾರು ಪ್ರಶಿಕ್ಷಣಾರ್ಥಿಗಳು ಭಾಗಿ ●ಏಕತಾ ಓಟದಲ್ಲಿ ವಿಜೇತರಾದ ಪ್ರಶಿಕ್ಷಣಾರ್ಥಿಗಳಿಗೆ ಎಡಿಜಿಪಿ ಅಲೋಕ್‌ಕುಮಾರ್ ಬಹುಮಾನ ವಿತರಣೆ; ಫಿಟ್ನೆಸ್ ಕಾಯ್ದುಕೊಳ್ಳುವಂತೆ ಕಿವಿಮಾತು




ಸರ್ದಾರ್ ವಲ್ಲಭಭಾಯ್ ಪಟೇಲ್ ಅವರ ಜನ್ಮ ದಿನದ ಅಂಗವಾಗಿ ಪೊಲೀಸ್ ಅಕಾಡೆಮಿ ವತಿಯಿಂದ ಆಯೋಜಿಸಿದ್ದ ಏಕತಾ ಓಟದಲ್ಲಿ ಪಾಲ್ಗೊಂಡಿರುವ ಪ್ರಶಿಕ್ಷಣಾರ್ಥಿಗಳು. ಮತ್ತೊಂದು ಚಿತ್ರದಲ್ಲಿ ಏಕತಾ ಓಟದಲ್ಲಿ ಎಡಿಜಿಪಿ ಅಲೋಕ್‌ಕುಮಾರ್ ಪಾಲ್ಗೊಂಡಿರುವುದನ್ನು ಕಾಣಬಹುದು

ಮೈಸೂರು, ಅ.30(ಎಂಟಿವೈ)- ಉಕ್ಕಿನಮನುಷ್ಯ ಸರ್ದಾರ್ ವಲ್ಲಭ ಬಾಯ್ ಪಟೇಲ್ ಅವರ 150ನೇ ಜನ್ಮ ದಿನದ ಹಿನ್ನೆಲೆಯಲ್ಲಿ ಕರ್ನಾಟಕ ಪೊಲೀಸ್ ಅಕಾಡೆಮಿ ವತಿಯಿಂದ ಗುರುವಾರ ಆಯೋಜಿಸಿದ್ದ 'ಏಕತಾ ಓಟ'ದಲ್ಲಿ ಜರ್ಮನ್ ದೇಶದ ಪೊಲೀಸ್ ಅಧಿಕಾರಿಗಳೂ ಸೇರಿದಂತೆ 500ಕ್ಕೂ ಹೆಚ್ಚು ಮಂದಿ ಪ್ರಶಿಕ್ಷಣಾರ್ಥಿಗಳು ಪಾಲ್ಗೊಂಡು ಏಕತೆಯ ಸಂದೇಶ ರವಾನಿಸಿದರು.

ಮೈಸೂರಿನ ಪೊಲೀಸ್ ಅಕಾಡೆಮಿ ಆವರಣದಿಂದ ಆರಂಭವಾದ ಏಕತಾ ಓಟದಲ್ಲಿ ಕರ್ನಾಟಕದ ಹಿರಿಯ ಪೊಲೀಸ್ ಅಧಿಕಾರಿಗಳು ಹಾಗೂ ಜರ್ಮನ್ ದೇಶದ ಬವೇರಿಯನ್ ಪೊಲೀಸ್ ನಿಯೋಗದ ಹಿರಿಯ ಅಧಿಕಾರಿಗಳು 5 ಕಿ.ಮೀ. ದೂರದ ಓಟದಲ್ಲಿ ಪಾಲ್ಗೊಂಡು ಗಮನ ಸೆಳೆದರು.

ಪೊಲೀಸ್ ಅಕಾಡೆಮಿ ಆವರಣದಿಂದ ಆರಂಭವಾದ ಏಕತಾ ಓಟ ಹೈದರಾಲಿ ರಸ್ತೆ, ನಜರ್‌ಬಾದ್ ರಸ್ತೆ ಸೇರಿದಂತೆ ವಿವಿಧ ರಸ್ತೆಗಳಲ್ಲಿ ಸಂಚರಿಸಿ, ಮತ್ತೆ ಪೊಲೀಸ್ ಅಕಾಡೆಮಿ ಆವರಣ ತಲುಪಿತು. ಎಡಿಜಿಪಿ ಅಲೋಕ್‌ಕುಮಾರ್, ಡಿಐಜಿ ಬೋರಲಿಂಗಯ್ಯ, ಕೆಪಿಎ ನಿರ್ದೇಶಕ ಎಸ್.ಎಲ್.ಚೆನ್ನಬಸವಣ್ಣ, ಜರ್ಮನ್ ದೇಶದ ಬವೇರಿಯಾದ ಎಡಿಜಿಪಿ ಮ್ಯಾನ್‌ಫ್ರೆಡ್ ಗೀಗಲ್, ಎಎಸ್ಪಿ ರಾಲ್ಫ್ ಈರ್ನರ್, ಕಾರ್ಯಕ್ರಮ ಸಮನ್ವಯಾಧಿಕಾರಿ ಎಸ್.ಎನ್. ಸಂದೇಶ್ ಕುಮಾರ್ ಸೇರಿದಂತೆ ವಿವಿಧ ವಿಭಾಗಗಳ ಎಸಿಪಿಗಳು ಓಟದಲ್ಲಿ ಪ್ರಶಿಕ್ಷಣಾರ್ಥಿಗಳೊಂದಿಗೆ ಹೆಜ್ಜೆ ಹಾಕಿದರು.

ಫಿಟ್ನೆಸ್ ಕಾಪಾಡಿಕೊಳ್ಳಿ: ಏಕತಾ ಓಟದಲ್ಲಿ ವಿಜೇತರಾದ ಪ್ರಶಿಕ್ಷಣಾರ್ಥಿಗಳಿಗೆ ಬಹುಮಾನ ವಿತರಿಸಿದ ಬಳಿಕ ಎಡಿಜಿಪಿ ಅಲೋಕ್ ಕುಮಾರ್ ಮಾತನಾಡಿ, ಉಕ್ಕಿನ ಮನುಷ್ಯ ಎನಿಸಿರುವ ಸರ್ದಾರ್ ವಲ್ಲಭಬಾಯ್ ಪಟೇಲ್ 150ನೇ ಜನ್ಮ ದಿನವನ್ನು ಅ.31ರಂದು(ಶುಕ್ರವಾರ) ದೇಶದಾದ್ಯಂತ ಆಚರಿಸಲಾಗುತ್ತಿದೆ ರಾಷ್ಟ್ರೀಯ ಏಕತಾ ದಿನ ಎಂದು ಆಚರಿಸುವ ಮೂಲಕ ಏಕತೆಯ ಸಂದೇಶ ಸಾರಲಾಗುತ್ತಿದೆ. ಈ ನಿಟ್ಟಿನಲ್ಲಿ ಇಂದು ಪೊಲೀಸ್ ಅಕಾಡೆಮಿ ಆಯೋಜಿಸಿರುವ ಏಕತಾ ಓಟದಲ್ಲಿ ಪ್ರಶಿಕ್ಷಣಾರ್ಥಿಗಳೊಂದಿಗೆ ಹಿರಿಯ ಅಧಿಕಾರಿಗಳು ಪಾಲ್ಗೊಳ್ಳುವ ಮೂಲಕ ಇದು ಪೊಲೀಸ್ ಕುಟುಂಬದ ಓಟ ಎನ್ನುವುದನ್ನು ತೋರ್ಪಡಿಸಿದ್ದಾರೆ. ಪೊಲೀಸರು ತಮ್ಮ ಫಿಟ್ನೆಸ್ ಕಾಪಾಡಿಕೊಳ್ಳಬೇಕು. ಸರ್ದಾರ್ ವಲ್ಲಭಬಾಯ್ ಪಟೇಲ್ ಅವರನ್ನು ಆದರ್ಶವಾಗಿ ಸ್ವೀಕರಿಸಿ, ಸೇವೆಯಲ್ಲಿ ದಕ್ಷತೆಯಿಂದ ಕಾರ್ಯನಿರ್ವಹಿಸಬೇಕು. ವಲ್ಲಭಬಾಯ್ ಪಟೇಲ್ ಅವರು ಮಾಡಿದ ಹೋರಾಟಗಳನ್ನು ಅವಲೋಕನ ಮಾಡಿಕೊಳ್ಳಬೇಕು ಎಂದು ಸಲಹೆ ನೀಡಿದರು.

ಓಟದ ವಿಜೇತರು: 5 ಕಿ.ಮೀ. ಓಟದ ಸ್ಪರ್ಧೆಯಲ್ಲಿ ಮೂರು ವಿಭಾಗಗಳಲ್ಲಿ ಪ್ರಶಸ್ತಿ ವಿತರಿಸಲಾಯಿತು. ಪಿಎಸ್‌ಐ ಪ್ರಶಿಕ್ಷಣಾರ್ಥಿ ವಿಭಾಗದಲ್ಲಿ ಅರುಣ್‌ನಾಯಕ್(ಪ್ರ), ಅಶೋಕ್ ದ್ವಿತೀಯ ಸ್ಥಾನ ಪಡೆದರು. ಮಹಿಳಾ ವಿಭಾಗದಲ್ಲಿ ಎಸ್.ಚೈತ್ರಾ ಪ್ರಥಮ ಸ್ಥಾನ ಪಡೆದರು. ಪೊಲೀಸ್ ಟ್ರೈನಿಂಗ್ ಸ್ಕೂಲ್ ವಿಭಾಗದಲ್ಲಿ ಪಿ.ಮಂಜುನಾಥ್ (ಪ್ರ), ಹೆಚ್.ಕೆ.ಮೇಘರಾಜ್(ದ್ವಿ). ಪೊಲೀಸ್ ಅಧಿಕಾರಿ ವಿಭಾಗದಲ್ಲಿ ಗಂಗಾಧರ್(ಪ್ರ), ನಂಜುಂಡ ಮೂರ್ತಿ ದ್ವಿತೀಯ ಸ್ಥಾನ ಪಡೆದು ಪ್ರಶಸ್ತಿ ಸ್ವೀಕರಿಸಿದರು.

ಸೈಬರ್ ಅಪರಾಧಗಳ ಭೇದಿಸುವ ಸಂಬಂಧ ಪೊಲೀಸರಿಗೆ ತರಬೇತಿ

●ಎಡಿಜಿಪಿ ಅಲೋಕ್‌ಕುಮಾರ್ ಮಾಹಿತಿ ●ಪೊಲೀಸರಿಗೆ ಅಂತಾರಾಷ್ಟ್ರೀಯ ಮಟ್ಟದ ತರಬೇತಿ ಕಲ್ಪಿಸುವ ವ್ಯವಸ್ಥೆ

ಮೈಸೂರು, ಅ.30(ಎಂಟಿವೈ)- ಇತ್ತೀಚಿನ ದಿನಗಳಲ್ಲಿ ಸೈಬರ್ ಅಪರಾಧವೂ ಆರ್ಗನೈಜ್ಡ್ ಅಪರಾಧವಾಗಿ ಮಾರ್ಪಟ್ಟಿದ್ದು, ವಿದೇಶದಿಂದಲೇ ಭಾರತೀಯರನ್ನು ವಂಚಿಸುವ ಜಾಲ ಹೆಚ್ಚಾಗುತ್ತಿದೆ. ಇಂತಹ ಪ್ರಕರಣ ಸೇರಿದಂತೆ ಹೊಸ ಸ್ವರೂಪದ ಅಪರಾಧ ಪತ್ತೆ ಕುರಿತಂತೆ ಪೊಲೀಸರಿಗೆ ತರಬೇತಿ ನೀಡಲಾಗುತ್ತಿದೆ ಎಂದು ಎಡಿಜಿಪಿ ಅಲೋಕ್ ಕುಮಾರ್ ತಿಳಿಸಿದ್ದಾರೆ.

ಮೈಸೂರಿನ ಪೊಲೀಸ್ ಅಕಾಡೆಮಿಯ ಆವರಣದಲ್ಲಿ ಪತ್ರಕರ್ತರೊಂದಿಗೆ ಮಾತನಾಡಿದ ಅವರು, ಸೈಬರ್ ಅಪರಾಧವು ಜಾಗತಿಕವಾಗಿ ತಲೆನೋವಾಗಿದೆ. ಈ ಹಿಂದೆ ಉತ್ತರ ಭಾರತದ ಕೆಲವೆಡೆ ಕುಳಿತು ವಂಚನೆ ಮಾಡುತ್ತಿದ್ದ ಆರೋಪಿಗಳು ಈಗ ದುಬೈ, ಹಾಂಕಾಂಗ್, ಕಾಂಬೋಡಿಯಾ ಸೇರಿದಂತೆ ವಿವಿಧ ದೇಶಗಳಲ್ಲಿ ತೆರಳಿ, ಅಲ್ಲಿಂದಲೇ ಎರಡು, ಮೂರು ಹಂತದಲ್ಲಿ ಕಾರ್ಯಾಚರಣೆ ನಡೆಸಿ ಸೈಬರ್ ಅಪರಾಧ ಮಾಡುತ್ತಿದ್ದಾರೆ. ಇಂದು ಸೈಬರ್ ಕ್ರೈಮ್ ವ್ಯಾಪಕವಾಗಿ ನಡೆಯುತ್ತಿದ್ದು, ಅದನ್ನು ಭೇದಿಸುವ ಕುರಿತಂತೆ ಕಾಲ ಕಾಲಕ್ಕೆ ಕರ್ನಾಟಕ ಪೊಲೀಸರಿಗೆ ತರಬೇತಿ ನೀಡಲಾಗುತ್ತಿದೆ ಎಂದು ತಿಳಿಸಿದರು.

ಸೈಬರ್ ಅಪರಾಧವನ್ನು ಪೊಲೀಸ್ ಅಧಿಕಾರಿಗಳು ಮತ್ತು ಸಿಬ್ಬಂದಿ ಭೇದಿಸುವ ಸಂಬಂಧ ತರಬೇತಿಗಾಗಿ ರಾಜ್ಯ ಪೊಲೀಸ್ ಇಲಾಖೆಯು ಅಂತಾರಾಷ್ಟ್ರೀಯ ಮಟ್ಟದಲ್ಲಿ ಬೇರೆ ದೇಶದ ಪೊಲೀಸ್ ಇಲಾಖೆಯೊಂದಿಗೆ ಒಪ್ಪಂದ ಮಾಡಿಕೊಂಡಿದ್ದು, ಜಾಗತಿಕ ಮಟ್ಟದಲ್ಲಿ ತರಬೇತಿ ನೀಡಲಾಗುವುದು. ಸೈಬರ್ ಅಪರಾಧ ವಿಚಾರವಾಗಿ ಕರ್ನಾಟಕ ಪೊಲೀಸ್ ಅಕಾಡೆಮಿಗೆ ಜರ್ಮನ್ ದೇಶದ ಬವೇರಿಯಾ ರಾಜ್ಯದ ಪೊಲೀಸರು ಆಗಮಿಸಿ ಅಲ್ಲಿನ ವಿಚಾರಗಳ ಬಗ್ಗೆ ತರಬೇತಿ ನೀಡಲಿದ್ದಾರೆ ಎಂದು ತಿಳಿಸಿದರು.

ದೇಶದ ಕಾನೂನಿನಲ್ಲಿ ಅನೇಕ ಬದಲಾವಣೆಗಳು ಆಗುತ್ತಿವೆ. ಅದಕ್ಕೆ ಅನುಗುಣವಾಗಿ ತರಬೇತಿ ಶೈಲಿಯನ್ನು ರೂಢಿಸಿಕೊಳ್ಳಬೇಕಾಗಿರುವುದು ನಮ್ಮ ಕರ್ತವ್ಯವಾಗಿದೆ. ಪೊಲೀಸ್ ಅಧಿಕಾರಿಗಳಾಗಿ ತೆರಳುವವರನ್ನು ಪ್ರಸ್ತುತ ಸಮಾಜಕ್ಕೆ ಬೇಕಾದಂತೆ ತರಬೇತುಗೊಳಿಸಲಾಗುತ್ತಿದೆ. ಅಕಾಡೆಮಿಯಲ್ಲಿ ಕಾಲಕ್ಕೆ ತಕ್ಕಂತೆ ತರಬೇತಿಯಲ್ಲಿ ಆಮೂಲಾಗ್ರ ಬದಲಾವಣೆಗಳನ್ನು ತಂದಿದ್ದೇವೆ. ಏಕತಾ ಓಟ ಅದರ ಒಂದು ಭಾಗವಾಗಿದೆ. ಪೊಲೀಸ್ ವ್ಯವಸ್ಥೆಯೊಳಗೆ ಸ್ನೇಹ ಭಾವನೆ ಮೂಡಲು ಈ ಕಾರ್ಯಕ್ರಮ ಆಯೋಜಿಸಲಾಗಿದೆ ಎಂದರು.

ಕೆಲವು ಪ್ರಕರಣಗಳಲ್ಲಿ ಸುಪ್ರೀಂಕೋರ್ಟ್ ಹಾಗೂ ಹೈಕೋರ್ಟ್ ನೀಡಿರುವ ತೀರ್ಪು ಮುಂದಿಟ್ಟುಕೊಂಡು ಪೊಲೀಸರಿಗೆ ತರಬೇತಿ ನೀಡಬೇಕಾಗಿದೆ. ಈ ಹಿಂದೆ ದೂರುದಾರರಿಗೆ, ಸಾಕ್ಷಿದಾರರಿಗೆ ರೌಡಿಗಳು, ಅಪರಾಧಿಗಳು ಧಮ್ಕಿ ಹಾಕುತ್ತಿದ್ದರು. ಆ ವೇಳೆ ಪೊಲೀಸರು ಧಮ್ಕಿ ಹಾಕಿದವರ ವಿರುದ್ಧ ಯಾವುದೇ ಪ್ರಕರಣ ದಾಖಲು ಮಾಡಿಕೊಳ್ಳಲು ಆಗುತ್ತಿರಲಿಲ್ಲ. ಧಮ್ಕಿ ಹಾಕಿದವರ ವಿರುದ್ಧ ಪ್ರಕರಣ ದಾಖಲಿಸಬೇಕಾದರೆ ನ್ಯಾಯಾಲಯದಿಂದ ಅನುಮತಿ ಪಡೆಯಬೇಕಾಗಿತ್ತು. ಆದರೆ, ಮಾನ್ಯ ನ್ಯಾಯಾಲಯವು ಇತ್ತೀಚೆಗೆ ನೀಡಿದ ಆದೇಶದಿಂದಾಗಿ ಯಾರೇ ಧಮ್ಕಿ ಹಾಕಿದರೂ ಪ್ರಕರಣ ದಾಖಲಿಸಬಹುದಾಗಿದೆ. ಇಂತಹ ಐತಿಹಾಸಿಕ ಆದೇಶಗಳ ಬಗ್ಗೆಯೂ ಪ್ರಶಿಕ್ಷಣಾರ್ಥಿಗಳಿಗೆ, ಪೊಲೀಸರಿಗೆ ತರಬೇತಿ ನೀಡಲಾಗುತ್ತಿದೆ ಎಂದು ತಿಳಿಸಿದರು.

ದಕ್ಷಿಣ ವಲಯ ಡಿಐಜಿಪಿ ಡಾ. ಬೋರಲಿಂಗಯ್ಯ ಮಾತನಾಡಿ, ತರಬೇತಿಯಲ್ಲಿನ ಫಿಟ್ನೆಸ್ ಅನ್ನು ಕೆಲಸದ ಸಮಯದಲ್ಲೂ ಕಾಪಾಡಬೇಕು. ಇದರಿಂದ ಆರೋಗ್ಯ ಹಾಗೂ ವೃತ್ತಿಯಲ್ಲಿ ಶಿಸ್ತು ಕಾಪಾಡಿಕೊಳ್ಳಲು ಸಾಧ್ಯ ಎಂದು ಹೇಳಿದರು.

ಮಹಿಳಾ ಏಕದಿನ ವಿಶ್ವಕಪ್: ಫೈನಲ್‌ಗೆ ಲಗ್ಗೆಯಿಟ್ಟ ಟೀಂ ಇಂಡಿಯಾ



ನವಿ ಮುಂಬೈ ಅ.30(ವಿವಿಹೆಚ್)- ಭಾರತ ಮಹಿಳಾ ಕ್ರಿಕೆಟ್ ತಂಡ ಏಕದಿನ ವಿಶ್ವಕಪ್ ಫೈನಲ್ಸ್ ಪ್ರವೇಶಿಸಿದೆ. ಜೆಮಿಯಾ ರೋಡ್ರಿಗ್ಸ್ ಅವರ ಅಜೇಯ ಶತಕದಾಟದ ಬಲದಿಂದಾಗಿ ಮಹಿಳಾ ಐಸಿಸಿ ಏಕದಿನ ವಿಶ್ವಕಪ್ ಟೂರ್ನಿಯಲ್ಲಿ ಬಲಿಷ್ಠ ಆಸ್ಟ್ರೇಲಿಯಾ ತಂಡವನ್ನು ಮಣಿಸಿದ ಭಾರತ ಫೈನಲ್ಸ್‌ಗೆ ಲಗ್ಗೆಯಿಟ್ಟಿದೆ. ಆ ಮೂಲಕ ಇದೇ ನ.2ರ ಭಾನುವಾರ ದಕ್ಷಿಣ ಆಫ್ರಿಕಾ ತಂಡವನ್ನು ಫೈನಲ್ಸ್‌ನಲ್ಲಿ ಎದುರಿಸಲಿದೆ.

ಭಾರತ ಮತ್ತು ಆಸ್ಟ್ರೇಲಿಯಾ ನಡುವಣ ಏಕದಿನ ವಿಶ್ವಕಪ್ ಎರಡನೇ ಸೆಮಿ ಫೈನಲ್ಸ್ ಪಂದ್ಯದ ರೋಚಕ ಹಣಾಹಣಿಗೆ ವೇದಿಕೆಯಾಗಿದ್ದ ಇಲ್ಲಿನ ಡಾ. ಡಿ.ವೈ. ಪಾಟೀಲ್ ಸ್ಪೋರ್ಟ್ಸ್ ಅಕಾಡೆಮಿ ಕ್ರೀಡಾಂಗಣದಲ್ಲಿ ಭಾರತ ತಂಡದ ಯುವ ಪ್ರತಿಭೆ ಜೆಮಿಯಾ ರೋಡ್ರಿಗ್ಸ್ ಕಮಾಲ್ ಮಾಡಿದರು. ಶಫಾಲಿ ವರ್ಮಾ 10(5) ಹಾಗೂ ಉಪ ನಾಯಕಿ ಸ್ಮೃತಿ ಮಂದನಾ 24(24) ವಿಕೆಟ್ ಬೇಗನೆ ಕಳೆದುಕೊಂಡಿದ್ದ ತಂಡಕ್ಕೆ ಆಸರೆಯಾಗುವ ಮೂಲಕ ಅಜೇಯರಾಗಿ ಉಳಿದು ಪಂದ್ಯ ಗೆಲ್ಲಿಸಿಕೊಟ್ಟರು.

ಆರಂಭದಲ್ಲಿ ನಿಧಾನಗತಿಯಂದ ಬ್ಯಾಟ್ ಬೀಸಿದ ಜೆಮಿಯಾ ಬಳಿಕ ಲಯ ಕಂಡುಕೊಂಡು ಆಸೀಸ್ ಬೌಲರ್‌ಗಳನ್ನು ಕಾಡಿದರು. ಕ್ರೀಡಾಂಗಣದ ಮೂಲ ಮೂಲೆಗೂ ಚೆಂಡನ್ನು ಅಟ್ಟುವ ಮೂಲಕ ಆಸೀಸ್ ಬೌಲರ್‌ಗಳನ್ನು ಮನಬಂದಂತೆ ದಂಡಿಸಿದರು. ಅವರು ತಮ್ಮ ಇನ್ನಿಂಗ್ಸ್‌ನಲ್ಲಿ 134 ಎಸೆತಗಳಲ್ಲಿ 14 ಬೌಂಡರಿ ಸಹಿತ ಅಜೇಯ 127 ರನ್ ಗಳಿಸಿ ತಂಡದ ಗೆಲುವಿನ ಪ್ರಮುಖ ರೂವಾರಿಯಾದರು. ಇವರಿಗೆ ಜೊತೆಯಾದ ನಾಯಕಿ ಹರ್ಮನ್‌ಪ್ರೀತ್ ಕೌರ್ 88 ಎಸೆತಗಳಲ್ಲಿ 10 ಬೌಂಡರಿ ಹಾಗೂ 2 ಸಿಕ್ಸರ್ ಸಹಿತ 88 ರನ್ ಕಲೆಹಾಕಿ ಗೆಲುವಿನಲ್ಲಿ ಪ್ರಮುಖ ಪಾತ್ರ ವಹಿಸಿದರು.

ಕೊನೆಯಲ್ಲಿ ಅಬ್ಬರಿಸಿದ ದೀಪ್ತಿ ಶರ್ಮಾ 24(17), ರಿಚಾ ಘೋಷ್ 26(16) ಹಾಗೂ ಅಮನ್ಜೋತ್ ಅಮರು ಅಜೇಯ 15(8) ಉಪಯುಕ್ತ ಕಾಣಿಕೆ ನೀಡಿದರು. ಆ ಮೂಲಕ ಭಾರತ 48.3 ಓವರ್‌ಗಳಲ್ಲಿ ಕೇವಲ 5 ವಿಕೆಟ್ ಕಳೆದುಕೊಂಡು 341 ರನ್ ಗಳಿಸಿ 5 ವಿಕೆಟ್‌ಗಳ ಭರ್ಜರಿ ಗೆಲುವು ದಾಖಲಿಸಿತು. ಆಸೀಸ್ ಪರ ಸದರ್‌ಲ್ಯಾಂಡ್ ಮತ್ತು ಗಾರ್ತ್ ತಲಾ ಎರಡು ವಿಕೆಟ್ ಕಿತ್ತರು.

ಇದಕ್ಕೂ ಮೊದಲು ಟಾಸ್ ಗೆದ್ದು ಬ್ಯಾಟಿಂಗ್ ಮಾಡಿದ ಆಸ್ಟ್ರೇಲಿಯಾ ಫೋಬೆ ಲಿಚ್‌ಫೀಲ್ಡ್ ಹಾಗೂ ಎಲಿಸ್ ಪೆರ್ರಿ ಅವರ ಅಮೋಘ ಆಟದ ಬಲದಿಂದ 49.5 ಓವರ್‌ಗಳಲ್ಲಿ ತನ್ನೆಲ್ಲಾ ವಿಕೆಟ್ ಕಳೆದುಕೊಂಡು 338 ರನ್ ಕಲೆಹಾಕಿತು. ಲಿಚ್‌ಫೀಲ್ಡ್ 93 ಎಸೆತಗಳಲ್ಲಿ 17 ಬೌಂಡರಿ ಮತ್ತು 3 ಸಿಕ್ಸರ್ ಸಹಿತ 119 ರನ್ ಗಳಿಸಿದರೆ, ಪೆರ್ರಿ 88 ಎಸೆತಗಳಲ್ಲಿ 6 ಬೌಂಡರಿ ಹಾಗೂ 2 ಸಿಕ್ಸರ್‌ನೊಂದಿಗೆ 77 ರನ್ ಕಲೆಹಾಕಿದರು.

ಉಳಿದಂತೆ ನಾಯಕಿ ಅಲಿಸಾ ಹೀಲಿ 5(15), ಬೆತ್ ಮೂನಿ 24(22), ಸದರ್‌ಲ್ಯಾಂಡ್ 3(6), ಗಾರ್ಡನರ್ 63(45), ತಾಲಿಯಾ ಮೆಗ್ರಾಥ್ 12(7), ಕಿಮ್ ಗಾತ್ 17(17), ಅಲಾನಾ ಕಿಂಗ್ 4(4), ಸೂಫಿ ಡಕ್‌ಔಟ್ ಹಾಗೂ ಮೆಗನ್ ಸ್ಕುಟ್ ಅಜೇಯ 1(1) ರನ್ ಗಳಿಸಿದರು.

ಭಾರತ ತಂಡದ ಪರ ಶ್ರೀಚಾರಣಿ ಹಾಗೂ ದೀಪ್ತಿ ಶರ್ಮಾ ತಲಾ 2 ವಿಕೆಟ್, ಕ್ರಾಂತಿ ಗೌಡ್, ಅಮನ್ಜೋತ್ ಕೌರ್ ಹಾಗೂ ರಾಧಾ ಯಾದವ್ ತಲಾ ಒಂದೊಂದು ವಿಕೆಟ್ ಪಡೆದು ಮಿಂಚಿದರು.

ಉತ್ತಮ ಬ್ಯಾಟಿಂಗ್ ಪ್ರದರ್ಶನ ತೋರಿದ ಜೆಮಿಯಾ ರೋಡ್ರಿಗ್ಸ್ ಪಂದ್ಯಶ್ರೇಷ್ಠ ಪ್ರಶಸ್ತಿಗೆ ಭಾಜನರಾದರು.

ಪೌರಕಾರ್ಮಿಕರ ಮನೆ ತೆರವು ; ಕುಟುಂಬಸ್ಥರಿಂದ ಪ್ರತಿಭಟನೆ

ಕೆಲಕಾಲ ಶ್ರೀರಾಂಪುರ ದೇವಯ್ಯನಹುಂಡಿ ಮುಖ್ಯ ರಸ್ತೆ ತಡೆದು ಆಕ್ರೋಶ



ಮೈಸೂರಿನ ಶ್ರೀರಾಂಪುರ 2ನೇ ಹಂತದ ದೇವಯ್ಯನಹುಂಡಿ ಮುಖ್ಯ ರಸ್ತೆಯಲ್ಲಿ ಪೌರಕಾರ್ಮಿಕರ ಮೂರು ಕುಟುಂಬದ ಮನೆಗಳನ್ನು ತೆರವುಗೊಳಿಸಿದ ಸಂಬಂಧ ಸದರಿ ಕುಟುಂಬಸ್ಥರು ಸ್ಥಳದಲ್ಲಿ ಪ್ರತಿಭಟನೆ ನಡೆಸಿದರು.

ಮೈಸೂರು,ಅ.30(ಪಿಎಂ)- ಮೈಸೂರಿನ ಶ್ರೀರಾಂಪುರ 2ನೇ ಹಂತದ ದೇವಯ್ಯನಹುಂಡಿ ಮುಖ್ಯ ರಸ್ತೆಯಲ್ಲಿ ಪೌರಕಾರ್ಮಿಕರ ಮೂರು ಕುಟುಂಬದ ಮನೆಗಳನ್ನು ತೆರವುಗೊಳಿಸಿದ ಸಂಬಂಧ ಸದರಿ ಕುಟುಂಬಸ್ಥರು ಸ್ಥಳದಲ್ಲಿ ಪ್ರತಿಭಟನೆ ನಡೆಸಿದರಲ್ಲದೇ, ಕೆಲಕಾಲ ಇದೇ ರಸ್ತೆಯನ್ನು ತಡೆದು ಆಕ್ರೋಶ ವ್ಯಕ್ತಪಡಿಸಿದರು.

ತೆರವುಗೊಳಿಸಿರುವ ಮನೆಗಳು ಅಂದಿನ ಶ್ರೀರಾಂಪುರ ಗ್ರಾಪಂ ವತಿಯಿಂದ ನಿರ್ಮಿಸಿ ಕೊಟ್ಟಿದ್ದ ಮನೆಗಳಾಗಿದ್ದವು. ಆದರೆ ನಮ್ಮ ಮನೆಗಳಿದ್ದ ಹಿಂಭಾಗದ ನಿವೇಶನದ ಮಾಲೀಕರು ನಕಲಿ ದಾಖಲೆಗಳನ್ನು ಸೃಷ್ಟಿಸಿ ಕೋರ್ಟ್‌ಗೆ ತಪ್ಪು ಮಾಹಿತಿ ನೀಡಿ, ಇದೀಗ ತಮ್ಮ ಜಾಗವೆಂದು ಆದೇಶ ತಂದು, ಯಾವುದೇ ಮುನ್ಸೂಚನೆ ಸಹ ನೀಡದೇ ಏಕಾಏಕಿ ನಮ್ಮ ಮನೆಗಳನ್ನು ನೆಲಸಮಗೊಳಿಸಿದ್ದಾರೆ ಎಂದು ಪ್ರತಿಭಟನಾಕಾರರು ದೂರಿದರು.

'ಮೈಸೂರು ಮಿತ್ರ'ನೊಂದಿಗೆ ಮಾತನಾಡಿದ ಶ್ರೀರಾಂಪುರ ಪಂಪನ ಪೌರಕಾರ್ಮಿಕ ಹಾಗೂ ಮನೆ ಕಳೆದುಕೊಂಡವರಲ್ಲಿ ಒಬ್ಬರಾದ ಸ್ವಾಮಿ, ನನಗೆ ಹಾಗೂ ಮೈಸೂರು ಮಹಾನಗರ ಪಾಲಿಕೆಯಲ್ಲಿ ಪೌರಕಾರ್ಮಿಕರಾಗಿ ಕೆಲಸ ಮಾಡುವ ಶ್ರೀದೇವಿ ಹಾಗೂ ಕಿರಣ್‌ಕುಮಾರ್ ಅವರಿಗೆ ಅಂದಿನ ಶ್ರೀರಾಂಪುರ ಗ್ರಾಪಂನಿಂದಲೇ ನಿವೇಶನ ನೀಡಿ ಮನೆ ನಿರ್ಮಿಸಿಕೊಡಲಾಗಿತ್ತು. ಆದರೆ ನಮ್ಮ ಮನೆಗಳಿದ್ದ ಹಿಂಭಾಗದ ನಿವೇಶನದಾರರು ನಕಲಿ ದಾಖಲಿ ಸೃಷ್ಟಿಸಿ, ಕೋರ್ಟ್‌ಗೆ ಸುಳ್ಳು ಮಾಹಿತಿ ನೀಡಿ ತಮ್ಮ ಪರವಾಗಿ ಆದೇಶ ತಂದು ನಮ್ಮನ್ನು ಬೀದಿ ಪಾಲು ಮಾಡಿದ್ದಾರೆ ಎಂದು ಆರೋಪಿಸಿದರು.

ನಾವು ಬಡವರು, ಜೊತೆಗೆ ಅನಕ್ಷರಸ್ಥರು. ಹಾಗಾಗಿ ನಮ್ಮ ಅಸಹಾಯಕತೆಯನ್ನು ದುರುಪಯೋಗ ಮಾಡಿಕೊಂಡಿದ್ದಾರೆ. ಕೋರ್ಟ್ ಆದೇಶದ ಬಗ್ಗೆ ನಮಗೆ ಸರಿಯಾದ ತಿಳುವಳಿಕೆ ನೀಡಿಲ್ಲ. ಕೊನೆ ಪಕ್ಷ ಮನೆಯಲ್ಲಿದ್ದ ಸಾಮಗ್ರಿ ತೆಗೆದುಕೊಳ್ಳಲು ಅವಕಾಶ ನೀಡಿಲ್ಲ. ಬೆಳಗ್ಗೆ ಮೂರು ಕುಟುಂಬದವರು ಕೆಲಸಕ್ಕೆ ಹೋಗಿದ್ದೆವು. ಬರುವಷ್ಟರಲ್ಲಿ ನೆಲಸಮ ಮಾಡಿದ್ದಾರೆ ಎಂದು ದೂರಿದರು.

ಪ್ರತಿಭಟನೆ ನೇತೃತ್ವ ವಹಿಸಿದ್ದ ಕರ್ನಾಟಕ ರಾಜ್ಯ ಸಫಾಯಿ ಕರ್ಮಚಾರಿ ಮೇಲುಸ್ತುವಾರಿ ಸಮಿತಿ ರಾಜ್ಯ ಸದಸ್ಯ ಡಿ.ಆರ್.ರಾಜು ಮಾಧ್ಯಮದವರೊಂದಿಗೆ ಮಾತನಾಡಿ, ಕೋರ್ಟ್ ಆದೇಶ ಸಂಬಂಧ ಮಾಹಿತಿ ನೀಡಿ, ಕಾಲಾವಕಾಶ ನೀಡಿ ತೆರವು ಮಾಡಬಹುದಿತ್ತು ಅಲ್ಲಿ ವಾಸವಿದ್ದ ಎಲ್ಲರೂ ಅನಕ್ಷರಸ್ಥರು. ಅವರಿಗೆ ಸರಿಯಾದ ತಿಳುವಳಿಕೆ ನೀಡಬಹುದಿತ್ತು. ಆದರೆ ಏಕಾಏಕಿ ಮನೆಗಳನ್ನು ನೆಲಸಮಗೊಳಿಸಿದ್ದು, ಇದು ಖಂಡನೀಯ ಎಂದು ಕಿಡಿಕಾರಿದರು.

ಮಹಾನಗರ ಪಾಲಿಕೆ ವಲಯ 2ರ ಸಹಾಯಕ ಆಯುಕ್ತ ಗಿರೀಶ್ ಮಾತನಾಡಿ, ತೆರವು ಕಾರ್ಯಾಚರಣೆಯಲ್ಲಿ ಕಾನೂನು ಉಲ್ಲಂಘಿಸಿದ್ದರೆ, ಸೂಕ್ತ ಕ್ರಮಕ್ಕೆ ಸಂಬಂಧಿಸಿದ ಇಲಾಖೆಗಳಿಗೆ ಶಿಫಾರಸ್ಸು ಮಾಡಲಾಗುವುದು. ಮನೆ ಕಳೆದುಕೊಂಡವರು ಉಳಿದುಕೊಳ್ಳಲು ಬೇರೆ ಯಾವುದೇ ಜಾಗ ಇಲ್ಲವೆಂದು ಹೇಳುತ್ತಿದ್ದಾರೆ. ಆಶ್ರಯ ಯೋಜನೆಯಡಿ ಮನೆ ಇಲ್ಲದವರಿಗೆ ಮನೆ ಕೊಡಿಸಬೇಕೆಂಬುದು ಸರ್ಕಾರದ ಉದ್ದೇಶವಾಗಿದೆ. ಇವರಿಗೆ ಮನೆ ಇಲ್ಲದ ಪಕ್ಷದಲ್ಲಿ ಆಶ್ರಯ ಸಮಿತಿಯಡಿ ಮನೆ ಕಲ್ಪಿಸಿಕೊಡಲಾಗುವುದು ಎಂದರು.

ಆಶ್ರಯ ಸಮಿತಿಗೆ ಕೂಡಲೇ ಪ್ರಸ್ತಾವನೆ ಸಲ್ಲಿಸಲಾಗುವುದು. ಸಮಿತಿಯಲ್ಲಿ ಅನುಮೋದನೆಯಾದ ಕೂಡಲೇ ಮುಂದಿನ ಪ್ರಕ್ರಿಯೆ ಮಾಡಲಾಗುವುದು. ಇದು ಸಿವಿಲ್ ಕೇಸ್ ಆದ ಕಾರಣ ಪಾಲಿಕೆ ಮಧ್ಯಪ್ರವೇಶಕ್ಕೆ ಅವಕಾಶವಿಲ್ಲ. ಅದಾಗ್ಯೂ ಕಾನೂನು ಪಾಲನೆ ಆಗಿರುವ ಬಗ್ಗೆ ಪರಿಶೀಲಿಸಲು ಕೋರ್ಟ್ ಆದೇಶ ತರುವಂತೆ ಎದುರು ಪಾರ್ಟಿಯವರಿಗೆ ಹೇಳಿದ್ದೇವೆ. ತಾತ್ಕಾಲಿಕವಾಗಿ ಪಾಲಿಕೆ ವಸತಿ ಕೇಂದ್ರದಲ್ಲಿ ಮನೆ ಕಳೆದುಕೊಂಡವರಿಗೆ ವಾಸ್ತವ್ಯಕ್ಕೆ ವ್ಯವಸ್ಥೆ ಮಾಡಿಕೊಡಲಾಗುವುದು ಎಂದು ತಿಳಿಸಿದರು.

ಪರಿಶೀಲಿಸಿ ಆಶ್ರಯ ಯೋಜನೆಯಡಿ ಮನೆ ಕಲ್ಪಿಸುವ ಭರವಸೆ ಮೇರೆಗೆ ಪ್ರತಿಭಟನೆ ಕೈಬಿಡಲಾಯಿತು. ಮುನ್ನೆಚ್ಚರಿಕಾ ಕ್ರಮವಾಗಿ ಸ್ಥಳದಲ್ಲಿ ಪೊಲೀಸ್ ಭದ್ರತೆ ಇದ್ದಿತು.

ಇಂದು ಕನ್ನೇಗೌಡನಕೊಪ್ಪಲು ಮಾರಮ್ಮ ದೇವಸ್ಥಾನದ ಕುಂಭಾಭಿಷೇಕ



ಮೈಸೂರು, ಅ.30- ಮೈಸೂರಿನ ಕನ್ನೇಗೌಡನಕೊಪ್ಪಲು ಶ್ರೀ ಮಾರಮ್ಮನವರ ದೇವಸ್ಥಾನದ 18ನೇ ವಾರ್ಷಿಕ ಕುಂಭಾಭಿಷೇಕ ಮಹೋತ್ಸವ ಶುಕ್ರವಾರ(ಅ.31) ಜರುಗಲಿದೆ.

ಪ್ರಾತಃ ಪುಣ್ಯಾಹ, ಪ್ರಧಾನ ಕಳಸ ಸ್ಥಾಪನೆ, ಪೂಜೆ, ದುರ್ಗಾಹೋಮ, ಸಪ್ತ ಮಾತೃಕಾ ಹೋಮ, ಕಳಸಹೋಮ, ಪೂರ್ಣಾಹುತಿ ಸೇರಿದಂತೆ ವಿವಿಧ ಪೂಜಾ ಕೈಂಕರ್ಯಗಳೊಂದಿಗೆ ಬೆಳಗ್ಗೆ 9.30ರ ಶುಭ ವೃಶ್ಚಿಕ ಲಗ್ನದಲ್ಲಿ ಕುಂಭಾಭಿಷೇಕ ಸಂಪನ್ನವಾಗಲಿದೆ. ಅಲಂಕಾರ, ಮಹಾನೈವೇದ್ಯದ ಬಳಿಕ ಮಧ್ಯಾಹ್ನ 12.20ಕ್ಕೆ ಮಹಾಮಂಗಳಾರತಿ ನೆರವೇರಿಸಿ, ತೀರ್ಥ ಪ್ರಸಾದ ಹಾಗೂ ಅನ್ನ ಸಂತರ್ಪಣೆ ಮಾಡಲಾಗುವುದು.

ಚಾಮರಾಜಪುರಂ ಬಜ್ಜಣ್ಣ ಲೇನ್‌ನಲ್ಲಿರುವ ಕನ್ನೇಗೌಡನ ಕೊಪ್ಪಲು ಶ್ರೀ ಮಾರಮ್ಮ ದೇವಸ್ಥಾನ ಟ್ರಸ್ಟ್, ಕನ್ನೇಗೌಡನ ಕೊಪ್ಪಲ್, ಜಯನಗರ ಚಿನ್ನಗಿರಿಕೊಪ್ಪಲು ಗರಡಿ ಗ್ರಾಮದ ಎಲ್ಲಾ ಯಜಮಾನರು, ಯುವಕರು, ಸಂಘ-ಸಂಸ್ಥೆಗಳ ಅಧ್ಯಕ್ಷರು, ಸದಸ್ಯರು, ಮಹಿಳಾ ಸಂಘದ ಅಧ್ಯಕ್ಷರು ಹಾಗೂ ಸದಸ್ಯರು ಸೇರಿದಂತೆ ಎಲ್ಲಾ ಭಕ್ತಾಧಿಗಳ ಸಹಯೋಗದಲ್ಲಿ ಜರುಗುತ್ತಿರುವ ಈ ಕುಂಭಾಭಿಷೇಕ ಮಹೋತ್ಸವದಲ್ಲಿ ವಿವಿಧ ಮಠಾಧೀಶರು, ಸಂಸದ ಯದುವೀರ್, ಶಾಸಕರಾದ ಜಿ.ಟಿ.ದೇವೇಗೌಡ, ಕೆ.ಹರೀಶ್ ಗೌಡ, ಶ್ರೀವತ್ಸ ಜಿ.ಡಿ.ಹರೀಶ್‌ಗೌಡ, ಮಾಜಿ ಶಾಸಕ ಎಲ್.ನಾಗೇಂದ್ರ, ಮಾಜಿ ಸಂಸದ ಪ್ರತಾಪ್‌ಸಿಂಹ ಸೇರಿದಂತೆ ಹಲವು ಗಣ್ಯರು ಭಾಗವಹಿಸಲಿದ್ದಾರೆ ಎಂದು ಪ್ರಕಟಣೆ ತಿಳಿಸಿದೆ

ಮೈಸೂರು ಮಾನ್ಸೂನ್ ರೇಸ್ 2025 ಮುಕ್ತಾಯ

ಕೆ.ಪ್ರದೀಪ್ ಅಣ್ಣಯ್ಯ 'ಚಾಂಪಿಯನ್ ತರಬೇತುದಾರ'



ಅ.26ರಂದು ಮುಕ್ತಾಯಗೊಂಡ ಮೈಸೂರು (ಮಾನ್ಸೂನ್) ರೇಸ್ 2025ರಲ್ಲಿ ಗರಿಷ್ಠ ಸಂಖ್ಯೆಯ ಗೆಲುವು ಸಾಧಿಸಿದ (8 ಗೆಲುವು ಮತ್ತು 6 ದ್ವಿತೀಯ ಸ್ಥಾನ) ಕೆ.ಪ್ರದೀಪ್ ಅಣ್ಣಯ್ಯ ಅವರಿಗೆ 'ಚಾಂಪಿಯನ್ ತರಬೇತುದಾರ' ಪ್ರಶಸ್ತಿಯನ್ನು ಮೈಸೂರು ರೇಸ್ ಕ್ಲಬ್ ಲಿಮಿಟೆಡ್ (ಎಂಆರ್‌ಸಿ) ಅಧ್ಯಕ್ಷರೂ ಆದ ಹಿರಿಯ ಸ್ಟೀವರ್ಡ್ ಜಿ.ವೆಂಕಟೇಶ್ ಪ್ರದಾನ ಮಾಡಿದರು. ಎಂಆರ್‌ಸಿ ಸ್ಟೀವರ್ಡ್‌ಗಳು ಹಾಗೂ ಸಮಿತಿ ಸದಸ್ಯರನ್ನು ಚಿತ್ರದಲ್ಲಿ ಕಾಣಬಹುದು.

ಎಸ್.ಆಂಟನಿ ರಾಜ್ 'ಚಾಂಪಿಯನ್ ಜಾಕಿ'



ಅ.26ರಂದು ಮುಕ್ತಾಯಗೊಂಡ ಮೈಸೂರು (ಮಾನ್ಸೂನ್) ರೇಸ್ 2025ರಲ್ಲಿ ಗರಿಷ್ಠ ಸಂಖ್ಯೆಯಲ್ಲಿ ಗೆದ್ದ ಕುದುರೆಗಳ ಸವಾರಿ ಮಾಡಿದ (21 ಗೆಲುವು) ಎಸ್.ಆಂಟನಿ ರಾಜ್ ಅವರಿಗೆ 'ಚಾಂಪಿಯನ್ ಜಾಕಿ' ಪ್ರಶಸ್ತಿಯನ್ನು ಮೈಸೂರು ರೇಸ್ ಕ್ಲಬ್‌ನ ಸ್ಟೀವರ್ಡ್ ಕೆ.ಟಿ.ಬಾಲಕೃಷ್ಣ ಪ್ರದಾನ ಮಾಡಿದರು. ಜೊತೆಗೆ ಸೆ.4ರಂದು ಎಂಆರ್‌ಸಿಯಲ್ಲಿ ನಡೆದ ಮೈಸೂರು ಮಾನ್ಸೂನ್ ರೇಸ್‌ನ ಮೊದಲ ದಿನದಂದು 'ಶ್ರೀಕಂಠದತ್ತ ನರಸಿಂಹರಾಜ ಒಡೆಯರ್ ಮೆಮೊರಿಯಲ್ ಮಲ್ಟಿ-ಮಿಲಿಯನ್' ಟ್ರೋಫಿಯನ್ನು ಗೆದ್ದ 'ಎಕೋಸ್ ಆಫ್ ಟೈಮ್' ಅಶ್ವಕ್ಕೆ ಕೆ.ಪ್ರದೀಪ್ ಅಣ್ಣಯ್ಯ ತರಬೇತಿ ನೀಡಿದ್ದರೆ, ಜಾಕಿ ಎಸ್.ಆಂಟನಿ ರಾಜ್, ಅದನ್ನು ಸವಾರಿ ಮಾಡಿದ್ದರು.

ನಕ್ಕರೆ ಅದೇ ಸ್ವರ್ಗ

ಹೆಂಡತಿ : ರೀ ಎಲ್ಲಾದರೂ ಪಿಕ್‌ನಿಕ್ ಕರಕೊಂಡು ಹೋಗ್ರಿ

ಗಂಡ : ಸರಿ ನಡಿ

ಹೆಂಡತಿ : ಸ್ಮಶಾನಕ್ಕೆ ಏಕೆ ಕರಕೊಂಡು ಬಂದ್ರಿ

ಗಂಡ : ಅಯ್ಯೋ ಹುಚ್ಚೀ ಜನ ಇಲ್ಲಿಗೆ ಬರಬೇಕಂತ ಸಾಯ್ತಾರೆ ಗೊತ್ತಾ !

ಮೈಸೂರು ಮಿತ್ರ

ಶುಕ್ರವಾರ, 31 ಅಕ್ಟೋಬರ್ 2025

ಸತ್ಯೇನೋತ್ತಭಿತಾ ಭೂಮಿಃ ನ ಹಿ ಸತ್ಯಾತ್ಪರೋ ಧರ್ಮಃ

(ಭೂಮಿಯು ಸತ್ಯದ ಮೇಲೆ ನಿಂತಿದೆ, ಸತ್ಯಕ್ಕಿಂತ ಮಿಗಿಲಾದ ಧರ್ಮವಿಲ್ಲ)

ಸಂಪಾದಕ: ಎಂ.ಗೋವಿಂದೇಗೌಡ M.A.

ಅಮೃತ ವಾಹಿನಿ......

ದೀಪದ ಬೆಳಕಿನಲ್ಲಿ ಒಬ್ಬಾತ ಗೀತೆಯನ್ನು ಓದಬಲ್ಲ. ಮತ್ತೊಬ್ಬ ಕಳ್ಳತನ ಮಾಡಬಲ್ಲ. ಅದು ದೀಪದ ತಪ್ಪಲ್ಲ. ಮನುಷ್ಯ ಗುಣದ ತಪ್ಪು. –ಸಂತ ಕಬೀರರು

ವೇದ ಸುಳ್ಳಾದರೂ ಗಾದೆ ಸುಳ್ಳಾಗದು { ಸಜ್ಜನರ ಮಾತು ಸಿಹಿ, ದುರ್ಜನರ ಮಾತು ಕಹಿ.

ನಿಮ್ಮ ಪತ್ರಗಳು

■ ಸಿಎಂ ಸಿದ್ದರಾಮಯ್ಯ ಅಧಿಕಾರ ಹಸ್ತಾಂತರಿಸುವುದು ಒಳಿತು

ಮಾನ್ಯರೆ,

ರಾಜ್ಯ ಕಾಂಗ್ರೆಸ್‌ನಲ್ಲಿ ಮುಖ್ಯಮಂತ್ರಿ ಅಧಿಕಾರ ಹಂಚಿಕೆ ಕುರಿತು ವ್ಯಾಪಕ ಚರ್ಚೆಗಳು ನಡೆಯುತ್ತಿವೆ. ಕೆಲ ದಿನಗಳ ನಂತರ ಇದು ಇನ್ನಷ್ಟು ತಾರಕಕ್ಕೇರುವ ಲಕ್ಷಣಗಳು ಗೋಚರಿಸುತ್ತಿವೆ. ಎರಡೂವರೆ ವರ್ಷದ ನಂತರ ಡಿ.ಕೆ.ಶಿವಕುಮಾರ್ ಅವರಿಗೆ ಅಧಿಕಾರ ಬಿಟ್ಟುಕೊಡಬೇಕೆಂಬ ರಹಸ್ಯ ಒಪ್ಪಂದಗಳು ಏನಾದರೂ ನಡೆದಿದ್ದರೆ ಮುಖ್ಯಮಂತ್ರಿ ಸಿದ್ದರಾಮಯ್ಯಯವರು ಈ ಅಘೋಷಿತ ಒಪ್ಪಂದಕ್ಕೆ ಬದ್ಧರಾಗಿ ನಡೆದುಕೊಳ್ಳುವುದು ಸಮಂಜಸ. ಇಲ್ಲವಾದಲ್ಲಿ ಕರ್ನಾಟಕ ಕಾಂಗ್ರೆಸ್‌ನಲ್ಲಿ ನಡೆಯಬಹುದಾದ ಘನ ವಿಪ್ಲವಕ್ಕೆ ಸಿದ್ದರಾಮಯ್ಯನವರೇ ಕಾರಣಕರ್ತರಾಗಬಹುದು.

ಈಗಾಗಲೇ ಈ ವಿಚಾರಕ್ಕೆ ಸಂಬಂಧಪಟ್ಟಂತೆ ಎರಡು ಬಣಗಳ ನಡುವೆ ಸಾಕಷ್ಟು ವಾಗ್ವಾದಗಳು ನಡೆಯುತ್ತಿದ್ದು, ಪ್ರತಿಷ್ಠೆಯ ಪ್ರಶ್ನೆಯಾಗಿ ಕಾಡುತ್ತಿದೆ. ಈ ಕಗ್ಗಂಟನ್ನು ಹೈಕಮಾಂಡ್ ಯಾವ ರೀತಿ ಬಗೆಹರಿಸಬಹುದೆಂಬ ಕೌತುಕ ಉಂಟಾಗಿದೆ. ಕಾಂಗ್ರೆಸ್ ಅಧಿಕಾರಕ್ಕೆ ಬಂದಾಗ ಹೈಕಮಾಂಡ್ – ಸಿದ್ದರಾಮಯ್ಯ –ಡಿ.ಕೆ.ಶಿವಕುಮಾರ್ ನಡುವೆ ಪರಸ್ಪರ ಒಪ್ಪಂದಗಳು ಆಗಿ ಉಭಯ ನಾಯಕರು ಇದಕ್ಕೆ ಸಮ್ಮತಿ ಸೂಚಿಸಿದ್ದರೆ ಮುಖ್ಯಮಂತ್ರಿ ಸಿದ್ದರಾಮಯ್ಯನವರು ಇದಕ್ಕೆ ಬದ್ಧವಾಗಿ ನಡೆದುಕೊಳ್ಳುವುದು ಪ್ರಸ್ತುತ ಅವರಿಗೆ ಇರುವ ಮೊದಲ ಆಯ್ಕೆ.

ಅಲ್ಲದೇ ಡಿ.ಕೆ.ಶಿವಕುಮಾರ್ ಅವರು ಸಿದ್ದರಾಮಯ್ಯನವರ ಅವಧಿಯಲ್ಲಿ ಎಲ್ಲೂ ಭಿನ್ನಮತದ ಅಪಸ್ವರ ಎತ್ತದೇ ಸಂಪೂರ್ಣ ಸಹಕಾರ ನೀಡುವ ಮೂಲಕ ತಮ್ಮ ಮುತ್ಸದ್ಧಿತನವನ್ನು ಪ್ರದರ್ಶಿಸಿದ್ದಾರೆ. ಈಗ ತಮ್ಮ ಅವಧಿಗೆ ದಿನಗಣನೆ ಪ್ರಾರಂಭವಾಗುತ್ತಿರುವ ಹಿನ್ನೆಲೆಯಲ್ಲಿ ತಮ್ಮ ಹಕ್ಕೊತ್ತಾಯ ಮಾಡುತ್ತಿರುವುದು ನ್ಯಾಯೋಚಿತವಾಗಿದೆ. ಕಾಂಗ್ರೆಸ್ ಪಕ್ಷದಲ್ಲಿ ಬಹುತೇಕ ನಿರ್ಧಾರಗಳು ಹೈಕಮಾಂಡ್ ಮಟ್ಟದಲ್ಲಿಯೇ ನಡೆಯುತ್ತದೆಂಬ ಸಾಮಾನ್ಯ ತಿಳುವಳಿಕೆ ಎಲ್ಲರಿಗೂ ತಿಳಿದ ವಿಚಾರವೇ ಆಗಿದೆ. ಆದರೆ ಅಧಿಕಾರ ಹಂಚಿಕೆ ದಿನಗಳು ಸಮೀಪಿಸುತ್ತಿರುವಾಗ ಕೆಲ ಶಾಸಕರು, ಸಚಿವರ ವರಸೆಗಳೇ ಬದಲಾಗುತ್ತಿದ್ದು, ಶಾಸಕರ ಸಂಖ್ಯಾಬಲ, ಸಂಪುಟ ಪುನರ್ರಚನೆ ಸೇರಿದಂತೆ ಹಲವಾರು ಕಾರಣಗಳನ್ನು ಈಗ ಮುಂದಿಡುತ್ತಿರುವುದು ಹಾಸ್ಯಾಸ್ಪದವಾಗಿದೆ. ಹೈಕಮಾಂಡ್ ಮುಂದೆ ಇಂತಹ ವಿಚಾರಗಳು ನಗಣ್ಯ ಎಂಬುದು ಕಾಂಗ್ರೆಸ್ಸಿಗರಿಗೂ ಮನವರಿಕೆಯಾಗಿರುವ ಸಂಗತಿ, ಡಿ.ಕೆ.ಶಿವಕುಮಾರ್ ಅವರ ಎರಡೂವರೆ ವರ್ಷದ ತಪಸ್ಸಿಗೆ ಪಕ್ಷದ ವರಿಷ್ಠರು ಯಾವ ರೀತಿ ವರ ದಯಪಾಲಿಸುತ್ತಾರೆಂಬುದೇ ಎಲ್ಲರಲ್ಲೂ ಮೂಡಿರುವ ಕೌತುಕದ ಪ್ರಶ್ನೆಯಾಗಿದೆ.

ಈ ಹಿಂದೆ ಬಿಜೆಪಿ –ಜೆಡಿಎಸ್ ಸಮ್ಮಿಶ್ರ ಸರ್ಕಾರದಲ್ಲಿ ಒಪ್ಪಂದದಂತೆ 20 ತಿಂಗಳ ನಂತರ ಕುಮಾರಸ್ವಾಮಿಯವರು ಯಡಿಯೂರಪ್ಪನವರಿಗೆ ಅಧಿಕಾರ ಬಿಟ್ಟು ಕೊಡದೇ ಇದ್ದಾಗ, ನಂತರ ನಡೆದ ರಾಜಕೀಯ ಪ್ರಹಸನ–ವಿದ್ಯಮಾನಗಳನ್ನು ರಾಜ್ಯದ ಜನತೆ ಮರೆತ್ತಿಲ್ಲ. ಸಿದ್ದರಾಮಯ್ಯನವರು ರಾಜಕೀಯ ಸಂಧ್ಯಾ ಸಮಯದಲ್ಲಿದ್ದು ತಮ್ಮ ದೀರ್ಘ ಅವಧಿಯ ರಾಜಕೀಯ ಜೀವನದಲ್ಲಿ ತಮ್ಮದೇ ಆದ ಛಾಪು ಮೂಡಿಸಿದ್ದಾರೆ. ಮುಂದೆಯೂ ಅವರಲ್ಲಿ ಇದೇ ವ್ಯಕ್ತಿತ್ವವನ್ನು ಕಾಣಬೇಕೆಂದರೆ ಅವರು ತಮ್ಮ ಸ್ಥಾನವನ್ನು ಗೌರವಯುತವಾಗಿ ಹಸ್ತಾಂತರಿಸುವುದು ಒಳಿತು. ಇದರಿಂದಾಗಿ ಅವರ ಮೇಲಿನ ಅಭಿಮಾನ –ಪ್ರೀತಿ ಇನ್ನಷ್ಟು ಇಮ್ಮಡಿಗೊಳ್ಳುವುದರಲ್ಲಿ ಎರಡು ಮಾತಿಲ್ಲ.

– ಹೆಚ್.ಆರ್.ಪ್ರಸಾದ್, ವಿವೇಕಾನಂದ ನಗರ, ಮೈಸೂರು.

■ ಕನ್ನಡ ಸಾಹಿತ್ಯ ಸಮ್ಮೇಳನಗಳು 'ಊಟದ ಜಾತ್ರೆ' ಗಳಾಗಬಾರದು

ಮಾನ್ಯರೆ,

ಬಳ್ಳಾರಿಯಲ್ಲಿ ನಡೆಯಲಿರುವ 88ನೇ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನದಲ್ಲಿ ಸಸ್ಯಾಹಾರದ ಜೊತೆ ಮಾಂಸಾಹಾರವನ್ನು ಒದಗಿಸಿ ಆಹಾರ ಸಮಾನತೆಯನ್ನು ಕಾಯ್ದುಕೊಳ್ಳಬೇಕು ಎಂದು ಬಳ್ಳಾರಿಯ ದ್ರಾವಿಡ ಕನ್ನಡಿಗರ ಚಳುವಳಿ ಸಂಘಟನೆ ಬಳ್ಳಾರಿ ಜಿಲ್ಲಾಡಳಿತಕ್ಕೆ ಮನವಿ ಸಲ್ಲಿಸಿರುವುದಾಗಿ ಮಾಧ್ಯಮಗಳು ವರದಿ ಮಾಡಿವೆ.

ಯಾವುದೇ ಕನ್ನಡ ಸಾಹಿತ್ಯ ಸಮ್ಮೇಳನಗಳು 'ಮಾರಮ್ಮನ ಪರ' ಅಲ್ಲ. ಸಾಹಿತ್ಯ ಸಮ್ಮೇಳನಗಳಲ್ಲಿ ಕನ್ನಡ ಭಾಷೆಯ ಅಳಿವು –ಉಳಿವು, ಕನ್ನಡ ಸಾಹಿತ್ಯ ಲೋಕಕ್ಕೆ ಸಂಬಂಧಿಸಿದಂತೆ ಚರ್ಚೆಗಳು ಗೋಷ್ಠಿಗಳು ಕನ್ನಡದ ನೆಲ– ಜಲ ಸಂರಕ್ಷಣೆಯಲ್ಲಿ ಕನ್ನಡಿಗರ ಪಾತ್ರ, ಕನ್ನಡ ಪರ ಚಳುವಳಿಗಳು, ನಶಿಸಿ ಹೋಗುತ್ತಿರುವ ಕನ್ನಡ ಶಾಲೆಗಳ ಉಳಿವು, ಇಂದು ರೈತರು ಅನುಭವಿಸುತ್ತಿರುವ ನೋವುಗಳು ಇವುಗಳ ಬಗ್ಗೆ ಕೂಲಂಕುಷವಾಗಿ ಚರ್ಚೆ ನಡೆಸಿ ಇವುಗಳ ಪರಿಹಾರಕ್ಕಾಗಿ ಸರ್ಕಾರದ ಗಮನಕ್ಕೆ ತರುವುದು ಕನ್ನಡ ಸಾಹಿತ್ಯ ಸಮ್ಮೇಳನದ ಮುಖ್ಯ ಉದ್ದೇಶ. ಊಟ ಕೇವಲ ನೆಪ ಮಾತ್ರ ಆಗಬೇಕು. ಊಟಕ್ಕೆ ಪ್ರಾಧಾನ್ಯತೆ ಕೊಟ್ಟರೆ ಸಾಹಿತ್ಯ ಸಮ್ಮೇಳನಕ್ಕೆ ಯಾವ ಅರ್ಥವೂ ಇರುವುದಿಲ್ಲ, ಮಂಡ್ಯದಲ್ಲಿ ನಡೆದ 87ನೇ ಕನ್ನಡ ಸಾಹಿತ್ಯ ಸಮ್ಮೇಳನದಲ್ಲಿ ಮಾಂಸಾಹಾರ ನೀಡುವ ಬಗ್ಗೆ ಪರ ವಿರೋಧದ ಬಗ್ಗೆ ಚರ್ಚೆಗಳು ನಡೆದವು. ಕಡೆಗೂ ಸಮ್ಮೇಳನದ ಕಡೆ ದಿನ 'ಮೊಟ್ಟೆ' ನೀಡಲಾಯಿತು. ಕನ್ನಡ ಸಾಹಿತ್ಯ ಸಮ್ಮೇಳನಗಳು 'ಊಟದ ಜಾತ್ರೆ' ಗಳಾಗಬಾರದು.

–ಬೂಕನಕೆರೆ ವಿಜೇಂದ್ರ, ಕುವೆಂಪುನಗರ, ಮೈಸೂರು

■ ಪೊಲೀಸರಿಗೂ ಟೋಪಿ !

ಮಾನ್ಯರೆ,

ವಿಶ್ವದ ವಿವಿಧ ರಾಷ್ಟ್ರಗಳಲ್ಲಿ ಪೊಲೀಸರು ಧರಿಸುವ ಕ್ಯಾಪ್‌ಗಳ ಮಾದರಿಯ ಪೀಕ್ ಕ್ಯಾಪ್ ರಾಜ್ಯದ ಪೊಲೀಸರಿಗೆ ನೀಡಲಾಗಿದೆ ಎಂಬ ಮಾಧ್ಯಮ ವರದಿಗಳು ಕುತೂಹಲಕಾರಿಯಾಗಿದೆ. ಇತ್ತೀಚೆಗೆ ರಾಜ್ಯದ ಮುಖ್ಯಮಂತ್ರಿ ಸಿದ್ದರಾಮಯ್ಯ ಹಾಗೂ ಉಪ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಅವರು ಸಾಂಕೇತಿಕವಾಗಿ ಪೊಲೀಸರಿಗೆ ಪೀಕ್ ಕ್ಯಾಪ್ ತೊಡಿಸುವ ಮೂಲಕ ಖಾಕಿಟೋಪಿಗೆ ಗುಡ್ ಬೈ ಹೇಳಿದ್ದಾರೆ. 4–5 ದಶಕಗಳ ಹಿಂದೆ ಪೊಲೀಸರು ಖಾಕಿಚಡ್ಡಿ ಹಾಗೂ ಉದ್ದನೆಯ ತೋಳಿನ ಖಾಕಿ ಅಂಗಿಗಳನ್ನು ಧರಿಸುತ್ತಿದ್ದರು. ಬಹುಶಃ 70ರ ದಶಕದ ಅಂತ್ಯದಲ್ಲಿ ಖಾಕಿ ಚಡ್ಡಿ ಹೋಗಿ ಖಾಕಿ ಪ್ಯಾಂಟ್ ಹಾಗೂ ಖಾಕಿ ಅಂಗಿ ಪ್ರಾರಂಭವಾಯಿತು. ಹಳೆಯ ಸಿನಿಮಾಗಳಲ್ಲಿ ಖಾಕಿ ಚಡ್ಡಿ ಹಾಕಿಕೊಂಡು ಓಡಾಡುವ ಪೊಲೀಸರನ್ನು ಈಗಲೂ ನೋಡಬಹುದು. ಇದೀಗ ಪೊಲೀಸರಿಗೆ ಪೀಕ್ ಕ್ಯಾಪ್ ನೀಡುವ ಮೂಲಕ ಅವರನ್ನು ಮತ್ತಷ್ಟು ಸ್ಮಾರ್ಟ್ ಮಾಡಿರುವ ರಾಜ್ಯ ಸರ್ಕಾರಕ್ಕೆ ಅಭಿನಂದನೆಗಳು.

–ಕೆ.ವಿ.ವಾಸು, ವಕೀಲರು ಮತ್ತು ನೋಟರಿ, ಮೈಸೂರು



ಡಾ. ವಿ. ರಂಗನಾಥ್

ಲೇಖಕರು ಹಾಗೂ ನಿವೃತ್ತ ತಹಸೀಲ್ದಾರರು

ಮೊ: 94482 08746/ 97421 79000

ಚಿಂತನೆ

ಎಲ್ಲರೊಳಗೊಂದಾಗಿ ಬದುಕುವುದೇ ಸಾರ್ಥಕತೆ

ಈ ಸಮಾಜದಲ್ಲಿ ಒಂಟಿತನದಿಂದ ಬಳಲುತ್ತಿರುವವರ ಸಂಖ್ಯೆ ದಿನದಿಂದ ದಿನಕ್ಕೆ ಜಾಸ್ತಿಯಾಗುತ್ತಿದೆ. ಇದಕ್ಕೆ ಕಾರಣ ನಾವು ಮುಕ್ತವಾಗಿ ಬೆರೆಯುವ ಮನೋಭಾವವನ್ನೇ ಕ್ರಮೇಣ ಕಳೆದುಕೊಳ್ಳುತ್ತಿರುವುದು. ಈ ಮೊಬೈಲ್ ಹಾಗೂ ಟಿವಿ ಬರುವುದಕ್ಕೆ ಮುಂಚೆ ನಮ್ಮ ಜೀವನ ಹೇಗಿತ್ತು, ಈಗ ಹೇಗಿದೆ ಎಂದು ಅವಲೋಕನ ಮಾಡಿಕೊಂಡರೆ ಈ ಬಗ್ಗೆ ನಮಗೆ ಉತ್ತರ ಸಿಗುತ್ತದೆ. ಈಗಲೂ ಕೆಲವು ಉದ್ಯಾನವನಗಳಲ್ಲಿ ಕೆಲವು ಹಿರಿಯರು ಗುಂಪಾಗಿ ಕುಳಿತು ಮಾತನಾಡುವುದನ್ನು ನೋಡುತ್ತೇವೆ. ಅದನ್ನು ಹೊರತುಪಡಿಸಿದರೆ ಈಗ ಜನರು ಈ ರೀತಿ ಗುಂಪಾಗಿ ಕುಳಿತು ಮಾತನಾಡುವುದು ಕಡಿಮೆಯಾಗುತ್ತಿದೆ. ಇದರಿಂದ ನಾವು ಮಾನಸಿಕವಾಗಿ ಒಂಟಿಯಾಗುತ್ತಿದ್ದೇವೆ ಎಂದು ಕಂಡುಬರುತ್ತದೆ.

ನಾನು ಪ್ರತಿ ತಿಂಗಳು ಒಂದು ವೃದ್ಧಾಶ್ರಮಕ್ಕೆ ಹೋಗುತ್ತೇನೆ. ಅಲ್ಲಿನವರನ್ನು ಸೇರಿಸಿ ಅವರಿಗೆ ಯಾವುದಾದರೂ ಒಂದು ವಿಷಯ ಕೊಟ್ಟು ಮಾತನಾಡಲು ಕೋರುತ್ತೇನೆ. ಕೊಡುವ ವಿಷಯವೂ ಅಂತಹ ಗಹನವಾದುದೇನೂ ಅಲ್ಲ. ಅಲ್ಲದೆ ಮುಂದಿನ ತಿಂಗಳು ಇಂತಹ ವಿಷಯದ ಬಗ್ಗೆ ಮಾತನಾಡೋಣ ಎಂದೂ ಮುಂಚಿತವಾಗಿ ಹೇಳಿ ಬಂದಿರುತ್ತೇನೆ. ಅಂತೆಯೇ ಮುಂದಿನ ತಿಂಗಳು ಹೋದಾಗ ಈಗ ಯಾವ ವಿಷಯದ ಬಗ್ಗೆ ಮಾತನಾಡಬೇಕು ಎಂದು ಹೇಳಿದ್ದೆ? ಎಂದರೆ ಕೆಲವರು ನೆನಪಿಟ್ಟುಕೊಂಡು ಇದೇ ಎಂದು ಹೇಳುತ್ತಾರೆ.

ನಂತರ ಆ ವಿಷಯದ ಬಗ್ಗೆ ನಿಮಗೆ ಏನೆನಿಸುತ್ತದೆಯೋ ಅದನ್ನು ಹೇಳಿ ಎಂದಾಗ ಮೂರ್‍ನಾಲ್ಕು ಜನರನ್ನು ಬಿಟ್ಟು ಇತರರು ಮಾತ ನಾಡುವುದೇ ಇಲ್ಲ. ಮಾತನಾಡಿ, ಇಲ್ಲಿ ನಾವೇ ಇದ್ದೇವೆ, ಯಾವುದೇ ಸಂಕೋಚ ಬೇಡ ಎಂದರೂ ಅವರು ಮಾತನಾಡುವುದಿಲ್ಲ. ಹಾಗೆಂದು ಅವರಿಗೆ ವಿಷಯ ಗೊತ್ತಿಲ್ಲ ಎಂದಲ್ಲ. ಅಲ್ಲಿರುವವರೆಲ್ಲರೂ ಹಿರಿಯರೇ. ಅವರೆಲ್ಲರಿಗೂ ಬಹಳವಾದ ಜೀವನಾನುಭವ ಇದೆ. ಆದರೆ ಮಾತನಾಡಲು ಸಂಕೋಚಪಡುತ್ತಾರೆ. ಇದಕ್ಕೆ ಕಾರಣವೂ ಸ್ಪಷ್ಟ. ಅವರು ಇತರರೊಂದಿಗೆ ಬೆರೆತು ಮಾತನಾಡುವುದನ್ನು ಮರೆತಿದ್ದಾರೆ. ಅಲ್ಲದೆ, ನಮಗೆ ವಯಸ್ಸಾಗಿದೆ, ಇನ್ಯಾಕೆ ಇಂತಹ ವಿಷಯಗಳ ಬಗ್ಗೆ ತಲೆಕೆಡಿಸಿಕೊಳ್ಳಬೇಕು ಎಂಬ ಮನೋಭಾವ ಎದ್ದು ಕಾಣುತ್ತದೆ. ಇದರಿಂದಾಗಿ ಮಾತನಾಡಲು ಇಚ್ಛಿಸುವುದಿಲ್ಲ.

ಅದು ಈ ವಿಷಯಕ್ಕೆ ಮಾತ್ರ ಎಂದೇನಲ್ಲ. ಅವರು ಇತರೆ ಸಮಯದಲೂ ಯಾರೊಂದಿಗೂ ಹೆಚ್ಚು ಮಾತನಾಡಲು ಬಯಸುವುದಿಲ್ಲ. ಇದರಿಂದಾಗಿ ಅವರಿಗೆ ಕ್ರಮೇಣ ಮಾತು ಮರೆಯುತ್ತಿದೆ. ಕೆಲವೊಮ್ಮೆ ಪ್ರಯತ್ನಿಸಿದರೂ ಶಬ್ದಗಳ ಕೊರತೆ ಕಾಣುತ್ತದೆ. ಮಾತು ಕ್ರಮೇಣ ದೂರವಾಗುತ್ತದೆ. ಇದನ್ನು ಅಲ್ಲಿ ನಾನು ಹಲವರಲ್ಲಿ ಗುರುತಿಸಿದ್ದೇನೆ. ಆದರೂ ಬಿಡಬಾರದು ಎಂದು ಪ್ರತಿ ತಿಂಗಳೂ ಹೋಗಿ ಮಾತನಾಡಿಸುವ ಪ್ರಯತ್ನ ಮಾಡುತ್ತಿದ್ದೇನೆ. ಇತ್ತೀಚೆಗೆ ಅಲ್ಪ ಪ್ರಗತಿ ಕಂಡುಬರುತ್ತಿದೆ. ಇದು ಕೊಂಚ ಸಮಾಧಾನ ತರುತ್ತಿದೆ.

ಆದರೆ ನಡಿಗೆ ಹಾಗೂ ಮಾತು ಇವೆರಡೂ ನಿರಂತರ ಅಭ್ಯಾಸದಿಂದ ಮಾತ್ರ ನಮ್ಮ ಹಿಡಿತದಲ್ಲಿ ಇರುತ್ತದೆ. ನಡಿಗೆ ಮಾಡದಿದ್ದರೆ, ನಡಿಗೆ ಮರೆಯುತ್ತದೆ, ಮಾತನಾಡದಿದ್ದರೆ ಮಾತು ಮರೆಯುತ್ತದೆ. ನನಗೆ ಪರಿಚಯದವರೊಬ್ಬರಿದ್ದಾರೆ, ಅವರ ಮನೆಯಲ್ಲಿ ಬೆಳೆದ ಮದುವೆ ವಯಸ್ಸು ಮೀರುತ್ತಿರುವ ಮಕ್ಕಳಿದ್ದಾರೆ. ಅವರಿಗೆ ಮದುವೆಯಾಗುತ್ತಿಲ್ಲ ಎಂಬ ದುಃಖ ಹಾಗೂ ಬೇಸರ ಅವರಲ್ಲಿದೆ. ಅವರು ಎಷ್ಟೇ ಪ್ರಯತ್ನಿಸುತ್ತಿದ್ದರೂ ಮದುವೆಯಾಗುತ್ತಿಲ್ಲ. ಅದಕ್ಕೆ ಕಾರಣಗಳು ಹಲವಾರು ಇರಬಹುದು. ಅವರು ಮನೆಯಿಂದ ಹೊರಗೆ ನೆಂಟರ ಹತ್ತಿರ ಹೋದರೆ ಮಕ್ಕಳಿಗೆ ಇನ್ನೂ ಮದುವೆಯಾಗಿಲ್ಲವೇ? ಎಂದು ಕೇಳುತ್ತಾರೆ. ಹಾಗಾಗಿ ಏಕೆ ಸಂದಿಗ್ಧಕ್ಕೆ ಒಳಗಾಗಬೇಕು ಎಂದು ಅವರು ನೆಂಟರು ಸೇರುವ ಕಡೆಗೆ ಹೋಗುವುದನ್ನೇ ಬಿಟ್ಟಿದ್ದಾರೆ. ಹಾಗೆಯೇ ಮನೆಯಿಂದ ಹೊರಗೆ ಹೋದರೆ ಯಾರಾದರೂ ಈ ಬಗ್ಗೆ ಪ್ರಶ್ನೆ ಕೇಳಿದರೆ ಏನು ಉತ್ತರ ಕೊಡುವುದು? ಹಾಗಾಗಿ ಹೊರಗೆ ಹೋಗುವುದೇ ಬೇಡ ಎಂದು ಮನೆಯಲ್ಲೇ ಉಳಿಯುತ್ತಿದ್ದಾರೆ.

ಇದರಿಂದಾಗಿ ಹಲವು ಅಡ್ಡ ಪರಿಣಾಮಗಳು ಉಂಟಾಗುತ್ತಿದೆ. ಮೊದಲನೆಯದು ಯಾರೊಡನೆಯೂ ಬೆರೆಯದಿರುವುದರಿಂದ ಏಕಾಂಗಿತನ ಕಾಡುತ್ತಿದೆ. ಹೊರಗೇ ಹೋಗದಿರುವುದರಿಂದ ನಡಿಗೆ ಮರೆಯುತ್ತಿದೆ. ಮನೆಯಲ್ಲೇ ಇದ್ದರೂ ಒಂದೇ ಆಲೋಚನೆ. ಈ ವಿಷಯದ ಬಗ್ಗೆ ಮನೆಯವರೊಡನೆ ಹೆಚ್ಚು ಮಾತ ನಾಡುವಂತಹುದು ಏನೂ ಇಲ್ಲ ಎಂದು ಮಾತು ಕಡಿಮೆಯಾಗಿದೆ. ಮಾತು ಮರೆಯುತ್ತಿದೆ. ಮನೆಯಲ್ಲೇ ಇರುವುದರಿಂದ ಬೇರೆ ಕೆಲಸ ವಿಲ್ಲದ ಕಾರಣ ಕಾಲ ಕಳೆಯಲು ಮಲಗುವುದನ್ನು ಅಭ್ಯಾಸ ಮಾಡಿಕೊಂಡರು. ನಮ್ಮಲ್ಲಿ ಒಂದು ಒಳ್ಳೆಯ ಮಾತಿದೆ. 'ಹಾಡ್ತಾ ಹಾಡ್ತಾ ರಾಗ, ಮಲಗಿ ಮಲಗಿ ರೋಗ' ಎಂದು. ಆಯಾಸವೇ ಇಲ್ಲದೆ ನಿದ್ರೆ ಬರುವುದಿಲ್ಲ. ಹಾಸಿಗೆಯಲ್ಲಿ ಹೊರಳಾಡುವುದೇ ಆಗುತ್ತದೆ. ಹೀಗೆ ಯಾವಾಗಲೂ ಮಲಗುವ ಚಾಯಮಾನದಿಂದ ಕ್ರಮೇಣ ಗೊತ್ತಿಲ್ಲದಂತಹ ಆಲಸ್ಯಕ್ಕೆ ಸಂಬಂಧಿಸಿದ ಅನಾರೋಗ್ಯ ಕಾಡಲು ಪ್ರಾರಂಭವಾಗಿದೆ.



> “ ನಮ್ಮ ಜೀವನ ಏಕಾಂಗಿ ಜೀವನವಲ್ಲ. ನಾವು ಜೀವಿಸಲು ಈ ಸಮಾಜದೊಡನೆ ಹೊಂದಾಣಿಕೆ ಮಾಡಿಕೊಳ್ಳಬೇಕಾಗುತ್ತದೆ. ಹಾಗೆ ನೋಡಿದರೆ ಮಾತು ಆ ದೇವರು ಮಾನವನಿಗೆ ಕಲ್ಪಿಸಿದ ವರ ಎಂದೇ ಹೇಳಬೇಕು. ಪ್ರಾಣಿ–ಪಕ್ಷಿಗಳು ತಮ್ಮದೇ ಆದ ಸಂವಹನ ವಿಧಾನ ಹೊಂದಿರಬಹುದಾದರೂ, ಮನುಷ್ಯನಿಗೆ ಮಾತು ವರದಾನ. ಆ ಮಾತನ್ನು ನಾವು ಸರಿಯಾಗಿ ಬಳಸಿಕೊಳ್ಳಬೇಕು. ಶಾಲೆಗೆ ಹೋಗುವ ಮಕ್ಕಳಿಗೆ ಮಾತು ಹಾಗೂ ಇತರೆ ವಿಷಯಗಳಲ್ಲಿ ಪರಿಣಿತಿ ಬೇಗ ಸಿಗುತ್ತದೆ. ಅದಕ್ಕೆ ಕಾರಣ ಅವರು ಎಲ್ಲರೊಡನೆ ಬೆರೆಯುತ್ತಾರೆ. ಇದರಿಂದ ಅವರು ನಿರಂತರವಾಗಿ ಚಟುವಟಿಕೆಯಿಂದ ಇರುತ್ತಾರೆ.

ಈ ಹಿಂದೆ ಹಾಗೂ ಈಗಲೂ ನೆಂಟರು, ಬಂಧುಗಳು ಹೆಚ್ಚಾಗಿ ಸೇರುವ ಮದುವೆ, ಮುಂಜಿ ಇತ್ಯಾದಿ ಸಮಾರಂಭಗಳಿಗೆ ಹೋಗಬೇಕು. ಅಲ್ಲಿನವರೊಡನೆ ಮಾತನಾಡುತ್ತಿರುವಾಗ ಮದುವೆಯಾಗದ ಮಕ್ಕಳ ಬಗ್ಗೆ ಮಾತು ಬಂದಾಗ, ಅವರು ಇಂತಹ ವರ, ವಧು ಇದ್ದಾರೆ, ಏಕೆ ಪ್ರಯತ್ನಿಸಬಾರದು ಎಂದು ಹೇಳುತ್ತಿದ್ದರು. ಈಗಲೂ ಇಂತಹ ಮಾತುಗಳು ಮದುವೆ ಮನೆಗಳಲ್ಲಿ ನಡೆಯುತ್ತವೆ. ಒಂದಷ್ಟು ಸಂಬಂಧಗಳು ಇದರಿಂದ ಉಂಟಾಗುತ್ತವೆ. ಅಂತಹ ಸಮಾರಂಭಗಳಿಗೇ ಹೋಗದಿದ್ದರೆ, ಅದರಿಂದ ನಷ್ಟವಾಗುವುದು ನಮಗೇ ಎಂಬುದನ್ನು ಮರೆಯಬಾರದು. ಸಮಸ್ಯೆ ಎಲ್ಲರಲ್ಲೂ, ಎಲ್ಲ ಮನೆಯಲ್ಲೂ ಇರುತ್ತದೆ. ಸಮಸ್ಯೆಗೆ ಒಂದಷ್ಟು ನಮ್ಮ ಕಾಣಿಕೆಯೂ ಇರುತ್ತದೆ. ಅದನ್ನು ಮರೆಮಾಚಲಾಗದು. ಆದರೆ ಜನರೊಡನೆ ಇರುವುದರಿಂದ, ಅವರೊಡನೆ ಮಾತನಾಡುವುದರಿಂದ, ಅವರೊಡನೆ ನಮ್ಮ ಸಮಸ್ಯೆಗಳನ್ನು ಹೇಳಿಕೊಳ್ಳುವುದರಿಂದ ಒಂದಷ್ಟು ಪರಿಹಾರಗಳು ಸಿಗುವ ಅವಕಾಶ ಇದ್ದೇ ಇರುತ್ತದೆ. ಬದಲಿಗೆ ನಾನು ಏಕಾಂಗಿಯಾಗೇ ಇದ್ದರೆ ಸಮಸ್ಯೆ ಅದಾಗೇ ಬಗೆಹರಿಯುವುದಿಲ್ಲ, ಬದಲಾಗಿ ನಮ್ಮ ಆಲೋಚನಾ ಶಕ್ತಿಯು ಕುಂದುತ್ತಾ ಹೋಗುತ್ತದೆ.

ನಮ್ಮ ಜೀವನ ಏಕಾಂಗಿ ಜೀವನವಲ್ಲ. ನಾವು ಜೀವಿಸಲು ಈ ಸಮಾಜದೊಡನೆ ಹೊಂದಾಣಿಕೆ ಮಾಡಿಕೊಳ್ಳಬೇಕಾಗುತ್ತದೆ. ಹಾಗೆ ನೋಡಿದರೆ ಮಾತು ಆ ದೇವರು ಮಾನವನಿಗೆ ಕಲ್ಪಿಸಿದ ವರ ಎಂದೇ ಹೇಳಬೇಕು. ಪ್ರಾಣಿ–ಪಕ್ಷಿಗಳು ತಮ್ಮದೇ ಆದ ಸಂವಹನ ವಿಧಾನ ಹೊಂದಿರಬಹುದಾದರೂ, ಮನುಷ್ಯನಿಗೆ ಮಾತು ವರದಾನ. ಆ ಮಾತನ್ನು ನಾವು ಸರಿಯಾಗಿ ಬಳಸಿಕೊಳ್ಳಬೇಕು. ಶಾಲೆಗೆ ಹೋಗುವ ಮಕ್ಕಳಿಗೆ ಮಾತು ಹಾಗೂ ಇತರೆ ವಿಷಯಗಳಲ್ಲಿ ಪರಿಣಿತಿ ಬೇಗ ಸಿಗುತ್ತದೆ. ಅದಕ್ಕೆ ಕಾರಣ ಅವರು ಎಲ್ಲರೊಡನೆ ಬೆರೆಯುತ್ತಾರೆ. ಇದರಿಂದ ಅವರು ನಿರಂತರವಾಗಿ ಚಟುವಟಿಕೆಯಿಂದ ಇರುತ್ತಾರೆ. ನಮ್ಮ ಜೀವನ ಶಾಶ್ವತವಾದುದಲ್ಲ. ಇದು ನಮಗೆಲ್ಲರಿಗೂ ಗೊತ್ತಿರುವಂತ ಹುದೇ. ಹಾಗೆಂದು ನಾಳೆಯೇ ಸಾವು ಬರುತ್ತದೆ ಎಂದೇನೂ ಅಲ್ಲ. ಆದರೆ ಸಾವು ಬರುವವರೆಗೂ ಜೀವನ ಮಾಡಲೇಬೇಕು. ಅದನ್ನು ನಾಲ್ಕಾರು ಜನರೊಡನೆ ಬೆರೆತು ಬದುಕುವುದರಿಂದ ಒಂದಷ್ಟು ಸಾರ್ಥಕತೆ ಕಾಣಬಹುದು.

ಈ ಹಿಂದೆ ಗ್ರಾಮಗಳಲ್ಲಿ ಪಂಚಾಯತಿ ಸಭೆಗಳು ನಡೆಯುತ್ತಿದ್ದವು. ಅವರುಗಳು ಊರಿನ ಆಗುಹೋಗುಗಳ ಅವಲೋಕನ ಮಾಡುತ್ತಿದ್ದರು. ತಪ್ಪುಗಳನ್ನು ಗುರುತಿಸಿ, ಅದಕ್ಕೆ ಕಾರಣ ಹುಡುಕಿ, ಉದ್ದೇಶಪೂರ್ವಕವಾಗಿ ತಪ್ಪು ಮಾಡಿದ್ದರೆ ಶಿಕ್ಷೆ ವಿಧಿಸುತ್ತಿದ್ದರು. ಈ ಪಂಚಾಯಿತಿಗಳಲ್ಲಿ ಗ್ರಾಮಸ್ಥರೂ ಭಾಗವಹಿಸುತ್ತಿದ್ದರು. ಮುಖಂಡರು ನೀಡುವ ತೀರ್ಮಾನದ ಮುಂಚೆ ಸಭೆಯ ಅಭಿಪ್ರಾಯವನ್ನೂ ಆಲಿಸುತ್ತಿದ್ದರು. ಆಗ ಎಲ್ಲರಿಗೂ ತಮ್ಮ ಅಭಿಪ್ರಾಯ ವ್ಯಕ್ತಪಡಿಸಲು ಅವಕಾಶವಾಗುತ್ತಿತ್ತು. ಅಲ್ಲೂ ಮಾತುಗಾರಿಕೆ ಇದ್ದವರು ಹೆಚ್ಚು ಯಶಸ್ಸು ಕಾಣುತ್ತಿದ್ದರು. ಜನಾಭಿಪ್ರಾಯದ ಹಿನ್ನೆಲೆಯಲ್ಲಿ ತೀರ್ಪುಗಳೂ ಬರುತ್ತಿದ್ದವು. ಜನರೊಡನೆ ಹೊಂದಾಣಿಕೆಯಿಂದ ಬಾಳುವವರ ಪರ ಜನರು ಇರುತ್ತಿದ್ದರು. ಇಲ್ಲೂ ನಮಗೆ ಹೊಂದಾಣಿಕೆಗೆ ಬೆಲೆ ಸಿಗುತ್ತಿದ್ದುದನ್ನು ಕಾಣಬಹುದು.

ಇನ್ನು ಅನೇಕ ಹಿರಿಯರು ತಮ್ಮ ವಯೋಮಾನಕ್ಕೆ ಅನುಗುಣವಾದ ಸ್ನೇಹಿತರೊಡನೆ ಹರಟೆ ಹೊಡೆಯಲು (ಈ ಪದ ಹೆಚ್ಚು ಬಳಕೆಯಲ್ಲಿದೆ) ಸೇರುತ್ತಾರೆ. ಅಲ್ಲಿ ಅವರ ಅನುಭವದ ಮಾತುಗಳ ವಿನಿಮಯವಾಗುತ್ತದೆ. ಬೆಂಗಳೂರಿನಲ್ಲಿ ನಾನು ಕಂಡಂತೆ ಹೀಗೆ ಸೇರುವ ಹಿರಿಯರು, ಒಂದು ತಂಡ ಕಟ್ಟಿಕೊಂಡು ದುರ್ಬಲರಿಗೆ ಒಂದಷ್ಟು ಸಹಾಯ ಮಾಡುವ ಮಾರ್ಗ ರೂಪಿಸಿಕೊಂಡಿದ್ದಾರೆ. ಆ ಗುಂಪಿನಲ್ಲಿ ಇರುವವರು ವಿವಿಧ ಇಲಾಖೆಗಳಲ್ಲಿ ಕೆಲಸ ಮಾಡಿ ನಿವೃತ್ತರಾದವರು. ಅವರು ತಮ್ಮ ಬಳಿ ಸಮಸ್ಯೆ ಇರುವವರು ಬಂದಾಗ ಉಚಿತವಾಗಿ ಸೂಕ್ತ ಸಲಹೆಗಳನ್ನು ನೀಡುತ್ತಾರೆ. ಅವರು ಒಂದಷ್ಟು ಜನಪರ ಕೆಲಸಗಳನ್ನು ಮಾಡುತ್ತಾರೆ. ಅವರೆಲ್ಲಾ ಸೇರಿ ಒಂದು ದೇವಸ್ಥಾನ ನಿರ್ಮಿಸಿದ್ದಾರೆ. ಅಲ್ಲಿಗೆ ಸಂಜೆಯಾದಂತೆ ಬಂದು ಒಂದಷ್ಟು ದೇವರ ಕೆಲಸ ಎಂದು ಹಲವು ಚಟುವಟಿಕೆ ಮಾಡುತ್ತಾರೆ. ಇವೆಲ್ಲಾ ಸಾಧ್ಯವಾಗುವುದು ಎಲ್ಲರೊಡನೆ ಬೆರೆತಾಗ ಮಾತ್ರ.

ನಮ್ಮಲ್ಲಿ ಪ್ರಚಲಿತವಿರುವ ಮತ್ತೊಂದು ಮಾತು ಎಂದರೆ, ನಾವು ಗತಿಸಿದ ನಂತರವೂ ಈ ಸಮಾಜ ನಮ್ಮನ್ನು ನೆನಪಿಸಿಕೊಳ್ಳುವಂತಹ ಕೆಲಸ ಮಾಡಬೇಕು ಎಂದು. ಶರಣರ ಸಾವನ್ನು ಮರಣದಲ್ಲಿ ಕಾಣು ಎಂಬಂತೆ, ಮರಣಿಸಿದಾಗ ಎಷ್ಟು ಜನರು ನಮ್ಮನ್ನು ನೆಪಿಸಿಕೊಂಡು ಕಣ್ಣೀರು ಹಾಕುತ್ತಾರೆ ಎಂಬುದರ ಮೇಲೆ ನಾವು ಹೇಗೆ ಜೀವನ ಮಾಡಿದ್ದೇವೆ ಎಂಬುದು ಗೊತ್ತಾಗುತ್ತದೆ ಎಂಬುದು ಇದರ ಅರ್ಥ. ನಾವು ಏಕಾಂಗಿಯಾಗಿದ್ದು, ಯಾರೊಡನೆಯೂ ಮಾತನಾಡದೇ ನನ್ನಷ್ಟಕ್ಕೆ ನಾನು ಎಂಬಂತೆ ಇದ್ದರೆ ನಾವು ಇದ್ದಿದ್ದೇ ಈ ಸಮಾಜಕ್ಕೆ ಗೊತ್ತಾಗುವುದಿಲ್ಲ. ದೇಹದಲ್ಲಿ ಶಕ್ತಿ ಇದ್ದಾಗ ಇತರರೊಡನೆ ಹೊಂದಾಣಿಕೆಯ ಜೀವನ ಮಾಡಿದರೆ ಅದನ್ನು ಸಾರ್ಥಕ ಜೀವನ ಎಂದು ಪರಿಗಣಿಸಲಾಗುತ್ತದೆ.

ನಮ್ಮ ಜೀವನ ಕೇವಲ ಕೆಲ ವರ್ಷಗಳಿಗಷ್ಟೇ ಸೀಮಿತ. ಅಷ್ಟರಲ್ಲಿ ಒಂದಷ್ಟು ಜನೋಪಯೋಗಿ ಕೆಲಸಗಳನ್ನು ಮಾಡಿಬಿಡಬೇಕು. ಮನುಷ್ಯನ ಜೀವನ ಮಾತ್ರ ಶಾಶ್ವತವಲ್ಲ ಎಂಬುದೇನೂ ಇಲ್ಲ. ನಮ್ಮ ಸುತ್ತಲಿನ ಹಲವು ಸಂಗತಿಗಳೂ ಅಶಾಶ್ವತವಾದವುಗಳೇ. ಒಂದು ಒಳ್ಳೆಯ ಮಾತಿದೆ. 'ಉದುರುವ ಎಲೆ, ಅರಳಿದ ಹೂವು, ಉರಿಯುವ ದೀಪ ಇವೆಲ್ಲವೂ ಹೇಳುವುದು ಒಂದೇ, ಅದೆಂದರೆ ಯಾವುದೂ ಶಾಶ್ವತವಲ್ಲ' ಎಂದು. ಅದು ಗೊತ್ತಿದ್ದರೂ ಮರಗಳಲ್ಲಿರುವ ಎಲೆ ಮರದ ಹಿತಕ್ಕಾಗಿ ಬದುಕುತ್ತದೆ. ಒಂದು ವರ್ಷದ ನಂತರ ಉದುರಿ ಹೋಗುತ್ತವೆ. ಅರಳಿದ ಹೂವಿಗೂ ಒಂದೆರಡು ದಿನವಷ್ಟೇ ಬದುಕು, ಆದರೆ ಅದು ಅಷ್ಟರಲ್ಲಿ ಒಂದಲ್ಲಾ ಒಂದು ರೀತಿಯಲ್ಲಿ ಉಪಯೋಗಕ್ಕೆ ಬಂದು ತನ್ನತನದಲ್ಲಿ ಸುಮಧುರ ಅಂತ್ಯ ಕಂಡುಕೊಳ್ಳುತ್ತದೆ. ಎಣ್ಣೆಯಿಂದ ಉರಿಯುವ ದೀಪಕ್ಕೂ ಅಂತ್ಯವಿದೆ. ಎಣ್ಣೆ ಮುಗಿದ ನಂತರ ಅದರ ಬದುಕು ಮುಕ್ತಾಯವಾಗುತ್ತದೆ. ಆದರೆ ಉರಿಯುವಷ್ಟೂ ಸಮಯ ಸನಿಹ ಬಂದವರಿಗೆ ದಾರಿ ತೋರಿ ಸುಖಾಂತ್ಯ ಕಂಡುಕೊಳ್ಳುತ್ತದೆ. ಇವೆಲ್ಲವೂ ಆಶಾಶ್ವತದ ಅಡಿಯಲ್ಲೇ ಇದ್ದರೂ ತಮ್ಮ ಕರ್ತವ್ಯವನ್ನು ಮುಗಿಸಿದ ಸಂತೃಪ್ತಿಯ ನೆಮ್ಮದಿಯ ಅಂತ್ಯವನ್ನು ಕಾಣುತ್ತವೆ.

ಇದು ನಮಗೆ ಆದರ್ಶವಾಗಬೇಕು. ನಾವು ಇರುವಷ್ಟು ದಿನ ಒಂದಷ್ಟು ಸಮಯವಾದರೂ ಇತರರಿಗಾಗಿ ಮೀಸಲಿಡಬೇಕು. ಎಲ್ಲರೊಡನೆ ಹೊಂದಾಣಿಕೆಯಿಂದ ಸಾರ್ಥಕ ಬದುಕು ಕಟ್ಟಿಕೊಳ್ಳಬೇಕು. ಡಿವಿಜಿಯವರ ಪ್ರಸಿದ್ಧ ಮಂಕುತಿಮ್ಮನ ಕಗ್ಗವೊಂದರಲ್ಲಿ ಅವರು ಹೇಳುವುದೂ ಇದೇ. ಹುಲ್ಲಾಗು ಬೆಟ್ಟದಡಿ ಮನೆಗೆ ಮಲ್ಲಿಗೆಯಾಗು, ಕಲ್ಲಾಗು ಕಷ್ಟಗಳ ಮಳೆಯ ವಿಧಿ ಸುರಿಯೆ, ಬೆಲ್ಲ ಸಕ್ಕರೆಯಾಗು ದೀನ ದುರ್ಬಲರಿಂಗೆ ಎಲ್ಲರೊಳಗೊಂದಾಗು ಮಂಕುತಿಮ್ಮ॥ ಎಂದು. ಇದರಲ್ಲಿ ಕೊನೆಯ ಮಾತು ಎಲ್ಲರೊಳಗೊಂದಾಗಿ ಎಂದಿದೆ. ಜಗತ್ತಿನಲ್ಲಿ ಪ್ರಯೋಜನಕಾರಿಯಾಗಿ ಬದುಕಬೇಕು. ಅದೇ ನಮ್ಮ ಸಂಸ್ಕೃತಿ ಎಂಬುದಾಗಿ ಇದರಲ್ಲಿ ತಿಳಿಸಲಾಗಿದೆ. ನಾನು ಎಂಬುದು ಒಂಟಿತನ, ನಾವು ಎಂಬುದು ಸಮಷ್ಟಿತನ. ಸಮಷ್ಟಿಯಲ್ಲಿ ಲೋಕೋಪಕಾರವಿದೆ. ಅಂತಹ ಜೀವನ ನಮ್ಮದಾಗಿಸಿಕೊಳ್ಳುವುದು ಸೂಕ್ತ.

ಸಂಪುಟ ಸಭೆಯಲ್ಲಿ ಸಿಎಂ ಸಿದ್ದರಾಮಯ್ಯ ಎದುರೇ ಹೆಚ್.ಸಿ.ಮಹದೇವಪ್ಪ–ಕೆ.ಜೆ.ಜಾರ್ಜ್ ಜಟಾಪಟಿ



ಬೆಂಗಳೂರು, ಅ.30– ಮುಖ್ಯಮಂತ್ರಿ ಸಿದ್ದರಾಮಯ್ಯ ಅವರ ಅಧ್ಯಕ್ಷತೆಯಲ್ಲಿ ಗುರುವಾರ ನಡೆದ ಸಚಿವ ಸಂಪುಟ ಸಭೆಯಲ್ಲಿ ಸಮಾಜ ಕಲ್ಯಾಣ ಸಚಿವ ಡಾ.ಹೆಚ್.ಸಿ. ಮಹದೇವಪ್ಪ ಮತ್ತು ಇಂಧನ ಸಚಿವ ಕೆ.ಜೆ.ಜಾರ್ಜ್ ನಡುವೆ ಭಾರೀ ಜಟಾಪಟಿ ನಡೆದಿದೆ ಎಂದು ಮೂಲಗಳು ತಿಳಿಸಿವೆ.

ಗಂಗಾ ಕಲ್ಯಾಣ ಯೋಜನೆಗೆ ಸಂಬಂಧಿಸಿದ ವಿಷಯದಲ್ಲಿ ಜಟಾಪಟಿ ನಡೆದಿದ್ದು, ಸಚಿವ ಕೆ.ಜೆ ಜಾರ್ಜ್ ಮಾತಿಗೆ ತಾಳ್ಮೆ ಕಳೆದುಕೊಂಡ ಸಚಿವ ಡಾ. ಹೆಚ್.ಸಿ.ಮಹದೇವಪ್ಪ, ಸಭೆಯಿಂದ ನಾನು ಎದ್ದು ಹೊರಟೇ ಬಿಡುತ್ತೇನೆ ಎಂದು ಕೂಗಾಡಿದ್ದಾರೆ ಎನ್ನಲಾಗಿದೆ.

ಸಮಾಜ ಕಲ್ಯಾಣ ಇಲಾಖೆಯ ಎಸ್‌ಸಿಪಿ ಟಿಎಸ್ಪಿ ಅನುದಾನದ ಬಗ್ಗೆ ನಡೆಯುತ್ತಿದ್ದ ಚರ್ಚೆ ವೇಳೆ ಮಾತಿನ ಸಮರ ನಡೆದಿದೆ. ಗಂಗಾ ಕಲ್ಯಾಣ ಯೋಜನೆಯಡಿ ಆಯ್ಕೆಯಾದ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳ ಫಲಾನುಭವಿಗಳಿಗೆ ಕೊಳವೆ ಬಾವಿಗಳನ್ನು ಕೊರೆಯಲು ಪಂಪ್ ಸೆಟ್‌ಗಳನ್ನು ಸರಬರಾಜು ಮಾಡುವ ಯೋಜನೆ ಬಗ್ಗೆ ಚರ್ಚಿಸುವಾಗ ಮಾತಿನ ಸಮರವೇ ನಡೆದಿದೆ ಎನ್ನಲಾಗಿದೆ.

ಇಒಐ ಮೂಲಕ ಎರಡು ವರ್ಷಗಳ ಅವಧಿಗೆ ಗುತ್ತಿಗೆದಾರರನ್ನು ಸರ್ಕಾರ ಎಂಪೆನಲ್ ಮಾಡಿಕೊಂಡಿದ್ದು, ಸದರಿ ಅವಧಿಯನ್ನು ಮುಂದಿನ ಎರಡು ವರ್ಷಗಳಿಗೆ ವಿಸ್ತರಿಸಲು ಅನುಮೋದನೆ ನೀಡುವ ಬಗ್ಗೆ ಚರ್ಚೆ ನಡೆಯಿತು. ಈ ಚರ್ಚೆ ವೇಳೆ ಕೆ.ಜೆ ಜಾರ್ಜ್ ವಿರುದ್ಧ ಸಚಿವ ಡಾ.ಹೆಚ್.ಸಿ. ಮಹದೇವಪ್ಪ ಆಕ್ರೋಶ ವ್ಯಕ್ತಪಡಿಸಿದ್ದಾರೆ.

ಸಭೆಯಲ್ಲಿ ಗಂಗಾ ಕಲ್ಯಾಣ ಯೋಜನೆಯಲ್ಲಿ ಬೋರ್‌ವೆಲ್ ಹಾಕಲಾಗಿದೆ. ಆದರೆ ಇಲ್ಲಿಯವರೆಗೆ ವಿದ್ಯುತ್ ಸಂಪರ್ಕ ಕೊಟ್ಟಿಲ್ಲ. ಬಡವರಿಗೆ ಕೊರೆದಿರುವ ಬೋರ್‌ವೆಲ್ ಅದು. ಪವರ್ ಕೊಡದಿದ್ದರೆ ಅವರು ನೀರು ಎತ್ತೋದು ಹೇಗೆ? ಎಂದು ಇಂಧನ ಸಚಿವರಾದ ಜಾರ್ಜ್ ವಿರುದ್ಧ ಹೆಚ್.ಸಿ.ಮಹದೇವಪ್ಪ ಏರುಧ್ವನಿಯಲ್ಲೇ ಕಿರುಚಾಡಿದ್ದಾರೆ.

ಬಡವರ ಅಭಿವೃದ್ಧಿ ಎಂದು ನಮ್ಮ ಸರ್ಕಾರ ಹೇಳುತ್ತದೆ. ಆದರೆ ಬೋರ್‌ವೆಲ್ ಹಾಕಿ ವರ್ಷವಾದರೂ ವಿದ್ಯುತ್ ಸಂಪರ್ಕ ಕೊಟ್ಟಿಲ್ಲ. ನಿಮ್ಮ ಪವರ್ ಇಲಾಖೆ ಸಬೂಬು ಹೇಳುತ್ತಿದೆ. ಈ ಬಗ್ಗೆ ನಮಗೆ ಸಾಕಷ್ಟು ದೂರುಗಳು ಬರುತ್ತಿವೆ. ಜನಸಾಮಾನ್ಯರು ನಮ್ಮನ್ನು ಸುಮ್ಮನೆ ಬಿಡುತ್ತಾರಾ. ಮೊದಲು ವಿದ್ಯುತ್ ಸಂಪರ್ಕ ಕೊಡಿ ಎಂದು ಸಚಿವ ಕೆ.ಜೆ.ಜಾರ್ಜ್ ವಿರುದ್ಧ ಮಹದೇವಪ್ಪ ಗರಂ ಆಗಿ, ಏರುದನಿಯಲ್ಲೇ ಮಾತನಾಡಿದರೆನ್ನಲಾಗಿದೆ.

ಈ ವೇಳೆ ಇಂಧನ ಸಚಿವ ಕೆ.ಜೆ.ಜಾರ್ಜ್ ತಾಂತ್ರಿಕ ಕಾರಣ ನೀಡಿದಾಗ ಅದನ್ನು ಒಪ್ಪದ ಮಹದೇವಪ್ಪ ಅಸಮಾಧಾನ ವ್ಯಕ್ತಪಡಿಸಿದ್ದು, ಈ ವೇಳೆ ಇಬ್ಬರ ನಡುವೆ ಮಾತಿನ ಚಕಮಕಿ ನಡೆಯಿತು ಎಂಬ ಮಾಹಿತಿ ಲಭ್ಯವಾಗಿದೆ. ಗಂಗಾ ಕಲ್ಯಾಣ ಯೋಜನೆ ವಿಷಯದಲ್ಲಿ ಎಸ್‌ಸಿಪಿ, ಟಿಎಸ್‌ಪಿ ಅನುದಾನ ಹಂಚಿಕೆಯಾಗಿಲ್ಲ. ಹಣ ಎಲ್ಲಿ ಹೋಯಿತು ಎಂದು ಮಹದೇವಪ್ಪ ಪ್ರಶ್ನಿಸಿದ್ದಾರೆ. ಬಳಿಕ ಸಂಪುಟ ಸಹೋದ್ಯೋಗಿಗಳೇ ಸಚಿವರನ್ನು ಸಮಾಧಾನಪಡಿಸಿ ಮನವೊಲಿಸಿದ್ದಾರೆ. ಈ ಮಧ್ಯೆ ಮುಖ್ಯಮಂತ್ರಿ ಸಿದ್ದರಾಮಯ್ಯ, ನೀವಿಬ್ಬರೂ ಕುಳಿತು ಮಾತುಕತೆ ನಡೆಸಿ ಸೌಹಾರ್ದಯುತವಾಗಿ ಸಮಸ್ಯೆ ಬಗೆಹರಿಸಿಕೊಳ್ಳಿ ಎಂದು ಹೇಳುವ ಮೂಲಕ ಜಟಾಪಟಿಗೆ ತೆರೆ ಎಳೆದರು ಎನ್ನಲಾಗಿದೆ. ಇನ್ನು ಗಂಗಾ ಕಲ್ಯಾಣ ಯೋಜನೆ ಬೋರ್‌ವೆಲ್ ವಿದ್ಯುತ್ ಸಂಪರ್ಕ ವಿಚಾರವಾಗಿ ಸಚಿವರ ನಡುವಿನ ಗದ್ದಲದ ವಿಚಾರವನ್ನು ಸಚಿವ ಹೆಚ್‌ಕೆ ಪಾಟೀಲ್ ತಳ್ಳಿಹಾಕಿದ್ದಾರೆ. ಸೌಹಾರ್ದಯುತ ಮಾತುಕತೆ ಆಗಿದೆ. ನೀವು ಕೇಳಿದ ರೀತಿಯಲ್ಲಿ ಯಾವುದೇ ಮಾತುಕತೆ ಆಗಿಲ್ಲ. ನಿಮಗೆ ಯಾರೋ ತಪ್ಪು ಮಾಹಿತಿ ಕೊಟ್ಟಿದ್ದಾರೆ ಎಂದಿದ್ದಾರೆ.

ಹೆಣ ಮುಂದಿಟ್ಟುಕೊಂಡು ಲಂಚಕ್ಕೆ ಬೇಡಿಕೆ

ತಂದೆಯ ಭಾವುಕ ಪೋಸ್ಟ್ ವೈರಲ್; ಎಸ್‌ಐ, ಕಾನ್‌ಸ್ಟೇಬಲ್ ಅಮಾನತು!

ಬೆಂಗಳೂರು, ಅ.30–ತನ್ನ ಇದ್ದೊಬ್ಬಳೇ ಮಗಳು ಸಾವಿಗೀಡಾದ ಸಮಯದಲ್ಲಿ ಎದುರಿಸಿದ ಕಿರುಕುಳ ಮತ್ತು ಭ್ರಷ್ಟಾಚಾರವನ್ನು ಎದುರಿಸಿದ ಬಗ್ಗೆ ತಂದೆಯೊಬ್ಬರು ಸಾಮಾಜಿಕ ಮಾಧ್ಯಮದಲ್ಲಿ ಅಳಲು ತೋಡಿಕೊಂಡಿದ್ದ ಪೋಸ್ಟ್ ವೈರಲ್ ಆದ ನಂತರ, ಪೊಲೀಸ್ ಸಬ್ ಇನ್ಸ್‌ಪೆಕ್ಟರ್ ಮತ್ತು ಕಾನ್‌ಸ್ಟೇಬಲ್‌ರನ್ನು ಅಮಾನತುಗೊಳಿಸಲಾಗಿದೆ.

ಭಾರತ್ ಪೆಟ್ರೋಲಿಯಂ ಕಾರ್ಪೊರೇಷನ್ ಲಿಮಿಟೆಡ್‌ನ (ಬಿಪಿಸಿಎಲ್) ನಿವೃತ್ತ ಮುಖ್ಯ ಹಣಕಾಸು ಅಧಿಕಾರಿ ಶಿವಕುಮಾರ್ ಎಂಬುವವರು ಸೆಪ್ಟೆಂಬರ್‌ನಲ್ಲಿ ತಮ್ಮ 34 ವರ್ಷದ ಮಗಳು ಮೆದುಳಿನಲ್ಲಿನ ರಕ್ತಸ್ರಾವದಿಂದಾಗಿ ಮೃತಪಟ್ಟ ನಂತರ ಸಂಕಷ್ಟದ ಸಮಯದಲ್ಲಿಯೂ ತಾವು ಅನುಭವಿಸಿದ ಯಾತನೆಯನ್ನು ಲಿಂಕ್ಡ್‌ಇನ್ ಪೋಸ್ಟ್‌ನಲ್ಲಿ ಹಂಚಿಕೊಂಡಿದ್ದರು.

ಈಗ ಅಳಿಸಲಾಗಿರುವ ಪೋಸ್ಟ್‌ನಲ್ಲಿ, ಆಂಬುಲೆನ್ಸ್ ಸೇವೆಯಿಂದ ಹಿಡಿದು ಎಫ್‌ಐಆರ್ ಪ್ರತಿ, ಅಂತ್ಯಕ್ರಿಯೆ ಮತ್ತು ಮರಣ ಪ್ರಮಾಣಪತ್ರ ಪಡೆಯುವವರೆಗೂ ಪ್ರತಿ ಹಂತದಲ್ಲಿಯೂ ಅಧಿಕಾರಿಗಳು ಲಂಚಕ್ಕೆ ಬೇಡಿಕೆ ಇಟ್ಟಿದ್ದರು ಎಂದು ಶಿವಕುಮಾರ್ ಆರೋಪಿಸಿದ್ದರು.

ಬೆಳ್ಳಂದೂರು ಪೊಲೀಸ್ ಠಾಣೆಯ ಇನ್ಸ್‌ಪೆಕ್ಟರ್ ಮತ್ತು ಕಾನ್‌ಸ್ಟೆಬಲ್ ಲಂಚ ಕೇಳಿದ್ದರು ಮತ್ತು ನಮ್ಮೊಂದಿಗೆ ಅತ್ಯಂತ ಕೆಟ್ಟದಾಗಿ ನಡೆದುಕೊಂಡರು ಎಂದು ಆರೋಪಿಸಿದ್ದರು. ನಮ್ಮ ಸ್ಥಿತಿಯೇ ಹೀಗಾದರೆ ಬಡವರ ಪರಿಸ್ಥಿತಿ ಏನು? ವ್ಯಕ್ತಿಯೊಬ್ಬ ಈಗಾಗಲೇ ತನ್ನ ಆತ್ಮೀಯರನ್ನು ಕಳೆದುಕೊಂಡು ದುಃಖದಲ್ಲಿರುವಾಗ, ಪೊಲೀಸರೇ ಲಂಚ ಕೇಳುವುದು ಮತ್ತು ಅಸಭ್ಯವಾಗಿ ಮಾತನಾಡುವುದು ಎಷ್ಟು ಸರಿ ಎಂದು ಪೋಸ್ಟ್‌ನಲ್ಲಿ ಕೇಳಿದ್ದಾರೆ.

ಶಿವಕುಮಾರ್ ಅವರ ಅನುಭವದ ಬಗ್ಗೆ ದುಃಖ ವ್ಯಕ್ತಪಡಿಸಿ, ಅನೇಕರು ಬೆಂಗಳೂರು ನಗರ ಪೊಲೀಸ್ ಮತ್ತು ಪೊಲೀಸ್ ಉಪ ಆಯುಕ್ತ ವೈಟ್‌ಫೀಲ್ಡ್ ಅವರ ಖಾತೆಗಳಿಗೆ 'X' ನಲ್ಲಿರುವ ಪೋಸ್ಟ್‌ಗಳನ್ನು ಟ್ಯಾಗ್ ಮಾಡುವ ಮೂಲಕ ಕ್ರಮ ಕೈಗೊಳ್ಳಬೇಕೆಂದು ಕೋರಿದ್ದಾರೆ.

ಡಿಸಿಪಿ ರವರು ಇದಕ್ಕೆ ಉತ್ತರಿಸಿದ್ದು, ಈ ವಿಷಯವನ್ನು ಸಂಪೂರ್ಣವಾಗಿ, ತನಿಖೆ ಮಾಡಲಾಗುವುದು ಮತ್ತು ಭಾಗಿಯಾಗಿರುವ ವ್ಯಕ್ತಿಗಳ ವಿರುದ್ಧ ಸೂಕ್ತ ಕಾನೂನು ಕ್ರಮ ಕೈಗೊಳ್ಳಲಾಗುವುದು ಎಂದು ಭರವಸೆ ನೀಡಿದ್ದಾರೆ.

ಗುರುವಾರ, ಶಿವಕುಮಾರ್ ಅವರ ಟ್ವೀಟ್ (ಪೋಸ್ಟ್)ನಲ್ಲಿ ಉಲ್ಲೇಖಿಸಲಾದ ಘಟನೆಗೆ ಸಂಬಂಧಿಸಿದಂತೆ, ಬೆಳ್ಳಂದೂರು ಪೊಲೀಸ್ ಠಾಣೆಯ ಒಬ್ಬ ಪಿಎಸ್‌ಐ ಮತ್ತು ಒಬ್ಬ ಪೊಲೀಸ್ ಕಾನ್‌ಸ್ಟೇಬಲ್ ಅನ್ನು ತಕ್ಷಣವೇ ಅಮಾನತುಗೊಳಿಸಲಾಗಿದೆ. ಪೊಲೀಸ್ ಇಲಾಖೆ ಯಾವುದೇ ಸಂದರ್ಭದಲ್ಲೂ ಅಂತಹ ಅಸಭ್ಯ ಅಥವಾ ಅನುಚಿತ ವರ್ತನೆಯನ್ನು ಸಹಿಸುವುದಿಲ್ಲ ಎಂದು ಡಿಸಿಪಿ ರವರು ತಿಳಿಸಿದೆ.

Printed by T.S. Gopinath, Published by M. Govinde Gowda on behalf of Academy Newspapers Private Limited, 15-C Industrial 'A' Layout, Bannimantap, Mysore-570 015 and Printed at Academy Newspapers Private Limited, 15-C Industrial 'A' Layout, Bannimantap, Mysore-570 015 and Published at 15-C Industrial 'A' Layout, Bannimantap, Mysore-570 015, Editor: M. Govinde Gowda Ph: 2496520 / 2496521 / 2496526 / 2496527 / 2496528. Fax: 0821-2496525. CITY OFFICES: Visveswaraya Building, III Floor, K.R. CIRCLE, MYSORE-570 001, Ph: 2431774 and No. 114, D. DEVARAJ URS ROAD (Opposite Big Bus), MYSORE-570 001. Ph: 2428695. RNI Reg. No. 36581 / 1980 E-mail address: news@mysurumithra.com For advertisements: ad@mysurumithra.com

ಮೈಸೂರು ಮಿತ್ರ ಶುಕ್ರವಾರ 31 ಅಕ್ಟೋಬರ್ 2025

ರಾಜ್ಯದಲ್ಲಿವೆ 25000ಕ್ಕೂ ಅಧಿಕ ಅಸುರಕ್ಷಿತ ಸ್ಮಾರಕಗಳು

ಅವುಗಳ ರಕ್ಷಣೆಗೆ ಕ್ರಮ: ಪರಂಪರೆ ಇಲಾಖೆ ಆಯುಕ್ತ ಎ.ದೇವರಾಜು



ಪುರಾತತ್ವ, ಸಂಗ್ರಹಾಲಯಗಳು ಮತ್ತು ಪರಂಪರೆ ಇಲಾಖೆ ಆಯುಕ್ತ ಎ.ದೇವರಾಜು ಮಾತನಾಡಿದರು.

ಮೈಸೂರು, ಅ.30(ಎಂಕೆ)– ದೇಶದ ಕಲೆ ಮತ್ತು ವಾಸ್ತುಶಿಲ್ಪಕ್ಕೆ ಕರ್ನಾಟಕದ ಕೊಡುಗೆ ಮಹತ್ವದ್ದಾಗಿದ್ದು, ಹಂಪಿ, ಬೇಲೂರು ಮತ್ತು ಹಳೇಬೀಡು ಕರ್ನಾಟಕದಲ್ಲಿ ಐತಿಹಾಸಿಕ ಮತ್ತು ವಾಸ್ತುಶಿಲ್ಪದ ಮಹತ್ವ ಹೊಂದಿರುವ ಪ್ರಮುಖ ಪ್ರವಾಸಿ ತಾಣಗಳಾಗಿವೆ ಎಂದು ಪುರಾತತ್ವ, ಸಂಗ್ರಹಾಲಯಗಳು ಮತ್ತು ಪರಂಪರೆ ಇಲಾಖೆ ಆಯುಕ್ತ ಎ.ದೇವರಾಜು ಹೇಳಿದರು.

ಮೈಸೂರು ವಿವಿ ಪ್ರಾಚೀನ ಇತಿಹಾಸ ಮತ್ತು ಪುರಾತತ್ತ್ವ ವಿಭಾಗ, ಕೆಎಸ್ಒಯು, ಮೈಸೂರು ಸ್ಕೂಲ್ ಆಫ್ ಆರ್ಕಿಟೆಕ್ಚರ್ ಸಹಯೋಗದೊಂದಿಗೆ ಪುರಾತತ್ವ, ಸಂಗ್ರಹಾಲಯಗಳು ಮತ್ತು ಪರಂಪರೆ ಇಲಾಖೆ ವತಿಯಿಂದ ಆಯೋಜಿಸಿರುವ 'ಕರ್ನಾಟಕದ ದೇವಾಲಯಗಳ ಕಲೆ ಮತ್ತು ವಾಸ್ತುಶಿಲ್ಪ' ಉಪನ್ಯಾಸ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದ ಅವರು, ರಾಜ್ಯದಲ್ಲಿ 25000ಕ್ಕೂ ಹೆಚ್ಚು ಅಸುರಕ್ಷಿತ ಸ್ಮಾರಕಗಳಿದ್ದು, ಅವುಗಳ ಸಂರಕ್ಷಣೆಯಲ್ಲಿ ಇಲಾಖೆ ಕಾರ್ಯೋನ್ಮುಖವಾಗಿದೆ ಎಂದರು.

ಇಲಾಖೆಯು ಗ್ರಾಮವಾರು ಸರ್ವೇ ಕಾರ್ಯ ಕೈಗೊಂಡಿದ್ದು, ಇದುವರೆವಿಗೂ 119 ತಾಲೂಕುಗಳಲ್ಲಿ ಸರ್ವೇ ಪೂರ್ಣಗೊಳಿಸಲಾಗಿದೆ. ಉಳಿದ 119 ತಾಲೂಕುಗಳನ್ನು ಪ್ರಸಕ್ತ ಸಾಲಿನಲ್ಲಿ ಕೈಗೊಳ್ಳಲಾಗುವುದು. ಹಳ್ಳಿಗಳಲ್ಲಿ ಅನೇಕರು ವೀರಗಲ್ಲುಗಳು, ಶಾಸನಗಳನ್ನು ಬಟ್ಟೆ ಹೊಗೆಯುವ ಕಲ್ಲುಗಳನ್ನಾಗಿ ಮಾಡಿಕೊಂಡಿರುತ್ತಾರೆ. ಅವರಿಗೆ ಅವುಗಳ ಮಹತ್ವ ತಿಳಿದಿರುವುದಿಲ್ಲ. ಹಾಗಾಗಿ ಜನರಲ್ಲಿ ಅರಿವು ಮೂಡಿಸಿ, ಇತಿಹಾಸದ ಕುರುಹುಗಳನ್ನು ಉಳಿಸುವ ಪ್ರಯತ್ನದಲ್ಲಿ ಮುಂದಾಗಿದ್ದೇವೆ ಎಂದರು.

ಪುರಾತತ್ವ ಸಂರಕ್ಷಣಾ ಇಂಜಿನಿಯರ್ ಹಾಗೂ ಸಂಪನ್ಮೂಲ ವ್ಯಕ್ತಿಗಳಾದ ಡಾ.ಮನೋಜ್, ಟಿ.ತಾರಕೇಶ ಹಾಗೂ ಅಂಬರೀಶ 'ಕರ್ನಾಟಕದ ದೇವಾಲಯಗಳ ಕಲೆ ಮತ್ತು ವಾಸ್ತುಶಿಲ್ಪ' ಕಲೆಯ ಬಗ್ಗೆ ಸವಿವರವಾಗಿ ತಿಳಿಸಿಕೊಟ್ಟರು.

ಅಬಲ ವರ್ಗದವರ ಗೃಹ ನಿರ್ಮಾಣ ಕನಸು ನನಸಾಗಿಸುವಲ್ಲಿ ಗೃಹ ನಿರ್ಮಾಣ ಸಹಕಾರ ವಲಯದ ಪಾತ್ರ ಹಿರಿದು

ವಸತಿ ಸಹಕಾರ ಸಂಘಗಳ ರಾಜ್ಯಮಟ್ಟದ ವಿಚಾರ ಸಂಕಿರಣದಲ್ಲಿ ಶಾಸಕ ಜಿ.ಟಿ.ದೇವೇಗೌಡ ಶ್ಲಾಘನೆ

ಬೆಂಗಳೂರು, ಅ.30–ಗೃಹ ನಿರ್ಮಾಣ ಸಹಕಾರ ಸಂಘಗಳು ಎದುರಿಸುತ್ತಿರುವ ಸಮಸ್ಯೆಗಳನ್ನು ಸರ್ಕಾರದ ಗಮನಕ್ಕೆ ತಂದು ಅದಕ್ಕೆ ಸಮರ್ಪಕ ಪರಿಹಾರ ಕಂಡುಕೊಳ್ಳಲು ಮಹಾಮಂಡಳ ಸದಾ ಸಿದ್ದ. ಇಂದು ಅಬಲ ವರ್ಗದವರ ಗೃಹ ನಿರ್ಮಾಣದ ಕನಸು ನನಸು ಮಾಡುವಲ್ಲಿ ಗೃಹ ನಿರ್ಮಾಣ ಸಹಕಾರ ಸಂಘಗಳು ವಹಿಸುತ್ತಿರುವ ಪಾತ್ರ ಶ್ಲಾಘನೀಯ ಎಂದು ಕರ್ನಾಟಕ ರಾಜ್ಯ ಸಹಕಾರ ಮಹಾಮಂಡಳದ ಅಧ್ಯಕ್ಷರು ಹಾಗೂ ಶಾಸಕರಾದ ಜಿ.ಟಿ. ದೇವೇಗೌಡ ಅವರು ಅಭಿಪ್ರಾಯಪಟ್ಟರು.

ಕರ್ನಾಟಕ ರಾಜ್ಯ ಸಹಕಾರ ಮಹಾಮಂಡಳ ಹಾಗೂ ಕರ್ನಾಟಕ ರಾಜ್ಯ ಸಹಕಾರ ವಸತಿ ಮಹಾಮಂಡಳ ಮತ್ತು ಬೆಂಗಳೂರು ನಗರ ಜಿಲ್ಲಾ ಸಹಕಾರ ಒಕ್ಕೂಟದ ಸಂಯುಕ್ತಾಶ್ರಯದಲ್ಲಿ ಅಂತಾರಾಷ್ಟ್ರೀಯ ಸಹಕಾರ ವರ್ಷ–2025ರ ಪ್ರಯುಕ್ತ ಏರ್ಪಡಿಸಿದ್ದ ವಸತಿ ಸಹಕಾರ ಸಂಘಗಳ ರಾಜ್ಯಮಟ್ಟದ ವಿಚಾರ ಸಂಕಿರಣ ಉದ್ಘಾಟಿಸಿ ಅವರು ಮಾತನಾಡಿದರು.

ನಗರಾಭಿವೃದ್ಧಿ ಪ್ರಾಧಿಕಾರಗಳಿಗಿಂತ ಗೃಹ ನಿರ್ಮಾಣ ಸಹಕಾರ ಸಂಘಗಳು ಇಂದು ಹೆಚ್ಚಿನ ನಿವೇಶನ ಹಂಚಿಕೆ ಮಾಡಿವೆ. ಆದ್ದರಿಂದ ಗೃಹ ನಿರ್ಮಾಣ ಸಹಕಾರ ಸಂಘಗಳು ತರಬೇತಿಯ ಪ್ರಯೋಜನ ಪಡೆದು ಯಶಸ್ವಿಯಾಗಿ ಗೃಹ ನಿರ್ಮಾಣ ಕಾರ್ಯವನ್ನು ನಿರ್ವಹಿಸಿ ಎಂದರು. ಸರ್ಕಾರದ ಗಮನಕ್ಕೆ ಮಹಾಮಂಡಳದ ಮೂಲಕ ಹಲವು ಬೇಡಿಕೆಗಳನ್ನು ತರಲಾಗಿದೆ. ಅವುಗಳಲ್ಲಿ ಸಹಕಾರ ವಿಷಯವನ್ನು ಅಧ್ಯಯನ ಮಾಡಿದವರಿಗೆ ಉದ್ಯೋಗದಲ್ಲಿ ಮೀಸಲಾತಿ ನೀಡುವುದು. ಜತೆಗೆ ಸಹಕಾರ ವಿಷಯಗಳನ್ನು ಪಠ್ಯಪುಸ್ತಕದಲ್ಲಿ ಅಳವಡಿಸುವಂತೆ ಮುಖ್ಯಮಂತ್ರಿಯವರ ಗಮನಕ್ಕೆ ತರಲಾಗಿದೆ. ಮುಂದಿನ ದಿನಗಳಲ್ಲಿ ಗೃಹ ನಿರ್ಮಾಣ ಸಹಕಾರ ವಲಯದ ಯಾವುದೇ ಬೇಡಿಕೆ ಹಾಗೂ ಸಮಸ್ಯೆಗಳಿದ್ದರು ಅದನ್ನು ಸರ್ಕಾರದ ಗಮನಕ್ಕೆ ತಂದು ಪರಿಹಾರ ಕಂಡುಕೊಳ್ಳುವ ಪ್ರಯತ್ನ ಮಾಡಲಾಗುವುದು ಎಂದು ತಿಳಿಸಿದರು.



ಬೆಂಗಳೂರಿನ ಖಾಸಗಿ ಹೋಟೆಲ್‌ನಲ್ಲಿ ನಡೆದ ಅಂತಾರಾಷ್ಟ್ರೀಯ ಸಹಕಾರ ವರ್ಷ –2025 ರ ಅಂಗವಾಗಿ ವಸತಿ ಸಹಕಾರ ಸಂಘಗಳ ರಾಜ್ಯ ಮಟ್ಟದ ವಿಚಾರ ಸಂಕಿರಣವನ್ನು ಶಾಸಕರು ಹಾಗೂ ರಾಜ್ಯ ಸಹಕಾರ ಮಂಡಳದ ಅಧ್ಯಕ್ಷರಾದ ಜಿ.ಟಿ.ದೇವೇಗೌಡ ಉದ್ಘಾಟಿಸಿದರು. ಶಾಸಕರು ಹಾಗೂ ವಸತಿ ಮಹಾಮಂಡಳದ ಅಧ್ಯಕ್ಷ ಎಸ್.ಟಿ.ಸೋಮಶೇಖರ್, ವಸತಿ ಮಹಾಮಂಡಳದ ಉಪಾಧ್ಯಕ್ಷ ಜಿ.ಪಿ.ಪಾಟೀಲ್, ಮಹಾಮಂಡಳದ ಉಪಾಧ್ಯಕ್ಷ ಜಗದೀಶ್ ಕವಟಗಿಮಠ, ಮಹಾಮಂಡಳದ ನಿರ್ದೇಶಕರು, ಅಧಿಕಾರಿಗಳು ಉಪಸ್ಥಿತರಿದ್ದರು.

ಕಾರ್ಯಕ್ರಮದ ಅಧ್ಯಕ್ಷತೆಯನ್ನು ಕರ್ನಾಟಕ ರಾಜ್ಯ ಸಹಕಾರ ವಸತಿ ಮಹಾಮಂಡಳದ ಅಧ್ಯಕ್ಷರು ಹಾಗೂ ಶಾಸಕ ಎಸ್.ಟಿ.ಸೋಮಶೇಖರ್ ವಹಿಸಿದ್ದರು. ವಸತಿ ಮಹಾಮಂಡಳದ ಉಪಾಧ್ಯಕ್ಷ ಜಿ.ಪಿ. ಪಾಟೀಲ್, ಖಜಾಂಚಿ ಬಿ.ಸಿ.ಶಿವಲಿಂಗೇಗೌಡ, ನಿರ್ದೇಶಕರಾದ ಸುಮಾ ಜನಾರ್ಧನ್, ವ್ಯವಸ್ಥಾಪಕ ನಿರ್ದೇಶಕ ವೈ.ಹೆಚ್.ಗೋಪಾಲಕೃಷ್ಣ, ಕರ್ನಾಟಕ ರಾಜ್ಯ ಸಹಕಾರ ಮಹಾಮಂಡಳದ ಉಪಾಧ್ಯಕ್ಷ ಜಗದೀಶ್ ಎಂ.ಕವಟಗಿಮಠ, ನಿರ್ದೇಶಕ ಆರ್.ರಾಮರೆಡ್ಡಿ, ವ್ಯವಸ್ಥಾಪಕ ನಿರ್ದೇಶ ಕೆ.ಎಸ್.ನವೀನ್, ಕಾರ್ಯದರ್ಶಿ ಅಶ್ವತ್ಥನಾರಾಯಣ, ಬೆಂಗಳೂರು ನಗರ ಜಿಲ್ಲಾ ಸಹಕಾರ ಒಕ್ಕೂಟದ ಅಧ್ಯಕ್ಷ ಜೆ.ಮಂಜುನಾಥ್, ಜಂಟಿ ನಿಬಂಧಕರಾದ ಡಾ.ಜಿ.ಉಮೇಶ್ ಮತ್ತಿತರರು ಕಾರ್ಯಕ್ರಮದಲ್ಲಿ ಉಪಸ್ಥಿತರಿದ್ದರು.

ನ.20, ರಾಜ್ಯಕ್ಕೆ ರಾಹುಲ್ ಗಾಂಧಿ ಭೇಟಿ

ಸಿಎಂ ಆಗಿ ಸಿದ್ದರಾಮಯ್ಯ ಮುಂದುವರೆಯುತ್ತಾರೆ ಎಂದು ಹೇಳಬಹುದು: ಶಾಸಕ ಅನಿಲ್ ಚಿಕ್ಕಮಾದು ಅಭಿಪ್ರಾಯ



ಮೈಸೂರು, ಅ.30(ಬಿಎಲ್‌ಯು)– ನವೆಂಬರ್ 20ರಂದು ರಾಹುಲ್ ಗಾಂಧಿ ಅವರು ಬೆಂಗಳೂರಿಗೆ ಭೇಟಿ ನೀಡುತ್ತಿದ್ದು, ಸಿದ್ದರಾಮಯ್ಯ ಅವರು ಮುಖ್ಯಮಂತ್ರಿಯಾಗಿ ಮುಂದುವರೆಯುತ್ತಾರೆ ಎಂದು ಹೇಳಬಹುದು ಎಂದು ಶಾಸಕ ಅನಿಲ್ ಚಿಕ್ಕಮಾದು ತಿಳಿಸಿದರು.

ಮೈಸೂರು ಜಿಲ್ಲಾ ಪಂಚಾಯತ್‌ನಲ್ಲಿ ಇಂದು ಪತ್ರಕರ್ತರ ಜೊತೆ ಮಾತನಾಡಿದ ಅವರು, ಸಿದ್ದರಾಮಯ್ಯ ಅವರು ಮುಖ್ಯಮಂತ್ರಿಯಾಗಿ ಪೂರ್ಣಾವಧಿಗೆ ಮುಂದುವರೆಯಬೇಕು ಎಂಬುದು ಆಗಿದೆ ನಮ್ಮ ಆಶಯ ಎಂದರು.

ಮುಂದಿನ ಚುನಾವಣೆಯಲ್ಲಿ ಸಿದ್ದರಾಮಯ್ಯ ಅವರು ಸ್ಪರ್ಧೆ ಮಾಡುತ್ತಾರೆ. ಪಕ್ಷಕ್ಕೆ ಅವರ ಅವಶ್ಯಕತೆ ಇದೆ ಎಂದು ಅನಿಲ್ ಚಿಕ್ಕಮಾದು ಹೇಳಿದರು.



ಅನಿಲ್ ಚಿಕ್ಕಮಾದು

2028ಕ್ಕೆ ಸತೀಶ್ ಜಾರಕಿಹೊಳಿ ಸಿಎಂ ಅಗಬೇಕೆಂಬುದು ನಮ್ಮ ಅಪೇಕ್ಷೆ. ನಮ್ಮ ಸಮುದಾಯದಿಂದ ಮುಖ್ಯಮಂತ್ರಿ ಸ್ಥಾನಕ್ಕೆ ಅವರೇ ಅರ್ಹ ವ್ಯಕ್ತಿಯಾಗಿದ್ದಾರೆ. ಸಿದ್ದರಾಮಯ್ಯ ಅವರಂತೆ ಜಾರಕಿಹೊಳಿ ಅವರು ಸಾಮಾಜಿಕ ಬದ್ಧತೆ ಹೊಂದಿದ್ದಾರೆ ಎಂದರು.

ಡಿ.ಕೆ.ಶಿವಕುಮಾರ್ ಅವರಿಗೆ ಸಿಎಂ ಸ್ಥಾನ ನೀಡುವುದು ಹೈಕಮಾಂಡ್ ತೀರ್ಮಾನಕ್ಕೆ ಬಿಟ್ಟಿದ್ದು. ಸಂಪುಟ ಪುನರ್‌ರಚನೆಯಾದರೆ ಸಚಿವ ಸ್ಥಾನಕ್ಕೆ ನಾನು ಕೂಡ ಆಕಾಂಕ್ಷಿ. ಅವಕಾಶ ದೊರೆತರೆ ಒಳ್ಳೆಯ ಕೆಲಸ ಮಾಡುತ್ತೇನೆ ಎಂದು ಹೇಳಿದರು.

ಕರ್ತವ್ಯ ವೇಳೆ ನಿಧನರಾದ ಆರೋಗ್ಯ ನಿರೀಕ್ಷಣಾಧಿಕಾರಿ ಪ್ರವೀಣ್ ಕುಟುಂಬಕ್ಕೆ 10 ಲಕ್ಷ ವಿಮಾ ಹಣ ವಿತರಣೆ



ಪ್ರವೀಣ್ ಕುಟುಂಬಸ್ಥರಿಗೆ 10 ಲಕ್ಷ ರೂ.ವಿಮಾ ಮೊತ್ತವನ್ನು ನೀಡಲಾಯಿತು.

ಮೈಸೂರು,ಅ.30(ಎಂಕೆ)– ರಾಷ್ಟ್ರೀಯ ನಗರ ಆರೋಗ್ಯ ಅಭಿಯಾನದಡಿ ಗುತ್ತಿಗೆ ಆಧಾರದ ಮೇಲೆ ಕರ್ತವ್ಯ ನಿರ್ವಹಿಸುತ್ತಿದ್ದ ವೇಳೆ ನಿಧನರಾದ ಕಿರಿಯ ಆರೋಗ್ಯ ನಿರೀಕ್ಷಣಾಧಿಕಾರಿಯಾಗಿದ್ದ ಪ್ರವೀಣ್ ಕುಟುಂಬಸ್ಥರಿಗೆ 10 ಲಕ್ಷ ರೂ.ವಿಮಾ ಮೊತ್ತವನ್ನು ನೀಡಲಾಯಿತು. ಮೈಸೂರಿನ ರಾಜೇಂದ್ರ ನಗರ ಪ್ರಾಥಮಿಕ ಆರೋಗ್ಯ ಕೇಂದ್ರದಲ್ಲಿ ಕರ್ತವ್ಯ ನಿರ್ವಹಿಸುತ್ತಿದ್ದ ಪ್ರವೀಣ್ ನಿಧನರಾದ ಹಿನ್ನೆಲೆ ಆಕ್ಸಿಸ್ ಬ್ಯಾಂಕ್‌ನಿಂದ ವಿಮಾ ಮೊತ್ತ ಚೆಕ್ ಅನ್ನು ಹಸ್ತಾಂತರ ಮಾಡಲಾಯಿತು.

ಡಿಹೆಚ್‌ಓ ಡಾ.ಸಿ.ಪಿ.ಕುಮಾರಸ್ವಾಮಿ, ಜಿಲ್ಲಾ ಆರ್‌ಸಿಹೆಚ್ ಅಧಿಕಾರಿ ಡಾ.ಮಹಮ್ಮದ್ ಸಿರಾಜ್ ಅಹಮ್ಮದ್, ಜಿಲ್ಲಾ ಕುಟುಂಬ ಕಲ್ಯಾಣ ಅಧಿಕಾರಿ ಡಾ.ಗೋಪಿನಾಥ್, ಜಿಲ್ಲಾ ಸರ್ವೇಕ್ಷಣಾ ಅಧಿಕಾರಿ ಡಾ.ನಾಗರಾಜ್, ಜಿಲ್ಲಾ ಕುಷ್ಠರೋಗ ನಿರ್ಮೂಲನಾಧಿಕಾರಿ ಡಾ.ಬೃಂದಾ, ನಗರ ಕಾರ್ಯಕ್ರಮ ವ್ಯವಸ್ಥಾಪಕ ಎನ್.ದಿವಾಕರ್, ಆಕ್ಸಿಸ್ ಬ್ಯಾಂಕ್‌ನ ವಲಯ ಅಧಿಕಾರಿ ಬಿ.ವಿಕಾಸ್, ಶಾಖಾ ವ್ಯವಸ್ಥಾಪಕರಾದ ಸುಷ್ಮಾ ಡೇವಿಡ್, ಕೈಸರ್ ಪಾಷ ಇದ್ದರು.

ಜನನ, ಮರಣ ನೋಂದಣಿ ಕಡ್ಡಾಯ

ಅಪರ ಜಿಲ್ಲಾಧಿಕಾರಿ ಡಾ.ಶಿವರಾಜು ಕಟ್ಟಾದೇಶ



ಮೈಸೂರಿನ ಜಿಲ್ಲಾಧಿಕಾರಿ ಕಚೇರಿಯ ಸಭಾಂಗಣದಲ್ಲಿ ಜನನ ಮತ್ತು ಮರಣ ನೋಂದಣಿ ಕುರಿತು ಎಡಿಸಿ ಡಾ.ಪಿ.ಶಿವರಾಜು ಅಧಿಕಾರಿಗಳ ಸಭೆ ನಡೆಸಿದರು.

ಮೈಸೂರು, ಅ.30(ಎಂಟಿವೈ) ಜಿಲ್ಲೆಯಲ್ಲಿ ಜನನ ಮತ್ತು ಮರಣ ನೋಂದಣಿ ಶೇ.100ರಷ್ಟು ಕಡ್ಡಾಯವಾಗಿ ಆಗಬೇಕು ಎಂದು ಎಡಿಸಿ ಡಾ.ಪಿ. ಶಿವರಾಜು ಸೂಚಿಸಿದ್ದಾರೆ.

ಮೈಸೂರಿನ ಸಿದ್ಧಾರ್ಥನಗರದಲ್ಲಿರುವ ಜಿಲ್ಲಾಧಿಕಾರಿ ಕಚೇರಿಯ ಸಭಾಂಗಣದಲ್ಲಿ ನಡೆದ ಜನನ ಮತ್ತು ಮರಣ ನೋಂದಣಿ ಕುರಿತು ಜಿಲ್ಲಾ ಮಟ್ಟದ ಸಮನ್ವಯ ಸಮಿತಿ ಸಭೆಯ ಅಧ್ಯಕ್ಷತೆ ವಹಿಸಿ ಮಾತನಾಡಿದ ಅವರು, ಗ್ರಾಮೀಣ ಮಟ್ಟದಲ್ಲಿ ಗ್ರಾಮ ಆಡಳಿತ ಅಧಿಕಾರಿಗಳು ಹಾಗೂ ಗ್ರಾ.ಪಂ. ಕಾರ್ಯದರ್ಶಿಗಳು ಜನನ ಮತ್ತು ಮರಣ ನೋಂದಣಿ ಮಾಡಬೇಕು. ಜಿಲ್ಲೆಯಲ್ಲಿ 147 ಪ್ರಾಥಮಿಕ ಆರೋಗ್ಯ ಕೇಂದ್ರಗಳು ಇದ್ದು, ಸರ್ಕಾರಿ ಆಸ್ಪತ್ರೆಗಳ ವೈದ್ಯಾಧಿಕಾರಿಗಳು ಜನನ ಮರಣ ಮಾಹಿತಿಯನ್ನು ನೋಂದಣಿ ಮಾಡಬೇಕು. ಖಾಸಗಿ ಆಸ್ಪತ್ರೆಗಳಲ್ಲಿ ಆಗುವ ಜನನ ಹಾಗೂ ಮರಣ ನೋಂದಣಿಯನ್ನು ಪೋರ್ಟಲ್‌ನಲ್ಲಿ ಅಪ್ಲೋಡ್ ಮಾಡಿ ಮಾಹಿತಿ ನೀಡಬೇಕು ಎಂದು ಸೂಚನೆ ನೀಡಿದರು.

ಜನನ ಮತ್ತು ಮರಣ ನೋಂದಣಿ ಮಾಡುವವರು ಜಿಲ್ಲೆಯಲ್ಲಿ 100 ಜನ ಇದ್ದು ಜನನ ಮತ್ತು ಮರಣ ನೋಂದಣಿ ಶುಲ್ಕ ಪಾವತಿಯ ಬಗ್ಗೆ ಮಾಹಿತಿ ಪಡೆಯಲು ಸ್ಪ್ರೆಡ್ ಶೀಟ್ ತಯಾರಿಸಿ ಎಲ್ಲರಿಗೂ ಕಳುಹಿಸಿ ಮಾಹಿತಿ ಪಡೆದುಕೊಳ್ಳಿ. ಶಿಶು ಮರಣ ದರವನ್ನು ಕಡಿಮೆ ಮಾಡಿ. ಭ್ರೂಣ ಲಿಂಗ ಪತ್ತೆ ಶಿಕ್ಷಾರ್ಹ ಅಪರಾಧವಾಗಿದ್ದು, ಈ ಬಗ್ಗೆ ಆರೋಗ್ಯ ಇಲಾಖೆ ಅಧಿಕಾರಿಗಳು ಅನಿರೀಕ್ಷಿತ ದಾಳಿ ನಡೆಸಿ ಪ್ರಕರಣ ದಾಖಲಿಸಬೇಕು. ಮಗು ಹೆಣ್ಣಾಗಲಿ, ಗಂಡಾಗಲಿ ಸುರಕ್ಷಿತ ಜನನಕ್ಕೆ ಕ್ರಮ ಕೈಗೊಳ್ಳಬೇಕು ಎಂದು ತಿಳಿಸಿದರು.

ಜಿಲ್ಲಾ ಸಂಖ್ಯಾ ಸಂಗ್ರಹಣಾಧಿಕಾರಿ ಚಿತ್ರಾ ಮಾತನಾಡಿ, ಜಿಲ್ಲೆಯಲ್ಲಿ ಜುಲೈನಿಂದ ಸೆಪ್ಟೆಂಬರ್‌ವರೆಗೆ ತ್ರೈಮಾಸಿಕ ಅವಧಿಯಲ್ಲಿ 10,005 ಜನನ ನೋಂದಣಿ ಆಗಿದ್ದು, ಇದೇ ಅವಧಿಯಲ್ಲಿ 9034 ಮರಣ ನೋಂದಣಿ ಆಗಿದೆ ಎಂದು ಮಾಹಿತಿ ನೀಡಿದರು. ಸಭೆಯಲ್ಲಿ ಆರೋಗ್ಯ ಇಲಾಖೆಯ ಅಧಿಕಾರಿಗಳಾದ ಡಾ.ಸಿಯಾಜ್ ಪಾಷಾ, ಡಾ.ಸಿರಾಜ್ ಅಹಮದ್, ಡಾ.ಹರಿಪ್ರಸಾದ್, ಡಾ.ಶಿವರಾಮ್, ಸಹಾಯಕ ನಿರ್ದೇಶಕರಾದ ಹೊನ್ನೇಗೌಡ, ನಾಗರತ್ನ, ಸಹಾಯಕ ಸಾಂಖ್ಯಿಕ ಅಧಿಕಾರಿ ಗಣೇಶ್ ಸವಿತಾ ಸೇರಿದಂತೆ ವಿವಿಧ ಇಲಾಖೆಗಳ ಅಧಿಕಾರಿಗಳು ಉಪಸ್ಥಿತರಿದ್ದರು.

ನಾಳೆಯಿಂದ ಎರಡು ದಿನ ನ್ಯಾಷನಲ್ ವುಮೆನ್ಸ್ ಕಾಂಕ್ಲೇವ್ 2.0 ಉತ್ಸವ

ಮೈಸೂರು, ಅ.30–ಮೈಸೂರು ಜಿಟೋ ಲೇಡೀಸ್ ವಿಂಗ್ ವತಿಯಿಂದ 'ನ್ಯಾಷನಲ್ ವುಮೆನ್ಸ್ ಕಾಂಕ್ಲೇವ್ 2.0' ಹಾಗೂ 'ಉಡಾನ್–ಬಿ2ಸಿ ಟ್ರೇಡ್ ಫೇರ್' ಎಂಬ ಮಹಿಳೆಯರ ಶಕ್ತಿ, ಜ್ಞಾನ ಹಾಗೂ ಯಶಸ್ಸಿನ ಸಂಭ್ರಮವನ್ನು ಒಳಗೊಂಡ 2 ದಿನಗಳ ಉತ್ಸವವನ್ನು ನ.1 ಮತ್ತು 2ರಂದು ಮೈಸೂರಿನ ಮಹಾರಾಜ ಕಾಲೇಜು ಮೈದಾನ ಹಾಗೂ ಹೋಟೆಲ್ ಕೋರಂನಲ್ಲಿ ಆಯೋಜಿಸಲಾಗಿದೆ.

ನ.1ರಂದು ಬೆಳಗ್ಗೆ 10 ಗಂಟೆಗೆ ಬಾಲಿವುಡ್ ನಟ ಸೋನುಸೂದ್ ಕಾರ್ಯಕ್ರಮ ಉದ್ಘಾಟಿಸಲಿದ್ದಾರೆ. ಮುಖ್ಯ ಅತಿಥಿಗಳಾಗಿ ನಟ ಡಾಲಿ ಧನಂಜಯ ಮತ್ತು ನಟಿ ಸಪ್ತಮಿ ಗೌಡ ಉಪಸ್ಥಿತರಿರುವರು. ಕಾಂಕ್ಲೇವ್‌ನ ಅಂಗವಾಗಿ ಹಿತೇಶ್ಜಿ ಪೋರವಾಲ್ ಅವರು 'ಫ್ರಮ್ ಐಡಿಯಾ ಟು ಎಂಟರ್‌ಪ್ರೈಸ್: ನರ್ಚರಿಂಗ್ ಯೂರ್ ಸ್ಟಾರ್ಟಪ್ ಸಕ್ಸೆಸ್' ಎಂಬ ವಿಷಯದ ಕುರಿತು ಉಪನ್ಯಾಸ ನೀಡಲಿದ್ದಾರೆ. ಈ ಭಾಷಣದಲ್ಲಿ ಸ್ಟಾರ್ಟ್‌ಅಪ್‌ಗಳನ್ನು ಯಶಸ್ವಿಯಾಗಿ ರೂಪಿಸುವ ಮಾರ್ಗ, ಹೂಡಿಕೆದಾರರನ್ನು ಆಕರ್ಷಿಸುವ ಪಿಚ್ ತಯಾರಿ ಮತ್ತು ವ್ಯವಹಾರ ನಿರ್ವಹಣೆ ಕುರಿತು ಚರ್ಚಿಸಲಿದ್ದಾರೆ. ದಿನದ ಕೊನೆಯಲ್ಲಿ ಹಿನ್ನೆಲೆ ಗಾಯಕಿ ಸುಧಾಂಧ ಮಿಶ್ರಾ ಅವರ ಸಂಗೀತ ಕಛೇರಿ ಮತ್ತು ನಂತರ ಮನ್ನತ್ ಬ್ಯಾಂಡ್ ಅವರ ಲೈವ್ ಶೋ ನಡೆಯಲಿದೆ.

ನ.2ರಂದು, ನೇಹಾ ಚೌಧರಿ ಸ್ವಯಂ ಅವರು 'ಎಂಪವರಿಂಗ್ ವುಮೆನ್ ಟೂ ಎಂಟರ್‌ಪ್ರೆನರ್‌ಶಿಪ್, ಸ್ಕಿಲ್ ಡೆವಲಪ್ಮೆಂಟ್ ಅಂಡ್ ನೆಟ್ ವರ್ಕಿಂಗ್' ವಿಷಯದ ಕುರಿತು ಮಾತನಾಡಲಿದ್ದು, ನಂತರ ನಟಿ ಶಿಲ್ಪಾ ಶೆಟ್ಟಿ ಕಾರ್ಯಕ್ರಮದಲ್ಲಿ ಭಾಗವಹಿಸಲಿದ್ದಾರೆ. ಸಂಜೆ ಮ್ಯಾಜಿಷಿಯನ್ ಸುಹಾನ್ ಶಾ ಮತ್ತು ಸೇಹರ್ ಬ್ಯಾಂಡ್ ಅವರ ಪ್ರದರ್ಶನಗಳು ನಡೆಯಲಿವೆ ಎಂದು ಪ್ರಕಟಣೆ ತಿಳಿಸಿದೆ.

ಮೈಸೂರಿನ ಸಾಡೆ ರಸ್ತೆಯಲ್ಲಿ ಪೊಲೀಸರ ಆದೇಶ ಪಾಲಿಸುತ್ತಿರುವ ವ್ಯಾಪಾರಿಗಳು

ಫುಟ್‌ಪಾತ್ ತೆರವು, ಸಂಚಾರ ನಿಯಮ ಪಾಲನೆ



ಮೈಸೂರಿನ ಸಾಡೆ ರಸ್ತೆಯಲ್ಲಿ ಪೊಲೀಸರ ಆದೇಶದಂತೆ ವ್ಯಾಪಾರಸ್ಥರು ಫುಟ್‌ಪಾತ್ ಅತಿಕ್ರಮಣ ಹಾಗೂ ಸಂಚಾರ ನಿಯಮ ಉಲ್ಲಂಘನೆ ಮಾಡುತ್ತಿದ್ದಾರೆಯೇ ಎಂದು ಪೊಲೀಸರು ಖುದ್ದು ಪರಿಶೀಲನೆ ನಡೆಸಿದರು.

ಮೈಸೂರು, ಅ.30(ಬಿಎಲ್‌ಯು)– ಫುಟ್‌ಪಾತ್ ತೆರವು ಮಾಡುವ ಮೂಲಕ ಸಂಚಾರ ನಿಯಮ ಪಾಲಿಸುವಂತೆ ಪೊಲೀಸರು ನೀಡಿದ ಆದೇಶವನ್ನು ಮೈಸೂರಿನ ಸಾಡೆ ರಸ್ತೆಯ ವ್ಯಾಪಾರಿಗಳು ಸದ್ಯಕ್ಕೆ ಕಟ್ಟುನಿಟ್ಟಾಗಿ ಪಾಲಿಸುತ್ತಿದ್ದಾರೆ.

ನಗರದ ಮಿಲಾದ್ ಪಾರ್ಕ್‌ನಿಂದ ಮಿಷನ್ ಆಸ್ಪತ್ರೆಯ ಒಂದೂವರೆ ಕಿಲೋ ಮೀಟರ್‌ನ ಸಾಡೆ ರಸ್ತೆಯಲ್ಲಿ ಸಂಚಾರ ನಿಯಮ ಉಲ್ಲಂಘನೆ ಮಾಡಲಾಗುತ್ತಿತ್ತು. ಫುಟ್‌ಪಾತ್ ಅತಿಕ್ರಮಣ ಮಾಡಿಕೊಂಡು ರಸ್ತೆಯ ಅಕ್ಕ ಪಕ್ಕದ ಎರಡೂ ಬದಿಯಲ್ಲಿ ದ್ವಿಚಕ್ರ ವಾಹನಗಳನ್ನು ಅಡ್ಡಾದಿಡ್ಡಿಯಾಗಿ ನಿಲ್ಲಿಸುತ್ತಿದ್ದರು. ಈ ಹಿನ್ನೆಲೆ ಫುಟ್‌ಪಾತ್ ಅತಿಕ್ರಮಣ ತೆರವು ಮಾಡಬೇಕು, ದ್ವಿಚಕ್ರ ವಾಹನಗಳನ್ನು ಶಿಸ್ತುಬದ್ಧವಾಗಿ ನಿಲ್ಲಿಸಬೇಕು ಎಂದು ಉಪ ಪೊಲೀಸ್ ಆಯುಕ್ತ ಸುಂದರ್‌ರಾಜ್ ನೇತೃತ್ವದ ಅಧಿಕಾರಿಗಳ ತಂಡ ಸ್ಥಳಕ್ಕೆ ಭೇಟಿ ನೀಡಿ ಕಟ್ಟುನಿಟ್ಟಿನ ಆದೇಶ ನೀಡಿತ್ತು.

ಈ ಹಿನ್ನೆಲೆ ವ್ಯಾಪಾರಸ್ಥರು ಪೊಲೀಸರ ಆದೇಶವನ್ನು ಪಾಲಿಸುತ್ತಿದ್ದಾರೆ. ಫುಟ್‌ಪಾತ್ ಅತಿಕ್ರಮಣವನ್ನು ತೆರವು ಮಾಡಿದ್ದಾರೆ. ಸದ್ಯಕ್ಕೆ ಸಂಚಾರ ನಿಯಮ ಪಾಲಿಸುತ್ತಿರುವ ವ್ಯಾಪಾರಸ್ಥರು ಮುಂದೆಯೂ ಇದೇ ರೀತಿಯಲ್ಲಿ ನಡೆದುಕೊಳ್ಳುತ್ತಾರೆಯೇ ಎಂಬ ಕುತೂಹಲವಿದೆ.

ಈ ಮಧ್ಯೆ ಸಾಡೆ ರಸ್ತೆಯಲ್ಲಿ ಆಗಾಗೆ ಭೇಟಿ ನೀಡುತ್ತಿರುವ ಪೊಲೀಸರು ಸಂಚಾರ ನಿಯಮ ಪಾಲಿಸಿ ಎಂದು ಸೂಚನೆ ನೀಡುತ್ತಿದ್ದಾರೆ. ಅಡ್ಡಾದಿಡ್ಡಿಯಾಗಿ ದ್ವಿಚಕ್ರ ವಾಹನ ನಿಲ್ಲಿಸುವವರಿಗೆ ದಂಡಾಸ್ತ್ರದ ಎಚ್ಚರಿಕೆ ನೀಡುತ್ತಿದ್ದಾರೆ.

ಅಭಿನಂದನೆ...



ಮೈಸೂರು ಸಹಕಾರಿ ಯೂನಿಯನ್ ಅಧ್ಯಕ್ಷರಾಗಿ ಅವಿರೋಧವಾಗಿ ಆಯ್ಕೆಯಾದ ಹುಣಸೂರು ಕ್ಷೇತ್ರದ ಶಾಸಕರು, ಜೆಡಿಎಸ್ ಯುವ ನಾಯಕರೂ ಆದ ಹರೀಶ್ ಗೌಡ ಅವರನ್ನು ನಿಖಿಲ್ ಕುಮಾರಸ್ವಾಮಿ ಅಭಿಮಾನಿ ಬಳಗದ ವತಿಯಿಂದ ಆತ್ಮೀಯವಾಗಿ ಅಭಿನಂದಿಸಲಾಯಿತು. ಬಳಗದ ಅಧ್ಯಕ್ಷ ಪ್ರದೀಪ್ ಕೃಷ್ಣೇಗೌಡ, ಚಂದ್ರಶೇಖರ್, ನಾಗರಾಜು, ಅಜಯ್, ಪಿಆರ್‌ಎಸ್ ಮಂಜು ಶ್ರೀನಿವಾಸ್ ಇತರರಿದ್ದರು.

ಆಸ್ತಿ ತೆರಿಗೆ ಪ್ರಮಾಣ ಕಡಿತಕ್ಕೆ ಆಗ್ರಹ

ಮೈಸೂರು,ಅ.30(ಎಂಟಿವೈ)– ಮೈಸೂರಿನ ಚಿಕ್ಕಹರದನಹಳ್ಳಿ 2ನೇ ಹಂತ ಹಾಗೂ ಚಿಕ್ಕಹರದನಹಳ್ಳಿಯ ಮೂಲ ಗ್ರಾಮಗಳಿಗೆ ಅಭಿವೃದ್ಧಿ ಹೊಂದಿದ ಬಡಾವಣೆಗಳಂತೆ ಆಸ್ತಿ ತೆರಿಗೆ ವಿಧಿಸಿರುವುದು ಖಂಡನೀಯ, ಈ ಬಡಾವಣೆಯಲ್ಲಿ ಕೂಲಿ ಕಾರ್ಮಿಕರೇ ಹೆಚ್ಚಾಗಿ ವಾಸಿಸುತ್ತಿರುವುದರಿಂದ ತೆರಿಗೆ ಪ್ರಮಾಣ ಕಡಿಮೆ ಮಾಡುವಂತೆ ಚಿಕ್ಕಹರದನಹಳ್ಳಿ ಎರಡನೇ ಹಂತ ಹಾಗೂ ಚಿಕ್ಕಹರದನಹಳ್ಳಿಯ ನಾಗರಿಕ ಸೇವಾ ಸಮಿತಿ ಅಧ್ಯಕ್ಷ ಡಿ.ಕೃಷ್ಣ ಮನವಿ ಮಾಡಿದ್ದಾರೆ.

ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಮೈಸೂರಿನ ಚಿಕ್ಕ ಹರದನಹಳ್ಳಿ ಎರಡನೇ ಹಂತ ಹಾಗೂ ಚಿಕ್ಕಹರದನಹಳ್ಳಿ ಮೂಲ ಗ್ರಾಮವು ಯಾವುದೇ ವಾಣಿಜ್ಯ ಚಟುವಟಿಕೆಗೆ ಸೂಕ್ತವಾದುದಲ್ಲ. ಇಲ್ಲಿ ಬಹುತೇಕ ಕೂಲಿ ಕಾರ್ಮಿಕರೇ ವಾಸಿಸುತ್ತಿದ್ದಾರೆ. ಆದರೂ ಇಲ್ಲಿನ ಆಸ್ತಿಗಳಿಗೆ ಅಭಿವೃದ್ಧಿ ಹೊಂದಿದ ಬಡಾವಣೆಯಷ್ಟೇ ಪ್ರಮಾಣದ ಕಂದಾಯ ವಿಧಿಸುತ್ತಿರುವುದರಿಂದ ನಿವಾಸಿಗಳು ಸಂಕಷ್ಟಕ್ಕೊಳಗಾಗಿದ್ದಾರೆ. ಈ ಬಡಾವಣೆ ಮತ್ತು ಗ್ರಾಮಕ್ಕೆ ನಿಗದಿ ಮಾಡಿರುವ ಕಂದಾಯ ಪ್ರಮಾಣ ವನ್ನು ಪರಿಷ್ಕರಿಸಬೇಕು ಎಂದು ಮನವಿ ಮಾಡಿದರು.

ಈ ಪ್ರದೇಶಕ್ಕೆ ಹೊಂದಿಕೊಂಡಂತೆ ಕೇವಲ ಒಂದೇ ಒಂದು ಮುಖ್ಯ ರಸ್ತೆಯಿದೆ. ಉಳಿದ ಎಲ್ಲವೂ ಗಲ್ಲಿಗಳಾಗಿವೆ. ಹೀಗಿದ್ದರೂ ಸರ್ಕಾರ ನಿಗದಿ ಮಾಡಿರುವ ಕಂದಾಯ ದರ ಹೊರೆಯಾಗಿದೆ. ಈ ಕುರಿತು ಈಗಾಗಲೇ ಶಾಸಕ ಟಿ.ಎಸ್. ಶ್ರೀವತ್ಸ ಅವರಿಗೆ ಮನವಿ ಸಲ್ಲಿಸಲಾಗಿದೆ. ಈ ಬಡಾವಣೆಯಲ್ಲಿ ಅಂಗನವಾಡಿಗೆ ಸ್ವಂತ ಕಟ್ಟಡವಿಲ್ಲ, ಇರುವ ಉದ್ಯಾನ ದನಕರುಗಳಿಂದಾಗಿ ಹದಗೆಟ್ಟಿದೆ. ಹೀಗಾಗಿ ಸಂಬಂಧಪಟ್ಟವರು ಇತ್ತ ಗಮನಹರಿಸಬೇಕೆಂದು ಕೋರಿದರು.

ಸುದ್ದಿಗೋಷ್ಠಿಯಲ್ಲಿ ಚಿಕ್ಕಹರದನಹಳ್ಳಿ 2ನೇ ಹಂತ ಹಾಗೂ ಚಿಕ್ಕಹರದನಹಳ್ಳಿಯ ನಾಗರೀಕ ಸೇವಾ ಸಮಿತಿ ಪದಾಧಿಕಾರಿಗಳಾದ ವಿಶ್ವನಾಥ್, ಗುಣಶೇಖರ್, ಪುಟ್ಟರಾಜು, ವೆಂಕಟೇಶ್ ಇನ್ನಿತರರಿದ್ದರು.

ಮೈಸೂರು ರಿಂಗ್ ರಸ್ತೆಯಲ್ಲಿ ಹೆಚ್ಚುವರಿ ಸಿಗ್ನಲ್ ಲೈಟ್‌ಗಳ ಅಳವಡಿಕೆ

ಮೈಸೂರು,ಅ.30(ಜಿಎ)–ಮೈಸೂರಿನ ರಿಂಗ್ ರಸ್ತೆಯಲ್ಲಿ ಹೆಚ್ಚುವರಿ ಸಿಗ್ನಲ್ ಲೈಟ್‌ಗಳನ್ನು ಅಳವಡಿಸಲು ನಗರ ಪೊಲೀಸ್ ಸಿದ್ಧತೆ ನಡೆಸಿದೆ.

ಮೈಸೂರು ನಗರ ಮತ್ತು ಹೊರ ವಲಯದಲ್ಲಿ ಸಂಚಾರಿ ನಿಯಮ ಪಾಲನೆಗಾಗಿ ಪೊಲೀಸ್ ಇಲಾಖೆ ಸಾಕಷ್ಟು ಕಾರ್ಯಕ್ರಮಗಳನ್ನು ಹಮ್ಮಿಕೊಂಡಿದ್ದು, ಅಂತೆಯೇ ರಿಂಗ್ ರಸ್ತೆಯಲ್ಲಿ ವಾಹನ ದಟ್ಟಣೆ ಹೆಚ್ಚಳ ಜೊತೆಗೆ ಅಪಘಾತಗಳ ಸಂಖ್ಯೆಯೂ ಗಣನೀಯವಾಗಿ ಏರಿಕೆಯಾಗುತ್ತಿರುವ ಹಿನ್ನೆಲೆಯಲ್ಲಿ ಡಿಸೆಂಬರ್ ಅಂತ್ಯದ ವೇಳೆಗೆ 35 ಸಿಗ್ನಲ್ ಲೈಟ್‌ಗಳನ್ನು ಅಳವಡಿಸಲು ಮುಂದಾಗಿದ್ದಾರೆ.



ಮೈಸೂರು ರಿಂಗ್ ರಸ್ತೆಯ ಆರ್‌ಬಿಐ ಜಂಕ್ಷನ್ ಬಳಿ ನೂತನ ಸಿಗ್ನಲ್ ಅಳವಡಿಸಲು ಪೋಲ್‌ಗಳನ್ನು ಸ್ಥಾಪಿಸಲಾಗಿದೆ.

ಇತ್ತೀಚಿನ ದಿನಗಳಲ್ಲಿ ಮೈಸೂರಿನ ನಗರ ಪ್ರದೇಶದಲ್ಲಿ ದಿನದಿಂದ ದಿನಕ್ಕೆ ವಾಹನ ಸಂಖ್ಯೆ ಹೆಚ್ಚಾಗುತ್ತಿರುವ ಹಿನ್ನೆಲೆಯಲ್ಲಿ ಬಹುತೇಕ ಮಂದಿ ಟ್ರಾಫಿಕ್ ಸಮಸ್ಯೆಯಾಗುತ್ತದೆ ಎಂಬ ದೃಷ್ಟಿಯಿಂದ ನಗರ ಪ್ರದೇಶದ ಒಳಗೆ ವಾಹನ ಚಾಲನೆ ಮಾಡುವ ಬದಲು ರಿಂಗ್‌ರಸ್ತೆಯ ಮೂಲಕವೇ ವಾಹನ ಸಂಚಾರ ಮಾಡುತ್ತಿದ್ದಾರೆ. ಅದರಲ್ಲಿಯೂ ದಸರಾ ಸಂದರ್ಭದಲ್ಲಿ ಸಿಟಿ ಒಳಭಾಗದಲ್ಲಿ ವಾಹನ ದಟ್ಟಣೆ ಹೆಚ್ಚಳವಾಗಿರುತ್ತದೆ. ಟ್ರಾಫಿಕ್ ಸಮಸ್ಯೆಯ ಗೋಜಿಗೆ ಹೋಗುವುದೇ ಬೇಡ ಎಂಬ ದೃಷ್ಟಿಯಿಂದ ದೂರವಾ ದರೂ ಸುಗಮ ಸಂಚಾರಕ್ಕಾಗಿ ರಿಂಗ್ ರಸ್ತೆಯೇ ಎಲ್ಲರ ಆಯ್ಕೆಯಾಗಿದೆ.

ವಾಹನ ದಟ್ಟಣೆಯಿಂದ ಸುಗಮ ಸಂಚಾರಕ್ಕೆ ರಿಂಗ್ ರಸ್ತೆ ಆಯ್ಕೆ ಮಾಡಿಕೊಳ್ಳುವವರು ವರ್ಗ ಒಂದಾರೆ, ಮತ್ತೊಂದೆಡೆ ನಗರ ಪ್ರದೇಶದಲ್ಲಿ ಸಂಚಾರಿ ಪೊಲೀಸರ ಕಟ್ಟುನಿಟ್ಟಿನ ಕ್ರಮದಿಂದ ವೀಲಿಂಗ್ ಮಾಡುವವರಿಗೆ ಕಡಿವಾಣ ಹಾಕಿರುವುದರಿಂದ ಸಂಚಾರಿ ನಿಯಮ ಪಾಲಿಸದೇ ವೀಲಿಂಗ್ ಮಾಡಲು ರಿಂಗ್ ರಸ್ತೆಯನ್ನು ಬಳಸಿಕೊಂಡು ಅನೇಕ ವಾಹನ ಸವಾರರಿಗೆ ತೊಂದರೆ ಸೃಷ್ಟಿಸುತ್ತಿದ್ದಾರೆ. ವೇಗದ ಚಾಲನೆಯಿಂದ ಬಹುತೇಕ ಕಡೆ ಅಪಘಾತಗಳ ಸಂಖ್ಯೆಯೂ ದಿನದಿಂದ ದಿನಕ್ಕೆ ಹೆಚ್ಚಳವಾಗುತ್ತಿವೆ. ಈ ಎಲ್ಲಾ ಅಂಶಗಳನ್ನು ಗಮನದಲ್ಲಿಟ್ಟುಕೊಂಡಿರುವ ಪೊಲೀಸ್ ಇಲಾಖೆ ಹೆಚ್ಚುವರಿಯಾಗಿ ಸಿಗ್ನಲ್ ಲೈಟ್ ಅಳವಡಿಸಲು ಮುಂದಾಗಿದೆ. ಈಗಾಗಲೇ ರಿಂಗ್ ರಸ್ತೆಯ ಪ್ರಮುಖ ಜಂಕ್ಷನ್‌ಗಳಲ್ಲಿ ಸಿಗ್ನಲ್ ದೀಪಗಳು ಬೆಳಗುತ್ತಿವೆ. ಅದರೊಟ್ಟಿಗೆ 35 ಹೊಸ ಸಿಗ್ನಲ್‌ಲೈಟ್ ಅಳವಡಿಸುತ್ತಿದ್ದಾರೆ. ಪ್ರಮುಖವಾಗಿ ಹೆಚ್ಚು ಅಪಘಾತವಾಗುತ್ತಿರುವ ಸ್ಥಳವನ್ನು ಗುರುತಿಸಲಾಗಿದೆ. ಶುಭೋದಿನಿ ಕನ್ವೆನ್ಷನ್ ಹಾಲ್ ಮುಂಭಾಗ, ಆರ್‌ಬಿಐ ಬಳಿ, ಬೆಲವತ್ತ ಸೇರಿ ದಂತೆ 35 ಸ್ಥಳಗಳಲ್ಲಿ ನೂತನವಾಗಿ ಸಿಗ್ನಲ್ ಲೈಟ್ ಅಳವಡಿಸಲು ಸಿದ್ಧತೆ ಆರಂಭಿಸಿದ್ದಾರೆ.

ಮೈಸೂರು ನಗರ ಪೊಲೀಸ್ ಕ್ರಮ

"ಅಪಘಾತಗಳನ್ನು ತಡೆಗಟ್ಟಲು ಹೆಚ್ಚುವರಿಯಾಗಿ ಸಿಗ್ನಲ್ ಲೈಟ್‌ಗಳನ್ನು ಅಳವಡಿಸುತ್ತಿದ್ದು, ಡಿಸೆಂಬರ್ ಅಂತ್ಯದೊಳಗೆ ಸೋಲರ್ ಮತ್ತು ವಿದ್ಯುತ್‌ನಿಂದ ಎಲ್ಲವೂ ಬೆಳಗಲಿವೆ.

–ಶಿವಶಂಕರ್, ಎಸಿಪಿ, ಸಂಚಾರ ವಿಭಾಗ

ಅಭಿನಯ ತರಬೇತಿ ಕಾರ್ಯಾಗಾರ

ಮೈಸೂರು: ರಂಗವಲ್ಲಿ ಸಂಸ್ಥೆಯು ರಂಗಕರ್ಮಿ ಶ್ರೀ ಜಯತೀರ್ಥ ಜೋಶಿ ಅವರ ಸ್ಮರಣಾರ್ಥ ನ.15ರಿಂದ ಡಿ.15ರವರೆಗೆ ಒಂದು ತಿಂಗಳ ಅಭಿನಯ ಮತ್ತು ರಂಗತರಬೇತಿ ಕಾರ್ಯಾಗಾರವನ್ನು ಹಮ್ಮಿಕೊಂಡಿದೆ. ಪ್ರತಿದಿನ ಸಂಜೆ 6.30ರಿಂದ 8.30ರವರೆಗೆ ಕಾರ್ಯಾಗಾರವು ನಡೆಯಲಿದ್ದು, 20ರಿಂದ 30 ವಯಸ್ಸಿನೊಳಗಿನ ರಂಗಾಸಕ್ತರು ಪಾಲ್ಗೊಳ್ಳಬಹುದಾಗಿದೆ. ಅರ್ಜಿ ಸಲ್ಲಿಕೆಗೆ ನ.10 ಕಡೆಯ ದಿನ. ಆಸಕ್ತರು ಹೆಚ್ಚಿನ ಮಾಹಿತಿಗಾಗಿ ಮೊ. ಸಂ. 9964656482 ಸಂಪರ್ಕಿಸಬಹುದು.

ಮಹದೇಶ್ವರಪುರದಲ್ಲಿ ವೈಭವದ ರಥೋತ್ಸವ

ಪಾಂಡವಪುರ, ಅ.30– ದೀಪಾವಳಿ ಹಬ್ಬದ ಅಂಗವಾಗಿ ತಾಲೂಕಿನ ಮಹದೇಶ್ವರಪುರ ಗ್ರಾಮದ ಶ್ರೀಮಹದೇಶ್ವರ ಸ್ವಾಮಿ ಜಾತ್ರಾ ಮಹೋತ್ಸವದಲ್ಲಿ ಮಹದೇಶ್ವರಪುರ ಗ್ರಾಮದ ಯಜಮಾನರು, ಮಹದೇಶ್ವರಸ್ವಾಮಿ ಸೇವಾ ಟ್ರಸ್ಟ್ ಹಾಗೂ ಗ್ರಾಮಸ್ಥರ ನೇತೃತ್ವದಲ್ಲಿ ಮಹದೇಶ್ವರ ಸ್ವಾಮಿ ರಥೋತ್ಸವವನ್ನು ವಿಜೃಂಭಣೆಯಿಂದ ಬುಧವಾರ ಸಂಜೆ ನಡೆಸಲಾಯಿತು.

ದೀಪಾವಳಿ ಹಬ್ಬದಂದು ಆರಂಭಗೊಂಡ ಜಾತ್ರಾ ಮಹೋತ್ಸವದಲ್ಲಿ ಎಣ್ಣೆ ಮಜ್ಜನ, ಹಾಲುಹರವಿ ಮತ್ತು ಬಾಯಿ ಬೀಗ ಕಾರ್ಯಕ್ರಮ ನಡೆಯಿತು. ನಂತರ 23ರಿಂದ ಐದು ವಾರಗಳ ಕಾಲ ಅಕ್ಕಪಕ್ಕದ ಗ್ರಾಮಸ್ಥರು ಹುಲಿವಾಹನೋತ್ಸವ ನಡೆಸುವ ಮೂಲಕ ಜಾತ್ರೆಯನ್ನು ವಿಜೃಂಭಣೆಯಿಂದ ಆಚರಣೆ ಮಾಡಿದರು. ಜಾತ್ರೆಯ ಅಂಗವಾಗಿ ಅ.28ರಂದು ಮಹದೇಶ್ವರಪುರ ಗ್ರಾಮದಲ್ಲಿ ಮಹದೇಶ್ವರ ಸ್ವಾಮಿಯ ಹೂವಿನ ಪಲಕ್ಕಿ ಉತ್ಸವ ನಡೆಸಲಾಯಿತು. ಅಂತಿಮ ದಿನವಾದ ಬುಧವಾರ ಸಂಜೆ ದೇವಸ್ಥಾನದ ಆಚರಣೆಯಲ್ಲಿ ವಿಜೃಂಭಣೆಯಿಂದ ಮಹದೇಶ್ವರ ಸ್ವಾಮಿಯ ರಥೋತ್ಸವ ನಡೆಸುವ ಮೂಲಕ ಜಾತ್ರೆಗೆ ತೆರೆ ಎಳೆಯಲಾಯಿತು.

ಭಕ್ತರು ಮಳೆ–ಬೆಳೆ, ರೋಗ–ರುಜಿನ ಆರೋಗ್ಯ ಸೇರಿದಂತೆ ಅನೇಕ ಕಷ್ಟಗಳು ಪಾರಾಗಲೆಂದು ಹರಕ್ಕೆ ಹೊತ್ತು ಪೂಜಿಸಿದರು.

ಮಹದೇಶ್ವರಪುರ ಗ್ರಾಮದಲ್ಲಿ ನಡೆದ ರಥೋತ್ಸವದಲ್ಲಿ ನೂರಾರು ಸಂಖ್ಯೆಯಲ್ಲಿ ಭಕ್ತರು ಭಾಗವಹಿಸಿ ರಥೋತ್ಸವ ಎಳೆದು ರಥಕ್ಕೆ ಹಣ್ಣುಜವನ ಎಸೆದು ಉಘೇ ಮಾದಪ್ಪ. ಉಘೇ ಮಾದಪ್ಪ ಎಂಬ ಘೋಷಣೆ ಕೂಗುವ ಮೂಲಕ ಭಕ್ತಿ ಭಾವ ಸಮರ್ಪಿಸಿದರು. ರಥೋತ್ಸವದಲ್ಲಿ ಸುತ್ತಮುತ್ತಲಿನ ಗ್ರಾಮಸ್ಥರು ಭಾಗವಹಿಸಿದರು.



ಶ್ರೀಮಹದೇಶ್ವರಸ್ವಾಮಿ ಜಾತ್ರಾ ಮಹೋತ್ಸವದಲ್ಲಿ ಮಹದೇಶ್ವರಸ್ವಾಮೀ ರಥೋತ್ಸವವನ್ನು ವಿಜೃಂಭಣೆಯಿಂದ ನಡೆಸಲಾಯಿತು.

ಪೋಲಿಯೋ ಮುಕ್ತ ಪ್ರಪಂಚವನ್ನಾಗಿಸುವುದು ಧ್ಯೇಯ



ಪೋಲಿಯೋ ನಿರ್ಮೂಲನಾ ಅರಿವು ಜಾಗೃತಿ ಜಾಥಾ ಅಭಿಯಾನಕ್ಕೆ ಚಾಲನೆ ನೀಡಲಾಯಿತು.

ಮಂಡ್ಯ: ಪೋಲಿಯೊ ಮುಕ್ತ ಭಾರತದಂತೆ ಪ್ರಪಂಚವನ್ನಾಗಿಸುವುದು ಧ್ಯೇಯವಾಗಿದೆ ಎಂದು ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣಾಧಿಕಾರಿ ಡಾ.ಮೋಹನ್ ಹೇಳಿದರು.

ನಗರದಲ್ಲಿರುವ ಜಿಲ್ಲಾಸ್ಪತ್ರೆಯ ಆವರಣದಲ್ಲಿ ರೋಟರಿ ಸಂಸ್ಥೆ ಮಂಡ್ಯ ಆಯೋಜಿಸಿದ್ದ ವಿಶ್ವ ಪೋಲಿಯೊ ದಿನಾಚರಣೆ ಪ್ರಯುಕ್ತ ಪೋಲಿಯೊ ನಿರ್ಮೂಲನಾ ಅರಿವು ಜಾಗೃತಿ ಜಾಥಾ ಅಭಿಯಾನಕ್ಕೆ ಚಾಲನೆ ನೀಡಿ ಅವರು ಮಾತನಾಡಿದರು.

ಪ್ರಸ್ತುತ ದಿನಗಳಲ್ಲಿ ಭಾರತ ದೇಶವು ಪೋಲಿಯೋ ಮುಕ್ತ ರಾಷ್ಟ್ರ ಎಂದು ಘೋಷಿಸಿಕೊಂಡಿದೆ, ಆದರೆ ಪಾಕಿಸ್ತಾನ, ಅಫ್ಘಾನಿಸ್ಥಾನದಲ್ಲಿ ಇನ್ನೂ ಪೋಲಿಯೊ ಪ್ರಕರಣಗಳು ಕಂಡುಬರುತ್ತಿವೆ, ರೋಟರಿ ಸಂಸ್ಥೆಯಿಂದ ಜಾಗೃತಿಯು ವಿಶ್ವದೆಲ್ಲೆಡೆ ನಡೆಯುತ್ತಿದೆ ಎಂದು ನುಡಿದರು.


ಬಳಿಕ ಮಾತನಾಡಿದ ರೋಟರಿ ಸಂಸ್ಥೆ ಅಧ್ಯಕ್ಷ ಸಿರಿಭೈರವ ರಾಜಶೇಖರ್, ಆರೋಗ್ಯದ ಕಡೆ ಹೆಚ್ಚಿನ ಅರಿವು ಮೂಡಿಸುವುದು ರೋಟರಿ ಸಂಸ್ಥೆ ಧ್ಯೇಯವಾಗಿದೆ, ಪ್ಲಾಸ್ಟಿಕ್ ಮುಕ್ತ ಭಾರತವನ್ನಾಗಿಸುವ ನಿಟ್ಟಿನಲ್ಲಿ ನಾವು ಯೋಜನೆ ರೂಪಿಸಿದ್ದೇವೆ, ಎಲ್ಲರೂ ಸಹಕರಿಸಿ ಎಂದು ತಿಳಿಸಿದರು.

ವಿಜ್ಞಾನಿ ಜೋನಾಸ್ ಸಾಲ್ಕ್ ಮತ್ತು ಅವರ ತಂಡ 1955 ರಲ್ಲಿ ಪೋಲಿಯೊ ಲಸಿಕೆಯನ್ನು ಕಂಡುಹಿಡಿಯಿತು. ರೋಟರಿ ಇಂಟರ್‌ನ್ಯಾಷನಲ್, ಪೋಲಿಯೊ ಲಸಿಕೆ ಅಭಿವೃದ್ಧಿಪಡಿಸಲು ಶ್ರಮಿಸಿದ ಜೋನಾಸ್ ಸಾಲ್ಕ್ ಅವರ ಜನ್ಮದಿನದ ನೆನಪಿಗಾಗಿ ಅ.24 ರಂದು ವಿಶ್ವ ಪೋಲಿಯೊ ದಿನವನ್ನು ಪ್ರಾರಂಭಿಸಿತು ಎಂದು ತಿಳಿಸಿದರು.

ನಂತರ ಮಾತನಾಡಿದ ರಾಷ್ಟ್ರ ಯುವ ಪ್ರಶಸ್ತಿ ಪುರಸ್ಕೃತೆ ಬಿ.ಎಸ್.ಅನುಪಮಾ, ಪ್ರಸ್ತುತ ಪ್ರಪಂಚದಲ್ಲಿನ ಪಾಕಿಸ್ತಾನ ಮತ್ತು ಅಫ್ಘಾನಿಸ್ತಾನವನ್ನು ಹೊರತುಪಡಿಸಿ ಉಳಿದ ಎಲ್ಲಾ ರಾಷ್ಟ್ರಗಳಲ್ಲಿ ಪೋಲಿಯೊ ನಿರ್ಮೂಲನೆಯಾಗಿದೆ. ಈ ಎರಡೂ ರಾಷ್ಟ್ರಗಳಲ್ಲಿ ಮಕ್ಕಳಿಗೆ ಸೂಕ್ತ ಸಮಯಕ್ಕೆ ಲಸಿಕೆ ಹಾಕದ ಕಾರಣ ಪೋಲಿಯೊ ಉಲ್ಬಣಗೊಂಡಿರುವುದು ಇತ್ತೀಚಿನ ಅಂಕಿ–ಅಂಶಗಳು ತಿಳಿಸಿವೆ ಎಂದರು.

ಇದೇ ಸಂದರ್ಭದಲ್ಲಿ ಕಾಲ್ನಡಿಗೆಯ ಜಾಗೃತಿ ಜಾಥಾವು ಜಿಲ್ಲಾಸ್ಪತ್ರೆಯಿಂದ ಹೆದ್ದಾರಿಯಲ್ಲಿ ಸಾಗಿ, ನಗರದ ಪ್ರಮುಖ ರಸ್ತೆಗಳಲ್ಲಿ ಸಂಚರಿಸಿ, ಪೋಲಿಯೋ ಲಸಿಕೆ ಹಾಕಿಸುವ ಘೋಷಣೆಗಳನ್ನು ಕೂಗಿ ಅಭಿಯಾನ ನಡೆಸಿದರು. ಜಿಲ್ಲಾ ಪೋಲಿಯೋ ನೋಡಲ್ ಅಧಿಕಾರಿ ಡಾ.ಸೋಮಶೇಖರ್ ಇದ್ದರು.

ಸಿದ್ದರಾಜುಗೆ ರಾಜ್ಯೋತ್ಸವ ಪ್ರಶಸ್ತಿ



ಮಂಡ್ಯ: ಮೂಲತ: ಮಂಡ್ಯ ಜಿಲ್ಲೆಯ ಮಳವಳ್ಳಿ ತಾಲ್ಲೂಕಿನವರಾದ ಎಂ.ಸಿದ್ದರಾಜು ಪಿಟಿಐ ಸುದ್ದಿ ಸಂಸ್ಥೆಯ ಮುಖ್ಯಸ್ಥರಾಗಿ ಕಾರ್ಯನಿರ್ವಹಿಸಿದ್ದಾರೆ. ಜೊತೆಗೆ ಕರ್ನಾಟಕ ಮಾಧ್ಯಮ ಅಕಾಡೆಮಿಯ ಅಧ್ಯಕ್ಷರಾಗಿಯೂ ಸಹ ಕಾರ್ಯನಿರ್ವಹಿಸಿದ್ದು, ಹುಟ್ಟೂರಾದ ಮಳವಳ್ಳಿಯನ್ನು ಮರೆಯದ ಅವರು ಆಗಾಗ ಪಟ್ಟಣದ ಮಡಿವಾಳ ಬೀದಿಯಲ್ಲಿರುವ ಅವರ ನಿವಾಸಕ್ಕೆ ಹಾಗಾಗ್ಗೆ ಭೇಟಿ ನೀಡುತ್ತಿದ್ದರು. ಒಟ್ಟಾರೆ ಮಂಡ್ಯ ಜಿಲ್ಲೆಯ ಹಿರಿಯ ಪತ್ರಕರ್ತರೊಬ್ಬರಿಗೆ ಮಾಧ್ಯಮ ಕ್ಷೇತ್ರದಿಂದ ಕನ್ನಡ ರಾಜ್ಯೋತ್ಸವ ಪ್ರಶಸ್ತಿ ಒಲಿದು ಬಂದಿದೆ.

ಮಳವಳ್ಳಿ ಪಟ್ಟಣದ ಕೋಟೆ ಬೀದಿಯ ದೇವಮ್ಮ– ಮಂಟಯ್ಯ ದಂಪತಿಗಳ ಪುತ್ರನಾದ ಸಿದ್ದರಾಜು ಅವರು, ಪತ್ರಿಕಾ ಕ್ಷೇತ್ರದಲ್ಲಿ ಅಗಾಧ ಸೇವೆ ಸಲ್ಲಿಸಿದ್ದಾರೆ. ಅವರ ತಂದೆ ಮಂಟಯ್ಯ ಅವರು ಬೆಂಗಳೂರಿನ ರಾಜ್ ಮಿಲ್ (ಪ್ರಸ್ತುತ ಮಂತ್ರಿ ಮಹಲ್)ನಲ್ಲಿ ಕಾರ್ಯನಿರ್ವಹಿಸುತ್ತಿದ್ದರು. ತಂದೆ ನಿಧನರಾದ ಬಳಿಕ ಅವರು ಬೆಂಗಳೂರಿಗೆ ಸ್ಥಳಾಂತರವಾದರು. ಮೊದಲು ಹತ್ತಿ ಗಿರಾಣಿಯಲ್ಲಿ ಕಾರ್ಯನಿರ್ವಹಿಸುತ್ತಿದ್ದ ಅವರನ್ನು ಪತ್ರಿಕಾ ಕ್ಷೇತ್ರ ಆಕರ್ಷಿಸಿತು.

ಪ್ರತಿಷ್ಠಿತ ಸುದ್ದಿ ಏಜೆನ್ಸಿಯಾದ ಪಿಟಿಐಯಲ್ಲಿ (ಪ್ರೆಸ್ ಟ್ರಸ್ಟ್ ಆಫ್ ಇಂಡಿಯಾ) ವರದಿಗಾರನಾಗಿ ಕೆಲಸಕ್ಕೆ ಸೇರಿದ ಅವರು, 37 ವರ್ಷ ಸೇವೆ ಸಲ್ಲಿಸಿ, ನಂತರ ಅದೇ ಸಂಸ್ಥೆಯ ದಕ್ಷಿಣ ಭಾರತದ ಮುಖ್ಯಸ್ಥರಾಗಿ ಆಯ್ಕೆಯಾದರು. ತದನಂತರ ಬೆಂಗಳೂರು ಪ್ರೆಸ್‌ಕ್ಲಬ್ ಅಧ್ಯಕ್ಷರಾಗಿ, ಕರ್ನಾಟಕ ಮಾಧ್ಯಮ ಅಕಾಡೆಮಿಯ ಅಧ್ಯಕ್ಷರಾಗಿ ಕಾರ್ಯನಿರ್ವಹಿಸಿದ್ದ ಅವರು, ಮಾಜಿ ಮುಖ್ಯಮಂತ್ರಿ ದಿ.ಜೆ.ಎಚ್.ಪಟೇಲ್ ಅವರ ಅತ್ಯಾಪ್ತರಾಗಿದ್ದರು.

ಕಾಡೇನಹಳ್ಳಿಯಲ್ಲಿ ಮಾರಮ್ಮ ದೇವಾಲಯ ಉದ್ಘಾಟನೆ

ಮೇಲುಕೋಟೆ: ಸಮೀಪದ ಕಾಡೇನಹಳ್ಳಿ ಗ್ರಾಮದಲ್ಲಿ ಮಾರಮ್ಮದೇವಿ ದೇವಾಲಯದ ಜೀರ್ಣೋದ್ಧಾರ ಮತ್ತು ಮಹಾಕುಂಭಾಬಿಷೇಕ ಶುಕ್ರವಾರ (ಅ.31) ನಡೆಯಲಿದೆ. ಅತ್ಯಾಕರ್ಷಕವಾಗಿ ನಿರ್ಮಿಸಲಾಗಿರುವ ದೇವಾಲಯವನ್ನು ಆದಿಚುಂಚನಗಿರಿ ಶ್ರೀಗಳಾದ ನಿರ್ಮಲಾನಂದ ನಾಥಸ್ವಾಮಿ ಸಾನ್ನಿಧ್ಯದಲ್ಲಿ ಲೋಕಾರ್ಪಣೆ ಮಾಡಿ ಮಹಾ ಕುಂಬಾಭಿಷೇಕ ನೆರವೇರಿಸಲಾಗುತ್ತಿದೆ.



ನ.2ರಂದು ಸಕ್ಕರೆ ನಾಡಿನಲ್ಲಿ ಕನ್ನಡ ಅಕ್ಷರ ಜಾತ್ರೆ

ವಿವಿಧ ಕ್ಷೇತ್ರಗಳ ಸಾಧಕರಿಗೆ ಕರ್ನಾಟಕ ಸೇವಾರತ್ನ ಕನ್ನಡ ರತ್ನ ಪ್ರಶಸ್ತಿ ಪ್ರಧಾನ

ಮಂಡ್ಯ: ಡಾ.ಜೀಶಂಪ ಸಾಹಿತ್ಯ ವೇದಿಕೆ ವತಿಯಿಂದ ಕನ್ನಡ ಹಬ್ಬ, 14ನೇ ಅಖಿಲ ಕರ್ನಾಟಕ ಕನ್ನಡ ಅಕ್ಷರ ಜಾತ್ರೆ ಹಾಗೂ ವಿವಿಧ ಪ್ರಶಸ್ತಿ ಪ್ರದಾನ ಸಮಾರಂಭವನ್ನು ಇದೇ ನ.2ರ ಭಾನುವಾರ ಬೆಳಿಗ್ಗೆ 11 ಗಂಟೆಗೆ ನಗರದ ಕರ್ನಾಟಕ ಸಂಘದ ಆವರಣದ ಕೆ.ವಿ.ಶಂಕರಗೌಡ ಶತಮಾನೋತ್ಸವ ಭವನದಲ್ಲಿ ಹಮ್ಮಿಕೊಳ್ಳಲಾಗಿದೆ.

14ನೇ ಕನ್ನಡ ಅಕ್ಷರ ಜಾತ್ರೆ ಸಮ್ಮೇಳದ ಅಧ್ಯಕ್ಷತೆಯನ್ನು ನಿವೃತ್ತ ಶಿಕ್ಷಕ ಹಾಗೂ ಕವಿ ಡಾ.ನ.ಗಂಗಾಧರಪ್ಪ ವಹಿಸಲಿದ್ದು, ಮೈಸೂರು ವಿವಿಯ ಮಾಜಿ ಸಿಂಡಿಕೇಟ್ ಸದಸ್ಯ ಡಾ.ಈ.ಸಿ.ನಿಂಗರಾಜೇಗೌಡ ಕಾರ್ಯಕ್ರಮ ಉದ್ಘಾಟಿಸಲಿದ್ದು, ಕನ್ನಡಹಬ್ಬ ಕುರಿತು ಕವಿ ಹಾಗೂ ಖ್ಯಾತ ವೈದ್ಯ ಡಾ.ಚಂದ್ರಶೇಖರ್ ಪ್ರಧಾನ ಭಾಷಣ ಮಾಡಲಿದ್ದಾರೆ. ಕನ್ನಡರತ್ನ ಪ್ರಶಸ್ತಿ ಪ್ರದಾನವನ್ನು ಹಿರಿಯ ಪತ್ರಕರ್ತೆ ಸಬಾ ಹಕೀಮ್ ಮಾಡಲಿದ್ದು, ಕರ್ನಾಟಕ ಸೇವಾ ರತ್ನ ಪ್ರಶಸ್ತಿ ಪ್ರದಾನವನ್ನು ನಿರ್ಮಿತಿ ಕೇಂದ್ರದ ನಿವೃತ್ತ ಅಧಿಕಾರಿ ನರೇಶ್ ಮಾಡಲಿದ್ದಾರೆ.


ವಿವಿಧ ಕ್ಷೇತ್ರದಲ್ಲಿ ಸಾಧನೆಗೈದ ಬನ್ನಂಗಾಡಿ ಸಿದ್ದಲಿಂಗಯ್ಯ, ಡಾ.ಸೂರ್ಯನಾರಾಯಣಶರ್ಮಾ, ಎಸ್.ಎಸ್.ಕೋಮಲ್ ಕುಮಾರ್ ಅವರಿಗೆ ಕರ್ನಾಟಕ ಸೇವಾ ರತ್ನ, ಕನ್ನಡರತ್ನ ಪ್ರಶಸ್ತಿ ಯನ್ನು ಎಂ.ಡಿ. ಅಯ್ಯಪ್ಪ, ಡಾ.ಪಕೀರಪ್ಪ ತಾಳಗುಂದ, ಗೀತಾ ಆನಂದ್ ಜಾದವ್, ಕೆ.ಮುನಿಯಪ್ಪ, ಗಾಯಿತ್ರಿ ಸುಂದರೇಶ್ ಅವರಿಗೆ ನೀಡಲಾಗುವುದು. ಮಧ್ಯಾಹ್ನ 3 ಗಂಟೆಗೆ ಅಖಿಲ ಕರ್ನಾಟಕ ಕನ್ನಡ ಅಕ್ಷರ ಜಾತ್ರೆ ಕವಿಗೋಷ್ಠಿ ಮತ್ತು ಸಮಾರೋಪ ಸಮಾರಂಭ ಜರುಗಲಿದೆ.

ಸಮ್ಮೇಳನಾಧ್ಯಕ್ಷ ಡಾ.ಗಂಗಾಧರಪ್ಪ ನಾರಣಾಪುರ ಪರಿಚಯ: ಮೂಲತ: ಮೈಸೂರಿನವರಾದ ಡಾ.ನ.ಗಂಗಾಧರಪ್ಪ ಸಾಹಿತ್ಯ ಮತ್ತು ಶಿಕ್ಷಣ ಕ್ಷೇತ್ರದಲ್ಲಿ ಕಾಯಕ ಮಾಡುತ್ತಾ ಸದ್ಯ ನಿವೃತ್ತಿಯಾಗಿದ್ದಾರೆ. 06–10–1946ರಲ್ಲಿ ನಂಜುಂಡಶೆಟ್ಟಿ ಮತ್ತು ಮಲ್ಲಮ್ಮ ಅವರ ಪುತ್ರರಾಗಿ ಚಿಕ್ಕಮಗಳೂರು ನಾರಣಾಪುರದಲ್ಲಿ ಜನಿಸಿದವರು. ಹುಟ್ಟೂರಿನಲ್ಲಿ ಪ್ರಾಥಮಿಕ ಶಿಕ್ಷಣ ಆರಂಭಿಸಿ, ಚಿಕ್ಕಮಗಳೂರಿನ ಬೀರೂರಿನಲ್ಲಿ ಪ್ರೌಢ ಶಿಕ್ಷರ ತರಬೇತಿ ಪಡೆದು, ಮೂಡಿಗೆರೆಯ ಬಾಳೆಹೊಳೆ ಶಾಲೆಯಯಲ್ಲಿ ಶಿಕ್ಷಕರಾಗಿ ಸೇವೆ ಯನ್ನು ಆರಂಭಿಸಿ ವಿವಿಧೆಡೆ 39ವರ್ಷ ಸೇವೆಸಲ್ಲಿಸಿ, ನಿವೃತ್ತಿ ನಂತರ ಮೈಸೂರಿನಲ್ಲಿ ನೆಲೆ ನಿಂತು ಸಾಹಿತ್ಯ ಮತ್ತು ಸಮಾಜಸೇವೆ ಸಲ್ಲಿಸುತ್ತಿದ್ದಾರೆ.

ಇಂದು ಚೆಲುವನಾರಾಯಣ ಸ್ವಾಮಿಗೆ ರಾಜಮುಡಿ ಉತ್ಸವ, ಅಷ್ಠ ತೀರ್ಥೋತ್ಸವ

ಮೇಲುಕೋಟೆ: ಶ್ರೀಚೆಲುವನಾರಾಯಣ ಸ್ವಾಮಿಗೆ ಶುಕ್ರವಾರ(ಅ.31) ರಾಜಮುಡಿ ಉತ್ಸವ ಮತ್ತು ಅಷ್ಠ ತೀರ್ಥೋತ್ಸವ ನಡೆಯಲಿದೆ. ಅಷ್ಠ ತೀರ್ಥೋತ್ಸವ ಬೆಳಿಗ್ಗೆ ನಡೆದರೆ ರಾತ್ರಿ ರಾಜಮುಡಿ ಉತ್ಸವ ನಡೆಯಲಿದೆ. ಮಂಡ್ಯ ಜಿಲ್ಲಾ ಖಜಾನೆಯಿಂದ ಮೇಲುಕೋಟೆಗೆ ಗುರುವಾರ ಸಂಜೆಯೇ ರಾಜಮುಡಿ ತಿರುವಾಭರಣ ಪೆಟ್ಟಿಗೆಯನ್ನು ಮೇಲುಕೋಟೆಗೆ ತರಲಾಯಿತು

ವೀರಾಂಜನೇಯಸ್ವಾಮಿ ಸನ್ನಿಧಿಯಲ್ಲಿ ರಾಜಮುಡಿ ತಿರುವಾಭರಣ ಪೆಟ್ಟಿಗೆಗೆ ಪೂಜೆ ಮಾಡಿ ಪಲ್ಲಕ್ಕಿಯಲ್ಲಿರಿಸಿ ಮೆರವಣಿಗೆಯ ಮೂಲಕ ದೇವಾಲಯಕ್ಕೆ ತರಲಾಯಿತು. ನಂತರ ರಾತ್ರಿ 7 ಗಂಟೆಯ ವೇಳೆಗೆ ಮಂಡ್ಯ ಜಿಲ್ಲೆಯ ಎಡಿಸಿ ಶಿವಾನಂದಮೂರ್ತಿ ಸಮಕ್ಷಮ ರಾಜಮುಡಿ ಕಿರೀಟ ಮತ್ತು 16 ಬಗೆಯ ತಿರುವಾಭರಣಗಳನ್ನು ತಂದು ಪರಿಶೀಲಿಸಿ ಸ್ಥಾನೀಕರು ಮತ್ತು ಅರ್ಚಕ ಪರಿಚಾರಕರಿಗೆ ಹಸ್ತಾಂತರ ಮಾಡಲಾಯಿತು. ಅಪೂರ್ವವಾಗಿ ನಕ್ಷತ್ರ ಸಂಯೋಗದ ಕಾರಣ ಎರಡೂ ಉತ್ಸವಗಳು ಒಂದೇ ದಿನ ನಡೆಯುತ್ತಿವೆ.



ಸಾಲದ ಬಾಧೆಯಿಂದ ರೈತ ಸಾವು



ಕಿಕ್ಕೇರಿ: ಹೋಬಳಿಯ ಊಗಿನಹಳ್ಳಿ ಗ್ರಾಮದಲ್ಲಿ ರೈತನೋರ್ವ ಸಾಲಭಾದೆ ತಾಳಲಾರದೆ ಕತ್ತು ಕೊಯ್ದುಕೊಂಡು ಅತ್ಮಹತ್ಯೆ ಮಾಡಿಕೊಂಡಿದ್ದಾರೆ

ಗ್ರಾಮದ ರೈತ ನಂಜಪ್ಪ(47) ಮೃತ ದುರ್ದೈವಿ.

ನಂಜಪ್ಪ ಹಾಗೂ ಇವರ ತಂದೆ ಬೋರೇಗೌಡ ಇವರಿಬ್ಬರ ಹೆಸರಿನಲ್ಲಿ ಜಂಟಿ ಖಾತೆಯಲ್ಲಿ 1.5ಲಕ್ಷ ರೂ. ಸಾಲ, ಕಾವೇರಿ ಗ್ರಾಮೀಣ ಬ್ಯಾಂಕ್ ನಲ್ಲಿ ಕೃಷಿ ಸಾಲ ಮಾಡಿಕೊಂಡಿದ್ದರು. ಜೊತೆಗೆ ಸಾಕಷ್ಟು ಖಾಸಗಿಯಾಗಿ ಕೈಸಾಲ ಮಾಡಿಕೊಂಡಿದ್ದರು. ಇವರ ತಾಯಿ ಲಕ್ಷ್ಮಮ್ಮ ಹೆಸರಿನಲ್ಲಿ 2 ಲಕ್ಷ ರೂ. ಕಿಕ್ಕೇರಿ ಕಾವೇರಿ ಗ್ರಾಮೀಣ ಬ್ಯಾಂಕ್‌ನಲ್ಲಿ ಕೃಷಿ ಸಾಲ ಮಾಡಿದ್ದರು. ಹೆಂಡತಿ ಧನಲಕ್ಷ್ಮೀ ಹೆಸರಿನಲ್ಲಿ ಕಿಕ್ಕೇರಿ ಡಿಸಿಸಿ ಬ್ಯಾಂಕ್‌ನಲ್ಲಿ ವಡವೆ ಸಾಲವಾಗಿ 1.5ಲಕ್ಷ ರೂ. ಸಾಲ ಮಾಡಿಕೊಂಡಿದ್ದರು. ಎಲ್ಲರೂ ಒಟ್ಟಿಗೆ ಕೂಡು ಕುಟುಂಬದಲ್ಲಿ ವಾಸವಾಗಿದ್ದರು.

2 ಎಕರೆ ಕೃಷಿ ಭೂಮಿಯಲ್ಲಿ ಕಬ್ಬು ಬೆಳೆ ಬೆಳೆದಿದ್ದರು. ಇನ್ನು ಕಟಾವು ಮಾಡಲಾಗಿರಲಿಲ್ಲ. ಸಾಲದ ಹೊರೆ ಜಾಸ್ತಿಯಾಗಿತ್ತು. ಸಾಲ ತೀರಿಸಲು ಅಗಿಂದಾಗ್ಗೆ ಚಡಪಡಿಸುತ್ತಿದ್ದರು. ಈ ಯೋಚನೆಯಲ್ಲಿ ಅನಾರೋಗ್ಯಕ್ಕೆ ತುತ್ತಾಗಿ ಮಾನಸಿಕವಾಗಿ ಖಿನ್ನತೆಗೆ ಒಳಗಾಗಿದ್ದರು. ಖಿನ್ನತೆಗೆ ಒಳಗಾಗಿ ಮನೆಯಲ್ಲಿ ಯಾರು ಇಲ್ಲದ ವೇಳೆ ಮಂಗಳವಾರ ಸಂಜೆ ಮನೆಯಲ್ಲಿ ಕತ್ತು ಕುಯ್ದುಕೊಂಡು ಆತ್ಮಹತ್ಯೆಗೆ ಮುಂದಾಗಿದ್ದಾರೆ. ತೀವ್ರ ರಕ್ತಸ್ರಾವವಾಗಿ ಅಸ್ವಸ್ಥರಾಗಿದ್ದ ಇವರನ್ನು ತುರ್ತು ಚಿಕಿತ್ಸೆಗೆ ಬೆಳ್ಳೂರಿನ ಆದಿಚುಂಚನಗಿರಿ ಆಸ್ಪತ್ರೆಗೆ ದಾಖಲಿಸಲಾಗಿತ್ತು. ಚಿಕಿತ್ಸೆ ಫಲಕಾರಿಯಾಗದೆ ಮಂಗಳವಾರ ರಾತ್ರಿ ಮೃತರಾದರು. ಕಿಕ್ಕೇರಿ ಪೊಲೀಸ್ ಠಾಣೆಯಲ್ಲಿ ದೂರು ದಾಖಲಾಗಿದ್ದು ತನಿಖಾ ಕ್ರಮ ಕೈಗೊಂಡಿದ್ದಾರೆ.

ಶ್ರೀರಂಗಪಟ್ಟಣದಲ್ಲಿ 9 ಕೆಜಿ ಗಾಂಜಾ ವಶ

ಶ್ರೀರಂಗಪಟ್ಟಣ: ತಾಲೂಕಿನ ಶ್ರೀನಿವಾಸ ಅಗ್ರಹಾರ ಗ್ರಾಮದಲ್ಲಿ ವ್ಯಕ್ತಿಯೊಬ್ಬರು ಮನೆಯ ಮುಂದೆ ಬೆಳೆದಿದ್ದ 9 ಕೆ.ಜಿ. ಹಸಿ ಗಾಂಜಾ ಗಿಡಗಳನ್ನು ತಹಶೀಲ್ದಾರ್ ಚೇತನಾ ಯಾದವ್ ನೇತೃತ್ವದ ಅಧಿಕಾರಿಗಳ ತಂಡ ವಶಪಡಿಸಿಕೊಂಡಿದೆ.

ಗ್ರಾಮದ ಹುಂಡಿ ರಾಮಯ್ಯ ಅವರ ಮಗ ಸುರೇಶ್ ಮನೆಯ ಮುಂದೆ ಚಪ್ಪರದ ಅವರೆ ಗಿಡದ ಮಧ್ಯೆ ನಿಷೇಧಿತ ಗಾಂಜಾ ಗಿಡಗಳನ್ನು ಬೆಳೆದಿದ್ದರು. ಖಚಿತ ಮಾಹಿತಿ ಆಧರಿಸಿ ಸಿಪಿಐ ಬಿ.ಜಿ. ಕುಮಾರ್ ನೇತೃತ್ವದ ತಂಡ ದಾಳಿ ನಡೆಸಿ ವಶಪಡಿಸಿಕೊಂಡಿದೆ.

ತೋಟಗಾರಿಕೆ ಇಲಾಖೆ ಸಹಾಯಕ ನಿರ್ದೇಶಕ ಪ್ರದೀಪ್ ಕುಮಾರ್, ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆ ಅಧಿಕಾರಿಗಳು ಸ್ಥಳಕ್ಕೆ ಭೇಟಿ ನೀಡಿದ್ದರು.

ಒಂದನೇ ಪುಟದಿಂದ

ವಾರಸುದಾರರಿಲ್ಲದ 157 ಕೋಟಿ ನೆನಗುದಿಗೆ!

ಹೆಚ್ಚಾಗಿದೆ ಎಂದು ಅಂಕಿ–ಅಂಶಗಳ ಸಹಿತ ಮಾಹಿತಿ ನೀಡಿದರು. ತ್ರೈಮಾಸಿಕ ಅವಧಿಯಲ್ಲಿ ಬ್ಯಾಂಕ್‌ಗಳ ವಹಿವಾಟು 10,766.21ರಿಂದ 11,7692.19 ಕೋಟಿ ಹೆಚ್ಚಾಗಿದೆ. ಇದು ಕಳೆದ ವರ್ಷಕ್ಕಿಂತ ಈ ಬಾರಿ 8.52ರಷ್ಟು ಹೆಚ್ಚಾಗಿದೆ ಎಂದು ಹೇಳಿದರು. ಪ್ರಧಾನಮಂತ್ರಿ ಅವಾಜ್ ಯೋಜನೆಯಲ್ಲಿ ಮಂಡಕಳ್ಳಿ, ಲಲಿತಾದ್ರಿಪುರ ಹಾಗೂ ಕೆ.ಆರ್.ನಗರದಲ್ಲಿ ನಿರ್ಮಾಣ ಮಾಡುತ್ತಿರುವ ಮನೆಗಳ ಫಲಾನುಭವಿಗಳ ಸಾಲಕ್ಕಾಗಿ ಅರ್ಜಿ ಸಲ್ಲಿಸಲಾಗಿದೆ. ಮಂಡಕಳ್ಳಿಯ ಮನೆಗಳಿಗೆ 924 ಅರ್ಜಿಗಳಲ್ಲಿ 448 ಅನುಮೋದನೆ ನೀಡಲಾಗಿದೆ. ಇದರಲ್ಲಿ 245 ಅರ್ಜಿ ಬಾಕಿ ಇದ್ದು, 194 ಅರ್ಜಿ ತಿರಸ್ಕೃತವಾಗಿದೆ ಎಂದು ಕೃಷ್ಣಮೂರ್ತಿ ಅವರು ವಿವರಣೆ ನೀಡಿದರು.

ರಸ್ತೆ ಗುಂಡಿ ಮುಚ್ಚಲು ಹಣವಿಲ್ಲ!

ಬೇರೆ ಕಡೆ ಹೋಗುತ್ತಿವೆ ಎಂಬ ಎಂ.ಬಿ. ಪಾಟೀಲ್ ಅವರ ಆರೋಪ ಶುದ್ಧ ಸುಳ್ಳು. ಯಾವ ಕಾರಣಕ್ಕೆ ಕೈಗಾರಿಕೆಗಳು ಕರ್ನಾಟಕದ ಕೈತಪ್ಪುತ್ತಿವೆ ಎಂಬ ಬಗ್ಗೆ ಅವರು ಆತ್ಮಾವಲೋಕನ ಮಾಡಿಕೊಳ್ಳಬೇಕು. ಅದು ಬಿಟ್ಟು, ರಾಜಕೀಯ ಕಾರಣಕ್ಕಾಗಿ ಇಂತಹ ಆರೋಪ ಮಾಡುವುದು ಸರಿಯಲ್ಲ ಎಂದು ಯದುವೀರ್ ಹೇಳಿದರು. ಕೈಗಾರಿಕೆಗಳ ಸ್ಥಾಪನೆಗೆ ರಾಜ್ಯದಲ್ಲಿ ಸರಿಯಾದ ವ್ಯವಸ್ಥೆ ಇಲ್ಲದ ಕಾರಣ ಬೇರೆ ರಾಜ್ಯಕ್ಕೆ ಹೋಗುತ್ತಿದೆ. ಈ ಹಿನ್ನೆಲೆಯಲ್ಲಿ ರಾಜ್ಯ ಸರ್ಕಾರ ಇದನ್ನು ಮನಗಂಡು ಸಮಸ್ಯೆ ಪರಿಹಾರ ಮಾಡಬೇಕು ಎಂದು ಸಲಹೆ ನೀಡಿದರು.

ಕೇಂದ್ರ ಚುನಾವಣಾ ಆಯುಕ್ತರನ್ನು ರಾಜಕೀಯ ಪುಢಾರಿ ಎಂದು ಜರಿದ ವಿಧಾನ ಪರಿಷತ್ ಸದಸ್ಯ ಯತೀಂದ್ರ ಅವರ ವಿರುದ್ಧ ಇದೇ ವೇಳೆ ಯದುವೀರ್ ಕಿಡಿಕಾರಿದರು. ಸಂವಿಧಾನಿಕ ಸಂಸ್ಥೆಗಳಲ್ಲಿ ಉನ್ನತ ಸ್ಥಾನದಲ್ಲಿರುವವರ ಬಗ್ಗೆ ಗೌರವದಿಂದ ಮಾತನಾಡಬೇಕು. ರಾಜ್ಯದಲ್ಲಿ ಕಾಂಗ್ರೆಸ್ ಸರ್ಕಾರ ರಚನೆಗೊಂಡಿರುವುದು ಇದೇ ಚುನಾವಣಾ ವ್ಯವಸ್ಥೆಯಿಂದ ಎಂಬುದನ್ನು ಮರೆಯಬಾರದು ಎಂದು ತಿರುಗೇಟು ನೀಡಿದರು.

ತಮ್ಮ ಸರ್ಕಾರ ಅಧಿಕಾರಕ್ಕೆ ಬಂದಾಗ ಚುನಾವಣಾ ಆಯೋಗ ಸಮರ್ಥವಾಗಿ ಕೆಲಸ ಮಾಡುತ್ತಿದೆ ಎಂದು ಸಮರ್ಥಿಸಿಕೊಳ್ಳುತ್ತಾರೆ. ತಮ್ಮ ಸರ್ಕಾರ ಅಧಿಕಾರಕ್ಕೆ ಬಾರದೆ ಜನರು ತಿರಸ್ಕರಿಸಿದಾಗ ಚುನಾವಣಾ ಆಯೋಗ ಸರಿ ಇಲ್ಲ ಎಂದು ಟೀಕಿಸುತ್ತಾರೆ. ಯಾರೋ ಇಂತಹ ಕೆಲವರ ಅಭಿಪ್ರಾಯಗಳಿಂದ ಚುನಾವಣಾ ಆಯೋಗದ ಬಗ್ಗೆ ಅನುಮಾನ ಮೂಡುವುದಿಲ್ಲ. ಇಂತಹವರ ಹೇಳಿಕೆಗಳಿಗೆ ಜನರು ಬೆಲೆ ಕೂಡ ನೀಡುವುದಿಲ್ಲ ಎಂದು ಗೇಲಿ ಮಾಡಿದರು.

ಧರ್ಮಸ್ಥಳದ ವಿಚಾರವಾಗಿ ತಾವೇ ಕೊಟ್ಟ ಕೇಸ್ ರದ್ದು ಮಾಡುವಂತೆ ಬುರುಡೆ ಗ್ಯಾಂಗ್ ಕೋರ್ಟ್‌ಗೆ ಅರ್ಜಿ ಸಲ್ಲಿಸಿದೆ. ಆ ಮೂಲಕ ಅವರ ಬಣ್ಣ ಈಗ ಬಯಲಾಗುತ್ತಿದೆ. ಧರ್ಮಸ್ಥಳದ ಹೆಸರಿಗೆ ಕಪ್ಪು ಮಸಿ ಬಳಿಯಲು ಷಡ್ಯಂತ್ರ ರೂಪಿಸಿದ್ದರು ಎಂಬುದು ಇದರಿಂದ ಸಾಬೀತಾಗಿದೆ ಅಲ್ಲಿ ಯಾವ ಅಸ್ಥಿ ಪಂಜರ ಸಿಗಲಿಲ್ಲವಾದ ಕಾರಣ ಕೇಸ್ ವಾಪಾಸ್ ಪಡೆಯಲು ಮುಂದಾಗಿದ್ದಾರೆ ಎಂದು ಯದುವೀರ್ ತಿಳಿಸಿದರು.

ತಿರಸ್ಕೃತ ಅರ್ಜಿ ಪುನರ್ ಪರಿಶೀಲಿಸಿ

ಯದುವೀರ್ ಅವರು ಅಧಿಕಾರಿಗಳಿಗೆ ಸಲಹೆ ನೀಡಿದರು. ನಂತರ ಮಾತನಾಡಿದ ಕೃಷ್ಣಮೂರ್ತಿ ಅವರು, ಪಿಎಂ ಸ್ವನಿಧಿ ಯೋಜನೆಯಲ್ಲಿ ಈಗಾಗಲೇ 51.900 ಅರ್ಜಿ ಸಲ್ಲಿಕೆಯಾಗಿದೆ. ಇದರಲ್ಲಿ 40,709 ಫಲಾನುಭವಿಗಳಿಗೆ ಅನುಮೋದನೆ ದೊರೆತಿದೆ. ಈ ಮೂಲಕ 10,000, 25,000 ಹಾಗೂ 50,000 ರೂಪಾಯಿಗಳಂತೆ ಮೂರು ಹಂತಗಳಲ್ಲಿ 37,142 ಫಲಾನುವಿಗಳಿಗೆ ಹಣ ಬಿಡುಗಡೆ ಮಾಡಲಾಗಿದೆ ಎಂದರು. ಈ ಯೋಜನೆಯಲ್ಲಿ 1,627 ಅರ್ಜಿ ತಿರಸ್ಕೃತಗೊಂಡಿದ್ದು, 9,567 ಅರ್ಜಿ ಬಾಕಿ ಇದೆ ಎಂದು ಕೃಷ್ಣಮೂರ್ತಿ ಅವರು ವಿವರಿಸಿದರು. ಪ್ರಧಾನಮಂತ್ರಿ ಸುರಕ್ಷಾ ಭೀಮಾ ಯೋಜನೆ ಹಾಗೂ ಪ್ರಧಾನಮಂತ್ರಿ ಜೀವನ್ ವಿಮಾ ಯೋಜನೆಯಡಿ ಮೈಸೂರಿನ ಪ್ರಗತಿ ಪರಿಗಣಿಸಿ ಕೇಂದ್ರ ಸರ್ಕಾರ ದ್ವಿತೀಯ ಸ್ಥಾನ ನೀಡಿದೆ ಎಂದು ಯದುವೀರ್ ಅವರು ತಿಳಿಸಿದರು. ಜಿಲ್ಲಾಧಿಕಾರಿ ಜಿ.ಲಕ್ಷ್ಮಿಕಾಂತ ರೆಡ್ಡಿ, ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯ ನಿರ್ವಾಹಕ ಅಧಿಕಾರಿ ಯುಕೇಶ್ ಕುಮಾರ್, ಆರ್ ಬಿಐ ಎಜಿಎಂ ಆರ್.ಪ್ರಭಾಕರನ್ ಹಾಗೂ ನಬಾರ್ಡ್ ಡಿಜಿಎಂ ಶಾಂತವೀರ್ ವೇದಿಕೆಯಲ್ಲಿ ಉಪಸ್ಥಿತರಿದ್ದರು.

ಡಾ. ರಾಜ್‌ಕುಮಾರ್ ಪ್ರಶಸ್ತಿ

ಐದು ಲಕ್ಷ ರೂಪಾಯಿ ನಗದು ಹಾಗೂ ಐವತ್ತು ಗ್ರಾಂ ಚಿನ್ನದ ಪದಕ ಹೊಂದಿದೆ. ಇದೇ ವೇಳೆ ಬೆಳ್ಳಿ ತೊರೆ ಸಿನಿಮಾ ಪ್ರಬಂಧ ಹಾಗೂ ಗುಳೆ ಕಿರು ಚಿತ್ರಕ್ಕೂ ಪ್ರಶಸ್ತಿ ಘೋಷಣೆ ಮಾಡಲಾಗಿದೆ. ಬೆಳ್ಳಿ ತೊರೆ ಸಿನಿಮಾಗೆ ಉತ್ತಮ ಸಿನಿಮಾ ಪ್ರಬಂಧ ಎಂದು ಪ್ರಶಸ್ತಿ ನೀಡಲಾಗಿದ್ದರೆ, ಗುಳೆ ಸಿನಿಮಾಗೆ ಉತ್ತಮ ಕಿರು ಚಿತ್ರ ಎಂದು ಪ್ರಶಸ್ತಿ ನೀಡಲಾಗಿದೆ. ಪ್ರಬಂಧ ಬರೆದ ಲೇಖಕರು ಹಾಗೂ ಕಿರುಚಿತ್ರ ನಿರ್ದೇಶನ ಮಾಡಿದ ನಿರ್ದೇಶಕರಿಗೆ ತಲಾ ಇಪ್ಪತ್ತೈದು ಸಾವಿರ ನಗದು ಐವತ್ತು ಗ್ರಾಂ ಬೆಳ್ಳಿ ಪದಕ ಬಹುಮಾನ ನೀಡಲಾಗುತ್ತದೆ.

ಯೋಗೇಂದ್ರ, ಎಲ್.ಹೇಮಾಶೇಖರ್‌ಗೆ ರಾಜ್ಯೋತ್ಸವ ಪುರಸ್ಕಾರ

ರಾಮೇಗೌಡ ಪರಿಸರ ಕ್ಷೇತ್ರದಿಂದ, ಮಂಡ್ಯದ ಎಂ.ಸಿದ್ದರಾಜು ಮಾಧ್ಯಮ ಕ್ಷೇತ್ರ ಮತ್ತು ಹಾಸನ ಜಿಲ್ಲೆಯಿಂದ ಎಂ.ಸಿ.ರಂಗಸ್ವಾಮಿ ಕೃಷಿ ಕ್ಷೇತ್ರ ಹಾಗೂ ಗುಂಡೂರಾಜ್ ಅವರಿಗೆ ಬಯಲಾಟ ಕಲಾ ಕ್ಷೇತ್ರದಿಂದ ಪ್ರಶಸ್ತಿ ಸಂದಿದೆ. ಮೈಸೂರು ಮೂಲದ ಪ್ರಶಸ್ತಿ ಪುರಸ್ಕೃತರ ಸಂಕ್ಷಿಪ್ತ ವಿವರ ಇಲ್ಲಿದೆ.

ಎಲ್.ಮಹದೇವಪ್ಪ ಉಡಿಗಾಲ: ವಿಶ್ವವಿಖ್ಯಾತ ಮೈಸೂರು ದಸರಾ ಜಂಬೂಸವಾರಿಗೆ ಚಾಲನೆಗೂ ಮುನ್ನ ನಂದಿಧ್ವಜಕ್ಕೆ ಪೂಜೆ ಸಲ್ಲಿಸುವುದು ಸಂಪ್ರದಾಯವಾಗಿದ್ದು, ಕಳೆದ 66 ವರ್ಷಗಳಿಂದ ನಂದಿ ಧ್ವಜ ಕುಣಿತವನ್ನೇ ಉಸಿರಾಗಿಸಿಕೊಂಡಿರುವ ಎಲ್.ಮಹದೇವಪ್ಪ ಉಡಿಗಾಲ ಅಮರು ರಾಜ್ಯೋತ್ಸವ ಪ್ರಶಸ್ತಿಗೆ ಭಾಜನರಾಗಿದ್ದಾರೆ. ಜಾನಪದ, ರಂಗಭೂಮಿ, ಕುಸ್ತಿ, ಕರಾಟೆ, ದೊಣ್ಣೆ ವರಸೆ ಸೇರಿದಂತೆ ವಿವಿಧ ಕಲೆ ಹಾಗೂ ಕ್ರೀಡಾ ಚಟುವಟಿಕೆಗಳಲ್ಲಿ ಸಕ್ರಿಯರಾಗಿದ್ದ ಇವರು, ಜೆಎಸ್‌ಎಸ್ ಸಂಸ್ಥೆಯ ನಿವೃತ್ತ ನೌಕರರಾಗಿದ್ದು ವಿವಿಧ ಸಂಘ ಸಂಸ್ಥೆಗಳಲ್ಲಿ ಸೇವೆ ಸಲ್ಲಿಸುತ್ತಿದ್ದಾರೆ. ಇಂದಿಗೂ ಇವರ ಮಾರ್ಗದರ್ಶನದಲ್ಲೇ ದಸರಾ ನಂದೀಧ್ವಜ ಪೂಜೆ ನೆರವೇರಿಸಲಾಗುತ್ತದೆ. ಈ ಕಲೆಯ ಬಗ್ಗೆ ಯುವ ಕಲಾವಿದರಿಗೆ ತರಬೇತಿ ನೀಡುವುದರ ಮೂಲಕ ಧಾರ್ಮಿಕ ಹಾಗೂ ಪರಂಪರೆ ಪ್ರಚಾರಕರಾಗಿ ತೊಡಗಿಸಿಕೊಂಡಿದ್ದಾರೆ. 82 ವರ್ಷ ವಯೋಮಾನದ ಇವರು, ಮೂಲತಃ ಚಾಮರಾಜನಗರ ಜಿಲ್ಲೆ, ಉಡಿಗಾಲ ಗ್ರಾಮದವರಾಗಿದ್ದು, ಮೈಸೂರಿನ ಗೌರಿಶಂಕರನಗರದಲ್ಲಿ ನೆಲೆಸಿದ್ದಾರೆ.

ಪ್ರೊ.ಕೆ.ರಾಮಮೂರ್ತಿರಾವ್: ದಕ್ಷಿಣ ಕನ್ನಡ ಜಿಲ್ಲೆ, ಉಡುಪಿ ತಾಲೂಕು, ಕುಕ್ಕಿಕಟ್ಟೆ ಗ್ರಾಮದ ಪ್ರೊ.ಕೆ.ರಾಮಮೂರ್ತಿ ರಾವ್ ಅವರ ವಿದ್ಯಾಭ್ಯಾಸ ಹಾಗೂ ವೃತ್ತಿ ಬದುಕು ಮೈಸೂರಿ ನಲ್ಲೇ ಆಗಿದೆ. ಜೆಎಸ್‌ಎಸ್ ವಿದ್ಯಾಪೀಠದ ವಿವಿಧ ಕಾಲೇಜುಗಳಲ್ಲಿ ವಾಣಿಜ್ಯ ಶಾಸ್ತ್ರದ ಪ್ರಾಧ್ಯಾಪಕರಾಗಿ, ನಂಜನಗೂಡಿನಲ್ಲಿ ಪ್ರಾಂಶುಪಾಲರಾಗಿ ಸೇವೆ ಸಲ್ಲಿಸುವುದರ ಜೊತೆಗೆ ಭರತನಾಟ್ಯವನ್ನು ನಾಟ್ಯಾಚಾರ್ಯ ಎಂ.ವಿಷ್ಣುದಾಸ್ ಅವರಿಂದ ಕಲಿತು, ನಾಟ್ಯದಲ್ಲೂ ಅಪಾರ ಸಾಧನೆ ಮಾಡಿದ್ದಾರೆ. ಮೈಸೂರಿನಲ್ಲಿ ನೂಪುರ ಕಲಾವಿದರು ಸಾಂಸ್ಕೃತಿಕ ಟ್ರಸ್ಟ್ ಮೂಲಕ ಕಳೆದ 40 ವರ್ಷಗಳಿಂದ ಕಲಾಸೇವೆ ಸಲ್ಲಿಸುತ್ತಿದ್ದು, ನೃತ್ಯ ಗುರುವಾಗಿ, ನಟುವಾಂಗ ಕಲಾವಿದ, ಗಾಯಕ, ಸಂಘಟಕ, ಕಾರ್ಯಕ್ರಮ ನಿರೂಪಕ, ಅಂಕಣ ಬರಹಗಾರ, ಗ್ರಂಥ ರಚನಾಕಾರ, ನೃತ್ಯ ವಿಮರ್ಶಕ, ಹೀಗೆ ಬಹುಮುಖ ಪ್ರತಿಭೆಯಾಗಿದ್ದಾರೆ. ಸಂಗೀತ ನೃತ್ಯ ಅಕಾಡೆಮಿ ಪ್ರಶಸ್ತಿ ಸೇರಿದಂತೆ ಹಲವು ಪ್ರಶಸ್ತಿಗಳು ಇವರಿಗೆ ಸಂದಿವೆ.

ಅಂಶಿ ಪ್ರಸನ್ನ ಕುಮಾರ್: ಎಂಭತ್ತರ ದಶಕದಲ್ಲಿ ವಿದ್ಯಾರ್ಥಿ ದೆಸೆಯಲ್ಲೇ ಪತ್ರಿಕೋದ್ಯಮ ಪ್ರವೇಶಿಸಿದ ಅಂಶಿ ಪ್ರಸನ್ನಕುಮಾರ್ ಅವರು, ಕಳೆದ ನಾಲ್ಕು ದಶಕಗಳಿಂದಲೂ ಮೈಸೂರು ಪತ್ರಿಕೋದ್ಯಮದಲ್ಲಿ ಸೇವೆ ಸಲ್ಲಿಸುತ್ತಿದ್ದಾರೆ. 'ಕನ್ನಡಪ್ರಭ' ಮೈಸೂರು ವಿಭಾಗದ ಕಾರ್ಯನಿರ್ವಾಹಕ ಸಂಪಾದಕರಾಗಿ ಪ್ರಸ್ತುತ ಸೇವೆ ಸಲ್ಲಿಸುತ್ತಿದ್ದಾರೆ. ಮೈಸೂರು ಜಿಲ್ಲಾ ಪತ್ರಕರ್ತರ ಸಂಘದ ಅಧ್ಯಕ್ಷರಾಗಿ, ಕರ್ನಾಟಕ ಮಾಧ್ಯಮ ಅಕಾಡೆಮಿ ಸದಸ್ಯರಾಗಿ, ಮೈಸೂರು ವಿಶ್ವವಿದ್ಯಾನಿಲಯ ಸಮೂಹ ಸಂವಹನ ಮತ್ತು ಪತ್ರಿಕೋದ್ಯಮ ವಿಭಾಗದ ಅತಿಥಿ ಉಪನ್ಯಾಸಕರು ಹಾಗೂ ಹಲವು ವಿಭಾಗಗಳಲ್ಲಿ ಕಾರ್ಯ ನಿರ್ವಹಿಸಿರುವ ಇವರು, 75 ಪ್ರಶಸ್ತಿಗಳು, 300ಕ್ಕೂ ಹೆಚ್ಚು ಸಂಘ ಸಂಸ್ಥೆಗಳ ಪುರಸ್ಕಾರಗಳಿಗೆ ಭಾಜನರಾಗಿದ್ದಾರೆ. ಇವರ 26 ಕೃತಿಗಳು ಪ್ರಕಟಗೊಂಡಿವೆ.

ಡಾ.ಎನ್.ಎಸ್.ರಾಮೇಗೌಡ: ಮೈಸೂರು ಕಾರ್ಯಕ್ಷೇತ್ರದ ಮೂಲಕ ಸಾಕಷ್ಟು ಸೇವೆ ಮಾಡಿರುವ ಡಾ. ಎನ್.ಎಸ್.ರಾಮೇಗೌಡ ಅವರು, ಮೂಲತಃ ಮಂಡ್ಯ ಜಿಲ್ಲೆ, ಶ್ರೀರಂಗಪಟ್ಟಣ ನಗುವನಹಳ್ಳಿಯವರು. ಮೈಸೂರಿನಲ್ಲಿ ಉನ್ನತ ಶಿಕ್ಷಣ ಪಡೆದು, ಕನಕಪುರದಲ್ಲಿ 1964ರಲ್ಲಿ ಉಪನ್ಯಾಸಕರಾಗಿ ಸೇವೆ ಆರಂಭಿಸಿ, ಕರ್ನಾಟಕ ರಾಜ್ಯ ಮುಕ್ತ ವಿವಿಯ ಕುಲಪತಿ, ಇಂದಿರಾಗಾಂಧಿ ರಾಷ್ಟ್ರೀಯ ಮುಕ್ತ ವಿವಿ ಪ್ರಾದೇಶಿಕ ನಿರ್ದೇಶಕ ಸೇರಿದಂತೆ ವಿವಿಧ ಪ್ರತಿಷ್ಠಿತ ಸಂಸ್ಥೆಗಳಲ್ಲಿ ಸೇವೆ ಸಲ್ಲಿಸಿ, ನಿವೃತ್ತರಾದ ಬಳಿಕ ಶ್ರೀ ಆದಿಚುಂಚನಗಿರಿ ಶಿಕ್ಷಣ ಸಂಸ್ಥೆ ಬೆಂಗಳೂರಿನ ಸಿಇಓ ಆಗಿ ಸೇವೆ ಸಲ್ಲಿಸಿದ್ದಾರೆ. ದೇಶ–ವಿದೇಶಗಳಲ್ಲಿ ವಿವಿಧ ಶೈಕ್ಷಣಿಕ ಸಮಾವೇಶಗಳಲ್ಲಿ ಭಾಗವಹಿಸಿ, ಪ್ರಬುದ್ಧತೆ ಮೆರೆದಿದ್ದಾರೆ. ಕನ್ನಡ ನಾಡು, ನುಡಿ, ಸಂಸ್ಕೃತಿ ಪ್ರಚಾರ ಕಾರ್ಯಕ್ರಮಗಳು, ಆಚರಣೆಗಳು, ಶಿಕ್ಷಣ ಹಾಗೂ ಮಾಧ್ಯಮ ಕಾರ್ಯಕ್ರಮಗಳಲ್ಲಿ ಸಕ್ರಿಯವಾಗಿ ತೊಡಗಿಸಿಕೊಂಡು, ಮಾರ್ಗದರ್ಶನ ನೀಡಿರುವ ಇವರು, ಶ್ರೀರಂಗಪಟ್ಟಣ ತಾಲೂಕು ಕನ್ನಡ ಸಾಹಿತ್ಯ ಪರಿಷತ್ತಿನ ವಾರ್ಷಿಕ ಸಮ್ಮೇಳನದ ಅಧ್ಯಕ್ಷರಾಗಿದ್ದರು.

ಎಂ.ಯೋಗೇಂದ್ರ: ಮೈಸೂರಿನ ವಿಜಯನಗರ 2ನೇ ಹಂತದ ನಿವಾಸಿಯಾಗಿರುವ ಎಂ.ಯೋಗೇಂದ್ರ ಅವರು, ಸೆಂಟ್ರಲ್ ಟ್ಯಾಕ್ಸ್ ಅಂಡ್ ಕಸ್ಟಮ್ಸ್ ಇಲಾಖೆ ನಿವೃತ್ತ ಅಧಿಕಾರಿ. ಕಳೆದ ನಾಲ್ಕು ದಶಕಗಳಿಂದಲೂ ಅಥ್ಲೆಟಿಕ್ಸ್‌ನಲ್ಲಿ ತೊಡಗಿಸಿಕೊಂಡಿದ್ದು, ದೂರದ ಓಟಗಾರರಾಗಿ ಗುರುತಿಸಿಕೊಂಡಿದ್ದಾರೆ. ಈವರೆಗೆ ಹಲವು ಅಂತರರಾಷ್ಟ್ರೀಯ ಸ್ಪರ್ಧೆಗಳಲ್ಲಿ ಭಾರತವನ್ನು ಪ್ರತಿನಿಧಿಸಿ, 60 ಕ್ಕೂ ಹೆಚ್ಚು ಚಿನ್ನ, 50 ಬೆಳ್ಳಿ ಹಾಗೂ 48 ಕಂಚಿನ ಪದಕಗಳನ್ನು ಗೆದ್ದಿದ್ದಾರೆ. 2016ರಲ್ಲಿ ಚೀನಾದಲ್ಲಿ ನಡೆದ 20ನೇ ಏಷ್ಯನ್ ಮಾಸ್ಟರ್ಸ್ ಅಥ್ಲೆಟಿಕ್ಸ್ ಚಾಂಪಿಯನ್‌ಷಿಪ್‌ನಲ್ಲಿ 2 ಕಂಚು ಹಾಗೂ 2014ರಲ್ಲಿ ಜಪಾನ್‌ನಲ್ಲಿ ನಡೆದ 19ನೇ ಏಷ್ಯನ್ ಮಾಸ್ಟರ್ಸ್ ಅಥ್ಲೆಟಿಕ್ಸ್ ಚಾಂಪಿಯನ್‌ಶಿಪ್ ರಿಲೇನಲ್ಲಿ ಕಂಚಿನ ಪದಕ, ಇತ್ತೀಚೆಗೆ ನಡೆದ 45ನೇ ಮಾಸ್ಟರ್ಸ್ ಅಥ್ಲೆಟಿಕ್ಸ್ ಚಾಂಪಿಯನ್‌ಶಿಪ್‌ನಲ್ಲಿ ಬೆಳ್ಳಿ ಪದಕ ಪಡೆದಿದ್ದಾರೆ. ಮೈಸೂರು ಅಥ್ಲೆಟಿಕ್ಸ್ ಕ್ಲಬ್ ಕಾರ್ಯದರ್ಶಿಯಾಗಿ, ಮೈಸೂರು ಜಿಲ್ಲಾ ಮಟ್ಟದ ಅಥ್ಲೆಟಿಕ್ಸ್ ಸಂಘದ ಉಪಾಧ್ಯಕ್ಷರಾಗಿ, ಮಾಸ್ಟರ್ ಅಥ್ಲೆಟಿಕ್ಸ್ ಅಸೋಷಿಯೇಷನ್ ಆಫ್ ಕರ್ನಾಟಕದ ಉಪಾಧ್ಯಕ್ಷರಾಗಿ ಸೇವೆ ಸಲ್ಲಿಸಿದ್ದಾರೆ.

ಎಲ್.ಹೇಮಾಶೇಖರ್: ಇವರು ಮೈಸೂರು ಮೂಲದವರಾಗಿದ್ದು ಕಳೆದ 40 ವರ್ಷಗಳಿಂದ ಕರಕುಶಲ ಕಲೆಯಲ್ಲಿ ತೊಡಗಿಸಿಕೊಂಡಿದ್ದು, ಬಾಟಿಕ್, ಟೈ ಅಂಡ್ ಡೈ ಕಲೆ ಮೂಲಕ ರಾಜ್ಯ ಮತ್ತು ರಾಷ್ಟ್ರ ಮಟ್ಟದ ಹಲವು ಪ್ರಶಸ್ತಿಗಳನ್ನು ಪಡೆದುಕೊಂಡಿದ್ದಾರೆ. ಕೇಂದ್ರ ಮತ್ತು ರಾಜ್ಯ ಸರ್ಕಾರ ಅಷ್ಟೇ ಅಲ್ಲದೇ ವಿವಿಧ ಸಂಘ, ಸಂಸ್ಥೆಗಳು ಏರ್ಪಡಿಸಿದ್ದ ಪ್ರದರ್ಶನಗಳಲ್ಲಿ ತಮ್ಮ ಕಲೆಯನ್ನು ಅನಾವರಣ ಮಾಡಿರುವ ಇವರು, ಈವರೆಗೆ 800ಕ್ಕೂ ಹೆಚ್ಚು ಮಹಿಳಾ ಅಭ್ಯರ್ಥಿಗಳಿಗೆ ತರಬೇತಿ ನೀಡಿದ್ದಾರೆ. ಇವರ ಸೇವೆಯನ್ನು ಗಮನಿಸಿ ವಿವಿಧ ಸಂಘ–ಸಂಸ್ಥೆಗಳು ಹತ್ತಕ್ಕೂ ಹೆಚ್ಚು ಪ್ರಶಸ್ತಿ ನೀಡಿ ಗೌರವಿಸಿವೆ. ಬಿಎಸ್ಸಿ ಪದವೀಧರೆಯಾದ ಇವರು ವಿವಾಹದ ನಂತರ ಕಲೆಯಲ್ಲಿ ಆಸಕ್ತಿ ಬೆಳೆಸಿಕೊಂಡು, ಮೈಸೂರು ಅರಮನೆ ಕಲಾವಿದರಾಗಿದ್ದ ಶ್ರೀ ರಾಮನರಸಯ್ಯ ಅವರಿಂದ ಸೂಫಿ, ಮೈಸೂರು ವರ್ಣ ಕಲೆಯನ್ನು ಕಲಿತಿದ್ದು, ಬಾಟಿಕ್ ಮತ್ತು ಟೈ ಅಂಡ್ ಡೈ ಕಲೆಯನ್ನು ವೃತ್ತಿಯಾಗಿಸಿಕೊಂಡಿದ್ದಾರೆ.

ರಂಗಕರ್ಮಿ ಮೈಮ್ ರಮೇಶ್‌ಗೆ ಪ್ರಶಸ್ತಿ

ರಂಗಕರ್ಮಿ ಮೈಮ್ ರಮೇಶ್ ದಕ್ಷಿಣ ಕನ್ನಡ ಮೂಲದವರಾದರೂ ಮೈಸೂರಿನಲ್ಲಿ ಸುದೀರ್ಘ ರಂಗಸೇವೆ ಸಲ್ಲಿಸಿದ್ದಾರೆ. ಬಹಳ ಚಿಕ್ಕ ವಯಸ್ಸಿನಲ್ಲಿಯೇ ಯಕ್ಷಗಾನ ಕಲಿತು, ನಾಟಕ ರಂಗಭೂಮಿ ಪ್ರವೇಶಿಸಿದರು. 1975ರಲ್ಲಿ ಸಮುದಾಯ ರಂಗ ತಂಡವನ್ನು ಸೇರಿ ರಾಜ್ಯದೆಲ್ಲೆಡೆ ಬೀದಿನಾಟಕ ಪ್ರದರ್ಶನ ನೀಡಿದರು. ಕದ್ರಿವಿಷ್ಣು ಅವರಿಂದ ಯಕ್ಷಗಾನದಲ್ಲಿ ಪರಿಣಿತಿ ಪಡೆದರಲ್ಲದೆ ಭರತನಾಟ್ಯವನ್ನೂ ಅಭ್ಯಾಸ ಮಾಡಿದರು. 1989ರಲ್ಲಿ ಮೈಸೂರಿನಲ್ಲಿ ಸ್ಥಾಪನೆಯಾದ ರಂಗಾಯಣದ ಕಲಾವಿದರಾಗಿ ವೃತ್ತಿ ಜೀವನ ಆರಂಭಿಸಿ, 49 ವರ್ಷಗಳಿಂದ ರಂಗಭೂಮಿಯಲ್ಲಿ ಸಕ್ರಿಯರಾಗಿದ್ದಾರೆ. ಜೆಪಿಐಈಆರ್ ತಂಡ ರಚಿಸಿ, ಸಾವಿರಾರು ಮಂದಿಗೆ ರಂಗತರಬೇತಿ ನೀಡಿದ್ದಾರೆ. ಹಲವು ನಾಟಕಗಳನ್ನೂ ನಿರ್ದೇಶಿಸಿರುವ ಇವರು, ಮೈಮ್ ಸ್ಪೆಷಲಿಸ್ಟ್, ಚಂದನವಾಹಿನಿ ಚಂದನ ಪ್ರಶಸ್ತಿ, ಕರ್ನಾಟಕ ನಾಟಕ ಅಕಾಡೆಮಿ ಪ್ರಶಸ್ತಿ, ಸಿಜಿಕೆ ರಂಗ ಪುರಸ್ಕಾರ, ಕರ್ನಾಟಕ ಜಾನಪದ ಪರಿಷತ್ ಪ್ರಶಸ್ತಿ ಸೇರಿದಂತೆ ಹಲವು ಪ್ರಶಸ್ತಿ–ಪುರಸ್ಕಾರಗಳು ಇವರಿಗೆ ಸಂದಿವೆ.

ಗ್ರಾಪಂ ಸದಸ್ಯ ಸಜೀವ ದಹನ

ಕುಳಿತ್ತಿದ್ದ ಚಂದ್ರಶೇಖರ್ ಹೊರ ಬರಲಾಗದೆ ಸುಟ್ಟು ಕರಕಲಾಗಿದ್ದಾರೆ ಎಂದು ಪೊಲೀಸ್ ಮೂಲಗಳು ತಿಳಿಸಿವೆ. ವಿಷಯ ತಿಳಿಯು ತ್ತಿದ್ದಂತೆ ಪೊಲೀಸರು ಮತ್ತು ಅಗ್ನಿ ಶಾಮಕ ದಳ ಸ್ಥಳಕ್ಕೆ ಬರುವಷ್ಟರಲ್ಲಿ ಕಾರು ಸಂಪೂರ್ಣವಾಗಿ ಸುಟ್ಟು ಹೋಗಿತ್ತು. ಟಿಪ್ಪರ್‌ಗೆ ಹರಡದಂತೆ ಅಗ್ನಿಶಾಮಕ ದಳದವರು ಬೆಂಕಿಯನ್ನು ನಂದಿಸಿ, ಮುಂದಾಗಬಹುದಾದ ಅನಾಹುತ ತಪ್ಪಿಸಿದ್ದಾರೆ.

ಮೃತ ಚಂದ್ರಶೇಖರ್ ಅವರ ಅಂತ್ಯ ಕ್ರಿಯೆಯನ್ನು ಮೂಕನಹಳ್ಳಿಯ ಲ್ಲಿರುವ ಅವರ ತೋಟದಲ್ಲಿ ಇಂದು ನೆರವೇರಿಸಲಾಯಿತು. ಮೃತರ ಕುಟುಂಬ ಸ್ಥರು ಮತ್ತು ಸಂಬಂಧಿಕರ ಆಕ್ರಂದನ ಮುಗಿಲು ಮುಟ್ಟಿತ್ತು. ಮೃತ ಚಂದ್ರಶೇಖರ್ ಪತ್ನಿ, ಇಬ್ಬರು ಪುತ್ರರು ಸೇರಿದಂತೆ ಅಪಾರ ಬಂಧು–ಬಳಗವನ್ನು ಅಗಲಿದ್ದಾರೆ.

ದಿವಂಗತ ಎಂ.ಎಂ.ಶೆಟ್ಟಿಗೌಡ ಮಂಡಲ ಪಂಚಾಯ್ತಿಯ ಪ್ರಪ್ರಥಮ ಸದಸ್ಯರಾಗಿದ್ದು, ಮುಖ್ಯಮಂತ್ರಿ ಸಿದ್ದರಾಮಯ್ಯನವರ ಆಪ್ತರೂ ಹೌದು. ಜೊತೆಗೆ ತಾಲೂಕಿನಾದ್ಯಂತ ಜನಪ್ರಿಯ ನಾಯಕರಾಗಿದ್ದರು. ಇವರ ಪುತ್ರ ಚಂದ್ರಶೇಖರ್ ಕೂಡ ಮೂಕನಹಳ್ಳಿ ಗ್ರಾಪಂ ಅಧ್ಯಕ್ಷರಾಗಿ ಸೇವೆ ಸಲ್ಲಿಸಿದ್ದರು. ಜೊತೆಗೆ ಹಾಲಿ ಸದಸ್ಯರು ಕೂಡ.

ಶ್ರೀರಂಗಪಟ್ಟಣ ಪೊಲೀಸರು ಪ್ರಕರಣ ದಾಖಲಿಸಿಕೊಂಡು ತನಿಖೆ ನಡೆಸುತ್ತಿದ್ದಾರೆ. ಟಿಪ್ಪರ್ ವಶಪಡಿಸಿಕೊಂಡಿದ್ದು, ಚಾಲಕನಿಗಾಗಿ ಶೋಧ ನಡೆಸಲಾಗುತ್ತಿದೆ.

ಡಿಕೆಶಿ ಪದಗ್ರಹಣ?

ಸಂಪುಟದಲ್ಲಿನ ಬಹುತೇಕ ಸಚಿವರನ್ನು ಕೈಬಿಟ್ಟು ಹೊಸಬರಿಗೆ ಅವಕಾಶ ಮಾಡಿಕೊಡಬೇಕೆಂಬ ತೀರ್ಮಾನ ತೆಗೆದು ಕೊಂಡಿದ್ದಾರೆ.

ಖರ್ಗೆ ನೀಡಿ ರುವ ಸಂದೇಶಕ್ಕೆ ಪುಷ್ಟಿ ಎಂಬಂತೆ ಕೃಷ್ಣಬೈರೇಗೌಡ ಎರಡೂವರೆ ವರ್ಷಗಳ ನಂತರ ನಾವೆಲ್ಲಾ ಅಧಿಕಾರ ತೊರೆಯ ಬೇಕಾಗುತ್ತದೆ ಎಂದು ಈ ಹಿಂದೆಯೇ ಹೇಳಿದ್ದರು.



ಆದರೆ, ಸಿದ್ದರಾಮಯ್ಯ ಆಪ್ತರಿಗೆ ಖರ್ಗೆ ಆದೇಶ ನುಂಗಲಾರದ ತುತ್ತಾಗಿದ್ದು, ಅಧಿಕಾರ ಹಸ್ತಾಂತರ ವಿಷಯ ಪ್ರಸ್ತಾಪಿಸಿ ಐದು ವರ್ಷ ನಮ್ಮ ನಾಯಕರೇ ಮುಂದು ವರೆಯುತ್ತಾರೆ ಎಂಬ ಹೇಳಿಕೆ ನೀಡುತ್ತಿದ್ದರು. ಇಷ್ಟೆಲ್ಲಾ ಬೆಳವಣಿಗೆ ನಡುವೆಯೂ ಶಿವಕುಮಾರ್ ಅಧಿಕಾರ ಹಸ್ತಾಂತರಕ್ಕೆ ಸಂಬಂಧಿಸಿದಂತೆ ಯಾವುದೇ ಸುಳಿವು ಬಹಿರಂಗಪಡಿಸದೆ ಶುಭ ಮುಹೂರ್ತಕ್ಕಾಗಿ ಕಾಯುತ್ತಿದ್ದಾರೆ.

ಪತ್ನಿ ಮಾಸ್ಟರ್ ಮೈಂಡ್!

ರಸ್ತೆಯಲ್ಲಿ ಬಿಳಿ ಬಣ್ಣದ ಕಾರು, ಸ್ಕೂಟರ್‌ಗೆ ಅಡ್ಡಲಾಗಿ ನಿಂತಿದೆ. ಕಾರಿನಲ್ಲಿದ್ದ ವ್ಯಕ್ತಿ ಯೋರ್ವ ಇವರ ಹತ್ತಿರ ಬಂದು ಏಕಾಏಕಿ ಸ್ಕೂಟರ್ ಕೆಳಕ್ಕೆ ಬೀಳಿಸಿದ್ದಾನೆ. ಈ ವೇಳೆ ರಾಜೇಂದ್ರ ಹಾಗೂ ಸಂಗೀತಾ ಕೆಳಗೆ ಬಿದ್ದಿದ್ದಾರೆ. ಈ ವೇಳೆ ಅಪರಿಚಿತ ವ್ಯಕ್ತಿ ರಾಜೇಂದ್ರ ಜೊತೆ ಜಗಳ ಮಾಡಿದ್ದು ಇದೇ ವೇಳೆ ಕಾರಿನಲ್ಲಿದ್ದ ಮತ್ತೋರ್ವ ವ್ಯಕ್ತಿ ಸಂಗೀತಾ ಬಳಿ ಬಂದು ಕುತ್ತಿಗೆಯಲ್ಲಿದ್ದ ಚೈನ್ ಕಸಿಯಲು ಯತ್ನಿಸಿದ್ದಾನೆ. ಆಗ ತಡೆಯಲು ಮುಂದಾದ ರಾಜೇಂದ್ರನ ಮೇಲೆ ಆ ವ್ಯಕ್ತಿ ಹರಿತವಾದ ಆಯುಧ ದಿಂದ ತಿವಿದಿದ್ದಾನೆ. ಈ ಸಂದರ್ಭ ರಸ್ತೆಯಲ್ಲಿ ಬೇರೊಂದು ವಾಹನ ಬರುತ್ತಿದ್ದಂತೆ ಮೂವರು ಆಗಂತುಕರು ಕಾರಿನಲ್ಲಿ ಪರಾರಿಯಾಗಿದ್ದರು.

ಈ ಸಂಬಂಧ ಪಟ್ಟಣ ಪೊಲೀಸ್ ಠಾಣೆಯಲ್ಲಿ ದೂರು ದಾಖಲಿಸಿಕೊಂಡು ತನಿಖೆ ಕೈಗೊಂಡ ಪೊಲೀಸರು ಸಿಸಿ ಟಿವಿ ಪುಟೇಜ್ ಹಾಗೂ ವೈಜ್ಞಾನಿಕ ಸಾಕ್ಷ್ಯಗಳನ್ನು ಪರಿಶೀಲನೆ ನಡೆಸಿದಾಗ ಪತಿಯನ್ನು ಮುಗಿಸಲು ಪತ್ನಿಯೇ ತನ್ನ ಸಹೋದರ ಹಾಗೂ ಆತನ ಸ್ನೇಹಿತರ ನೆರವನ್ನು ಪಡೆದುಕೊಂಡು ದರೋಡೆ ಸನ್ನಿವೇಶ ಸೃಷ್ಟಿಸಿರುವುದು ಬಯಲಾಗಿದೆ. ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ವಿಷ್ಣುವರ್ಧನ್, ಅಡಿಷನಲ್ ಎಸ್ಪಿ ಮಲ್ಲಿಕ್ ಹಾಗೂ ನಾಗೇಶ್, ಡಿವೈಎಸ್ಪಿ ರಘು ಅವರ ಮಾರ್ಗದರ್ಶನದಲ್ಲಿ ಇನ್ಸ್‌ಪೆಕ್ಟರ್ ರವೀಂದ್ರ, ಪಿಎಸ್ಐಗಳಾದ ಕೃಷ್ಣಕಾಂತ ಕೋಳಿ, ಮಂಜುನಾಥ್, ಎಎಸ್ಐ ದೇವರಾಜಯ್ಯ ನೇತೃತ್ವದಲ್ಲಿ ಸಿಬ್ಬಂದಿಗಳಾದ ಕೃಷ್ಣ, ಶಿವಕುಮಾರ್, ತಿಮ್ಮಯ್ಯ, ಮಹೇಶ್, ಚೇತನ್, ನವೀನ್ ಕುಮಾರ್, ಪೀರಪ್ಪ ಹಾದಿಮನಿ, ರವಿಕುಮಾರ್, ಮಹಿಳಾ ಸಿಬ್ಬಂದಿಗಳಾದ ಸರಿತಾ, ಸಹನ ಹಾಗೂ ಚಾಲಕ ಕೃಷ್ಣ ಅವರನ್ನೊಳಗೊಂಡ ತಂಡ ಘಟನೆ ನಡೆದ ಸ್ಥಳ, ಸಿಸಿ ಕ್ಯಾಮರಾ ನೆರವು ಹಾಗೂ ವೈಜ್ಞಾನಿಕ ಅಂಶಗಳ ನೆರವಿನಿಂದ ತನಿಖೆ ಆರಂಭಿಸಿದಾಗ ಪತ್ನಿ ಸಂಗೀತಾ ಸ್ಕೆಚ್ ಬಯಲಾಗಿದೆ.

'ಜನಪದ ಮಹಾಕಾವ್ಯಗಳಲ್ಲಿ ಸ್ತ್ರೀ ಸಂವೇದನೆ' ರಾಷ್ಟ್ರೀಯ ವಿಚಾರಗೋಷ್ಠಿ



ಮೈಸೂರಿನ ಮಾನಸಗಂಗೋತ್ರಿಯ ಕುವೆಂಪು ಕನ್ನಡ ಅಧ್ಯಯನ ಸಂಸ್ಥೆಯ ಬಿಎಂಶ್ರೀ ಸಭಾಂಗಣದಲ್ಲಿ ಮಂಟೇಸ್ವಾಮಿ ಸಿದ್ದಪ್ಪಾಜಿ ಮತ್ತು ರಾಚಪ್ಪಾಜಿ ಪೀಠ ಹಾಗೂ ಪಿ.ಆರ್.ತಿಪ್ಪೇಸ್ವಾಮಿ ಪೀಠಗಳ ಸಹಯೋಗದಲ್ಲಿ ಆಯೋಜಿಸಿದ್ದ 'ಜನಪದ ಮಹಾಕಾವ್ಯಗಳಲ್ಲಿ ಸ್ತ್ರೀ ಸಂವೇದನೆ' ಎರಡು ದಿನಗಳ ರಾಷ್ಟ್ರೀಯ ವಿಚಾರಗೋಷ್ಠಿಗೆ ಸಾಹಿತಿ ಎಸ್.ಜಿ.ಸಿದ್ದರಾಮಯ್ಯ ಚಾಲನೆ ನೀಡಿದರು.

ಮೈಸೂರು,ಅ.30(ಜಿಎ)-ಅಕ್ಷರದ ದಾಖಲೆಗೆ ಸಿಗದ, ಅನಕ್ಷರಸ್ಥರ ಸಂಸ್ಕೃತಿಗೆ ಚರಿತ್ರೆಯಿಲ್ಲ, ಆದರೆ ಪರಂಪರೆಯಿದೆ ಎಂದು ಸಾಹಿತಿ ಎಸ್.ಜಿ.ಸಿದ್ದರಾಮಯ್ಯ ತಿಳಿಸಿದ್ದಾರೆ.

ಮೈಸೂರಿನ ಮಾನಸಗಂಗೋತ್ರಿಯ ಕುವೆಂಪು ಕನ್ನಡ ಅಧ್ಯಯನ ಸಂಸ್ಥೆಯ ಬಿಎಂಶ್ರೀ ಸಭಾಂಗಣದಲ್ಲಿ ಮಂಟೇಸ್ವಾಮಿ ಸಿದ್ದಪ್ಪಾಜಿ ಮತ್ತು ರಾಚಪ್ಪಾಜಿ ಪೀಠ ಹಾಗೂ ಪಿ.ಆರ್.ತಿಪ್ಪೇಸ್ವಾಮಿ ಪೀಠಗಳ ಸಹಯೋಗದಲ್ಲಿ ಹಮ್ಮಿಕೊಂಡಿರುವ 'ಜನಪದ ಮಹಾಕಾವ್ಯಗಳಲ್ಲಿ ಸ್ತ್ರೀ ಸಂವೇದನೆ' ವಿಷಯ ಕುರಿತು ಎರಡು ದಿನಗಳ ರಾಷ್ಟ್ರೀಯ ವಿಚಾರಗೋಷ್ಠಿ ಉದ್ಘಾಟಿಸಿ ಮಾತನಾಡಿದ ಅವರು, ಬದಲಾವಣೆಯ ಕಾಲಘಟ್ಟದಲ್ಲಿ ಹಳೆ ಬೇರು, ಚಿಗುರಾಗಿ ಅದರ ಮಾದರಿಯೊಳಗೆ ಅದರ ಸತ್ವ ಕಟ್ಟಿಕೊಂಡು ಉಳಿದು ಬೆಳೆಯುತ್ತಾ ಹೋಗುತ್ತಾ ಪರಂಪರೆಯನ್ನಾಗಿಸಿ ಕೊಳ್ಳುತ್ತಾ ನಿರಂತರವಾಗಿರುತ್ತಿರುವುದೇ, ಈ ಜಾನಪದ ಪರಂಪರೆ ಎಂದರು.

ಗರಿಕೆ ಹುಲ್ಲನ್ನು ತುಳಿದಷ್ಟು ಮತ್ತೆ ಅದು ತನ್ನ ಸತ್ವದಿಂದ ಚಿಗುರಿ ಮೇಲೇಳುವಂತೆ, ಈ ದೇಶದಲ್ಲಿ ಎಷ್ಟೋ ಬುಡಕಟ್ಟುಗಳು ಇವತ್ತಿಗೂ ಗರಿಕೆ ಬೇರಿನ ಸತ್ವದಂತೆ ಗಟ್ಟಿಗೊಂಡು ಉಸಿರಾಡುತ್ತಿವೆ. ಇದನ್ನು ನಾವು ಗಮನಿಸಬೇಕಾಗಿದ್ದು, ಇದರ ನಡುವೆ ಸಂಘರ್ಷ ಉದ್ದಕ್ಕೂ ಬೆಳೆದು ಬಂದಿದೆ. ಹೊಸ ಪದ್ಧತಿ, ಪಂಥ, ಧರ್ಮಗಳನ್ನು ಹುಟ್ಟುಹಾಕಿದೆ ಎಂದ ಅವರು, ಜಾನಪದ ಪರಂಪರೆಗೆ ಯಾವುದೇ ಪಠ್ಯವಿಲ್ಲ. ಅದು ಹಾಡುವ ಹೊತ್ತಿನೊಳಗೆ ಅದರಲ್ಲಿ ಪಠ್ಯ ನಿರ್ಮಾಣವಾಗುತ್ತದೆ. ಕೆಲವು ಬಿಟ್ಟು ಹೋಗುತ್ತವೆ. ಕೆಲವು ಸೇರ್ಪಡೆಯಾಗುತ್ತವೆ. ಆ ರೀತಿಯೊಳಗೆ ಬಹು ಪಠ್ಯವಾಗಿ, ಸತ್ಯೋದ್ಧಾರಿತವಾಗಿ ಬೆಳೆಯುವುದು ಜಾನಪದದ ಲಕ್ಷಣ. ಆ ದೃಷ್ಟಿಯಿಂದಲೇ ಸೃಜನಾತ್ಮಕತೆ ಎಂಬುದು ಜಾನಪದದೊಳಗೆ ವ್ಯಕ್ತಿ ನಿಷ್ಠವಾಗಿದೆಯಲ್ಲದೇ, ಸಮೂಹ ನಿಷ್ಠ, ಸಂದರ್ಭ ನಿಷ್ಠವಾಗಿಯೂ ಇರುತ್ತದೆ ಎಂದು ತಿಳಿಸಿದರು.

ಜಾನಪದವನ್ನು ಅಧ್ಯಯನ ಮಾಡುವುದರೊಳಗೆ, ನಮ್ಮ ಅಕ್ಷರ ಪರಂಪರೆಯ ಮೀಮಾಂಸೆ ದೃಷ್ಟಿಕೋನ, ಓದಿನ ದೃಷ್ಟಿಕೋನ ಸೋತಿವೆ. ಇನ್ನ ಕುಲಚರಿತೆಯನ್ನು ನೋಡಿದರೆ, ಇವತ್ತು ಹಲವೆಡೆಗಳಲ್ಲಿ ಹಾಡು, ಕುಣಿತ, ವೇದಿಕೆ ಕಾರ್ಯಕ್ರಮ, ಬಿಡಿ ನಾಟಕಗಳನ್ನು ನಡೆಸುತ್ತೇವೆ. ಆದರೆ ಅದರೊಳಗಿನ ಕುಲಗಳ ಚರಿತೆಯ ಸಂಪತ್ತು, ನಿಜವಾದ ಸಂವೇದನೆ ಏನು, ಅಲ್ಲಿ ಹೆಣ್ಣಿನ ಸ್ಥಾನ, ಸಂವೇದನೆ ಹೇಗೆ ವ್ಯಕ್ತವಾಗಿದೆ. ಯಾವ ಕಾರಣಕ್ಕೆ ಅಂತಹ ಮಾತ್ರ ಸಂವೇದನೆಯ ಮೇಲೆ ಹೊರಗಿನ ಸಂಸ್ಕೃತಿ ಆಕ್ರಮಣ ಮಾಡಿವೆ ಎಂಬ ಸೂಕ್ಷ್ಮ ಅರಿಯಬೇಕಿದೆ ಎಂದ ಅವರು, ಇವತ್ತಿನ ರಾಜಕೀಯವಾಗಿ ಚಾರಿತ್ರಿಕ ದ್ವೇಷಗಳು, ಸೂಕ್ಷ್ಮತೆಗಳು ಸಹಜವಾಗಿ ಬೆಳೆದು ಬಂದಿವೆ. ಅದನ್ನು ಮುರಿಯುವ, ಹೋಗಲಾಡಿಸುವ ಕೆಲಸವನ್ನು ಶಿಕ್ಷಣ ಮಾಡುತ್ತಿಲ್ಲ ಎಂದು ಬೇಸರ ವ್ಯಕ್ತಪಡಿಸಿದರು.

ಕಾರ್ಯಕ್ರಮದಲ್ಲಿ ಪಿ.ಆರ್.ತಿಪ್ಪೇ ಸ್ವಾಮಿ ಪೀಠದ ಸಂದರ್ಶಕ ಪ್ರಾಧ್ಯಾಪಕರು ಪ್ರೊ.ಆರ್.ಸುನಂದಮ್ಮ, ಕುವೆಂಪು ಕನ್ನಡ ಅಧ್ಯಯನ ಸಂಸ್ಥೆ ನಿರ್ದೇಶಕಿ ಪ್ರೊ.ಎನ್.ಕೆ. ಲೋಲಾಕ್ಷಿ, ಮಂಟೇಸ್ವಾಮಿ, ಸಿದ್ದಪ್ಪಾಜಿ ಮತ್ತು ರಾಚಪ್ಪಾಜಿ ಪೀಠದ ಸಂದರ್ಶಕ ಪ್ರಾಧ್ಯಾಪಕ ಪ್ರೊ.ಕೇಶವಶರ್ಮ ಇದ್ದರು.

ವಿಶ್ವ ಹಿರಿಯ ನಾಗರಿಕರ ದಿನಾಚರಣೆ; ಸನ್ಮಾನ ಸಮಾರಂಭ

ವೃತ್ತಿಯಿಂದ ನಿವೃತ್ತಿಯಾದರೂ ಸಮಾಜಮುಖಿ ಕಾರ್ಯನಿರತರಾಗಬೇಕು; ಎಂಎಲ್‌ಸಿ ಮಧು ಜಿ.ಮಾದೇಗೌಡ ಕಿವಿಮಾತು



ಮೈಸೂರಿನ ಜಯಲಕ್ಷ್ಮಿಪುರಂ ನಲ್ಲಿರುವ ಶ್ರೀ ಸರಸ್ವತಿ ಸಮುದಾಯ ಭವನದಲ್ಲಿ 'ವಿಶ್ವ ಹಿರಿಯ ನಾಗರಿಕರ ದಿನಾಚರಣೆ' ಹಾಗೂ ಸನ್ಮಾನ ಸಮಾರಂಭ ಗುರುವಾರ ನಡೆಯಿತು.

ಮೈಸೂರು, ಅ.30(ಎಂಕೆ)- ಮೈಸೂರಿನ ಜಯಲಕ್ಷ್ಮಿಪುರಂನಲ್ಲಿರುವ ಶ್ರೀ ಸರಸ್ವತಿ ಸಮುದಾಯ ಭವನದಲ್ಲಿ ಹಿರಿಯ ನಾಗರಿಕರ ಮಂಡಳಿ ಮತ್ತು ಹಿರಿಯ ನಾಗರಿಕರ ವಿಶ್ವಸ್ಥ ಮಂಡಳಿ ವತಿಯಿಂದ 'ವಿಶ್ವ ಹಿರಿಯ ನಾಗರಿಕರ ದಿನಾಚರಣೆ' ಹಾಗೂ ಸನ್ಮಾನ ಸಮಾರಂಭ ಗುರುವಾರ ನಡೆಯಿತು.

ಸಮಾರಂಭ ಉದ್ಘಾಟಿಸಿದ ವಿಧಾನ ಪರಿಷತ್ ಸದಸ್ಯ ಮಧು ಜಿ.ಮಾದೇಗೌಡ ಮಾತನಾಡಿ, ಹಿರಿಯ ನಾಗರಿಕರು ತಮ್ಮ ಆರೋಗ್ಯ ಮತ್ತು ಆಯಸ್ಸನ್ನು ವೃದ್ಧಿಸಿಕೊಳ್ಳಬೇಕಾದರೆ ಸದಾ ಒಂದಲ್ಲ ಒಂದು ರೀತಿಯ ಚಟುವಟಿಕೆಯಲ್ಲಿ ತಮ್ಮನ್ನು ತಾವು ತೊಡಗಿಸಿಕೊಂಡಿರಬೇಕು. ಹಿರಿಯರು ಗ್ರಂಥಾಲಯವಿದ್ದಂತೆ. ತಮ್ಮ ಸೇವಾ ಅನುಭವ, ಜ್ಞಾನ ಮುಂದಿನ ಪೀಳಿಗೆಗೆ ವರ್ಗಾವಣೆಯಾಗಬೇಕಿದೆ ಎಂದು ಅಭಿಪ್ರಾಯಿಸಿದರು.

ಭಾರತ ದೇಶ ಇಲ್ಲಿಯವರೆಗೂ ಅಭಿವೃದ್ಧಿ ಪಥದಲ್ಲಿ ಸಾಗುತ್ತಾ ಬಂದಿದೆ ಎಂದರೆ, ಅದು ಹಿರಿಯ ನಾಗರಿಕರೆಂಬ ಶಿಲ್ಪಿಗಳಿಂದ. ಹಿರಿಯರ ಜೊತೆಗೆ ಕಿರಿಯರು ನಿಲ್ಲಬೇಕಾದರೆ, ಹಿರಿಯ ಸಮಾಜಮುಖಿ ಚಟುವಟಿಕೆಗಳು ನಿಲ್ಲಬಾರದು. ಸರ್ಕಾರಿ ಲೆಕ್ಕದಲ್ಲಿ ಮಾತ್ರವೇ ನಿವೃತ್ತಿ ಎಂದಿದೆಯೇ ಹೊರತು ಬದುಕಿನ ಲೆಕ್ಕದಲ್ಲಿ ಅಲ್ಲ ಎಂದು ಹೇಳಿದರು.

ಪ್ರತೀ ವರ್ಷ 5 ಲಕ್ಷ ರೂ. ನೀಡುತ್ತೇನೆ...!

"ಉಳಿದ ಅವಧಿಯಲ್ಲಿ ಹಿರಿಯ ನಾಗರಿಕರ ಮಂಡಳಿ ಹಾಗೂ ಹಿರಿಯ ನಾಗರಿಕರ ವಿಶ್ವಸ್ಥ ಮಂಡಳಿಯ ಕಟ್ಟಡ ಮತ್ತಿತರ ಅಭಿವೃದ್ಧಿ ಕಾರ್ಯಕ್ರಮಕ್ಕೆ ಎಂಎಲ್‌ಸಿ ನಿಧಿಯಿಂದ ಪ್ರತಿವರ್ಷ 5 ಲಕ್ಷ ರು. ಅನುದಾನ ನೀಡುತ್ತೇನೆ. ಹಿರಿಯ ನಾಗರಿಕರ ಯೋಗಕ್ಷೇಮಕ್ಕೆ ಶ್ರಮಿಸಲಿದ್ದೇನೆ.

– ಮಧು ಜಿ.ಮಾದೇಗೌಡ, ವಿಧಾನಪರಿಷತ್ ಸದಸ್ಯ

ಮೈಸೂರಿನ ಖ್ಯಾತ ಉದ್ಯಮಿ ಡಾ.ಎಂ.ಜಗನ್ನಾಥ ಶೆಣೈ ಮಾತನಾಡಿ, ವಯಸ್ಸಾಗಿದೆ ಎಂದು ಮನೆಯಲ್ಲಿ ಕೂರಬಾರದು. ವೃತ್ತಿಯ ನಿವೃತ್ತಿಯ ನಂತರವೂ ಯುವ ಪೀಳಿಗೆಗೆ ಮಾರ್ಗದರ್ಶನ ನೀಡುವ ನಿಟ್ಟಿನಲ್ಲಾದರೂ ಯಾವುದಾದರೂ ಒಂದು ಸಮಾಜಮುಖಿ ಚಟುವಟಿಕೆಯಲ್ಲಿ ತೊಡಗಿಸಿಕೊಳ್ಳಬೇಕು. ಇವತ್ತಿನ ಯುವಕ-ಯುವತಿಯರಲ್ಲಿ ಶಿಸ್ತು ಕಡಿಮೆಯಾಗುತ್ತಿದೆ. ಅವರನ್ನು ಹಾಗೆಯೇ ಬಿಟ್ಟರೆ ಸಮಾಜಕ್ಕೆ ಅವರಿಂದ ಯಾವುದೇ ಕೊಡುಗೆಯನ್ನು ನಿರೀಕ್ಷೆ ಮಾಡಲು ಸಾಧ್ಯವಿಲ್ಲ. ಆದ್ದರಿಂದ ಆಗಾಗ ತಮ್ಮ ಅನುಭವದ ಒಳ್ಳೆಯ ವಿಚಾರಗಳನ್ನು ತಿಳಿಸುವ ಮೂಲಕ ಯುವಕ-ಯುವತಿಯರಲ್ಲಿ ಶಿಸ್ತು, ಸಂಯಮ, ಬದ್ಧತೆ ಮೂಡುವಂತೆ ಶ್ರಮಿಸಬೇಕಿದೆ ಎಂದರು.

ಸನ್ಮಾನ: 'ವಿಶ್ವ ಹಿರಿಯ ನಾಗರಿಕರ ದಿನಾಚರಣೆ' ಅಂಗವಾಗಿ ಕುವೆಂಪು ವಿಶ್ವವಿದ್ಯಾನಿಲಯದ ವಿಶ್ರಾಂತ ಕುಲಪತಿ ಪ್ರೊ.ಪಿ.ವೆಂಕಟರಾಮಯ್ಯ, ಶರಣ ಸಾಹಿತ್ಯ ಪರಿಷತ್ ಮಾಜಿ ಜಿಲ್ಲಾಧ್ಯಕ್ಷ ಮ.ಗು.ಸದಾನಂದಯ್ಯ ಹಾಗೂ ಹಿರಿಯ ಪತ್ರಕರ್ತ ಅಂಶಿಪ್ರಸನ್ನಕುಮಾರ್ ಅವರನ್ನು ಸನ್ಮಾನಿಸಲಾಯಿತು.

ಹಿರಿಯ ನಾಗರಿಕರ ವಿಶ್ವಸ್ಥ ಮಂಡಳಿ ಅಧ್ಯಕ್ಷ ಎಸ್.ವಿ.ಗೌಡಪ್ಪ, ಹಿರಿಯ ನಾಗರಿಕರ ಮಂಡಳಿ ಅಧ್ಯಕ್ಷ ಡಾ.ಹೆಚ್.ಎಂ. ನಾಗರಾಜು, ಕಾರ್ಯದರ್ಶಿಗಳಾದ ರಾಮಚಂದ್ರೇಗೌಡ, ಕೆ.ಎಸ್.ಕೃಷ್ಣ, ಕೆ.ವಿ.ರಾಮನಾಥ್, ಪಿ.ಎನ್.ಶ್ರೀಧರ್, ಶಶಿಕಲಾ ಚಂದ್ರಶೇಖರ್, ವನಜಾಕ್ಷಿ, ಪ್ರಕಾಶ್, ಆರ್.ಮಾನಸಿ ಮತ್ತಿತರರು ಉಪಸ್ಥಿತರಿದ್ದರು.

ಮೈಮುಲ್ ಅಧ್ಯಕ್ಷ ಈರೇಗೌಡರಿಗೆ ಸನ್ಮಾನ...



ಮೈಸೂರು ನಗರ ಮತ್ತು ಜಿಲ್ಲಾ ಅಧಿಕೃತ ನಂದಿನಿ ಹಾಲು ಮಾರಾಟಗಾರರ ಸಂಘದ ವತಿಯಿಂದ ಮೈಮುಲ್‌ನ ನೂತನ ಅಧ್ಯಕ್ಷ ಈರೇಗೌಡರನ್ನು ಸನ್ಮಾನಿಸಲಾಯಿತು. ಸಂಘದ ಅಧ್ಯಕ್ಷ ಹೆಚ್.ಕುಮಾರ್, ಉಪಾಧ್ಯಕ್ಷ ವೈ.ಎಸ್.ದಿಲೀಪ್ ಕುಮಾರ್, ಕಾರ್ಯದರ್ಶಿ ಎಂ.ಸತೀಶ್‌ಕುಮಾರ್, ಖಜಾಂಚಿ ಕೆ.ಎಸ್.ಸತೀಶ್, ಜಂಟಿ ಕಾರ್ಯದರ್ಶಿ ಡಿ.ರಾಮಚಂದ್ರ, ಸಹಕಾರ್ಯದರ್ಶಿ ಜಿ.ರಮೇಶ್, ಸಂಘಟನಾ ಕಾರ್ಯದರ್ಶಿ ಜಿ.ಭಾನುಕುಮಾರ್, ಸದಸ್ಯರಾದ ಪಿ.ಹರೀಶ್, ಸಿ.ಬಸವರಾಜು, ಎಸ್.ಸೇತುರಾಮ್, ವರಮಹಾಲಕ್ಷ್ಮಿ, ಪಿ.ಸತೀಶ್, ಬಿ.ವಿ.ನಟರಾಜ್, ಎಲ್.ಶಿವರಾಜು ಇನ್ನಿತರರು ಉಪಸ್ಥಿತರಿದ್ದರು.

ಏಷ್ಯಾ ಮಾಸ್ಟರ್ಸ್ ಅಥ್ಲೆಟಿಕ್ಸ್ ಚಾಂಪಿಯನ್‌ಶಿಪ್ ; ಮೈಸೂರಿನ ಮೂವರು ಭಾಗಿ



ಏಷ್ಯಾ ಮಾಸ್ಟರ್ಸ್ ಅಥ್ಲೆಟಿಕ್ಸ್‌ನಲ್ಲಿ ಭಾಗವಹಿಸಲಿರುವ ಮೈಸೂರಿನ ಕ್ರೀಡಾಪಟುಗಳು

ಮೈಸೂರು,ಅ.30(ಪಿಎಂ)- ಚೆನ್ನೈನ ಜವಾಹರಲಾಲ್ ನೆಹರು ಕ್ರೀಡಾಂಗಣದಲ್ಲಿ ನ.5ರಿಂದ 9ರವರೆಗೆ ನಡೆಯಲಿರುವ 23ನೇ ಏಷ್ಯಾ ಮಾಸ್ಟರ್ಸ್ ಅಥ್ಲೆಟಿಕ್ಸ್ ಚಾಂಪಿಯನ್‌ಶಿಪ್ 2025ರಲ್ಲಿ ಮೈಸೂರಿನ ಮೂವರು ಕ್ರೀಡಾ ಪಟುಗಳು ಭಾರತವನ್ನು ಪ್ರತಿನಿಧಿಸಲಿದ್ದಾರೆ.

50 ವರ್ಷ ಮೇಲ್ಪಟ್ಟವರ ವಿಭಾಗದಲ್ಲಿ ಕಲಾ ಸತೀಶ್, 80 ವರ್ಷ ಮೇಲ್ಪಟ್ಟವರ ವಿಭಾಗದಲ್ಲಿ ಪಿ.ಜಿ.ಚಂದ್ರಶೇಖರ್ ಮತ್ತು 40 ವರ್ಷ ಮೇಲ್ಪಟ್ಟವರ ವಿಭಾಗದಲ್ಲಿ ಡಾ.ಕೆ.ಎಸ್.ರಘುನಂದನ್ ಭಾರತವನ್ನು ಪ್ರತಿನಿಧಿಸುತ್ತಿರುವ ಮೈಸೂರಿನ ಕ್ರೀಡಾಪಟುಗಳು. 5ಕೆ ರೇಸ್ ವಾಕ್ ಈವೆಂಟ್‌ನಲ್ಲಿ ಈ ಪಟುಗಳು ಪಾಲ್ಗೊಳ್ಳಲಿದ್ದಾರೆ.

ಕಲಾ ಸತೀಶ್ ಅವರು 'ಮೈಸೂರು ಮಿತ್ರ' ಹಾಗೂ 'ಸ್ಟಾರ್ ಆಫ್ ಮೈಸೂರ್'ನ ರೇಸ್ ಕರೆಸ್ಪಾಂಡೆಂಟ್ ಆಗಿರುವ ಪಿ.ಜಿ. ಚಂದ್ರಶೇಖರ್ ಅವರ ಪುತ್ರಿಯಾಗಿ ದ್ದಾರೆ. ಅಂತಾರಾಷ್ಟ್ರೀಯ ಅಥ್ಲೆಟ್ ಸುಬ್ಬ ಶೆಟ್ಟಿ ಅವರ ಪುತ್ರ ಡಾ.ಕೆ.ಎಸ್.ರಘು ನಂದನ್, ಮೈಸೂರಿನ ಮಹಾರಾಣಿ ವಿಜ್ಞಾನ ಕಾಲೇಜಿನ ಪ್ರಾಣಿಶಾಸ್ತ್ರ ವಿಭಾಗದಲ್ಲಿ ಅತಿಥಿ ಅಧ್ಯಾಪಕರಾಗಿ ಕಾರ್ಯನಿರ್ವಹಿಸುತ್ತಿದ್ದಾರೆ.

ಅಖಿಲ ಭಾರತ ಜೂನಿಯರ್ ರ‍್ಯಾಂಕಿಂಗ್ ಬ್ಯಾಡ್ಮಿಂಟನ್ ಪಂದ್ಯಾವಳಿ

ಮೈಸೂರಿನ ಬಿ.ದಿಯಾ ಭೀಮಯ್ಯರಿಗೆ ಕಂಚಿನ ಪದಕ



ಮೈಸೂರು,ಅ.30(ಪಿಎಂ)- ರಾಜ್ಯದ ಅಗ್ರ ಶ್ರೇಯಾಂಕ ಬ್ಯಾಡ್ಮಿಂಟನ್ ಆಟಗಾರ್ತಿಯಲ್ಲಿ ಒಬ್ಬರಾದ ಮೈಸೂರು ನಗರದ ಬಿ.ದಿಯಾ ಭೀಮಯ್ಯ, ಅ.22ರಿಂದ 29ರವರೆಗೆ ಮಧುರೈನಲ್ಲಿ ನಡೆದ ಅಖಿಲ ಭಾರತ ಜೂನಿಯರ್ ರ‍್ಯಾಂಕಿಂಗ್ ಬ್ಯಾಡ್ಮಿಂಟನ್ ಪಂದ್ಯಾವಳಿಯ ಡಬಲ್ಸ್ ವಿಭಾಗದಲ್ಲಿ ಕಂಚಿನ ಪದಕ ಗೆದಿದ್ದಾರೆ.

ಹರಿಯಾಣದ ಬರುನಿ ಪರಸ್ವಾಲ್ ಅವರೊಂದಿಗೆ ಜೊತೆಗೂಡಿ ದಿಯಾ ಭೀಮಯ್ಯ, ಸೆಮಿಫೈನಲ್‌ನಲ್ಲಿ ಆಂಧ್ರ ಪ್ರದೇಶದ ಎ.ಅನನ್ಯಾ ಮತ್ತು ಅಂಜನಾ ಮಣಿಕಂದನ್ ವಿರುದ್ಧ 14-21, 21-18, 23-25 ಅಂತರದಲ್ಲಿ ಸೋತರು.

ನಗರದ ವಿದ್ಯಾಶ್ರಮ ಕಾಲೇಜಿನಲ್ಲಿ ದ್ವಿತೀಯ ಪಿಯುಸಿ ವ್ಯಾಸಂಗ ಮಾಡುತ್ತಿರುವ ದಿಯಾ, ಬೊಪ್ಪಂಡ ಬಿ.ಭೀಮಯ್ಯ ಮತ್ತು ಕೆ.ಕೆ.ಕುಸುಮಾ ಭೀಮಯ್ಯ ದಂಪತಿ ಪುತ್ರಿಯಾಗಿದ್ದಾರೆ. ದಿಯಾ, ಮೈಸೂರಿನ ಸ್ಪೋರ್ಟ್ಸ್ ಪಾರ್ಕ್‌ನಲ್ಲಿ ಕೋಚ್ ಅರುಣ್ ಪೆಮ್ಮಯ್ಯ ಮಾರ್ಗದರ್ಶನದಲ್ಲಿ ತರಬೇತಿ ಪಡೆಯುತ್ತಿದ್ದಾರೆ.

ದಿಯಾ ಅವರ ತಂದೆ ಬೊಪ್ಪಂಡ ಬಿ.ಭೀಮಯ್ಯ ಕೂಡ ಬ್ಯಾಡ್ಮಿಂಟನ್ ತರಬೇತುದಾರಾಗಿದ್ದು, ಇವರ ತಾಯಿ ಕೆ.ಕೆ.ಕುಸುಮಾ, ಮಾಜಿ ಅಂತಾರಾಷ್ಟ್ರೀಯ ಕ್ರೀಡಾಪಟು. ಇದೀಗ ಫಿಟ್ನೆಸ್ ತರಬೇತುದಾರರಾಗಿ ಸೇವೆ ಸಲ್ಲಿಸುತ್ತಿದ್ದಾರೆ.

ನ.8, ನಮ್ ಕನ್ನಡ ಹಬ್ಬ

ಮೈಸೂರು: ಸಖಿ ಫೌಂಡೇಶನ್, ಸೂರ್ಯ ಚಾರಿಟಬಲ್ ಟ್ರಸ್ಟ್ ಕನ್ನಡ ರಾಜ್ಯೋತ್ಸವದ ಅಂಗವಾಗಿ ನಮ್ ಕನ್ನಡ ಹಬ್ಬ ಎಂಬ ಕಾರ್ಯಕ್ರಮವನ್ನು ನ.8ರಂದು ಆಯೋಜಿಸಿದೆ. ಕಾರ್ಯಕ್ರಮದಲ್ಲಿ ಕನ್ನಡ ಚಲನಚಿತ್ರ ಗೀತೆಗಳಿಗೆ ಸಂಬಂಧಿಸಿದ 'ಥಟ್ ಅಂತ ಹಾಡಿ" ಹಾಗೂ ಕನ್ನಡ ಅಕ್ಷರದ "ಪದವಿಲಾಸ" ಎಂಬ ಲಿಖಿತ ಸ್ಪರ್ಧೆ ಇರಲಿದೆ. ಜೊತೆಗೆ ಅಖಿಲ ಭಾರತೀಯ ಸಾಹಿತ್ಯ ಪರಿಷದ್ ಕುವೆಂಪುನಗರ ಸಾಹಿತ್ಯಕೂಟದ ಸದಸ್ಯರಿಂದ 'ನಮ್ ಕನ್ನಡ ಮೇಷ್ಟ್ರು' ವಿಷಯದ ಕುರಿತು ಸಾಹಿತ್ಯ ಚಟುವಟಿಕೆ ಏರ್ಪಡಿಸಲಾಗಿದೆ. ಸ್ಪರ್ಧೆಯಲ್ಲಿ ಪಾಲ್ಗೊಳ್ಳಲು ಆಸಕ್ತರು 996479 0442 ಇಲ್ಲವೇ 8310 306882ಗೆ ಕರೆ ಮಾಡಿ ನೋಂದಾಯಿಸಿಕೊಳ್ಳಬಹುದು. ಎಲ್ಲಾ ಕಾರ್ಯಕ್ರಮಗಳು ಬೆಳಿಗ್ಗೆ 10.45ಕ್ಕೆ ರಾಮಕೃಷ್ಣನಗರದ ಜಯಲಕ್ಷ್ಮೀದೇವಿ ಪದವಿಪೂರ್ವ ಕಾಲೇಜಿನ ಆವರಣದಲ್ಲಿ ನಡೆಯಲಿದೆ.

ದೊಡ್ಡಾಲತ್ತೂರಲ್ಲಿ ಶಿಲಾಯುಗದ ಸಮಾಧಿ ನೆಲೆಗಳು ಪತ್ತೆ

ಮೈಸೂರು,ಅ.30(ಎಂಟಿವೈ)- ಹನೂರು ತಾಲೂಕಿನ ದೊಡ್ಡಾಲತ್ತೂರಲ್ಲಿ ನಡೆಸಿದ ಉತ್ಖನನ ವೇಳೆ ಬೃಹತ್ ಶಿಲಾಯುಗ ಸಮಾಧಿ ನೆಲೆಗಳು ಲಭಿಸಿದ್ದು, ಇದರಿಂದ ಅನೇಕ ಮಹತ್ವದ ಮಾಹಿತಿ ಬೆಳಕಿಗೆ ಬಂದಿವೆ ಎಂದು ಮೈಸೂರು ವಿಶ್ವವಿದ್ಯಾನಿಲಯ ಪ್ರಾಚೀನ ಇತಿಹಾಸ ಮತ್ತು ಪುರಾತತ್ವ ಅಧ್ಯಯನ ವಿಭಾಗದ ಪ್ರಾಧ್ಯಾಪಕಿ ಡಾ.ವಿ.ಶೋಭಾ ತಿಳಿಸಿದ್ದಾರೆ.

ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಬೆಂಗಳೂರಿನ ಮಿಥಿಕ್ ಸೊಸೈಟಿ ಸಹಯೋಗದಲ್ಲಿ ಮೈಸೂರು ವಿವಿ ಪ್ರಾಚೀನ ಇತಿಹಾಸ ಮತ್ತು ಪುರಾತತ್ವ ಅಧ್ಯಯನ ಸಂಸ್ಥೆ 2024ರ ಅಕ್ಟೋಬರ್‌ನಿಂದ 2025ರ ಫೆಬ್ರವರಿವರೆಗೆ ದೊಡ್ಡಾಲತ್ತೂರಲ್ಲಿ ಉತ್ಖನನ ನಡೆಸಲಾಯಿತು. ಈ ವೇಳೆ ಈ ಸ್ಥಳದಲ್ಲಿ ಬೃಹತ್ ಶಿಲಾಯುಗದ ಸಮಾಧಿಗಳು ಕಂಡು ಬಂದವು. ಇವು ಕ್ರಿಸ್ತಪೂರ್ವ 1500ರಿಂದ ಕ್ರಿಸ್ತಶಕ 300ರವರೆಗಿನ ಕಾಲದ್ದಾಗಿವೆ ಎಂದು ಗಮನಕ್ಕೆ ಬಂತು. ಕಬ್ಬಿಣದ ಕೊಡಲಿ, ಬಾಣದ ತುಂಡುಗಳು, ಕಬ್ಬಿಣದ ಗುರಾಣಿ, 2 ಶೂಲವಿರುವ ಆಯುಧಗಳೂ ಪತ್ತೆಯಾಗಿರುವುದು ಕುತೂಹಲಕ್ಕೆ ಕಾರಣವಾಗಿದೆ. ಮಡಿಕೆಗಳಲ್ಲಿ ಪತ್ತೆಯಾದ ಮನುಷ್ಯ ಹಾಗೂ ಪ್ರಾಣಿಗಳ ಮೂಳೆಗಳ ವಾಸ್ತವಿಕ ವರ್ಷ ತಿಳಿಯಲು ಪುಣೆಯ ಪ್ರಯೋಗಾಲಯಕ್ಕೆ ಕಳುಹಿಸಿದ್ದು, ವರದಿಗಾಗಿ ಕಾಯಲಾಗಿದೆ. ಈ ಭಾಗದಲ್ಲಿ ತೊಟ್ಟಿ ಸಮಾಧಿಗಳು ಹೆಚ್ಚಾಗಿ ಕಂಡು ಬಂದಿದ್ದು, ಸ್ಥಳೀಯ ಜಿಲ್ಲಾಡಳಿತ, ಸಂಬಂಧಿಸಿದ ಇಲಾಖೆಗಳು ಸಂರಕ್ಷಣೆಗೆ ಮುಂದಾಗಬೇಕು. ಇಲ್ಲದಿದ್ದರೆ ವ್ಯವಸಾಯಕ್ಕೆಂದು ಬಳಕೆ ಆಗಿ ಅಮೂಲ್ಯ ಸಾಕ್ಷಿಗಳು ನಾಶವಾಗುವ ಅಪಾಯವಿದೆ ಎಂದು ಹೇಳಿದರು.

ಇಂದಿನಿಂದ ಸಮುದಾಯ ಮೈಸೂರು ರಂಗೋತ್ಸವ



ಸಮುದಾಯ ಮೈಸೂರು ರಂಗೋತ್ಸವದ ಪೋಸ್ಟರ್ ಬಿಡುಗಡೆ ಮಾಡಲಾಯಿತು

ಮೈಸೂರು,ಅ.30(ಜಿಎ)-ಸಮುದಾಯ ಕರ್ನಾಟಕ ರಂಗ ತಂಡದ 50ನೇ ವರ್ಷದ ಸಂಭ್ರಮದ ಅಂಗವಾಗಿ ಅ.31ರಿಂದ ನ.2ರವರೆಗೆ ರಂಗಾಯಣದ ಕಿರುರಂಗ ಮಂದಿರದಲ್ಲಿ ಮನುಷ್ಯತ್ವದೆಡೆಗೆ ಸಮುದಾಯ-50 ಸಮುದಾಯ ಮೈಸೂರು ರಂಗೋತ್ಸವ ಆಯೋಜಿಸಲಾಗಿದೆ ಎಂದು ಹಿರಿಯ ರಂಗಕರ್ಮಿ ಜನಾರ್ಧನ್ (ಜನ್ನಿ) ತಿಳಿಸಿದರು.

ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಅ.31ರಂದು ಬೆಳಗ್ಗೆ 10 ಗಂಟೆಯಿಂದ ಸಂಜೆ 4ರವರೆಗೆ ನಡೆಯುವ ಕಲಾ ಶಿಬಿರಕ್ಕೆ ಕರ್ನಾಟಕ ಲಲಿತಕಲಾ ಅಕಾಡೆಮಿ ಮಾಜಿ ಅಧ್ಯಕ್ಷ ಎಂ.ಎಸ್. ಮೂರ್ತಿ ಚಾಲನೆ ನೀಡಲಿದ್ದಾರೆ. ಮುಖ್ಯ ಅತಿಥಿಗಳಾಗಿ ಕಲಾನಿಕೇತನ ಕಲಾ ಶಾಲೆಯ ಕೆ.ಸಿ.ಮಹದೇವಶೆಟ್ಟಿ, ರವಿ ವರ್ಮ ಕಲಾ ಶಾಲೆಯ ಶಿವಕುಮಾರ ಕೆಸರಮಡು, ಸಮುದಾಯ ಕರ್ನಾಟಕ ಉಪಾಧ್ಯಕ್ಷ ಬಿ.ಐ. ಈಳಿಗೇರ, ಮಂಜುಪ್ರಸಾದ್, ಕೆ.ಜಿ.ಎಫ್ ಜನಾರ್ಧನ್ ಪಾಲ್ಗೊಳ್ಳಲಿದ್ದಾರೆ ಎಂದರು.

ಅಂದು ಸಂಜೆ 5ಗಂಟೆಗೆ ಜನಪದ-ಜನಪರ ಗೀತೆ ಗಾಯನ ಆರಂಭವಾಗಲಿದೆ. ಸಂಜೆ 6ಗಂಟೆಗೆ ಕರ್ನಾಟಕ ನಾಟಕ ಅಕಾಡೆಮಿ ಮಾಜಿ ಅಧ್ಯಕ್ಷ ಪ್ರೊ.ಕೆ.ಮರುಳಸಿದ್ದಪ್ಪ ಸಮುದಾಯ ಮೈಸೂರು ರಂಗೋತ್ಸವವನ್ನು ಉದ್ಘಾಟಿಸಲಿದ್ದಾರೆ. ಪ್ರೊ.ಎಸ್.ಜಿ. ಸಿದ್ದರಾಮಯ್ಯ ಆಶಯ ನುಡಿ ಆಡಲಿದ್ದಾರೆ. ಇನ್ನಿತರರು ವೇದಿಕೆಯಲ್ಲಿರುವರು. ಈ ವೇಳೆ ಹಿರಿಯ ರಂಗಕರ್ಮಿ ರಾಮೇಶ್ವರಿ ವರ್ಮ, ಅಬ್ದುಲ್ ರಹಮಾನ್ ಪಾಷ ಮತ್ತು ರವೀಶ್ ಅವರಿಗೆ ರಂಗ ಗೌರವ ಸಲ್ಲಿಸಲಾಗುತ್ತದೆ. ನಂತರ 'ವಾರ್ಡ್ ನಂ.6' ನಾಟಕ ಪ್ರದರ್ಶನವಿದೆ ಎಂದು ತಿಳಿಸಿದರು.

ನ.1ರಂದು ಸಂಜೆ 5ಕ್ಕೆ ಜನಪದ ಗೀತ ಗಾಯನ, ಸಂಜೆ 6ಗಂಟೆಗೆ ಕ್ರಿಯಾ ಮಾಧ್ಯಮ ಹೊರ ತಂದಿರುವ 'ನಿರಂಜನ ಮರು ಓದು' ಸರಣಿ 4 ಪುಸ್ತಕಗಳನ್ನು ಬಿ.ಸುರೇಶ ಬಿಡುಗಡೆಗೊಳಿಸಲಿದ್ದಾರೆ. ಈ ವೇಳೆ ಎನ್.ಕೆ ವಸಂತ್, ಸಿ.ಬಸವಲಿಂಗಯ್ಯ, ಮೀನಾ, ಸಬಿಹಾ ಭೂಮಿಗೌಡ ಉಪಸ್ಥಿತರಿರಲಿದ್ದಾರೆ. ಈ ವೇಳೆ ಚ.ಸರ್ವಮಂಗಳ, ಓ.ಎಲ್.ನಾಗಭೂಷಣಸ್ವಾಮಿ, ಅಕ್ಮಲ್ ಪಾಷ, ಪ್ರೊ.ಕೆ.ಪಿ.ವಾಸುದೇವನ್ ಅವರಿಗೆ ರಂಗ ಗೌರವ ಸಲ್ಲಿಸಲಾಗುತ್ತದೆ. ನಂತರ ಬೂಕರ್ ಪ್ರಶಸ್ತಿ ಪುರಸ್ಕೃತರಾದ ಬಾನು ಮುಷ್ತಾಕ್ ಅವರ ಕಥೆ ಆಧಾರಿತ 'ಒಮ್ಮೆ ಹೆಣ್ಣಾಗು' ನಾಟಕ ಸವಿತಾ ರಾಣಿ ಅವರ ನಿರ್ದೇಶನದಲ್ಲಿ ಪ್ರದರ್ಶಿತವಾಗಲಿದೆ.

ನ.2ರಂದು ಬೆಳಗ್ಗೆ 10.30ಕ್ಕೆ ಕನ್ನಡ ರಂಗಭೂಮಿ-ಜನಪದ ಸಂಸ್ಕೃತಿ ಆಶಯ ಕುರಿತ ವಿಚಾರ ಸಂಕಿರಣ ಇರಲಿದೆ. ಕನ್ನಡ ಅಭಿವೃದ್ಧಿ ಪ್ರಾಧಿಕಾರದ ಸದಸ್ಯ ಟಿ.ಗುರುರಾಜ್ ಉದ್ಘಾಟಿಸುವರು. ವಿವಿಧ ಗೋಷ್ಠಿಗಳು ನಂತರ ಜರುಗಲಿವೆ. ಸಂಜೆ 5 ಗಂಟೆಗೆ ಜನಾಶಯ ಗೀತಗಾಯನ, ಸಂಜೆ 6 ಗಂಟೆಗೆ ಸಮಾರೋಪ ಸಮಾರಂಭ ನಡೆಯಲಿದ್ದು, ಮನೋಜ್ ವಾಮಂಜೂರು, ರತಿರಾವ್, ಕಾಳೇಗೌಡ ನಾಗವಾರ ಹಾಗೂ ಇನ್ನಿತರರು ಹಾಜರಿರುವರು. ಇದೇ ವೇಳೆ ಜನಮನ ಸಾಂಸ್ಕೃತಿಕ ಸಂಘಟನೆ ವತಿಯಿಂದ ಪಿ.ಲಂಕೇಶ್ ಕಥೆ ಆಧಾರಿತ 'ಕಲ್ಲು ಕರಗುವ ಸಮಯ' ನಾಟಕ ಪ್ರದರ್ಶನಗೊಳ್ಳಲಿದೆ ಎಂದು ವಿವರಿಸಿದರು.

ಸುದ್ದಿಗೋಷ್ಠಿಯಲ್ಲಿ ಕೆ.ಪಿ.ವಾಸುದೇವನ್, ಕೆ.ಆರ್.ಗೋಪಾಲಕೃಷ್ಣ, ರಾಜೇಶ್, ಮೈಮ್ ರಮೇಶ್ ಮತ್ತಿತರರು ಉಪಸ್ಥಿತರಿದ್ದರು.

ನ.4ರಿಂದ ಸುದರ್ಶನ ಕ್ರಿಯೆ ಶಿಬಿರ

ಮೈಸೂರು,ಅ.30-ಶ್ರೀ ಶ್ರೀ ರವಿ ಶಂಕರ್ ಗುರೂಜಿಯವರ ಆರ್ಟ್ ಆಫ್ ಲಿವಿಂಗ್ ವತಿಯಿಂದ ನ.4 ರಿಂದ 8ರವರೆಗೆ ಆರೋಗ್ಯಕರ ಜೀವನ, ಧ್ಯಾನ, ಯೋಗ, ಪ್ರಾಣಾಯಾಮ, ಸುದರ್ಶನ ಕ್ರಿಯೆಯನ್ನು ಕಲಿಸುವ ಶಿಬಿರವನ್ನು ಲಲಿತಾದ್ರಿಪುರ ರಸ್ತೆಯಲ್ಲಿರುವ ಆರ್ಟ್ ಆಫ್ ಲಿವಿಂಗ್ ಆಶ್ರಮದಲ್ಲಿ ಏರ್ಪಡಿಸಲಾಗಿದೆ. ಶಿಬಿರವು ಬೆಳಿಗ್ಗೆ 6ರಿಂದ 8.30 ಹಾಗೂ ಸಂಜೆ 6ರಿಂದ 8.30ರವರೆಗೆ ಎರಡು ಅವಧಿಯಲ್ಲಿ ಶಿಬಿರ ನಡೆಯಲಿದೆ. ಮಾಹಿತಿಗೆ 9480476825, 9483589825 ಸಂಪರ್ಕಿಸಬಹುದು.

ರಾಜ್ಯಪಾಲ ಗೆಹ್ಲೋಟ್ ಆಸ್ಪತ್ರೆಗೆ ದಾಖಲು; ಆರೋಗ್ಯ ವಿಚಾರಿಸಿದ ಸಿಎಂ ಸಿದ್ದರಾಮಯ್ಯ

ಬೆಂಗಳೂರು, ಅ.30- ರಾಜ್ಯಪಾಲ ಥಾವರ್‌ಚಂದ್ ಗೆಹ್ಲೋಟ್ ಅವರು ತೀವ್ರ ಜ್ವರ ಮತ್ತು ಬೆನ್ನು ನೋವಿನಿಂದ ಆಸ್ಪತ್ರೆಗೆ ದಾಖಲಾಗಿದ್ದಾರೆ ಎಂದು ರಾಜಭವನದ ಮೂಲಗಳು ಗುರುವಾರ ತಿಳಿಸಿವೆ.



ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಇಂದು ಮಣಿಪಾಲ್ ಆಸ್ಪತ್ರೆಗೆ ಭೇಟಿ ನೀಡಿ, ರಾಜ್ಯಪಾಲ ಥಾವರ್‌ಚಂದ್ ಗೆಹ್ಲೋಟ್ ಅವರ ಆರೋಗ್ಯ ವಿಚಾರಿಸಿದರು ಮತ್ತು ಅವರು ಶೀಘ್ರ ಗುಣಮುಖರಾಗಲಿ ಎಂದು ಹಾರೈಸಿದ್ದಾರೆ.

ಗೆಹ್ಲೋಟ್ ಅವರನ್ನು ಸೋಮವಾರ ಆಸ್ಪತ್ರೆಗೆ ದಾಖಲಿಸಲಾಗಿದೆ ಎಂದು ರಾಜಭವನದ ಮೂಲಗಳು ತಿಳಿಸಿವೆ. ಶುಕ್ರವಾರದೊಳಗೆ ರಾಜ್ಯಪಾಲರನ್ನು ಡಿಸ್ಚಾರ್ಜ್ ಮಾಡಲಾಗುತ್ತದೆ ಎಂದು ನಮಗೆ ತಿಳಿಸಿರುವುದಾಗಿ ಎಂದು ರಾಜಭವನದ ಹಿರಿಯ ಅಧಿಕಾರಿಯೊಬ್ಬರು ತಿಳಿಸಿದ್ದಾರೆ.

ಗೆಹ್ಲೋಟ್ ಇತ್ತೀಚಿಗೆ ತಮ್ಮ ತವರು ರಾಜ್ಯವಾದ ಮಧ್ಯಪ್ರದೇಶಕ್ಕೆ ತೆರಳಿದ್ದರು. ಅಲ್ಲಿ ಅವರು ಸರಣಿ ಕಾರ್ಯಕ್ರಮಗಳಲ್ಲಿ ಭಾಗವಹಿಸಿದ್ದರು. ಆಯಾಸದಿಂದಾಗಿ ಅವರಿಗೆ ಜ್ವರದ ಜೊತೆಗೆ ಬೆನ್ನು ನೋವು ಕಾಣಿಸಿಕೊಂಡಿರಬಹುದು ಎಂದು ಅವರು ಹೇಳಿದ್ದಾರೆ.

ದೇಶ - ವಿದೇಶ

ಮದುವೆಗೆ ಮೂರೇ ಆಭರಣ ಧರಿಸಲು ಪಂಚಾಯಿತಿ ಆದೇಶ!

ಡೆಹ್ರಾಡೂನ್: ಮದುವೆ ಮತ್ತು ಇತರ ಕಾರ್ಯಕ್ರಮಗಳಿಗೆ ಮಹಿಳೆಯರು ಮೂರಕ್ಕಿಂತ ಹೆಚ್ಚು ಚಿನ್ನದ ಆಭರಣಗಳನ್ನು ಧರಿಸುವುದನ್ನು ನಿರ್ಬಂಧಿಸಿ ಜಿಲ್ಲೆಯ ಕಂಧಾರ್ ಮತ್ತು ಇಂದ್ರಾಣಿ ಗ್ರಾಮಗಳ ಸ್ಥಳೀಯ ಪಂಚಾಯತ್‌ಗಳು ಆದೇಶ ಹೊರಡಿಸಿವೆ.



ಆದೇಶದ ಪ್ರಕಾರ, ಮದುವೆಗಳಲ್ಲಿ ಮಹಿಳೆಯರು ಮೂಗುತಿ, ಕಿವಿಯೋಲೆ ಮತ್ತು ಮಂಗಳಸೂತ್ರವನ್ನು ಮಾತ್ರ ಧರಿಸಲು ಅವಕಾಶವಿರುತ್ತದೆ. ನಿಯಮ ಉಲ್ಲಂಘಿಸಿದ್ದಲ್ಲಿ 50 ಸಾವಿರ ದಂಡ ವಿಧಿಸಲಾಗುತ್ತದೆ. ಒಂದೆಡೆ ಚಿನ್ನದ ಬೆಲೆ ಗಗನಕ್ಕೇರುತ್ತಿದೆ. ಮತ್ತೊಂದೆಡೆ ಸಂಪತ್ತನ್ನು ಪ್ರದರ್ಶಿಸುವ ಸಾಮಾಜಿಕ ಒತ್ತಡಕ್ಕೆ ಮಹಿಳೆಯರು ಒಳಗಾಗುತ್ತಿದ್ದಾರೆ. ಇದು ಕೌಟುಂಬಿಕ ಸಂಘರ್ಷಗಳು ಮತ್ತು ಆರ್ಥಿಕ ಒತ್ತಡಕ್ಕೆ ಕಾರಣವಾಗುತ್ತದೆ. ಈ ಅಸಮಾನತೆಯನ್ನು ಕಡಿಮೆ ಮಾಡುವ ಗುರಿಯನ್ನು ನಾವು ಹೊಂದಿದ್ದೇವೆ ಎಂದು ಕಂಧಾರ್ ಗ್ರಾಮದ ಮುಖಂಡ ಅರ್ಜುನ್ ಸಿಂಗ್ ತಿಳಿಸಿದ್ದಾರೆ. ಪಂಚಾಯತ್ ನಿರ್ಧಾರವನ್ನು ಸ್ವಾಗತಿಸಿರುವ ಮಹಿಳೆಯರು, ನಿಯಮದಲ್ಲಿನ ಅಸಮಾನತೆ ಬಗ್ಗೆ ಆಕ್ಷೇಪ ವ್ಯಕ್ತಪಡಿಸಿದ್ದಾರೆ.

ಚೀನಾ ಮೇಲಿನ ಟ್ಯಾರಿಫ್ ಶೇ.57ರಿಂದ 47ಕ್ಕೆ ಇಳಿಸಿದ ಟ್ರಂಪ್

ಸಿಯೋಲ್: ಚೀನಾ ಮೇಲೆ ಅಮೆರಿಕ ವಿಧಿಸುತ್ತಿರುವ ಶೇ.57ರಷ್ಟು ಟ್ಯಾರಿಫ್ ಅನ್ನು ಶೇ.47ಕ್ಕೆ ಇಳಿಸಲಾಗುವುದು ಎಂದು ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಹೇಳಿದ್ದಾರೆ.



ಆರು ವರ್ಷಗಳ ನಂತರ ದಕ್ಷಿಣ ಕೊರಿಯಾದ ಬುಸಾನ್‌ನಲ್ಲಿ ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್, ಚೀನಾ ಅಧ್ಯಕ್ಷ ಕ್ಸಿ ಜಿನ್‌ಪಿಂಗ್ ಅವರನ್ನ ಭೇಟಿಯಾಗಿ ದ್ವಿಪಕ್ಷೀಯ ಮಾತುಕತೆ ನಡೆಸಿದ್ದಾರೆ. ಎರಡು ದೇಶಗಳ ನಡುವೆ ಅಪರೂಪದ ಭೂಮಿಯ ನಿಕ್ಷೇಪಗಳ ಪೂರೈಕೆಗೆ ಒಪ್ಪಂದವಾಗಿದೆ. ಸಭೆಯ ನಂತರ ರಷ್ಯಾದಿಂದ ಕಚ್ಚಾತೈಲ ಪೂರೈಕೆ ನಡುವೆ ಚೀನಾದಿಂದ ಆಮದು ಮಾಡುವ ಸರಕುಗಳಿಗೆ ವಿಧಿಸಲಾಗುತ್ತಿರುವ ಶುಲ್ಕವನ್ನು 57% ನಿಂದ 47%ಗೆ ಕಡಿಮೆ ಮಾಡುವುದಾಗಿ ಟ್ರಂಪ್ ಘೋಷಿಸಿದ್ದಾರೆ. ಬಳಿಕ ಮಾತನಾಡಿದ ಅವರು, ಎರಡು ದೇಶಗಳ ನಡುವೆ ವ್ಯಾಪಾರ, ಸಹಕಾರದ ಬಗ್ಗೆ ಹಲವು ಮಹತ್ವದ ಒಪ್ಪಂದಗಳನ್ನು ಮಾಡಿಕೊಳ್ಳಲಾಗಿದೆ. ನಾವು ಒಬ್ಬರಿಗೊಬ್ಬರು ಚೆನ್ನಾಗಿ ಅರಿತಿದ್ದೇವೆ. ನಮಗೆ ಉತ್ತಮ ಸಂಬಂಧವಿದೆ. ಜಿನ್‌ಪಿಂಗ್ ಬಹಳ ಕಠಿಣ ಸಂಧಾನಕಾರರು. ಅವರು ಒಂದು ದೊಡ್ಡ ದೇಶದ ಶ್ರೇಷ್ಠ ನಾಯಕ. ನಾವು ಬಹಳ ಸಮಯದವರೆಗೆ ಉತ್ತಮ ಸಂಬಂಧ ಹೊಂದಲಿದ್ದೇವೆ ಎಂದು ತಿಳಿಸಿದ್ದಾರೆ.

ಪತ್ನಿಗೆ ದೆವ್ವ ಹಿಡಿದಿದೆ ಎಂದು ಬಿಸಿ ಸಾಂಬಾರ್ ಸುರಿದ ಪತಿ

ಕೊಲ್ಲಮ್: ಕೇರಳದ ಕೊಲ್ಲಮ್ ಜಿಲ್ಲೆಯಲ್ಲಿ ಪತ್ನಿಯ ಮೇಲೆ ವ್ಯಕ್ತಿಯೊಬ್ಬ ಬಿಸಿ ಸಾಂಬಾರ್ ಸುರಿದಿರುವ ಘಟನೆ ನಡೆದಿದೆ. ಚಡಯಮಂಗಲಂ ಸಮೀಪದ ವೈಕ್ಕಲ್‌ನ ರೆಜಿಲಾ ಗಫೂರ್ (36) ಗಾಯಗೊಂಡ ಮಹಿಳೆ. ಸದ್ಯ ಇವರನ್ನು ಆಸ್ಪತ್ರೆಗೆ ದಾಖಲಿಸಲಾಗಿದೆ. ಆಕೆಯ ಪತಿ ಸಜೀರ್ ತಲೆಮರೆಸಿಕೊಂಡಿದ್ದಾನೆ.

ಎಫ್‌ಐಆರ್ ಪ್ರಕಾರ, ಬುಧವಾರ ಬೆಳಿಗ್ಗೆ 10 ಗಂಟೆ ಸುಮಾರಿಗೆ ಘಟನೆ ನಡೆದಿದೆ. ಸಜೀರ್, ಪತ್ನಿಯ ಬಳಿ ತಲೆಕೂದಲು ಹರಡಿಕೊಂಡು ತನ್ನ ಎದುರು ಕುಳಿತುಕೊಳ್ಳುವಂತೆ ಹೇಳಿದ್ದಾನೆ. ನಂತರ ಬೂದಿ ಹಚ್ಚಿಕೊಳ್ಳುವಂತೆ ಹೇಳಿ, ಮಾಂತ್ರಿಕನೊಬ್ಬ ನೀಡಿದ್ದ ಲಾಕೆಟ್ ಒಂದನ್ನು ಕಟ್ಟಿಕೊಳ್ಳುವಂತೆ ಹೇಳಿದ್ದಾನೆ. ಇದಕ್ಕೆ ಆಕೆ ಒಪ್ಪಿಕೊಳ್ಳದ ಕಾರಣ ಅಡುಗೆ ಮನೆಯಲ್ಲಿದ್ದ ಬಿಸಿ ಸಾಂಬಾರ್ ತಂದು ಮುಖದ ಮೇಲೆ ಸುರಿದಿದ್ದಾನೆ. ಮಹಿಳೆ ಕಿರುಚಾಟ ಕೇಳಿ ಅಕ್ಕಪಕ್ಕದವರು ಬಂದು ನೋಡಿದಾಗ, ಆಕೆಯ ಸ್ಥಿತಿ ಕಂಡು ಆಸ್ಪತ್ರೆಗೆ ದಾಖಲಿಸಿದ್ದಾರೆ. ತನ್ನ ಪತ್ನಿಗೆ ದೆವ್ವ ಹಿಡಿದಿದೆ ಎಂದು ಸಜೀರ್, ಈ ಹಿಂದೆ ಹಲವಾರು ಬಾರಿ ಆಕೆ ಮೇಲೆ ಹಲ್ಲೆ ನಡೆಸಿದ್ದ. ಬಳಿಕ ಮಾಂತ್ರಿಕನನ್ನು ಭೇಟಿಯಾಗಿ ಸಲಹೆ ಕೇಳಲು ಆರಂಭಿಸಿದ್ದ. ಸದ್ಯ ಆತನ ವಿರುದ್ಧ ಪೊಲೀಸರು ದೂರು ದಾಖಲಿಸಿಕೊಂಡಿದ್ದು, ಪತ್ತೆ ಕಾರ್ಯ ಆರಂಭಿಸಿದ್ದಾರೆ.

ಮೆಲಿಸ್ಸಾ ಚಂಡಮಾರುತ: ಪ್ರವಾಹಕ್ಕೆ 25 ಬಲಿ

ಹೈಟಿ: ಮೆಲಿಸ್ಸಾ ಚಂಡಮಾರುತ ಹೈಟಿ ಜನಜೀವನವನ್ನು ಅಕ್ಷರಶಃ ಅಸ್ತವ್ಯಸ್ತಗೊಳಿಸಿದ್ದು, ದಕ್ಷಿಣ ಕರಾವಳಿ ಪಟ್ಟಣವಾದ ಪೆಟಿಟ್ ಗೋವ್‌ನಲ್ಲಿ ಭಾರೀ ಪ್ರವಾಹಕ್ಕೆ 25 ಮಂದಿ ಬಲಿಯಾಗಿದ್ದಾರೆ.



ಲಾ ಡಿಗ್ ನದಿಯ ಪ್ರವಾಹದಿಂದ ಹಲವು ಮನೆಗಳು ಕೊಚ್ಚಿಕೊಂಡು ಹೋಗಿವೆ. ಹಲವು ಮನೆಗಳು ಕುಸಿದಿದ್ದು, ಅವಶೇಷಗಳ ಅಡಿಯಲ್ಲಿ ಸಿಕ್ಕಿಹಾಕಿಕೊಂಡು ದುರಂತ ಸಂಭವಿಸಿದೆ ಎಂದು ಮೇಯರ್ ಜೀನ್ ಬೆಟ್ರಂಡ್ ಸಬ್ರೀಮ್ ಹೇಳಿದ್ದಾರೆ. ಭಾರಿ ಪ್ರವಾಹದಿಂದ ಜನ ಕಂಗೆಟ್ಟಿದ್ದರೆ ಹೈಟಿ ನಾಗರಿಕ ರಕ್ಷಣಾ ಏಜೆನ್ಸಿಯ ಒಬ್ಬ ಅಧಿಕಾರಿ ಮಾತ್ರ ಘಟನಾ ಸ್ಥಳದಲ್ಲಿದ್ದು, ಸಂತ್ರಸ್ತರ ಸ್ಥಳಾಂತರ ಕಾರ್ಯಾಚರಣೆಯಲ್ಲಿದ್ದರು ಎಂದು ಹೇಳಲಾಗಿದೆ.

ಅಪಾಯಕಾರಿ ಚಂಡಮಾರುತ ಜಮೈಕಾ ಪ್ರದೇಶವನ್ನು ಅಪ್ಪಳಿಸಿದ್ದು, ಗಂಟೆಗೆ 185 ಕಿಲೋಮೀಟರ್ ವೇಗದಲ್ಲಿ ಗಾಳಿ ಬೀಸುತ್ತಿದೆ. ಇದು ಅಟ್ಲಾಂಟಿಕ್ ಪ್ರದೇಶದಲ್ಲಿ ಬೀಸಿದ ಬಲವಾದ ಗಾಳಿಯಾಗಿದೆ. ಚಂಡಮಾರುತ ಕ್ಯೂಬಾದತ್ತ ಮುಖಮಾಡಿದ್ದು, ಇಡೀ ಕೆರೇಬಿಯನ್ ಪ್ರದೇಶದಲ್ಲಿ ವ್ಯಾಪಕ ಹಾನಿಗೆ ಕಾರಣವಾಗಿದೆ. ದ್ವೀಪರಾಷ್ಟ್ರದ ಶೇ.77ರಷ್ಟು ಭಾಗದಲ್ಲಿ ವಿದ್ಯುತ್ ಸಂಪರ್ಕ ಕಡಿತದಿಂದ ಕಗ್ಗತ್ತಲು ಆವರಿಸಿದೆ ಎಂದು ಶಿಕ್ಷಣ ಸಚಿವ ಡನಾ ಮೋರಿಸ್ ಡಿಕ್ಸನ್ ಹೇಳಿದ್ದಾರೆ.


ಪೊಲೀಸರಿಗೆ ಹೆದರಿ ನದಿಗೆ ಹಾರಿ ಪ್ರಾಣಬಿಟ್ಟ ಜೂಜುಕೋರ: ಮೂವರು ಅಮಾನತು

ಶಹಜಹಾನ್‌ಪುರ: ಪೊಲೀಸರು ಜೂಜು ಅಡ್ಡ ಮೇಲೆ ದಾಳಿ ನಡೆಸುವ ಸಂದರ್ಭದಲ್ಲಿ ಅವರಿಂದ ತಪ್ಪಿಸಿಕೊಳ್ಳಲು ನೀರಿಗೆ ಹಾರಿ ಜೂಜುಕೋರನೊಬ್ಬ ಪ್ರಾಣ ಬಿಟ್ಟಿರುವ ಘಟನೆ ಉತ್ತರ ಪ್ರದೇಶದ ಶಹಜಹಾನ್‌ಪುರದಲ್ಲಿ ನಡೆದಿದೆ. ಘಟನೆಗೆ ಸಂಬಂಧಿಸಿದಂತೆ ಮೂವರು ಕಾನ್‌ಸ್ಟೆಬಲ್‌ಗಳನ್ನು ಅಮಾನತುಗೊಳಿಸಲಾಗಿದೆ. ಜೂಜು ಅಡ್ಡೆ ಮೇಲೆ ದಾಳಿ ನಡೆಸಲು ಬಂದಿದ್ದ ಪೊಲೀಸರನ್ನು ನೋಡಿ ಭಯಪಟ್ಟು 6 ಮಂದಿ ಕೊತ್ವಾಲಿ ಠಾಣೆ ವ್ಯಾಪ್ತಿಯ ಖನ್ನೌತ್ ನದಿಗೆ ಹಾರಿದ್ದಾರೆ ಎಂದು ಪೊಲೀಸ್ ವರಿಷ್ಠಾಧಿಕಾರಿ ರಾಜೇಶ್ ದ್ವಿವೇದಿ ತಿಳಿಸಿದ್ದಾರೆ. ಐವರು ಸುರಕ್ಷಿತವಾಗಿ ಹೊರಬರುವಲ್ಲಿ ಯಶಸ್ವಿಯಾದರೆ, ಜೂಜುಕೋರರಿಗೆ ಸಾಲ ನೀಡಲು ಅಲ್ಲಿಗೆ ಹೋಗಿದ್ದ ತಿವಾರಿ (28) ಎಂದು ಗುರುತಿಸಲಾದ ಒಬ್ಬ ವ್ಯಕ್ತಿ ನೀರಿನಲ್ಲಿ ಮುಳುಗಿ ಸಾವನ್ನಪ್ಪಿದ್ದಾನೆ ಎಂದು ಎಸ್ಪಿ ತಿಳಿಸಿದ್ದಾರೆ. ಘಟನೆ ನಂತರ, ಮೃತರ ಕುಟುಂಬ ಸದಸ್ಯರು ತಡರಾತ್ರಿ ಕೆರುಗಂಜ್ ರಸ್ತೆಯಲ್ಲಿ ಪ್ರತಿಭಟನೆ ನಡೆಸಿದ್ದಾರೆ. ಕಾನ್‌ಸ್ಟೆಬಲ್‌ಗಳಾದ ಪಂಕಜ್ ಕುಮಾರ್, ರಾಜೇಶ್‌ಕುಮಾರ್ ಮತ್ತು ಅಮನ್ ಅವರನ್ನು ಅಮಾನತುಗೊಳಿಸಿ, ತನಿಖೆಗೆ ಆದೇಶಿಸಲಾಗಿದೆ.



ಇಂದು ಸರ್ದಾರ್ ವಲ್ಲಭಬಾಯಿ ಪಟೇಲ್ ಜನ್ಮ ದಿನದ ಅಂಗವಾಗಿ 'ಏಕತಾ ಯಾತ್ರೆ'

ಮಡಿಕೇರಿ,ಅ.30– 'ಉಕ್ಕಿನ ಮನುಷ್ಯ' ಸರ್ದಾರ್ ವಲ್ಲಭಭಾಯಿ ಪಟೇಲ್ ಅವರ



ಜನ್ಮ ದಿನವನ್ನು ರಾಷ್ಟ್ರೀಯ ಏಕತಾ ದಿನವನ್ನಾಗಿ ಅ.31 ರಂದು ಆಚರಿಸಲಾಗುತ್ತಿದ್ದು, ಕೊಡಗು ಜಿಲ್ಲಾ ಬಿಜೆಪಿ ವತಿಯಿಂದ ಶುಕ್ರವಾರ ಮಡಿಕೇರಿಯಲ್ಲಿ 'ಏಕತಾ ಯಾತ್ರೆ' ನಡೆಯಲಿದೆ ಎಂದು ಪಕ್ಷದ ಜಿಲ್ಲಾಧ್ಯಕ್ಷ ನಾಪಂಡ ರವಿ ಕಾಳಪ್ಪ ತಿಳಿಸಿದ್ದಾರೆ.

ಶುಕ್ರವಾರ ಬೆಳಿಗ್ಗೆ 10 ಗಂಟೆಗೆ ನಗರದ ಫೀ.ಮಾ.ಕೆ.ಎಂ.ಕಾರ್ಯಪ್ಪ ವೃತ್ತದಿಂದ ಜನರಲ್ ತಿಮ್ಮಯ್ಯ ವೃತ್ತದವರೆಗೆ 'ಏಕತಾ ಯಾತ್ರೆ' ನಡೆಸಲಾಗುವುದು. ಆ ಮೂಲಕ ರಾಷ್ಟ್ರದ ಏಕತೆಗೆ ಸರ್ದಾರ್ ವಲ್ಲಭಭಾಯಿ ಪಟೇಲ್ ಅವರು ನೀಡಿದ ಕೊಡುಗೆಯನ್ನು ಸ್ಮರಿಸಲಾಗುತ್ತದೆ ಮತ್ತು ಅವರಿಗೆ ಗೌರವ ಸಲ್ಲಿಸಲಾಗುತ್ತದೆ ಎಂದು ಹೇಳಿದ್ದಾರೆ.

ಜಿಲ್ಲಾ ಬಿಜೆಪಿಯ ಎಲ್ಲಾ ಪದಾಧಿಕಾರಿಗಳು, ವಿಧಾನಪರಿಷತ್ ಸದಸ್ಯರು, ಮಾಜಿ ಶಾಸಕರುಗಳು, ನಗರಸಭಾ ಸದಸ್ಯರು, ಪಕ್ಷದ ಎಲ್ಲಾ ಘಟಕಗಳ ಪ್ರಮುಖರು, ಕಾರ್ಯಕರ್ತರು ಹಾಗೂ ಸಾರ್ವಜನಿಕರು 'ಏಕತಾ ಯಾತ್ರೆ'ಯಲ್ಲಿ ಪಾಲ್ಗೊಳ್ಳಲಿದ್ದಾರೆ ಎಂದು ಮಾಹಿತಿ ನೀಡಿದ್ದಾರೆ.

ಕಾಳು ಮೆಣಸು ಕಳವು ಮಾಡಿದ್ದ ನಾಲ್ವರ ಸೆರೆ



ಮಡಿಕೇರಿ,ಅ.30– ಲಕ್ಷಾಂತರ ರೂ. ಮೌಲ್ಯದ ಕಾಳು ಮೆಣಸು ಕಳ್ಳತನ ಮಾಡಿದ್ದ ನಾಲ್ವರನ್ನು ಮಾಲು ಸಮೇತ ಸೋಮವಾರಪೇಟೆ ಪೊಲೀಸರು ಬಂಧಿಸಿದ್ದಾರೆ.

ಸೋಮವಾರಪೇಟೆ ನಿವಾಸಿ ಸುಮಂತ್, ಕಿಬೆಟ್ಟ ಗ್ರಾಮದ ಕೀರ್ತಿ, ಕೊಣನೂರು ಗ್ರಾಮದ ಮಣಿಕಂಠ ಹಾಗೂ ಕೆ.ಆರ್.ಪೇಟೆಯ ನಿವಾಸಿ ಸಚಿನ್ ಬಂಧಿತ ಆರೋಪಿಗಳು. ಇತ್ತೀಚೆಗೆ ಕಾಳು ಮೆಣಸು ಕಳ್ಳತನದ 2 ಪ್ರತ್ಯೇಕ ಪ್ರಕರಣಗಳು ಸೋಮವಾರಪೇಟೆ ಪೊಲೀಸ್ ಠಾಣೆಯಲ್ಲಿ ದಾಖಲಾಗಿತ್ತು. ಪ್ರಕರಣದ ಕುರಿತು ತನಿಖೆ ಕೈಗೊಂಡ ಪೊಲೀಸರು ಆರೋಪಿಗಳ ಸಹಿತ 2.4 ಲಕ್ಷ ರೂ. ಮೌಲ್ಯದ 360 ಕೆ.ಜಿ ಕಾಳು ಮೆಣಸು ಮತ್ತು ಕಳ್ಳತನಕ್ಕೆ ಬಳಸಿದ್ದ ಗೂಡ್ಸ್ ವಾಹನವನ್ನು ವಶಪಡಿಸಿಕೊಂಡಿದ್ದು ಮುಂದಿನ ಕಾನೂನು ಕ್ರಮ ಕೈಗೊಂಡಿದ್ದಾರೆ.

ಇಂದು ಸ್ವಾತಂತ್ರ್ಯ ಹೋರಾಟಗಾರ ಸುಬೇದಾರ್ ಗುಡ್ಡೆಮನೆ ಅಪ್ಪಯ್ಯಗೌಡರ ಸಂಸ್ಮರಣಾ ದಿನಾಚರಣೆ

ಮಡಿಕೇರಿ, ಅ.30– ಜಿಲ್ಲಾಡಳಿತ, ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಕರ್ನಾಟಕ ಅರೆಭಾಷೆ ಸಂಸ್ಕೃತಿ ಮತ್ತು ಸಾಹಿತ್ಯ ಅಕಾಡೆಮಿಯ ಆಶ್ರಯದೊಂದಿಗೆ ಅ.31 ರಂದು ಬೆಳಗ್ಗೆ 9.30 ಗಂಟೆಗೆ ಗುಡ್ಡೆಮನೆ ಅಪ್ಪಯ್ಯ ಗೌಡರ ಸ್ಮಾರಕ ಫೀಲ್ಡ್ ಮಾರ್ಷಲ್ ಕಾರ್ಯಪ್ಪ ವೃತ್ತದ ಬಳಿ ಸ್ವಾತಂತ್ರ್ಯ ಹೋರಾಟಗಾರ ಸುಬೇದಾರ್ ಗುಡ್ಡೆಮನೆ ಅಪ್ಪಯ್ಯ ಗೌಡರ ಸಂಸ್ಮರಣಾ ದಿನಾಚರಣೆ ಹಾಗೂ ಕೋಟೆ ಆವರಣದಲ್ಲಿ ಸಭಾ ಕಾರ್ಯಕ್ರಮ ನಡೆಯಲಿದೆ.

ಕೊಡಗು ಜಿಲ್ಲಾ ಉಸ್ತುವಾರಿ ಸಚಿವರಾದ ಎನ್.ಎಸ್ ಭೋಸರಾಜು, ಕರ್ನಾಟಕ ಅರೆಭಾಷೆ ಸಂಸ್ಕೃತಿ ಮತ್ತು ಸಾಹಿತ್ಯ ಅಕಾಡೆಮಿ ಅಧ್ಯಕ್ಷ ಸದಾನಂದ ಮಾವಜಿ, ಇತರರು ಪಾಲ್ಗೊಳ್ಳಲಿದ್ದಾರೆ.



ಟಾಟು ಬಿದ್ದಪ್ಪ ನಿಧನ

ನಾಪೋಕ್ಲು, ಅ.30– ಬಲ್ಲಮಾವಟಿ ಗ್ರಾಮ ಪಂಚಾಯಿತಿಯ ಪೇರೂರು ಗ್ರಾಮ ನಿವಾಸಿ ತಟ್ಟಂಡ ಮಾದಪ್ಪ ಅವರ ಪುತ್ರ ಟಾಟು ಬಿದ್ದಪ್ಪ (44) ಅನಾರೋಗ್ಯದಿಂದ ಗುರುವಾರ ನಿಧನರಾದರು. ಮೃತರು ತಂದೆ ತಟ್ಟಂಡ ಮಾದಪ್ಪ, ಪತ್ನಿ ಮೌನ, ಪುತ್ರ, ಪುತ್ರಿ ಸೇರಿದಂತೆ ಬಂಧು ಮಿತ್ರರನ್ನು ಅಗಲಿದ್ದಾರೆ.

ಮೃತರ ಅಂತ್ಯಕ್ರಿಯೆ ತಟ್ಟಂಡ ಕುಟುಂಬಸ್ಥರ ರುದ್ರ ಭೂಮಿಯಲ್ಲಿ ಗುರುವಾರ ನೆರವೇರಿಸಲಾಯಿತು.

ವಿದ್ಯಾರ್ಥಿ ನಿಲಯಗಳಿಗೆ ರೆಫ್ರಿಜರೇಟರ್, ವಾಟರ್ ಫಿಲ್ಟರ್, ವಿದ್ಯಾರ್ಥಿಗಳಿಗೆ ಲ್ಯಾಪ್ ಟಾಪ್ ವಿತರಿಸಿದ ಶಾಸಕರು

ಉನ್ನತ ವ್ಯಾಸಂಗ ಮಾಡಿ ಮುಖ್ಯವಾಹಿನಿಗೆ ಬರಲು ಕರೆ

ಮಡಿಕೇರಿ,ಅ.30– ವಿದ್ಯಾರ್ಥಿಗಳಿಗೆ ಅನುಕೂಲವಾಗುವ ನಿಟ್ಟಿನಲ್ಲಿ ರಾಜ್ಯ ಸರಕಾರ ಅನೇಕ ಸವಲತ್ತುಗಳನ್ನು ಒದಗಿಸುತ್ತಿದೆ. ಇದನ್ನು ಸಮರ್ಪಕವಾಗಿ ಬಳಸಿಕೊಂಡು ಎಲ್ಲ ವಿದ್ಯಾರ್ಥಿಗಳು ಉನ್ನತ ವಿದ್ಯಾಭ್ಯಾಸ ಮಾಡಿ ಸಮಾಜದ ಮುಖ್ಯ ವಾಹಿನಿಗೆ ಬರುವಂತಾಗಬೇಕು ಎಂದು ಮುಖ್ಯಮಂತ್ರಿಗಳ ಕಾನೂನು ಸಲಹೆಗಾರರು ವಿರಾಜಪೇಟೆ ಕ್ಷೇತ್ರ ಶಾಸಕ ಅಜ್ಜಿಕುಟ್ಟಿರ ಎಸ್.ಪೊನ್ನಣ್ಣ ಕರೆ ನೀಡಿದ್ದಾರೆ.

ವಿರಾಜಪೇಟೆ ಪುರಸಭೆ ವತಿಯಿಂದ ಮುಖ್ಯಮಂತ್ರಿಗಳ ಅಮೃತ್ ನಗರೋತ್ಥಾನ ಯೋಜನೆಯ 4ನೇ ಹಂತದಡಿ ಪರಿಶಿಷ್ಟ ಪಂಗಡದ ವಿದ್ಯಾರ್ಥಿ ನಿಲಯಕ್ಕೆ ರೆಫ್ರಿಜರೇಟರ್, ವಾಟರ್ ಫಿಲ್ಟರ್ ಮತ್ತು ವಿದ್ಯಾರ್ಥಿಗಳಿಗೆ ಲ್ಯಾಪ್ ಟಾಪ್ ಸೇರಿದಂತೆ ಕಚೇರಿ ಬಳಕೆ ಸಾಮಗ್ರಿಗಳನ್ನು ಶಾಸಕರು ಎ.ಎಸ್.ಪೊನ್ನಣ್ಣ ವಿತರಿಸಿದರು.

ಶಾಸಕರ ಗೃಹ ಕಚೇರಿಯಲ್ಲಿ ಸಾಮಗ್ರಿ ವಿತರಣಾ ಕಾರ್ಯಕ್ರಮದಲ್ಲಿ ಪಾಲ್ಗೊಂಡು ವಿದ್ಯಾರ್ಥಿಗಳಿಗೆ ಶುಭ ಕೋರಿ ಮಾತನಾಡಿದ ಶಾಸಕರು, ರಾಜ್ಯ ಸರಕಾರದಿಂದ ಅನೇಕ ಸವಲತ್ತುಗಳನ್ನು ವಿದ್ಯಾರ್ಥಿಗಳಿಗೆ ಒದಗಿಸಲಾಗುತ್ತಿದ್ದು, ಇದನ್ನು ಸಮರ್ಪಕವಾಗಿ ಬಳಸಿಕೊಳ್ಳಬೇಕು. ಎಲ್ಲಾ ವಿದ್ಯಾರ್ಥಿಗಳು ಉನ್ನತ ವಿದ್ಯಾಭ್ಯಾಸ ಪಡೆದು ಸಮಾಜದ ಮುಖ್ಯವಾಹಿನಿಗೆ ಬರಬೇಕು ಎಂದು ಕರೆ ನೀಡಿದರು. ಇಂಗ್ಲಿಷ್ ಭಾಷೆಯನ್ನು ಕಲಿಯಬೇಕು. ಆದರೆ ಕನ್ನಡ ನಮ್ಮ ಮಾತೃ ಭಾಷೆಯಾಗಬೇಕು ಎಂದು ಕಿವಿಮಾತನ್ನು ಹೇಳಿದರು.



ಪರಿಶಿಷ್ಟ ಪಂಗಡದ ವಿದ್ಯಾರ್ಥಿಗಳಿಗೆ ಲ್ಯಾಪ್ ಟಾಪ್‌ಗಳನ್ನು ಶಾಸಕ ಪೊನ್ನಣ್ಣ ವಿತರಿಸಿದರು.

ಪುರಸಭೆ ಅಧ್ಯಕ್ಷೆ ಮನೆಯಪಂಡ ದೇಚಮ್ಮ ಕಾಳಪ್ಪ ಮಾತನಾಡಿ, ಶಾಸಕರ ವಿಶೇಷ ಮುತುವರ್ಜಿಯಿಂದ ರಾಜ್ಯ ಸರಕಾರ ವಿರಾಜಪೇಟೆ ಪುರಸಭೆಗೆ ಹೆಚ್ಚಿನ ಅನುದಾನ ಒದಗಿಸಿದೆ. ಪರಿಶಿಷ್ಟ ಜಾತಿ ಮತ್ತು ಪಂಗಡದ ವಿದ್ಯಾರ್ಥಿ ನಿಲಯಕ್ಕೆ ವಿವಿಧ ಸಾಮಾಗ್ರಿಗಳನ್ನು ಒದಗಿಸಲಾಗಿದ್ದು, ಇದನ್ನು ಸಮರ್ಪಕವಾಗಿ ಬಳಸುವಂತಾಗಬೇಕು ಎಂದರು.

ಈ ಸಂದರ್ಭ ಉಪಾಧ್ಯಕ್ಷೆ ಫಸಿಯಾ ತಬ್ಸುಂ, ಪುರಸಭೆ ಮುಖ್ಯಾಧಿಕಾರಿ ಪಿ.ಕೆ. ನಾಚಪ್ಪ, ಪರಿಸರ ಅಭಿಯಂತರ ರೀತು ಸಿಂಗ್, ಪುರಸಭೆ ಸದಸ್ಯರುಗಳಾದ ಎಸ್.ಹೆಚ್. ಮತೀನ್, ಮುಹಮ್ಮದ್ ರಾಫಿ, ರಾಜೇಶ್ ಪದ್ಮನಾಭ, ವಿರಾಜಪೇಟೆ ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಪಟ್ಟಡ ರಂಜಿ ಪೂಣಚ್ಚ, ಅಗಷ್ಟಿನ್ ಬೆನ್ನಿ, ಹಮೀದ್, ಪುರಸಭೆ ಅಧಿಕಾರಿಗಳು, ಸಮಾಜ ಕಲ್ಯಾಣ ಇಲಾಖೆಯ ಅಧಿಕಾರಿಗಳು, ಪರಿಶಿಷ್ಟ ಜಾತಿ ಮತ್ತು ಪಂಗಡದ ವಿದ್ಯಾರ್ಥಿ ನಿಲಯದ ಕಚೇರಿ ಸಿಬ್ಬಂದಿಗಳು ಉಪಸ್ಥಿತರಿದ್ದರು.

ನ.5, ಭಾಗಮಂಡಲದಲ್ಲಿ ಕಾವೇರಿ ಆರತಿ

ನಾಪೋಕ್ಲು: ಭಾಗಮಂಡಲದ ವಿಶ್ವ ಹಿಂದು ಪರಿಷತ್ ವತಿಯಿಂದ ನ.5 ರಂದು ಸಂಜೆ 5 ಗಂಟೆಗೆ ಭಾಗಮಂಡಲದ ಕಾವೇರಿ,ಕನ್ನಿಕೆ ಹಾಗೂ ಸುಜ್ಯೋತಿ ನದಿಗಳ ತ್ರಿವೇಣಿ ಸಂಗಮದಲ್ಲಿ ಕಾವೇರಿ ಆರತಿಯನ್ನು ಆಯೋಜಿಸಲಾಗಿದೆ.

ಆ ದಿನ ಭಜನೆ, ವೇದ ಘೋಷ ಹಾಗೂ ಕಾವೇರಮ್ಮನಿಗೆ ಆರತಿ ನಡೆಯಲಿದೆ . ಮುಖ್ಯ ಅತಿಥಿಯಾಗಿ ವಿಭು ಅಕಾಡೆಮಿಯ ಸಂಸ್ಥಾಪಕ ಅಧ್ಯಕ್ಷೆ ಡಾ. ಆರತಿ ವಿ.ಜಿ ಪಾಲ್ಗೊಳ್ಳಲಿದ್ದಾರೆ ವಿಶ್ವ ಹಿಂದೂ ಪರಿಷತ್ತಿನ ಕ್ಷೇತ್ರೀಯ ಸತ್ಸಂಗ ಪ್ರಮುಖ ಮಹಾಬಲೇಶ್ವರ ಹೆಗಡೆ ಉಪಸ್ಥಿತರಿರುವರು. ಹೆಚ್ಚಿನ ಸಂಖ್ಯೆಯಲ್ಲಿ ಭಗವತ್ ಭಕ್ತರು ಈ ಕಾರ್ಯಕ್ರಮದಲ್ಲಿ ಪಾಲ್ಗೊಂಡು ಯಶಸ್ಸಿಗೊಳಿಸಬೇಕಾಗಿ ಪರಿಷತ್ತು ಪತ್ರಿಕಾ ಪ್ರಕಟಣೆಯಲ್ಲಿ ತಿಳಿಸಿದೆ.

ಇಂದು ವಿಶ್ವ ಪಾರ್ಶ್ವವಾಯು ದಿನ

ಮಡಿಕೇರಿ: ವಿಶ್ವ ಪಾರ್ಶ್ವವಾಯು ದಿನ ಪ್ರಯುಕ್ತ ಅ.31 ರಂದು ಬೆಳಗ್ಗೆ 9 ಗಂಟೆಗೆ ನಗರದ ನಗರಸಭೆ ಸಭಾಂಗಣದಲ್ಲಿ 'ವಿಶ್ವ ಪಾರ್ಶ್ವವಾಯು ದಿನ' ಕಾರ್ಯಕ್ರಮ ನಡೆಯಲಿದೆ. ಗಣ್ಯರು ಪಾಲ್ಗೊಳ್ಳಲಿದ್ದಾರೆ ಎಂದು ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣಾಧಿಕಾರಿ ಡಾ.ಸತೀಶ್ ಕುಮಾರ್ ತಿಳಿಸಿದ್ದಾರೆ.

ತಲಕಾವೇರಿ ದೇವಾಲಯದ ಹುಂಡಿಯಲ್ಲಿ 18 ಲಕ್ಷ ರೂ. ಸಂಗ್ರಹ

ಕಳೆದ ಬಾರಿಗಿಂತ 5.98 ಲಕ್ಷ ರೂ. ಹೆಚ್ಚು ಸಂಗ್ರಹ



ಮಡಿಕೇರಿ,ಅ.30– ಭಾಗಮಂಡಲದಲ್ಲಿರುವ ಶ್ರೀ ಭಗಂಡೇಶ್ವರ ದೇವಾಲಯ ಮತ್ತು ಕಾವೇರಿ ಮಾತೆಯ ಉಗಮ ಸ್ಥಾನ ತಲಕಾವೇರಿ ದೇವಾಲಯದಲ್ಲಿ ಕಾವೇರಿ ತುಲಾ ಸಂಕ್ರಮಣ ಪವಿತ್ರ ತೀರ್ಥೋದ್ಭವ ಜಾತ್ರೆಯ ನಂತರ ಪ್ರಥಮ ಹುಂಡಿ ಎಣಿಕೆ ಕಾರ್ಯ ನಡೆಸಲಾಗಿದ್ದು, ರೂ. 18 ಲಕ್ಷದ 5 ಸಾವಿರ ರೂ. ಸಂಗ್ರಹವಾಗಿದೆ. ಕಳೆದ ವರ್ಷ ರೂ.12,06,855 ಸಂಗ್ರಹವಾಗಿತ್ತು. ಕಳೆದ ವರ್ಷಕ್ಕೆ ಹೋಲಿಸಿದರೆ ಈ ವರ್ಷ ರೂ.5,98,145 ಹೆಚ್ಚಿಗೆ ಸಂಗ್ರಹವಾಗಿದೆ.

ಬುಧವಾರ ಬೆಳಿಗ್ಗೆ 8 ಗಂಟೆಯಿಂದ ಭಾಗಮಂಡಲ ಕೆನರಾ ಬ್ಯಾಂಕ್ ಸಿಬ್ಬಂದಿ, ಭಾಗಮಂಡಲ ಪೊಲೀಸ್ ಠಾಣಾ ಸಿಬ್ಬಂದಿಗಳು, ದೇವಾಲಯದ ಕಾರ್ಯ ನಿರ್ವಾಹಣಾಧಿಕಾರಿಗಳು, ತಕ್ಕ ಮುಖ್ಯಸ್ಥರು ಮತ್ತು ಸಿಬ್ಬಂದಿಯವರು ಮತ್ತು ಸ್ವಯಂ ಸೇವಕರು ಹಾಗೂ ಭಾಗಮಂಡಲ ಕಂದಾಯ ಇಲಾಖೆ ಸಿಬ್ಬಂದಿಗಳ ಸಮ್ಮುಖದಲ್ಲಿ ವೀಡಿಯೋ ಚಿತ್ರೀಕರಣದ ಮೂಲಕ ಸಂಜೆ 5.30ರವರೆಗೆ 25 ಮಂದಿ ಸಿಬ್ಬಂದಿಗಳ ಮೂಲಕ ಹುಂಡಿ ಹಣ ಎಣಿಕೆ ಕಾರ್ಯ ನಡೆಸಲಾಗಿದೆ.

ಶ್ರೀ ತಲಕಾವೇರಿ ದೇವಾಲಯದಲ್ಲಿ ರೂ.7,27,389, ಶ್ರೀ ಭಗಂಡೇಶ್ವರ ದೇವಾಲಯದಲ್ಲಿ ರೂ.5,44,333, ಅನ್ನ ಸಂತರ್ಪಣಾ ನಿಧಿಯ ಮೂಲಕ ರೂ. 2,52,867 ಮತ್ತು ಇ–ಹುಂಡಿ ಮೂಲಕ ರೂ.2,80,411 ಸೇರಿದಂತೆ ಹದಿನೆಂಟು ಲಕ್ಷದ ಐದು ಸಾವಿರ ರೂ.ಗಳು ಸಂಗ್ರಹವಾಗಿದೆ ಎಂದು ದೇವಾಲಯದ ಕಾರ್ಯ ನಿರ್ವಾಹಣಾಧಿಕಾರಿ ಚಂದ್ರಶೇಖರ ಮಾಹಿತಿ ನೀಡಿದ್ದಾರೆ.

ಕೊಡಗಿನ ವೈದ್ಯೆ ನೆಲ್ಲಮಕ್ಕಡ ಎಂ.ಬಬಿನಾ ಅವರಿಗೆ ರಾಜ್ಯೋತ್ಸವ ಪ್ರಶಸ್ತಿ

ಮಡಿಕೇರಿ,ಅ.30– ಮೂಲತಃ ಕೊಡಗಿನವರಾಗಿದ್ದು ಪ್ರಸ್ತುತ ಬೆಂಗಳೂರಿನ ಜಿಂದಾಲ್ ಪ್ರಾಕೃತಿಕ ಚಿಕಿತ್ಸಾಲಯದ ಮುಖ್ಯಸ್ಥೆಯಾಗಿರುವ ವೈದ್ಯೆ



ನೆಲ್ಲಮಕ್ಕಡ ಎಂ.ಬಬಿನಾ ಅವರು ರಾಜ್ಯ ಸರಕಾರದಿಂದ ಕೊಡ ಮಾಡುವ ಪ್ರತಿಷ್ಠಿತ ರಾಜ್ಯೋತ್ಸವ ಪ್ರಶಸ್ತಿಗೆ ಭಾಜನರಾಗಿದ್ದಾರೆ.

ವಿರಾಜಪೇಟೆ ತಾಲೂಕಿನ ಅಮ್ಮತ್ತಿ ಗ್ರಾಮದವರಾದ ನೆಲ್ಲಮಕ್ಕಡ ಬಬಿನಾ ಬೆಂಗಳೂರಿನ ತುಮಕೂರು ರಸ್ತೆಯಲ್ಲಿರುವ ಪ್ರತಿಷ್ಠಿತ 'ಜಿಂದಾಲ್ ನೇಚರ್ ಕೇರ್ ಇನ್ಸ್ಟಿಟ್ಯೂಟ್' ಮುಖ್ಯಸ್ಥೆಯಾಗಿ ಸೇವೆ ಸಲ್ಲಿಸುತ್ತಿದ್ದು, ಯೋಗಾ ಕ್ಷೇತ್ರದಲ್ಲಿಯೂ ಅಸಾಧಾರಣ ಪ್ರಾವಿಣ್ಯತೆ ಸಾಧಿಸಿದ್ದಾರೆ. ಮಾತ್ರವಲ್ಲದೇ ದುಬೈ ಹಾಗೂ ದಕ್ಷಿಣ ಭಾರತದ ಪ್ರತಿಷ್ಠಿತ ಶಿಕ್ಷಣ ಸಂಸ್ಥೆಗಳು ಈ ಹಿಂದೆ ಆಯೋಜಿಸಿದ್ದ ಪ್ರಾಕೃತಿಕ ಆರೋಗ್ಯ ಸೇವೆ ಮತ್ತು ಯೋಗ ಶಿಕ್ಷಣ ಕುರಿತು ಹಲವಾರು ಉಪನ್ಯಾಸಗಳನ್ನು ನೀಡಿದ್ದಾರೆ. ಜಿಂದಾಲ್ ಸಂಸ್ಥೆ ಹೊರ ತರುತ್ತಿರುವ 'ಹೆಲ್ತ್ ಹೆರಲ್ಡ್' ಎಂಬ ಮ್ಯಾಗಜೀನ್ ಸಂಪಾದಕಿಯಾಗಿಯೂ ಎನ್.ಎಂ.ಬಬಿನಾ ಸೇವೆ ಸಲ್ಲಿಸುತ್ತಿದ್ದಾರೆ.

ನಂದಿನಿ ಉತ್ಪನ್ನಗಳನ್ನು ಸದ್ಬಳಕೆ ಮಾಡಿಕೊಳ್ಳಿ: ಪೊನ್ನಣ್ಣ



ನಂದಿನಿ ಉತ್ಪನ್ನಗಳ ಮಾರಾಟ ಮಳಿಗೆಯನ್ನು ಶಾಸಕ ಪೊನ್ನಣ್ಣ ಉದ್ಘಾಟಿಸಿದರು.

ನಾಪೋಕ್ಲು ಅ.30– ನಂದಿನಿ ಹಾಲು ಮತ್ತು ಹಾಲಿನ ಉತ್ಪನ್ನಗಳು ಉತ್ತಮ ಗುಣಮಟ್ಟದಿಂದ ಕೂಡಿದ್ದು ಸಾರ್ವಜನಿಕರು ಅದರ ಸದ್ಬಳಕೆ ಮಾಡಿಕೊಳ್ಳಬೇಕು ಎಂದು ಶಾಸಕ ಎ.ಎಸ್ ಪೊನ್ನಣ್ಣ ತಿಳಿಸಿದರು.

ನಾಪೋಕ್ಲುವಿನ ಸಂತೆ ಮೈದಾನದ ಸಮೀಪದಲ್ಲಿ ಗುರುವಾರ ನೂತನವಾಗಿ ಆರಂಭಗೊಂಡ ನಂದಿನಿ ಉತ್ಪನ್ನಗಳ ಮಾರಾಟ ಮಳಿಗೆಯನ್ನು ಉದ್ಘಾಟಿಸಿ ಅವರು ಮಾತನಾಡಿದರು.

ಜಿಲ್ಲೆಯಲ್ಲಿ ಇದು 15ನೇ ಮಳಿಗೆಯಾಗಿದೆ. ದೇಶದಾದ್ಯಂತ ನಂದಿನಿ ಉತ್ಪನ್ನಗಳು ಹೆಸರುವಾಸಿಯಾಗಿದೆ. ಗುಣಮಟ್ಟದ ವಸ್ತುಗಳು ಗ್ರಾಹಕರಿಗೆ ಲಭ್ಯವಾಗಲಿದೆ ಎಂದು ಶುಭ ಹಾರೈಸಿದರು.

ಈ ಸಂದರ್ಭದಲ್ಲಿ ನಾಪೋಕ್ಲು ಗ್ರಾಮ ಪಂಚಾಯತಿ ಅಧ್ಯಕ್ಷ ವನಜಾಕ್ಷಿ ರೇಣುಕೇಶ್, ಅಕ್ರಮ ಸಕ್ರಮ ಸಮಿತಿ ಅಧ್ಯಕ್ಷ, ಮಳಿಗೆಯ ಮಾಲಿಕ ನೆರವಂಡ ಉಮೇಶ್, ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ, ಕೆ.ಎ ಇಸ್ಮಾಯಿಲ್, ಕಾಂಗ್ರೆಸ್ ವಲಯ ಅಧ್ಯಕ್ಷ ಮಾಚೇಟಿರ ಕುಸು ಕುಶಾಲಪ್ಪ, ಗ್ರಾಮ ಪಂಚಾಯತಿ ಸದಸ್ಯೆ ಕುಲ್ಲೇಟಿರ ಹೇಮಾ ಅರುಣ್, ಇತರ ಸದಸ್ಯರು. ಹಾಲು ಒಕ್ಕೂಟ ಹಾಸನ (ನಂದಿನಿ) ನಿರ್ದೇಶಕ ಹೇಮಂತ್ ಕುಮಾರ್, ಸಹಾಯಕ ನಿರ್ದೇಶಕ ಅನಿಲ್, ವ್ಯವಸ್ಥಾಪಕ ನಂದೀಶ್, ಉಪ ವ್ಯವಸ್ಥಾಪಕ ಡಿ ಎನ್ ಮಲ್ಲೇಶ್, ಚುನಾಯಿತ ಪ್ರತಿನಿಧಿಗಳು ಸಂಘ ಸಂಸ್ಥೆಗಳ ಪದಾಧಿಕಾರಿಗಳು, ಪಕ್ಷದ ಕಾರ್ಯಕರ್ತರು ಉಪಸ್ಥಿತರಿದ್ದರು.

ಚಾಮರಾಜನಗರ ಜಿಲ್ಲೆಯ ಹಲವೆಡೆ ಹುಲಿಯ ಉಪಟಳ

ಆತಂಕಗೊಂಡಿರುವ ರೈತರಿಗೆ ಅರಣ್ಯ ಸಿಬ್ಬಂದಿ ಭದ್ರತೆ

ಚಾಮರಾಜನಗರ, ಅ.30– ಜಿಲ್ಲೆಯ ಹಲವೆಡೆ ಕಳೆದ ನಾಲ್ಕೈದು ತಿಂಗಳಿನಿಂದ ಹುಲಿಗಳ ಉಪಟಳ ಹೆಚ್ಚಾಗಿದ್ದು, ಕಾಡಂಚಿನ ಗ್ರಾಮಗಳ ಜನರು, ರೈತರು ಭಯಭೀತಗೊಂಡಿದ್ದಾರೆ.

ಉಳುಮೆ ಮಾಡುವುದು, ಕಳೆ ಕೀಳುವುದು, ಕೊಯ್ಲು, ನೀರು ಹಾಯಿಸುವುದು ಸೇರಿದಂತೆ ಕೃಷಿ ಚಟುವಟಿಕೆಯಲ್ಲಿ ತೊಡಗಿರುವ ರೈತರಿಗೆ ಅರಣ್ಯ ಇಲಾಖೆ ಸಿಬ್ಬಂದಿಗಳು ಗನ್ ಹಿಡಿದುಕೊಂಡು ಭಾರಿ ಭದ್ರತೆ ನೀಡುವಂತ ಪರಿಸ್ಥಿತಿ ನಿರ್ಮಾಣವಾಗಿದೆ.



ಅರಣ್ಯ ಇಲಾಖೆ ಸಿಬ್ಬಂದಿಗಳ ಕಾವಲಿನಲ್ಲಿ ರೈತರು ಕೃಷಿ ಚಟುವಟಿಕೆ ಮಾಡುತ್ತಿರುವುದು.

ತಾಲೂಕಿನ ಗೋವಿಂದವಾಡಿ (ಕಲುರ), ಹೆಗ್ಗೋಠಾರ ಗ್ರಾಮಗಳ ಸುತ್ತಮುತ್ತ ಕಳೆದ ನಾಲ್ಕೈದು ದಿನಗಳಿಂದ ಹುಲಿ ಕಾಣಿಸಿಕೊಳ್ಳುತ್ತಿದ್ದು, ಈ ಗ್ರಾಮಗಳ ರೈತರು ಜಮೀನುಗಳಿಗೆ ಹೋಗಲು ಭಯಪಡುವಂತಾಗಿದ್ದು, ರೈತರಿಗೆ ಅರಣ್ಯ ಇಲಾಖೆ ಭದ್ರತೆ ಒದಗಿಸುತ್ತಿದೆ. ಹೀಗಾಗಿ, ಅರಣ್ಯ ಇಲಾಖೆ ಸಿಬ್ಬಂದಿಗಳ ಕಾವಲಿನಲ್ಲಿ ರೈತರು ಕೃಷಿ ಚಟುವಟಿಕೆ ಮಾಡುತ್ತಿದ್ದಾರೆ.

ಭಯದಿಂದ ಕೃಷಿ ಚಟುವಟಿಕೆ ಸ್ಥಗಿತ: ಕಲ್ಪುರ ಗ್ರಾಮದ ರೈತ ಕುಮಾರ್ ಅವರಿಗೆ ಸೇರಿದ ಎರಡು ಹಸುಗಳ ಮೇಲೆ ಅ.18ರಂದು ಹುಲಿ ದಾಳಿ ಮಾಡಿ ಕೊಂದು ಹಾಕಿತ್ತು. ಬಳಿಕ, ಮತ್ತೆ ಹುಲಿ ಕಾಣಿಸಿಕೊಂಡು ಗ್ರಾಮದ ಜನರಲ್ಲಿ ಆತಂಕ ಮೂಡಿಸಿತ್ತು ಇದೇ ಸಂದರ್ಭದಲ್ಲಿ ಬಂಡೀಪುರ ಹುಲಿ ಸಂರಕ್ಷಿತಾರಣ್ಯ ಪ್ರದೇಶದ ಹಡೆಯಾಲ ಅರಣ್ಯ ವಲಯದಲ್ಲಿ ಹುಲಿ ದಾಳಿಯಿಂದ ರೈತರೊಬ್ಬರು ಸಾವನ್ನಪ್ಪಿದ ಪ್ರಕರಣದಿಂದ ಮತ್ತಷ್ಟು ಭಯಭೀತಗೊಂಡ ಗ್ರಾಮಸ್ಥರು ಹಾಗೂ ರೈತರು ಜಮೀನುಗಳಿಗೆ ತೆರಳದೆ ಕೃಷಿ ಚಟುವಟಿಕೆ ಸ್ಥಗಿತಗೊಳಿಸಿದರು. ಈ ಹಿನ್ನೆಲೆಯಲ್ಲಿ ಭಯದಲ್ಲಿರುವ ರೈತರಿಗೆ ಬಿಆರ್‌ಟಿ ಹುಲಿ ಸಂರಕ್ಷಿತಾರಣ್ಯ ಪ್ರದೇಶದ ಸಿಬ್ಬಂದಿ ಭದ್ರತೆ ಒದಗಿಸಲು ಶುರು ಮಾಡಿದ್ದಾರೆ.

ಅನ್ನದಾತರಿಗೆ ಅರಣ್ಯ ಸಿಬ್ಬಂದಿ ಕಾವಲು: ಕೃಷಿ ಚಟುವಟಿಕೆಯಿಂದ ದೂರವಿದ್ದ ರೈತರ ಆತಂಕವನ್ನು ದೂರಗೊಳಿಸಲು ಮುಂದಾಗಿರುವ ಅರಣ್ಯ ಇಲಾಖೆ ಅಧಿಕಾರಿಗಳು ಕಲ್ಪುರು ಗ್ರಾಮದ ಮಹದೇಶ್ವರ ದೇವಸ್ಥಾನದ ಸುತ್ತಮುತ್ತ ಹುಲಿ ಸೆರೆಗಾಗಿ ಕಾರ್ಯಾಚರಣೆ ಆರಂಭಿಸಿದ್ದಾರೆ. ಇದಕ್ಕಾಗಿ 20 ಸಿಬ್ಬಂದಿ ಹುಲಿ ಹುಡುಕಾಟದಲ್ಲಿ ತೊಡಗಿದ್ದಾರೆ. ರಾತ್ರಿ ವೇಳೆ 8 ಸಿಬ್ಬಂದಿ ವಾಸ್ತವ್ಯ ಹೂಡುತ್ತಿದ್ದಾರೆ. ದೇವಸ್ಥಾನದ ಸಮೀಪದ ಜಮೀನುಗಳಿಗೆ ಮುಂಜಾನೆ ಕೆಲಸಕ್ಕೆ ಬರುವ ರೈತರೊಂದಿಗೆ ಅರಣ್ಯ ಸಿಬ್ಬಂದಿ ತೆರಳಿ ಕೃಷಿ ಚಟುವಟಿಕೆ ಮಾಡಲು ಕಾವಲು ಕಾಯುತ್ತಿದ್ದಾರೆ. ರೈತರ ಜಮೀನುಗಳಲ್ಲಿ ಕ್ಯಾಮೆರಾ ಟ್ರ್ಯಾಪ್, ಬೋನುಗಳನ್ನು ಅಳವಡಿಸಲಾಗಿದೆ. ಎರಡು ವಾರದ ಹಿಂದೆ ಹುಲಿ ತಾನು ಬೇಟೆಯಾಡಿದ್ದ ಹಸುವನ್ನು ಎಳೆದೊಯ್ಯಲು ಬಂದಿರುವ ದೃಶ್ಯ ಕ್ಯಾಮೆರಾದಲ್ಲಿ ಸೆರೆಯಾಗಿದೆ. ನಿತ್ಯ ಒಂದಲ್ಲ ಒಂದು ಜಮೀನಿನಲ್ಲಿ ಹುಲಿ ಹೆಜ್ಜೆ ಗುರುತುಗಳು ಪತ್ತೆಯಾಗುತ್ತಿದ್ದು, ರೈತರನ್ನಷ್ಟೇ ಅಲ್ಲ ಅರಣ್ಯ ಸಿಬ್ಬಂದಿಗೂ ಹುಲಿ ಉಪಟಳ ತಲೆನೋವಾಗಿ ಪರಿಣಮಿಸಿದೆ.

ಹುಲಿ ಓಡಾಟ ಕ್ಯಾಮೆರಾದಲ್ಲಿ ಸೆರೆ, ವಿಶೇಷ ವಾಕ್ ಥ್ರೂ ಕೇಜ್ ಅಳವಡಿಕೆ

ಚಾಮರಾಜನಗರ: ಬಿಆರ್‌ಟಿ ಹುಲಿ ಸಂರಕ್ಷಿತ ಪ್ರದೇಶದಲ್ಲಿ ಹುಲಿ ಉಟಪಳ ಹೆಚ್ಚಾಗಿದ್ದು, ತಾಲೂಕಿನ ತಾಲೂಕಿನ ಕಲ್ಪುರ, ಹೆಗ್ಗೋಠಾರ, ಉಗೇನದಹುಂಡಿ ಗ್ರಾಮಗಳಲ್ಲಿ ಅರಣ್ಯ ಇಲಾಖೆಯು ಹುಲಿ ಸೆರೆಗಳಲ್ಲಿ ಕೂಂಬಿಂಗ್ ನಡೆಸುತ್ತಿದೆ. ಗ್ರಾಮಗಳ ಜಮೀನಿನಲ್ಲಿ ಹುಲಿ ಸೆರೆ ಕಾರ್ಯಾಚರಣೆ ನಡೆಸಲಾಗುತ್ತಿದೆ. ಈ ಟೈಗರ್ ಆಪರೇಷನ್‌ಗೆ 'ವಾಕ್ ಥ್ರೂ ಕೇಜ್' ಎಂಬ ವಿಶೇಷ ಬೋನ್ ಅಳವಡಿಸಲಾಗಿದೆ.

ವಾಕ್ ಥ್ರೂ ಕೇಜ್ ಹೇಗಿದೆ: ಹುಲಿ ಓಡಾಟದ ಹಾದಿಯಲ್ಲಿ ಈ ಬೋನ್ ಅನ್ನು ಅಳವಡಿಸಲಿದ್ದು, ಹುಲಿ ಕಾಲಿಟ್ಟ ಕೂಡಲೇ ಎರಡು ಕಡೆಯಿಂದ ಬಾಗಿಲು ಬಂದ್ ಆಗಿ ಹುಲಿಯನ್ನು ಬಲೆಗೆ ಬೀಳಿಸುವ ತಾಂತ್ರಿಕತೆ ಇದರದ್ದಾಗಿದೆ. 30 ಅಡಿ ಉದ್ದ 10 ಅಡಿ ಎತ್ತರದ ಡಬಲ್ ಡೋರ್ ಕೇಜ್ ಇದಾಗಿದೆ. ಮೈಸೂರಿನಿಂದ ಅರಣ್ಯ ಇಲಾಖೆಯು ಈ ಬೋನ್ ಅನ್ನು ಹುಲಿ ಸೆರೆಗಂತಲೇ ತರಿಸಿಕೊಂಡಿದೆ. ಸಾಮಾನ್ಯವಾದ ದಾರಿ ಎಂದು ಭಾವಿಸಿ ಹುಲಿ ಒಂದೇ ಒಂದು ಹೆಜ್ಜೆ ಇಡ್ತಾಯಿದ್ದಂತೆ, ಎರಡೂ ಬಾಗಿಲು ಬಂದ್ ಆಗಲಿವೆ. ಚಾಮರಾಜನಗರ ತಾಲೂಕಿನ ಉಗೇದನಹುಂಡಿ ಜಮೀನೊಂದರಲ್ಲಿ ಈ ಬೋನ್ ಇರಿಸಲಾಗಿದೆ.



ಹುಲಿ ಓಡಾಟ ಅರಿಯಲು 20ಕ್ಕೂ ಹೆಚ್ಚು ಕ್ಯಾಮೆರಾಗಳನ್ನು ಅಳವಡಿಸಲಾಗಿದೆ. ಇದರಲ್ಲಿ ವ್ಯಾಘ್ರನ ಸಂಚಾರದ ದೃಶ್ಯವು ಸೆರೆಯಾಗಿದೆ. 80ಕ್ಕೂ ಅಧಿಕ ಸಿಬ್ಬಂದಿ ಈ ಹುಲಿ ಸೆರೆ ಕಾರ್ಯಾಚರಣೆಯಲ್ಲಿ ತೊಡಗಿಸಿಕೊಂಡಿದ್ದಾರೆ. ಹುಲಿ ಹಾಗೂ ಚಿರತೆಗಳ ಸುಳಿವು ದೊರೆತ ಕೂಡಲೇ ತುರ್ತು ಕಾರ್ಯಾಚರಣೆ ಕೈಗೊಳ್ಳಲು ಒಂದು ತಂಡವು ಸಿದ್ಧವಾಗಿದೆ.



ಹುಲಿ ಓಡಾಟ ಕ್ಯಾಮೆರಾದಲ್ಲಿ ಸೆರೆ.

ಹುಲಿ ಸೆರೆ ಕಾರ್ಯಾಚರಣೆ ಕುರಿತು ಬಿಆರ್‌ಟಿ ಎಸಿಎಫ್ ಮಂಜುನಾಥ್ ಮಾತನಾಡಿ, ಎನ್‌ಟಿಸಿಎ ಮಾರ್ಗಸೂಚಿಯಂತೆ ಸಾಕಷ್ಟು ಮುನ್ನೆಚ್ಚರಿಕೆ ಕೈಗೊಂಡು ಕೂಂಬಿಂಗ್ ನಡೆಸಲಾಗುತ್ತಿದೆ. ಕೆಲವು ರೈತರು ಜಮೀನಿಗೆ ತೆರಳಲು ಭಯ ಪಡುವ ಆತಂಕ ಹೊರಹಾಕಿದ ಹಿನ್ನೆಲೆಯಲ್ಲಿ, ಅವರಿಗೂ ರಕ್ಷಣೆ ಕೊಡಲಾಗಿದೆ. ಗ್ರಾಮಸ್ಥರಿಗೆ ಕೂಂಬಿಂಗ್ ಬಗ್ಗೆ ಸಾಕಷ್ಟು ಜಾಗೃತಿ ಮೂಡಿಸಲಾಗಿದೆ ಎಂದು ತಿಳಿಸಿದರು.

ಜ್ಯೋತಿಗೌಡನಪುರಕ್ಕೆ ಡಿಐಜಿ ಬೋರಲಿಂಗಯ್ಯ ಭೇಟಿ



ಜ್ಯೋತಿಗೌಡನಪುರಕ್ಕೆ ಡಿಐಜಿ ಬೋರಲಿಂಗಯ್ಯ ಭೇಟಿ ನೀಡಿ ಪರಿಶೀಲನೆ ನಡೆಸಿದರು.

ಚಾಮರಾಜನಗರ, ಅ.30– ತಾಲೂಕಿನ ಜ್ಯೋತಿಗೌಡನಪುರದಲ್ಲಿ ಇತ್ತೀಚೆಗೆ ಡಾ.ಬಿ. ಆರ್.ಅಂಬೇಡ್ಕರ್ ಭಾವಚಿತ್ರವಿರುವ ಫ್ಲೆಕ್ಸ್ ಹರಿದು ಹಾಗೂ ಬುದ್ಧನ ವಿಗ್ರಹ ವಿರೂಪಗೊಳಿಸಿರುವ ಘಟನೆ ಹಿನ್ನೆಲೆಯಲ್ಲಿ ಗ್ರಾಮಕ್ಕೆ ಗುರುವಾರ ದಕ್ಷಿಣ ವಲಯ ಡಿಐಜಿ ಬೋರಲಿಂಗಯ್ಯ ಭೇಟಿ ನೀಡಿ ಪರಿಶೀಲನೆ ನಡೆಸಿದರು.

ಗ್ರಾಮಕ್ಕೆ ಭೇಟಿ ನೀಡಿದ ಡಿಐಜಿ ಬೋರಲಿಂಗಯ್ಯ ಅವರು ಘಟನಾ ಸ್ಥಳಗಳಿಗೆ ತೆರಳಿ ಪರಿಶೀಲಿಸಿದರು. ಅಲ್ಲದೇ ಘಟನೆ ಸಂಬಂಧ ಗ್ರಾಮಸ್ಥರಿಂದ ಹಾಗೂ ಅಧಿಕಾರಿಗಳಿಂದ ಮಾಹಿತಿ ಪಡೆದುಕೊಂಡರು. ಬಳಿಕ ಮಾತನಾಡಿ, ಈ ಕೃತ್ಯ ನಡೆಸಿರುವ ಆರೋಪಿಗಳನ್ನು ಪತ್ತೆ ಹಚ್ಚುವ ನಿಟ್ಟಿನಲ್ಲಿ ಕ್ರಮ ವಹಿಸಲಾಗಿದೆ. ಶೀಘ್ರವೇ ಆರೋಪಿಗಳನ್ನು ಬಂಧಿಸಿ, ಕಾನೂನಿನಡಿ ಕ್ರಮ ವಹಿಸಲಾಗುವುದು. ಆದ್ದರಿಂದ ಗ್ರಾಮಸ್ಥರು ಶಾಂತಿಯಿಂದ ಇರಬೇಕು. ಪೊಲೀಸರ ತನಿಖೆಗೆ ಅಗತ್ಯ ಸಹಕಾರ ನೀಡಬೇಕು ಎಂದು ಮನವಿ ಮಾಡಿದರು. ಈ ಸಂದರ್ಭದಲ್ಲಿ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಡಾ.ಬಿ.ಟಿ. ಕವಿತಾ, ಹೆಚ್ಚುವರಿ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಎಂ.ಎನ್. ಶಶಿಧರ ಸೇರಿದಂತೆ ಪೊಲೀಸ್ ಇಲಾಖೆ ಅಧಿಕಾರಿಗಳು, ಗ್ರಾಮಸ್ಥರು ಹಾಗೂ ಇತರರು ಇದ್ದರು.

ರಕ್ತದಾನದಿಂದ ಒಂದು ಜೀವ ಉಳಿಸಿದ ಸಾರ್ಥಕತೆ

ಕೊಳ್ಳೇಗಾಲ, ಅ.30– ದಾನಗಳಲ್ಲೇ ಶ್ರೇಷ್ಠ ಹಾಗೂ ಅತ್ಯಂತ ಪವಿತ್ರ ದಾನ ರಕ್ತದಾನ. ಇಂತಹ ಪ್ರಕ್ರಿಯೆಯಲ್ಲಿ ತೊಡಗಿಸಿಕೊಳ್ಳುವ ವಿದ್ಯಾರ್ಥಿಗಳ ಈ ಸಾರ್ಥಕ ಕೆಲಸ ನಿಜಕ್ಕೂ ಹೆಮ್ಮೆ ತರುವಂತಾದ್ದಾಗಿದ್ದು ಈ ಹಿನ್ನೆಲೆ ಪ್ರತಿಯೊಬ್ಬರು ರಕ್ತದಾನಕ್ಕೆ ಮುಂದಾಗುವ ಮೂಲಕ ಜೀವ ಉಳಿಸುವ ಮಹತ್ಕಾರ್ಯದಲ್ಲಿ ಪಾಲ್ಗೊಳ್ಳಬೇಕು ಎಂದು ಶ್ರೀ ಮಹದೇಶ್ವರ ಸರ್ಕಾರಿ ಪ್ರಥಮ ದರ್ಜೆ ಕಾಲೇಜಿನ ಪ್ರಾಂಶುಪಾಲೆ ಜಯಲಕ್ಷ್ಮಿ ಹೇಳಿದರು.

ಅವರು ಶ್ರೀ ಮಹದೇಶ್ವರ ಸರ್ಕಾರಿ ಪ್ರಥಮ ದರ್ಜೆ ಕಾಲೇಜು ಆವರಣದಲ್ಲಿ ಗುರುವಾರ ಯುವ ರೆಡ್ ಕ್ರಾಸ್ ಸಮಿತಿ ಹಾಗೂ ದೈಹಿಕ ಶಿಕ್ಷಣ ವಿಭಾಗದ ವತಿಯಿಂದ ಆಯೋಜಿಸಿದ್ದ ರಕ್ತದಾನ ಮತ್ತು ರಕ್ತದ ಗುಂಪು ತಪಾಸಣಾ ಶಿಬಿರಕ್ಕೆ ಚಾಲನೆ ನೀಡಿ ಮಾತನಾಡಿ, ವಿದ್ಯಾರ್ಥಿಗಳು ಸ್ವಯಂ ಪ್ರೇರಿತರಾಗಿ ರಕ್ತದಾನ ಮಾಡುವ ಮೂಲಕ ಸಮಾಜಮುಖಿ ಕೆಲಸಕ್ಕೆ ತೊಡಗಿಕೊಂಡು ಬಡವರ ಹಾಗೂ ಅನಾರೋಗ್ಯ ಪೀಡಿತರಿಗೆ ಸಹಾಯ ಮಾಡುವ ಜೊತೆ ಸಮಾಜಕ್ಕೆ ಕೊಡುಗೆ ನೀಡಬೇಕು ಎಂದರು.

ವಿದ್ಯಾರ್ಥಿಗಳಿಗೆ ಓದುವುದು ಎಷ್ಟು ಮುಖ್ಯವೋ ಅಷ್ಟೇ ರೋಗಿಗಳಿಗೆ ಸಹಾಯ ಮಾಡುವುದು ಸಹ ಅತೀ ಮುಖ್ಯ. ರಕ್ತದಾನ ಮಾಡಿದರೆ ನಿಮ್ಮ ರಕ್ತವೂ ಶುದ್ಧಿಯಾಗುವುದರ ಜೊತೆಗೆ ಹೊಸ ರಕ್ತ ನಿಮ್ಮ ದೇಹಕ್ಕೆ ಸೇರುವುದರ ಮೂಲಕ ಆರೋಗ್ಯಕರವಾಗಿ ಜೀವಿಸಬಹುದು. ಅಗತ್ಯವಿರುವ ಇತರರಿಗೆ ರಕ್ತದಾನದಿಂದ ಸಹಾಯವಾಗುತ್ತೆ, ಒಂದು ದಾನದಿಂದ ಮೂರು ಜನರ ಜೀವ ಉಳಿಸಬಹುದು ಮತ್ತು ಇದು ಆರೋಗ್ಯಕರ ಸಮಾಜ ನಿರ್ಮಾಣಕ್ಕೆ ಕೊಡುಗೆ ನೀಡುತ್ತದೆ. ರಕ್ತದಾನವು ಇನ್ನೊಬ್ಬರ ಜೀವವನ್ನು ಉಳಿಸುವ ಒಂದು ಅತ್ಯಮೂಲ್ಯ ಕಾರ್ಯವಾಗಿದೆ. ನಿಯಮಿತವಾಗಿ ರಕ್ತದಾನ ಮಾಡುವುದರಿಂದ ದಾನಿಗಳ ಆರೋಗ್ಯಕ್ಕೂ ಲಾಭಗಳಿವೆ ಎಂದರು.



ರಕ್ತದಾನ ಮತ್ತು ರಕ್ತದ ಗುಂಪು ತಪಾಸಣಾ ಶಿಬಿರಕ್ಕೆ [illegible] ಚಾಲನೆ ನೀಡಿದರು.

ಇದೆ ವೇಳೆ 30 ಮಂದಿಗೂ ಅಧಿಕ ವಿದ್ಯಾರ್ಥಿಗಳು ಸ್ವಯಂ ಪ್ರೇರಿತರಾಗಿ ರಕ್ತದಾನದಲ್ಲಿ ಪಾಲ್ಗೊಂಡರು. 35 ವಿದ್ಯಾರ್ಥಿಗಳು ರಕ್ತದ ಗುಂಪು ತಪಾಸಣೆ ಮಾಡಿಸಿಕೊಂಡರು.

ವೈದ್ಯರಾದ ಡಾ.ನಿಹಾರಿಕ, ಡಾ.ನಿಶ್ಚಿತ್, ದೈಹಿಕ ಶಿಕ್ಷಣ ನಿರ್ದೇಶಕ ಹಾಗೂ ಯುವ ರೆಡ್ ಕ್ರಾಸ್ ಸಮಿತಿಯ ಸಂಚಾಲಕ ಡಾ. ಜಯಶಂಕರ್, ಐಕ್ಯೂ ಎಸಿ ಸಂಚಾಲಕ ಡಾ.ಹೇಮಕುಮಾರ್, ಯುವ ಸಬಲೀಕರಣ ಸಮಿತಿಯ ಸಂಚಾಲಕ ಗಂಗಾಧರ, ಕಚೇರಿ ಅಧೀಕ್ಷಕ ಶಿವಕುಮಾರ್ ಇನ್ನಿತರಿದ್ದರು.

ಎಸ್‌ಆರ್‌ಟಿ ಟ್ರಾನ್ಸ್ ಪೋರ್ಟ್ ಉದ್ಯಮಿ ವೈದೀಶ್ವರನ್ ನಿಧನ



ಚಾಮರಾಜನಗರ: ತಮಿಳುನಾಡಿನ ತಾಳವಾಡಿಯ ಪ್ರಸಿದ್ಧ ಉದ್ಯಮಿ ಎಸ್‌ಆರ್‌ಟಿ ಟ್ರಾನ್ಸ್ ಪೋರ್ಟ್ ಮಾಲೀಕ ವಿ. ವೈದೀಶ್ವರನ್(86) ಗುರುವಾರ ಸಂಜೆ ನಿಧನರಾದರು. ವೈದೀಶ್ವರನ್ ಅವರು ಪ್ರಮುರಾ ಸಾಫ್ಟ್ ವೇರ್ ಕಂಪನಿಯ ಗೌರವಾಧ್ಯಕ್ಷರೂ ಆಗಿದ್ದರು. ಮೃತರ ಅಂತ್ಯಕ್ರಿಯೆ ತಮಿಳುನಾಡಿನ ಸತ್ಯಮಂಗಲದಲ್ಲಿ ಶುಕ್ರವಾರ ಸಂಜೆ 4 ಗಂಟೆಗೆ ನಡೆಯಲಿದೆ ಎಂದು ಕುಟುಂಬವರು ತಿಳಿಸಿದ್ದಾರೆ.

ಪರಿಸರ ಸಂರಕ್ಷಕ ರಾಮೇಗೌಡರಿಗೆ ರಾಜ್ಯೋತ್ಸವ ಪ್ರಶಸ್ತಿ

ಚಾಮರಾಜನಗರ, ಅ.30– ಬಾಲ್ಯದಿಂದಲೇ ಸಾವಿರಕ್ಕೂ ಹೆಚ್ಚು ಸಸ್ಯಗಳ ಬೀಜಗಳನ್ನು ಸಂಗ್ರಹಿಸಿ, ನರ್ಸರಿಯಲ್ಲಿ ಅವುಗಳನ್ನು ಬೆಳೆಸಿ, ಬಳಿಕ ಅರಣ್ಯ ಇಲಾಖೆ ಜೊತೆ ಕಾಡು ಬೆಳೆಸುತ್ತಾ ನಿಸ್ವಾರ್ಥ ಪರಿಸರ ಸೇವೆ ಸಲ್ಲಿಸುತ್ತಿರುವ ಜಿಲ್ಲೆಯ ಬಿಳಿಗಿರಿ ರಂಗನಬೆಟ್ಟದ ಸೋಲಿಗ ಬುಡಕಟ್ಟು ಸಮುದಾಯ ರಾಮೇಗೌಡರಿಗೆ ಪ್ರಸಕ್ತ ಸಾಲಿನಲ್ಲಿ ಪರಿಸರ ಕ್ಷೇತ್ರದಿಂದ ಕರ್ನಾಟಕ ರಾಜ್ಯೋತ್ಸವ ಪ್ರಶಸ್ತಿ ದೊರೆತಿದೆ.

ಸರ್ಕಾರದ ಪ್ರಶಸ್ತಿಗಳು ಪ್ರಭಾವ ಬೀರಿದವರಿಗೆ ಮಾತ್ರ ದೊರಕುತ್ತವೆ ಎಂಬ ನಂಬಿಕೆ ಇರುವ ಈ ಕಾಲದಲ್ಲಿ ಬಿಳಿಗಿರಿ ರಂಗನಬೆಟ್ಟದ ಕಾಡಿನಲ್ಲಿದ್ದುಕೊಂಡು ತಮ್ಮ ಸ್ವಂತ ಹಣದಲ್ಲಿ ಗಿಡಗಳನ್ನು ಬೆಳೆಸಿ ಹಂಚುತ್ತಿರುವ ಕಡುಬಡವ ಸೋಲಿಗ ಬುಡಕಟ್ಟಿನ ರಾಮೇಗೌಡರಿಗೆ ರಾಜ್ಯೋತ್ಸವ ಪ್ರಶಸ್ತಿ ಬಂದಿರುವುದು ಪ್ರಶಸ್ತಿಗಳ ಗೌರವವನ್ನು ಮತ್ತಷ್ಟು ಹೆಚ್ಚಿಸಿದೆ.

ಬಿಳಿಗಿರಿರಂಗನಬೆಟ್ಟದ ಸೋಲಿಗ ಬುಡಕಟ್ಟು ಜನಾಂಗದಲ್ಲಿ ಜನಿಸಿದ ರಾಮೇಗೌಡ ಬಾಲ್ಯದಿಂದಲೂ ತನ್ನ ತಂದೆಯವರ ಜೊತೆ ಕಾಡಿನಲ್ಲಿ ಸಿಗುವ ಹಣ್ಣು, ಔಷಧಿ ಸಸ್ಯಗಳ ಬೀಜಗಳನ್ನು ಸಂಗ್ರಹಿಸಿ ನರ್ಸರಿ ಮಾಡಿ ಅರಣ್ಯ ಇಲಾಖೆಯ ಜೊತೆ ಕಾಡು ಬೆಳೆಸುವ ಕಾರ್ಯದಲ್ಲಿ ತೊಡಗಿಸಿಕೊಂಡಿದ್ದರು. ಬಳಿಕ ಇದನ್ನೇ ಕಾಯಕವಾಗಿಸಿಕೊಂಡ ಪ್ರಸ್ತುತ ಲಕ್ಷಾಂತರ ಸಸಿಗಳನ್ನು ತಮ್ಮ ಜಮೀನಿನ ನರ್ಸರಿಯಲ್ಲಿ ಬೆಳೆಸಿ ವಿತರಿಸುವ ಕೆಲಸದಲ್ಲಿ ನಿರತರಾಗಿದ್ದಾರೆ.



ನನಗೆ ಪ್ರಶಸ್ತಿ ಬಂದಿರುವುದು ರಂಗಪ್ಪನ ಅನುಗ್ರಹ. ಪ್ರಕೃತಿ ಕೆಲಸ ಮಾಡುತ್ತಿದ್ದೇನೆ. ಪ್ರಶಸ್ತಿಗೆ ಆಸೆ ಪಟ್ಟವನಲ್ಲ. ನಾನು ಮಾಡಿದ ಕೆಲಸವನ್ನು ಜಿ.ಎಸ್. ಜಯದೇವ ಅವರು ಗುರುತಿಸಿದರು. ಅವರು ನನಗೆ ಬೆಂಬಲವಾಗಿ ನಿಂತು ಗಿಡಗಳನ್ನು ಕೊಂಡು ಪ್ರೋತ್ಸಾಹ ನೀಡಿದರು. ಅದರ ನಂತರ ಯಲ್ಲಪ್ಪರೆಡ್ಡಿಯವರು ನನ್ನಿಂದ ಗಿಡಗಳನ್ನು ಕೊಂಡು ಕೊಳ್ಳುವ ಮೂಲಕ ನೆರವಾಗಿದ್ದಾರೆ. ಅವರೆಲ್ಲರಿಗೂ ಕೃತಜ್ಞತೆ ಸಲ್ಲಿಸುತ್ತೇನೆ.

– ರಾಮೇಗೌಡ, ಬಿಳಿಗಿರಿರಂಗನಬೆಟ್ಟ

ಸಾವಿರಾರು ಪ್ರಭೇದ ಗುರುತು: ವಿದ್ಯಾಭ್ಯಾಸವನ್ನೇ ಮಾಡದೇ ಇರುವ ರಾಮೇಗೌಡರು ಸುಮಾರು ಒಂದು ಸಾವಿರಕ್ಕೂ ಹೆಚ್ಚು ಬಗೆಯ ಸಸ್ಯ ಪ್ರಭೇದಗಳನ್ನು ಗುರುತಿಸುತ್ತಾರೆ. ಇದರಲ್ಲಿ ಹಲವಾರು ಹಣ್ಣು, ಬಳ್ಳಿ ಮತ್ತು ಔಷಧಿ ಸಸ್ಯಗಳು ಸೇರಿವೆ. ಇವರು ಬೆಳೆಸಿದ ಸಸಿಗಳನ್ನು ಬನ್ನೇರುಘಟ್ಟ ರಾಷ್ಟ್ರೀಯ ಉದ್ಯಾನವನದಲ್ಲಿ, ಬೆಂಗಳೂರಿನ ಲಾಲ್‌ಬಾಗ್‌ನಲ್ಲಿ ಮತ್ತು ದೇವರಾಯನ ದುರ್ಗ ಸುತ್ತಮುತ್ತಲಿನ ಪ್ರದೇಶಗಳಲ್ಲಿ ಯಲ್ಲಪ್ಪರೆಡ್ಡಿಯವರ ಮಾರ್ಗದರ್ಶನದಲ್ಲಿ ನೆಡಲಾಗಿದೆ. ಬಿಳಿಗಿರಿರಂಗನಬೆಟ್ಟದಲ್ಲಿ ಬೆಳೆಯುವ ಅಪರೂಪದ ಮತ್ತು ಅಪಾಯದ ಅಂಚಿನಲ್ಲಿರುವ ಅನೇಕ ಸಸ್ಯಗಳನ್ನು ತಮ್ಮ ನರ್ಸರಿಯಲ್ಲಿ ಬೆಳೆಸುತ್ತಿದ್ದಾರೆ.

■ ಸತ್ಯಮೂರ್ತಿ ತೋಳಹುಣಸೆ

ರಿಯಲ್ ಸ್ಟಾರ್ ಉಪೇಂದ್ರ ಮೆಚ್ಚಿದ 'I am god' ಟ್ರೇಲರ್

I am god, ರವಿ ಗೌಡ ನಿರ್ದೇಶನ ಮಾಡಿ, ಹೀರೋ ಆಗಿ ಮಿಂಚಿ ಜೊತೆಗೆ ನಿರ್ಮಾಣ ಮಾಡಿರುವ ಸಿನಿಮಾ. ಈಗಾಗಲೇ ಎರಡು ಹಾಡುಗಳ ಮೂಲಕ ಪ್ರೇಕ್ಷಕರ ಗಮನ ಸೆಳೆದಿರೋ I am god ಸಿನಿಮಾ ಸದ್ಯ ತೆರೆಗೆ ಬರಲು ಸಿದ್ದವಾಗಿದೆ. ರವಿ ಗೌಡ ಅಭಿನಯದ ಈ ಸಿನಿಮಾದ ಟ್ರೇಲರ್ ಬಿಡುಗಡೆಯಾಗಿದೆ.



I am god ಅಂದ ತಕ್ಷಣ ನೆನಪಿಗೆ ಬರುವುದು ರಿಯಲ್ ಸ್ಟಾರ್ ಉಪೇಂದ್ರ. ನಟ ರವಿ ಗೌಡ ಕೂಡ ಉಪೇಂದ್ರ ಅವರ ಗರಡಿಯಲ್ಲಿ ಪಳಗಿರುವ ಪ್ರತಿಭೆ. ಉಪ್ಪಿ ಅವರ ಜೊತೆ ಉಪ್ಪಿ 2 ಸಿನಿಮಾದಲ್ಲಿ ಕೆಲಸ ಮಾಡಿ ನಂತರ ತಾವೇ ನಿರ್ದೇಶನ ಮಾಡಬೇಕು ಎನ್ನುವ ಕನಸು ಕಂಡಿದ್ದರು. ಇದೀಗ I am god ಸಿನಿಮಾ ನಿರ್ದೇಶನದ ಜೊತೆಗೆ ನಟನೆಯನ್ನು ಮಾಡುವ ಮೂಲಕ ಕನಸು ನನಸು ಮಾಡಿಕೊಂಡಿದ್ದಾರೆ.

ಇದೀಗ ಟ್ರೈಲರ್ ಮೂಲಕ ಅಭಿಮಾನಿಗಳ ಮುಂದೆ ಬಂದಿದ್ದಾರೆ ರವಿ ಗೌಡ. ತಮ್ಮ ಗುರುಗಳು ಹಾಗೂ ನೆಚ್ಚಿನ ನಟ ಉಪೇಂದ್ರ ಕೈಯಲ್ಲೇ ಟ್ರೈಲರ್ ರಿಲೀಸ್ ಮಾಡಿಸಿದ್ದಾರೆ. ಶಿಷ್ಯನ ಟ್ರೇಲರ್ ನೋಡಿ ರಿಯಲ್ ಸ್ಟಾರ್ ಸಿಕ್ಕಾಪಟ್ಟೆ ಮೆಚ್ಚುಗೆ ಪಡಿಸಿದರು. ಮೈಸೂರಿನಲ್ಲಿ ನಡೆದ ಟ್ರೇಲರ್ ರಿಲೀಸ್ ಇವೆಂಟ್‌ನಲ್ಲಿ ರಿಯಲ್ ಸ್ಟಾರ್, ನಟ ರವಿ ಗೌಡ ಉಪ್ಪಿ–2 ಸಿನಿಮಾ ಸಂದರ್ಭದಲ್ಲಿ ಎಷ್ಟು ಇಂಟ್ರೆಸ್ಟ್ ಕೊಟ್ಟು ಸಿನಿಮಾ ಬಗ್ಗೆ ಕಲಿತಿಕೊಳ್ಳುತ್ತಿದ್ದರು ಅನ್ನೋದನ್ನ ನೆನಪಿಸಿಕೊಂಡರು.

ಇದೇ ಸಮಯದಲ್ಲಿ ಮಾತನಾಡಿದ ನಾಯಕ ರವಿ ಗೌಡ, ಉಪ್ಪಿ ಸರ್ ಅವರನ್ನು ಮೊದಲು ಭೇಟಿ ಮಾಡಿದ ಸಂದರ್ಭ ವಿವರಿಸಿದರು. ಸಿನಿಮಾ ಮಾಡಬೇಕು ಅಂತ ನಿರ್ಧಾರ ಮಾಡಿದಾಗ ಯಾವುದೇ ಸಿನಿಮಾ ಯೂನಿವರ್ಸಿಟಿ ಬೇಡ ಉಪ್ಪಿ ಸರ್ ಹತ್ತಿರ ಹೋಗೋದು ಬೆಸ್ಟ್ ಅಂತ ಹೋಗಿ ರಿಕ್ವೆಸ್ಟ್ ಮಾಡಿ ಸೇರಿಕೊಂಡೆ ಎಂದರು. ಇದರ ಜೊತೆಗೆ I am God ಸಿನಿಮಾ ಕಷ್ಟ ಪಟ್ಟು ಮಾಡಿದ್ದೇವೆ. ಬಂದು ನೋಡಿ ಅಂತ ನಾವು ಹೇಳಲ್ಲ. ಆದರೆ ನಿಮ್ಮ ಗುಂಪಲ್ಲಿ ಪ್ರತಿ ಶುಕ್ರವಾರ ಕನ್ನಡ ಸಿನಿಮಾ ನೋಡುವ ಒಬ್ಬ ವ್ಯಕ್ತಿ ಅಂತು ಇದ್ದೇ ಇರ್ತಾರೆ. ಅವರಿಗೆ ಕಾಲ್ ಮಾಡಿ I am God ಸಿನಿಮಾ ಹೇಗಿದೆ ಅಂತ ಕೇಳಿ ಅಷ್ಟೇ ಸಾಕು ನಮಗೆ ಅಂದರು.

ಈ ಸಿನಿಮಾದಲ್ಲಿ ರವಿಗೌಡಗೆ ನಾಯಕಿಯಾಗಿ ವಿಜೇತಾ ಕಾಣಿಸಿಕೊಂಡಿದ್ದಾರೆ. ಜೊತೆಗೆ ರವಿಶಂಕರ್, ಅವಿನಾಶ್, ಅರುಣ ಬಾಲರಾಜ್ ಹಾಗೂ ನಿರಂಜನ್ ಕುಮಾರ್ ಅಭಿನಯ ಮಾಡಿದ್ದಾರೆ. ಅಜನೀಶ್ ಲೋಕನಾಥ್ ಸಂಗೀತ ನಿರ್ದೇಶನ, ಜಿತಿನ್ ದಾಸ್ ಕ್ಯಾಮೆರಾ ವರ್ಕ್ ಮಾಡಿದ್ದಾರೆ. ಇದೇ ನವೆಂಬರ್ 7 ರಂದು ರಾಜ್ಯಾದ್ಯಂತ I am god ಸಿನಿಮಾ ತೆರೆಗೆ ಬರುತ್ತಿದೆ.



ನ.21ಕ್ಕೆ ಕಂಗ್ರಾಚುಲೇಶನ್ಸ್ ಬ್ರದರ್

ತನ್ನ ವಿಭಿನ್ನ ಟೈಟಲ್ ಮೂಲಕವೇ ಸದ್ದು ಮಾಡುತ್ತಿರುವ ಚಿತ್ರ 'ಕಂಗ್ರಾಚುಲೇಶನ್ಸ್ ಬ್ರದರ್'. ಪ್ರತಾಪ್ ಗಂಧರ್ವ ಅವರ ನಿರ್ದೇಶನದ ಈ ಚಿತ್ರದಲ್ಲಿ ರಕ್ಷಿತ್‌ನಾಗ್, ಅನೂಷ, ಸಂಜನ್‌ದಾಸ್ ಪ್ರಮುಖ ಪಾತ್ರಗಳಲ್ಲಿ ನಟಿಸಿದ್ದಾರೆ. ಹರಿ ಸಂತೋಷ್ ಕಥೆ ಬರೆದು ಕ್ರಿಯೇಟಿವ್ ಹೆಡ್ ಆಗಿ ಕೆಲಸ ಮಾಡುತ್ತಿರುವ ಈ ಚಿತ್ರ ನವೆಂಬರ್ 21ರಂದು ರಾಜ್ಯಾದ್ಯಂತ ಬಿಡುಗಡೆಯಾಗುತ್ತಿದೆ. ಹಾಗಾಗಿ ವಿನೂತನ ಪ್ರಚಾರಕ್ಕೆ ಮುಂದಾಗಿರುವ ಚಿತ್ರ ತಂಡ ಟ್ಯಾಬುಲೋ ಮೂಲಕ ಕರ್ನಾಟಕದ ಪ್ರತಿ ಜಿಲ್ಲೆಗಳಿಗೂ ಭೇಟಿ ನೀಡಿ ಜನರಿಗೆ ಚಿತ್ರದ ಬಗ್ಗೆ ಮಾಹಿತಿ ನೀಡಲಿದೆ. ಈ ಪ್ರಚಾರಕ್ಕೆ ಕನ್ನಡಪರ ಹೋರಾಟಗಾರ ಸಾ.ರಾ.ಗೋವಿಂದು ಅವರು ವೀರೇಶ ಚಿತ್ರಮಂದಿರದ ಬಳಿ ಚಾಲನೆ ನೀಡಿದರು.

ಈ ಸಂದರ್ಭದಲ್ಲಿ ಗೋವಿಂದು ಮಾತನಾಡಿ, ಮೊದಲಿನಿಂದಲೂ ಸಂತು ಒಪ್ಪಿಕೊಂಡ ಕೆಲಸವನ್ನು ಅಚ್ಚುಕಟ್ಟಾಗಿ ಮಾಡುತ್ತಾರೆ. ಈ ಚಿತ್ರ ಖಂಡಿತ ಯಶಸ್ವಿಯಾಗುತ್ತದೆ ಎಂದು ಹಾರೈಸಿದರು. ನಂತರ ಚಿತ್ರದ ಕಥೆಗಾರ ಹರಿ ಸಂತೋಷ್ ಮಾತನಾಡುತ್ತಾ, ಈಗಿನ ಕಾಲದ ಯೂಥ್‌ಬೇಸ್ ಕಾನ್ಸೆಪ್ಟ್ ಇಟ್ಟುಕೊಂಡು ಈ ಚಿತ್ರ ಮಾಡಿದ್ದೇವೆ ಎಂದರು.

ನಿರ್ಮಾಪಕ ಪ್ರಶಾಂತ್ ಕಲ್ಲೂರ್, ಸಹ ನಿರ್ಮಾಪಕ ಹರೀಶ್ ರೆಡ್ಡಿ, ನಾಯಕ ನಟ ರಕ್ಷಿತ್‌ನಾಗ್, ನಾಯಕಿಯರಾದ ಸಂಜನದಾಸ್, ಅನೂಷ, ಕಲಾವಿದ ರಕ್ಷಿತ್ ಕಾಪು, ಸುದರ್ಶನ್, ಚೇತನ್ ದುರ್ಗ ಸಮಾರಂಭದಲ್ಲಿ ಉಪಸ್ಥಿತರಿದ್ದರು. ಗುರುಪ್ರಸಾದ್ ಅವರ ಛಾಯಾಗ್ರಹಣ, ಸೂರಜ್ ಜೋಯಿಸ್, ಧ್ರುವ್ ಅವರ ಸಂಗೀತ ಸಂಯೋಜನೆ ಹಾಗೂ ಹರೀಶ್ ರೆಡ್ಡಿ ಅವರ ಸಹನಿರ್ಮಾಣ ಚಿತ್ರಕ್ಕಿದೆ.





'ಬಾಸ್' ನೈಜಘಟನೆ ಪ್ರೇರಿತ ಕ್ರೈಮ್ ಥ್ರಿಲ್ಲರ್ ಚಿತ್ರ




ಇದೊಂದು ಸತ್ಯಘಟನೆ ಆಧಾರಿತ ಚಿತ್ರ. ಮರ್ಡರ್ ಸುತ್ತ ನಡೆಯುವ ಘಟನೆಗಳನ್ನು ಒಳಗೊಂಡ ಈ ಚಿತ್ರದಲ್ಲಿ ನಾಯಕ ಒಬ್ಬ ಸೆಲಬ್ರಟಿ, ಆತನಿಗೆ ಪತ್ನಿ ಅಲ್ಲದೆ ಒಬ್ಬ ಪ್ರೇಯಸಿಯೂ ಇರುತ್ತಾಳೆ. ಒಂದಷ್ಟು ಜನ ಸ್ನೇಹಿತರು ಸಹ ಇರುತ್ತಾರೆ. ಇಷ್ಟು ಹೇಳಿದ ಮೇಲೆ ಆ ಚಿತ್ರದ ಸೆಲಬ್ರಟಿ ಯಾರೆಂದು ಎಲ್ಲರಿಗೂ ಅರ್ಥವಾಗಿರುತ್ತೆ. ನಿನ್ನೆ ನಡೆದ ಬಾಸ್ ಚಿತ್ರದ ಪತ್ರಿಕಾಗೋಷ್ಠಿಯಲ್ಲಿ ನಿರ್ದೇಶಕ ವಿ.ಲವ ಅಡ್ಡಗೋಡೆಯ ಮೇಲೆ ದೀಪವಿಟ್ಟಂತೆ ಚಿತ್ರದ ವಿವರಣೆ ನೀಡಿದರು.

ಈ ಹಿಂದೆ ಮಡಮಕ್ಕಿ ನಟವರ್‌ಲಾಲ್ ಚಿತ್ರಗಳಲ್ಲಿ ನಟಿಸಿದ್ದ ತನುಷ್ ಶಿವಣ್ಣ ಬಾಸ್ ಚಿತ್ರದ ನಾಯಕನಾಗಿ ನಟಿಸಿದ್ದಾರೆ. ಕೊಲೆಯೊಂದರ ಸುತ್ತ ನಡೆಯುವ ಘಟನೆಗಳನ್ನೊಳಗೊಂಡ ಚಿತ್ರ ಇದಾಗಿದ್ದು, ವಿ.ಲವ ಕಥೆ, ಚಿತ್ರಕಥೆ ಬರೆದು ಆಕ್ಷನ್‌ಕಟ್ ಹೇಳಿದ್ದಾರೆ. ಚಿತ್ರದ ಟೈಟಲ್ ನೋಡಿದ ತಕ್ಷಣ ಅದು ಯಾರ ಬಗ್ಗೆ ಅಂತ ಅರ್ಥವಾಗಿ ಬಿಡುತ್ತದೆ. ಆದರೆ ನಾಯಕನಾಗಲೀ, ನಿರ್ದೇಶಕನಾಗಲಿ ಎಲ್ಲಿಯೂ ಅದನ್ನು ಬಿಟ್ಟುಕೊಡದೆ ಟ್ರೇಲರ್ ನೋಡಿದಾಗ, ನಿಮಗೇ ಎಲ್ಲವೂ ಅರ್ಥವಾಗುತ್ತೆ ಎಂದರು. ಬಾಸ್ ಚಿತ್ರಕ್ಕೆ ಸತ್ಯಮೇವ ಜಯತೆ ಎಂಬ ಅಡಿಬರಹವಿದ್ದು ಇಬ್ಬರು ನಾಯಕಿಯರಾಗಿ ಮೋನಿಕಾಗೌಡ ಹಾಗೂ ಪಾಯಲ್ ಚಂಗಪ್ಪ ನಟಿಸಿದ್ದಾರೆ,

ನಿರ್ದೇಶಕ ಲವ ಇದು ನೈಜಘಟನೆ ಆಧರಿಸಿದ ಕ್ರೈಮ್ ಥ್ರಿಲ್ಲರ್ ಚಿತ್ರ. ನವಂಬರ್ ಅಥವಾ ಡಿಸೆಂಬರ್‌ನಲ್ಲಿ ರಿಲೀಸ್ ಮಾಡುತ್ತಿದ್ದೇವೆ. ಸಮಾಜದಲ್ಲಿ ಪ್ರತಿನಿತ್ಯ ಇಂತಹ ಹಲವಾರು ಘಟನೆಗಳು ನಡೆಯುತ್ತವೆ. ವ್ಯಕ್ತಿಯೊಬ್ಬ ಕೊಲೆಯಾದಾಗ ಏನೇನೆಲ್ಲಾ ನಡೆಯಲಿದೆ ಎಂಬುದನ್ನು ಈ ಚಿತ್ರದ ಮೂಲಕ ತೋರಿಸುತ್ತಿದ್ದೇವೆ. ಹೀರೋನ ಎಲ್ಲರೂ ಬಾಸ್ ಅಂತ ಕರೆಯುತ್ತಿರುತ್ತಾರೆ, ಹಾಗಾಗಿ ಅದನ್ನೇ ಚಿತ್ರದ ಟೈಟಲ್ ಆಗಿಟ್ಟಿದ್ದೇವೆ. ದಾಸನಪುರ, ಕಮಲಾನಗರ ಸುತ್ತಮುತ್ತ 40 ದಿನಗಳವರೆಗೆ ಚಿತ್ರೀಕರಿಸಿದ್ದೇವೆ ಎಂದರು.

ನಂತರ ನಾಯಕ ತನುಷ್ ಮಾತನಾಡುತ್ತಾ, ಇದು ನನ್ನ 5ನೇ ಚಿತ್ರ. ಚಿತ್ರದಲ್ಲಿ ನಾನೊಬ್ಬ ಸೆಲಬ್ರಟಿಯಾಗಿ ಕಾಣಿಸಿಕೊಂಡಿದ್ದೇನೆ ಎಂದರು. ಮೈಸೂರು ಮೂಲದ ನಾಯಕಿ ಮೋನಿಕಾಗೌಡ ಮಾತನಾಡಿ, ಚಿತ್ರದಲ್ಲಿ ನಾನು ನಾಯಕನ ಹೆಂಡತಿ ಶಿಲ್ಪಾ ಎಂಬ ಪಾತ್ರ ನಿರ್ವಹಿಸಿದ್ದೇನೆ ಎಂದರು.

ಸಿನಿಪದಬಂಧ–600



ಉಮ್ಮತ್ತೂರು ಇಂದುಶೇಖರ್
ಮೊ.9880820462



ಹೆಸರು ____________

ವಿಳಾಸ ____________

ದೂರವಾಣಿ ಸಂಖ್ಯೆ ____________

ಎಡದಿಂದ ಬಲಕ್ಕೆ

1.	ರಾಕಿಂಗ್ ಸ್ಟಾರ್‌ನ ಚಿಗುರಿದ ಚಿತ್ತ !	6
3.	ವಿಷ್ಣುವರ್ಧನ್ – ಕಲ್ಪನಾ ಮನೆತನದಲ್ಲಿ "ಬೆಳಗಿದ ಹಣತೆ"	4
6.	ನೀನಾಸಂ ಸತೀಶ್‌ನ ಸಕ್ಕರೆ ನಾಡಿನಲ್ಲಿ ಪ್ರೀತಿ ಅಡಗಿದೆ	6
9.	ಅಮೃತ ಘಳಿಗೆ ಚಿತ್ರದ ನಾಯಕಿ ಕಮಲ ಮುಡಿದಿದ್ದಾಳೆ	5
10.	ಶಿವನ ಮೂರು ಮೊನೆಯುಳ್ಳ ಆಯುಧ	3
11.	ವಿಷ್ಣು – ಅಂಬಿ ಗೆಳೆತನದಲ್ಲಿ ದ್ವೇಷ ಇಲ್ಲಿ ಚೆಲ್ಲಾಪಿಲ್ಲಿಯಾಗಿದೆ	4
12.	ಕಲ್ಪನಾ ಎಂದೊಡನೆ ನೆನಪಾಗುವ ಬಿರುದು	5
15.	ವಾಸು ಅಭಿನಯದ ಸ್ವಪ್ನ ಜಗತ್ತು	6
18.	ವಿಷ್ಣುವರ್ಧನ್ ಅಭಿನಯದಲ್ಲಿ ಕೊಲೆಗಾರ ನಡೆಸಿದ ಪಿತೂರಿ	6
19.	ನೀನಾಸಂ ಸತೀಶ್ ಯೋಗ್ಯನಲ್ಲ	3

ಮೇಲಿನಿಂದ ಕೆಳಕ್ಕೆ

1.	ಕನ್ನಡದ ಫಸ್ಟ್ ನೈಟ್	5
2.	_ _ _ ಮಲ್ಲು	3
4.	ಮನಿ ಹನಿಯೊಂದಿಗೆ ಬಂದ ಗ್ರಹ	2
5.	ನಮ್ಮ ಪಕ್ಕದ ರಾಜ್ಯದ ಕಿಚ್ಚನ ಧಾರ್ಮಿಕ ಯಾತ್ರಾ ಸ್ಥಳ	4
7.	ಶ್ರೀನಾಥ್ – ಮಂಜುಳಾ ಸರಿಸಿದ ಹಿಮ ಪರದೆ	5
8.	ಪ್ರಭಾಕರ್ – ಮಹಾಲಕ್ಷ್ಮಿ ಅಭಿನಯಕ್ಕೆ ಎ. ಟಿ. ರಘು ನಿರ್ದೇಶಕ	4
11.	ಪ್ರತಿಕಾರಕ್ಕಾಗಿ ಭವ್ಯಳ ಪಿತೂರಿ	5
12.	ಪುನೀತ್ – ಪಾರ್ವತಿ ಮೆನನ್ ಅಭಿನಯದ 'ಸಂಗಮ'	3
13.	ನೆನಪಿರಲಿ ಪ್ರೇಮ್ ಒಳ್ಳೆಯ ನಡತೆಯುಳ್ಳವನು	4
14.	ರಾಮಕೃಷ್ಣ – ಜೀವಿತಾಳ ಲಘ್ನ ಬಲ	5
16.	ದಮಯಂತಿಯ ಗಂಡ ಪಾಕಪ್ರವೀಣ	2
17.	ಗಣೇಶ ಸುಬ್ರಮಣ್ಯ ಚಿತ್ರದ ನಾಯಕಿ	3

ಸಿನಿ ಪದಬಂಧ 599ರ ಉತ್ತರ

ಮ	ಹಾ	ರಾ	ಜ		ನ	ವ	ಭಾ	ರ	ತ	
	ವಿ				ವ				ವ	
ಕ	ನ	ಸು	ನ	ನ	ಸು		ಬ	ಳ್ಳಾ	ರಿ	
	ಹೆ				ಮ		ಯ		ನ	
ಗಂ	ಡೆ	ದೆ	ಭೈ	ರ			ಸ		ತೇ	
			ರ		ನ	ನ್ನ	ದೇ	ವ	ರು	
	ಜ	ಯ	ವಿ	ಜ	ಯ		ಬಂ			
		ಮ			ನ		ದ	ಶ	ರ	ಥ
ಜ		ಕಿಂ		ಭ			ಭಾ		ವಿ	
ನ	ನ್ನ	ಕ	ರ್ತ	ವ್ಯ		ಭಾ	ಗ್ಯ	ದೇ	ವ	ತೆ
		ರ							ರ್ಮ	

ವಿಜೇತರು: ಕೆ.ಎಂ.ಚಿರಾಗ್, S/O ಮಹದೇವ, ಹೊಂಗನೂರು ಗ್ರಾಮ & ಅಂಚೆ, ಚಾಮರಾಜನಗರ ತಾಲೂಕು & ಜಿಲ್ಲೆ

ವಿಳಾಸ: 'ಸಿನಿಬಂಧ' ವಿಭಾಗ, 'ಮೈಸೂರು ಮಿತ್ರ' ದಿನಪತ್ರಿಕೆ, ಬನ್ನಿಮಂಟಪ, ಮೈಸೂರು–570 015

ಭಾರತಿ ಟೀಚರ್ ಕಂಡ ಸಾಕ್ಷರತಾ ಗ್ರಾಮದ ಕನಸು



ಹಳ್ಳಿಯ ಸರ್ಕಾರಿ ಶಾಲೆಯಲ್ಲಿ ಓದಿದ ವಿದ್ಯಾರ್ಥಿನಿ ಭಾರತಿ, ಮುಂದೆ ಅದೇ ಹಳ್ಳಿಗೆ ಟೀಚರ್ ಆಗಿ ಬಂದು ತನ್ನ ಹಳ್ಳಿಯನ್ನು ಸಂಪೂರ್ಣ ಸಾಕ್ಷರತಾ ಗ್ರಾಮವಾಗಿ ಮಾಡಲು ಹೇಗೆಲ್ಲ ಪ್ರಯತ್ನಿಸಿ ಯಶಸ್ವಿಯಾಗುತ್ತಾಳೆ ಎಂದು ಭಾರತಿ ಟೀಚರ್ ಏಳನೇ ತರಗತಿ ಚಿತ್ರದ ಮೂಲಕ ನಿರ್ದೇಶಕ ಎಂ.ಎಲ್. ಪ್ರಸನ್ನ ಅವರು ಹೇಳ ಹೊರಟಿದ್ದಾರೆ. ಸಿರಗುಪ್ಪದ ರಾಘವೇಂದ್ರ ರೆಡ್ಡಿ ಅವರು ಈ ಚಿತ್ರವನ್ನು ನಿರ್ಮಿಸಿದ್ದು, ಕ್ರಿಷಿ ಸಂಸ್ಥೆಯ ವೆಂಕಟ್‌ಗೌಡ ಕ್ರಿಯೇಟಿವ್ ಹೆಡ್ ಆಗಿದ್ದಾರೆ. ಇತ್ತೀಚೆಗೆ ನಡೆದ ಸಮಾರಂಭದಲ್ಲಿ ಸಾಹಿತಿ ಡಾ.ವಿ.ನಾಗೇಂದ್ರ ಪ್ರಸಾದ್ ಆಡಿಯೋ ಬಿಡುಗಡೆ ಮಾಡಿದರು.

ಭಾರತಿ ಟೀಚರ್‌ಗೆ ತಾನು ಹುಟ್ಟಿ ಬೆಳೆದ ಹಳ್ಳಿಯ ಪ್ರತಿಯೊಬ್ಬರೂ ಓದು–ಬರಹ ಕಲಿಯಬೇಕೆನ್ನುವ ಆಸೆ, ಕನಸಾಗಿರುತ್ತದೆ. ಆಕೆ ತನ್ನ ಕನಸನ್ನು ನನಸು ಮಾಡಲು ಹೋಗಿ ಏನೆಲ್ಲ ನೋವು, ಅಡೆತಡೆಗಳನ್ನು ಎದುರಿಸುತ್ತಾಳೆ, ಅದನ್ನು ವ್ಯವಸ್ಥೆಯ ಮೂಲಕ ಹೇಗೆ ಸಾಧಿಸಿಕೊಳ್ಳುತ್ತಾಳೆ, ಆಕೆಗೆ ಒಬ್ಬ ಜಿಲ್ಲಾಧಿಕಾರಿ ಹೇಗೆ ಬೆನ್ನೆಲುಬಾಗಿ ನಿಲ್ಲುತ್ತಾರೆ ಎನ್ನುವುದೇ ಭಾರತಿ ಟೀಚರ್ ಏಳನೇ ತರಗತಿ ಚಿತ್ರದ ಕಾನ್ಸೆಪ್ಟ್.

ಚಿತ್ರದಲ್ಲಿ ಭಾರತಿ ಟೀಚರ್ ಆಗಿ ಕು.ಯಶಿಕಾ, ಅಲ್ಲದೆ ದಿವ್ಯಾ ಅಂಚನ್, ಶಿಕ್ಷಕರಾಗಿ ಸಿಹಿಕಹಿ ಚಂದ್ರು, ಗೋವಿಂದೇಗೌಡ, ಅಶ್ವಿನ್ ಹಾಸನ್, ಬೆನಕ ನಂಜಪ್ಪ, ರೋಹಿತ್ ರಾಘವೇಂದ್ರ ಸೌಜನ್ಯ ಸುನೀಲ್ ಉಳಿದ ಪಾತ್ರಗಳಲ್ಲಿದ್ದಾರೆ. ಎಂ.ಬಿ.ಹಳ್ಳಿಕಟ್ಟಿ ಅವರ ಛಾಯಾಗ್ರಹಣ, ಕೆ.ಎಂ.ಇಂದ್ರ ಅವರ ಸಂಗೀತ ಈ ಚಿತ್ರಕ್ಕಿದ್ದು, ರಾಘವ್ ಸೂರ್ಯ ಹಾಗೂ ದರ್ಶನ್‌ಗೌಡ ಕಾರ್ಯಕಾರಿ ನಿರ್ಮಾಪಕರಾಗಿದ್ದಾರೆ.

ನಿರ್ದೇಶಕ ಎಂ.ಎಲ್.ಪ್ರಸನ್ನ ಮಾತನಾಡಿ, ಭಾರತಿ ಟೀಚರ್ ತನ್ನ ಸಾಧನೆಯ ಮೂಲಕ ಪ್ರತಿಯೊಬ್ಬ ಹೆಣ್ಣು ಮಕ್ಕಳಿಗೆ ಸ್ಫೂರ್ತಿಯಾಗಿ ನಿಲ್ಲುತ್ತಾಳೆ. ತನ್ನೂರಿನ ಎಲ್ಲರನ್ನೂ ಸಾಕ್ಷರರನ್ನಾಗಿ ಮಾಡಬೇಕೆಂಬ ಆಕೆಯ ಕನಸು, ನೋವು, ಅವಮಾನಗಳನ್ನೆಲ್ಲ ದಾಟಿ ಆಕೆ ಕೊನೆಗೂ ಗೆಲುವು ಸಾಧಿಸುವ ಕಥೆಯನ್ನು ನಮ್ಮ ಚಿತ್ರದ ಮೂಲಕ ಹೇಳಿದ್ದೇವೆ. ಸಚಿವ ಸಂತೋಷ್ ಲಾಡ್ ಅವರು ಜಿಲ್ಲಾಧಿಕಾರಿಯ ಪಾತ್ರ ನಿರ್ವಹಿಸುತ್ತಿದ್ದಾರೆ. ಅವರ ಭಾಗದ ಶೂಟಿಂಗ್ ಮಾತ್ರವೇ ಬಾಕಿಯಿದೆ ಎಂದರು.

ಭಗವದ್ಗೀತೆಯ ಮಾತುಗಳೇ 'ವರ್ಣ' ಚಿತ್ರಕ್ಕೆ ಸ್ಫೂರ್ತಿ



ದೇವಶರ್ಮ ಅವರ ನಿರ್ದೇಶನದ, ಅರ್ಜುನ್ ಯೋಗಿ ನಾಯಕನಾಗಿ ನಟಿಸಿರುವ ವರ್ಣ ಚಿತ್ರದ ಟೀಸರ್ ಬಿಡುಗಡೆ ಸಮಾರಂಭ ಇತ್ತೀಚೆಗೆ ನಡೆಯಿತು. ಈ ಸಂದರ್ಭದಲ್ಲಿ ಮಾತನಾಡಿದ ನಿರ್ದೇಶಕರು, ಶ್ರೀಕೃಷ್ಣನು ಭಗವದ್ಗೀತೆಯಲ್ಲಿ ಹೇಳಿರುವ 'ಕರ್ಮಣ್ಯೇ ವಾಧಿಕಾರಸ್ತೇ ಮಾಫಲೇಷು ಕದಾಚನ' ಎಂಬ ಮಾತೇ ಈ ಚಿತ್ರದ ಕಥೆಗೆ ಸ್ಫೂರ್ತಿ. ಆರಂಭದಲ್ಲಿ ನಾವು ಈ ಕಥೆಯನ್ನು ಕಿರುಚಿತ್ರ ಮಾಡಲು ಹೊರಟಿದ್ದೆವು. ನಂತರ ನಿರ್ಮಾಪಕ ಮಲ್ಲೇನೇನಿ ನವೀನ್ ಚೌಧರಿ ಅವರು ಈ ಕಥೆಯನ್ನು ಕೇಳಿ ಇಷ್ಟಪಟ್ಟು ಸಿನಿಮಾ ಮಾಡಲು ಮುಂದಾದರು. ಅರ್ಜುನ್ ಯೋಗಿ, ಭವ್ಯಗೌಡ ಪ್ರಮುಖ ಪಾತ್ರಗಳಲ್ಲಿದ್ದು, ವಿಲನ್ ಪಾತ್ರದಲ್ಲಿ ಲಂಕೇಶ್ ರಾವಣ ನಟಿಸಿದ್ದಾರೆ. ರಮೇಶ್ ಕೃಷ್ಣ ಅವರ ಸಂಗೀತ, ಗೌರಿ ವೆಂಕಟೇಶ್ ಅವರ ಛಾಯಾಗ್ರಹಣ ಚಿತ್ರಕ್ಕಿದೆ. ಚಿತ್ರವೀಗ ರಿಲೀಸ್ ಹಂತದಲ್ಲಿದ್ದು, ಶೀಘ್ರವೇ ಟ್ರೇಲರ್ ಬರಲಿದೆ ಎಂದರು.

ನಾಯಕ ಅರ್ಜುನ್ ಯೋಗಿ ಮಾತನಾಡುತ್ತಾ, ಇದು ನನ್ನ ಐದನೇ ಚಿತ್ರ. ತಪ್ಪನ್ನು ಸಹಿಸದ, ತಪ್ಪು ಮಾಡಿದವರನ್ನು ಬಿಡದ ಹಳ್ಳಿ ಹುಡುಗನಾಗಿ ನಾನು ಅಭಿನಯಿಸಿದ್ದೇನೆ. ಚಿತ್ರದಲ್ಲಿ ನನ್ನ ಪಾತ್ರದ ಹೆಸರು ವರ್ಣ. ಇದೊಂದು ಹಳ್ಳಿ ಸೊಗಡಿನ ಕಥೆಯಾಗಿದೆ ಎಂದು ಹೇಳಿದರು.

ನಾಯಕಿ ಭವ್ಯಗೌಡ ತಮ್ಮ ಪಾತ್ರದ ಬಗ್ಗೆ ಹೇಳಿದರು. ಸಂಗೀತ ನಿರ್ದೇಶಕ ರಮೇಶ್ ಕೃಷ್ಣ ಅವರು ಹಾಡುಗಳ ಬಗ್ಗೆ ಮಾಹಿತಿ ನೀಡಿದರು. ನಟಿಯರಾದ ಅಮೃತ, ಶಿವಾನಿ, ನಟರಾದ ಧ್ರುವ್‌ಮೂರ್ತಿ, ಮಂಡ್ಯ ಸಿದ್ದು, ಛಾಯಾಗ್ರಾಹಕ ಗೌರಿ ವೆಂಕಟೇಶ್, ನೃತ್ಯ ನಿರ್ದೇಶಕರಾದ ಹೈಟ್ ಮಂಜು, ಗೀತಾ ಹಾಗೂ ಸಾಹಸ ನಿರ್ದೇಶಕ ಚಿನ್ನಯ್ಯ ಎಲ್ಲರೂ ಚಿತ್ರದ ಕುರಿತಂತೆ ಮಾತನಾಡಿದರು.

ಮೈಸೂರು ಮಿತ್ರ

ರೈತ ವಿರೋಧಿ ಆಡಳಿತ, ಪ್ರಾಣಿ-ಮಾನವ ಸಂಘರ್ಷ ತಡೆಯಲು ವಿಫಲ

ಅರಣ್ಯ ಇಲಾಖೆಗೆ ರೈತರ ಮುತ್ತಿಗೆ

ಸರಗೂರು: ಭಾರತೀಯ ಜನತಾ ಪಾರ್ಟಿ ಮೈಸೂರು (ಗ್ರಾಮಾಂತರ) ರೈತ ಮೋರ್ಚ ಸರಗೂರು ತಾಲೂಕು ವಲಯ ವತಿಯಿಂದ ರೈತರು ಅರಣ್ಯ ಇಲಾಖೆಗೆ ಮುತ್ತಿಗೆ ಹಾಕಿ ಪ್ರತಿಭಟನೆಯನ್ನು ನಡೆಸಿದರು.



ಬಿಜೆಪಿ ರೈತಮೋರ್ಚಾ ವತಿಯಿಂದ ರೈತರು ಅರಣ್ಯ ಇಲಾಖೆಗೆ ಮುತ್ತಿಗೆ ಹಾಕಿ ಪ್ರತಿಭಟನೆ ನಡೆಸುತ್ತಿರುವುದು.

ಬಿಜೆಪಿ ಪ್ರತಿಭಟನಾಕಾರರು ಹಸಿರು ಶಾಲು ಧರಿಸಿ ಬಸ್ ನಿಲ್ದಾಣದಿಂದ ರಾಜ್ಯ ಸರ್ಕಾರದ ವಿರುದ್ಧ ದಿಕ್ಕಾರ ಕೂಗುತ್ತಾ ಮೆರವಣಿಗೆ ಮೂಲಕ ಸಾಗಿ ಅರಣ್ಯ ಇಲಾಖೆ ಕಚೇರಿಗೆ ಮುತ್ತಿಗೆ ಹಾಕಿ ರೈತರ ಹಿತ ಕಾಪಾಡುವಲ್ಲಿ ಕಾಂಗ್ರೆಸ್ ಸರ್ಕಾರ ವಿಫಲವಾಗಿದೆ, ರಾಜ್ಯದಲ್ಲಿ ಮಿತಿಮೀರಿದ ಪ್ರಾಣಿ–ಮಾನವ ಸಂಘರ್ಷ ತಡೆಯುವಲ್ಲಿ ವಿಫಲವಾಗಿದೆ. ಜೊತೆಗೆ ರೈತ ವಿರೋಧಿ ನೀತಿಯಿಂದ ರೈತರಿಗೆ ಆತ್ಮಹತ್ಯೆ ಭಾಗ್ಯ ವನ್ನು ಕರುಣಿಸಿದ ಕಾಂಗ್ರೆಸ್ ಸರ್ಕಾರಕ್ಕೆ, ಬೇಜವಾಬ್ಧಾರಿ ಅರಣ್ಯ ಸಚಿವರ ವಿರುದ್ಧ ಆಕ್ರೋಶ ವ್ಯಕ್ತಪಡಿಸಿದರು.

ರಾಜ್ಯ ರೈತ ಮೋರ್ಚಾ ಪ್ರಧಾನ ಕಾರ್ಯ ದರ್ಶಿ ಡಾ.ನವೀನ್ ಗೌಡ ಮಾತನಾಡಿ, ವಾರದ ಹಿಂದೆ ಬಡಗಲಪುರ ಗ್ರಾಮದ ರೈತನ ಮೇಲೆ ಹುಲಿ ದಾಳಿ ನಡೆಸಿ ಗಾಯ ಗೊಳಿಸಿರುವ ಘಟನೆ ಮಾಸುವ ಮುನ್ನ ಬೆಣ್ಣೆಗೆರೆ ಗ್ರಾಮದ ರೈತ ರಾಜಶೇಖರ್ ಎಂಬುವರ ಮೇಲೆ ಹುಲಿ ದಾಳಿ ನಡೆಸಿ ಆತನನ್ನು ಬಲಿ ತೆಗೆದುಕೊಂಡಿದೆ. ಈ ಬಗ್ಗೆ ಸಚಿವ ಈಶ್ವರ ಖಂಡ್ರೆ, ಗಮನಕ್ಕೆ ತಂದರೂ ಸ್ಥಳಕ್ಕೆ ಆಗಮಿಸಿದೆ ರೈತರನ್ನು ಕಡೆಗಣಿಸಿದ್ದಾರೆ ಎಂದು ದೂರಿದರು,

ಸರಗೂರು ಮಂಡಲ ಅಧ್ಯಕ್ಷ ಕೆ. ಪಿ. ಗುರುಸ್ವಾಮಿ ಮಾತನಾಡಿ, ರಾಜ್ಯದ ಕಾನೂನು ಸುವ್ಯವಸ್ಥೆ ಅತ್ಯಂತ ಹದಗೆಟ್ಟಿದೆ. ರೈತನ ಸಾವಿಗೆ ಅರಣ್ಯ ಇಲಾಖೆ ಹೊಣೆಯಾಗಿದ್ದು, ಇಲಾಖೆ ಅಧಿಕಾರಿಗಳನ್ನು ಅಮಾನತು ಮಾಡಬೇಕು, ಮೃತನ ಕುಟುಂಬಕ್ಕೆ ಹೆಚ್ಚು ಪರಿಹಾರ ಘೋಷಿಸಬೇಕು, ಸರಗೂರು ತಾಲೂಕಿನಲ್ಲಿಯೇ ಸಚಿವ ಈಶ್ವರ ಖಂಡ್ರೆ ಕಾರ್ಯಕ್ರಮದಲ್ಲಿ ಇದ್ದರೂ ಮೃತ ರಾಜ ಶೇಖರ್ ಹಾಗೂ ಕುಟುಂಬಸ್ಥರ ಭೇಟಿ ಮಾಡಿ ಸಾಂತ್ವನವನ್ನು ತಿಳಿಸಲಿಲ್ಲ ಎಂದು ಆಕ್ರೋಶ ವ್ಯಕ್ತಪಡಿಸಿದರು,

ಸರಗೂರು ಮಂಡಲ ಅಧ್ಯಕ್ಷ ಕೆ.ಪಿ.ಗುರುಸ್ವಾಮಿ, ಎಚ್.ಡಿ.ಕೋಟೆ ಮಂಡಲ ಅಧ್ಯಕ್ಷ ಶಂಭೇಗೌಡ, ಜಿಲ್ಲಾ ರೈತ ಮೋರ್ಚಾ ಅಧ್ಯಕ್ಷ ಶ್ರೀನಿವಾಸ್‌ಗೌಡ, ಜಿಲ್ಲಾ ವಕ್ತಾರರಾದ ವಸಂತ್ ಕುಮಾರ್, ದಯಾನಂದ ಪಾಟೀಲ್, ಜಿಲ್ಲಾ ರೈತ ಮೋರ್ಚಾ ಪ್ರಧಾನ ಕಾರ್ಯದರ್ಶಿ ಟಿ.ವೆಂಕಟೇಶ್, ಜಿಲ್ಲಾ ಕಾರ್ಯದರ್ಶಿ ಮನುಗನಹಳ್ಳಿ ಮಂಜುನಾಥ್, ಸರಗೂರು ಮಂಡಲ ರೈತ ಮೋರ್ಚ ಅಧ್ಯಕ್ಷ ಶಿವಶಂಕರ್, ಪ್ರಕಾಶ್ ಕಲ್ಲಳ್ಳಿ, ವೆಂಕಟಸ್ವಾಮಿ, ಹೆಚ್.ಸಿ.ಲಕ್ಷ್ಮಣ್, ಮುಖಂಡರಾದ ಗುರುಸ್ವಾಮಿ, ಬಿಡಗಲು ರಾಜು, ಮಂಡಲ ಮಾಜಿ ಅಧ್ಯಕ್ಷರಾದ ಚಾಮಲಾಪುರ ಗಿರೀಶ್, ಕೋಟೆ ವೈಟಿ ಮಹೇಶ್, ಹಂಚೀಪುರ ಗುರುಸ್ವಾಮಿ, ಕಾಟವಾಳು, ನಟರಾಜು ಇದ್ದರು.

ಒಗ್ಗಟ್ಟಿನಿಂದ ಕಾರ್ಯನಿರ್ವಹಿಸಿದರೆ ಗ್ರಾಮೀಣ ಭಾಗದ ಸಮಸ್ಯೆ ನಿವಾರಣೆ

ಅಧಿಕಾರಿಗಳಿಗೆ ಶಾಸಕ ಜಿ.ಡಿ.ಹರೀಶ್ ಗೌಡ ಸಲಹೆ

ಹುಣಸೂರು, ಅ.30– ತಾಲೂಕಿನ ಗ್ರಾಮೀಣ ಭಾಗದಲ್ಲಿ ಜನರು ಹಲವು ಸಮಸ್ಯೆಗಳನ್ನು ಎದುರಿಸುತ್ತಿದ್ದಾರೆ. ಈ ಸಮಸ್ಯೆ ಬಗೆಹರಿಸಲು ಕಂದಾಯ, ಸರ್ವೆ ಮತ್ತು ಪಂಚಾಯಿತಿ ಅಧಿಕಾರಿಗಳು ಒಗ್ಗಟ್ಟಿನಿಂದ ಕೆಲಸ ನಿರ್ವಹಿಸಿದಲ್ಲಿ ಪರಿಹಾರ ಕಂಡುಕೊಳ್ಳಲು ಸಾಧ್ಯ ಎಂದು ಶಾಸಕ ಜಿ.ಡಿ.ಹರೀಶ್‌ಗೌಡ ಸಲಹೆ ನೀಡಿದರು.



ಸಭೆಯಲ್ಲಿ ಶಾಸಕ ಜಿ.ಡಿ.ಹರೀಶ್‌ಗೌಡ ಮಾತನಾಡುತ್ತಿರುವುದು.

ನಗರಸಭೆ ಸಭಾಂಗಣದಲ್ಲಿ ತಾಲೂಕು ಗ್ರಾಪಂ ಪಿಡಿಒ, ಗ್ರಾಮ ಲೆಕ್ಕಾಧಿಕಾರಿ ಮತ್ತು ಸರ್ವೆಯರ್‌ಗಳ ಸಭೆಯಲ್ಲಿ ಮಾತನಾಡಿದ ಅವರು, ಗ್ರಾಮಗಳ ಹೊಲ ಗದ್ದೆಗಳಿಗೆ ಹೋಗುವ ರಸ್ತೆ, ಕೆರೆ ಒತ್ತುವರಿ, ಸ್ಮಶಾನ ಮತ್ತು ಸರ್ಕಾರಿ ನಿವೇಶನ ಒತ್ತುವರಿಗಳಿಂದ ಜನರಲ್ಲಿ ಅಶಾಂತಿ ಉಂಟಾಗಿದೆ. ಈ ಸಮಸ್ಯೆ ಬಗೆಹರಿಸುವ ದಿಕ್ಕಿನಲ್ಲಿ ಕಂದಾಯ ಇಲಾಖೆ ಸೂಕ್ತ ಕ್ರಮ ಕೈಗೊಳ್ಳಬೇಕು ಎಂದರು.

ಪಂಚಾಯಿತಿ ಹಂತದಲ್ಲಿ ಕ್ರಿಯಾಯೋಜನೆ ಸಿದ್ದಪಡಿಸಿ ಸಭೆಯಲ್ಲಿ ಚರ್ಚಿಸಿ ಪರಿಹಾರ ಕಂಡುಕೊಳ್ಳುವ ಬಗ್ಗೆ ಅಭಿವೃದ್ಧಿ ಅಧಿಕಾರಿಗಳು ಗಮನಿಸಬೇಕು. ಕಳೆದ ಸಭೆಯಲ್ಲಿ ಸರ್ಕಾರಿ ನಿವೇಶನ ಗುರುತಿಸಿ ಮಾಹಿತಿ ನೀಡುವಂತೆ ಸೂಚಿಸಲಾಗಿತ್ತು. ಆದರೆ ಪಿಡಿಒ ಈ ಬಗ್ಗೆ ಕ್ರಮವಹಿಸಿಲ್ಲ ಎಂದು ಗುಡುಗಿದರು.

ಕ್ಷೇತ್ರದ ಗ್ರಾಮೀಣ ಭಾಗದ ಪ್ರವಾಸದ ವೇಳೆ ಸಾರ್ವಜನಿಕರಿಂದ ಸ್ಮಶಾನ ಸಮಸ್ಯೆ ಬಗ್ಗೆ ಅಹವಾಲು ಬರುತ್ತಿದ್ದು, ಪಂಚಾಯಿತಿ ಎಷ್ಟು ಸ್ಮಶಾನ ಅಭಿವೃದ್ಧಿಪಡಿಸಿದೆ ಎಂದು ಪ್ರಶ್ನಿಸಿದರು. ತಹಶೀಲ್ದಾರ್ ಮಂಜುನಾಥ್ ಇದಕ್ಕೆ ಉತ್ತರಿಸಿ, ತಾಲೂಕಿನ 211 ಗ್ರಾಮಗಳಲ್ಲಿ 248 ಸ್ಮಶಾನಗಳಿವೆ. ಹೆಚ್ಚುವರಿ ಸ್ಮಶಾನ ಅಭಿವೃದ್ಧಿಗೆ ಪ್ರಸ್ತಾವನೆ ನಿರೀಕ್ಷೆಯಲ್ಲಿದ್ದೇವೆ ಎಂದರು.

ತಾ.ಪಂ. ಕಾರ್ಯ ನಿರ್ವಹಣಾಧಿಕಾರಿ ಹೊಂಗಯ್ಯ ಉತ್ತರಿಸಿ, ಪ್ರತಿ ಪಂಚಾಯಿತಿ ವ್ಯಾಪ್ತಿಯಲ್ಲಿ ಸರ್ಕಾರಿ ನಿವೇಶನ ಗುರುತಿಸಿ ಸ್ಮಶಾನ ಅಭಿವೃದ್ಧಿಗೆ ನರೇಗಾ ಯೋಜನೆ ಬಳಸಿಕೊಳ್ಳಲು ಸೂಚಿಸಿದೆ ಎಂದರು.

ಉದ್ದೂರು ಕಾವಲ್ ಗ್ರಾಮ ಲೆಕ್ಕಾಧಿಕಾರಿ ಶಿವಕುಮಾರ್ ಮಾತನಾಡಿ, ನಂಜಾಪುರ, ಗೌರಿಪುರ ಗ್ರಾಮದಲ್ಲಿ ಸರ್ಕಾರಿ ನಿವೇಶನದ ಕೊರತೆ ಇದೆ ಎಂದರು. ಗಾಗೇನಹಳ್ಳಿ ಅಧಿಕಾರಿ ನಾಗೇಶ್ ಮಾತನಾಡಿ, ಸರ್ಕಾರಿ ನಿವೇಶನ ಗುರುತಿಸಿ ಸರ್ವೆ ಇಲಾಖೆಗೆ ಸರ್ವೆ ನಡೆಸುವಂತೆ 2 ವರ್ಷದ ಹಿಂದೆ ಪ್ರಸ್ತಾವನೆ ಸಲ್ಲಿಸಿದ್ದರೂ ಈವರೆಗೂ ಕ್ರಮವಹಿಸಿಲ್ಲ ಎಂದರು. ಬಿಳಿಕೆರೆ ಹೋಬಳಿ ದಲ್ಲಾಳುಕೊಪ್ಪಲು ಗ್ರಾಮದಲ್ಲಿ ಖಾಸಗಿ ಶುದ್ಧ ಕುಡಿಯುವ ನೀರು ಕಂಪನಿ ಸರ್ಕಾರಿ ನಿವೇಶನ ಒತ್ತುವರಿ ಮಾಡಿಕೊಂಡಿದ್ದು ತೆರವುಗೊಳಿಸಿ ಪಂಚಾಯಿತಿ ಕಚೇರಿ ನಿರ್ಮಾಣಕ್ಕೆ ಮೀಸಲಿಡಿ ಎಂದರು.

ನಾಪತ್ತೆಯಾಗಿದ್ದ ವಕೀಲನ ಶವ ಲಕ್ಷ್ಮಣ ತೀರ್ಥ ನದಿಯಲ್ಲಿ ಪತ್ತೆ

ಆತ್ಮಹತ್ಯೆ ಶಂಕೆ ವ್ಯಕ್ತಪಡಿಸಿದ ಪೊಲೀಸರು



ಹುಣಸೂರು: ಕಚೇರಿಗೆ ಹೋಗುತ್ತೇನೆಂದು ಮನೆಯಿಂದ ಹೊರ ಬಂದ ವಕೀಲರೊಬ್ಬರ ಮೃತ ದೇಹ ತಾಲೂಕಿನ ಹೊಸರಾಮನಹಳ್ಳಿ ಲಕ್ಷ್ಮಣತೀರ್ಥ ನದಿಯಲ್ಲಿ ಪತ್ತೆಯಾಗಿದ್ದು, ಆತ್ಮಹತ್ಯೆ ಮಾಡಿ ಕೊಂಡಿರಬಹುದು ಎಂದು ಪೊಲೀಸರು ಶಂಕಿಸಿದ್ದಾರೆ.

ಹುಣಸೂರಿನ ಗೋಕುಲ ಬಡಾವಣೆ ನಿವಾಸಿ, ವಕೀಲ ಕೆ.ರಾಜು (52) ಬುಧವಾರ ಆಫೀಸ್‌ಗೆ ಹೋಗುವುದಾಗಿ ಹೇಳಿ ಕಾರಿನಲ್ಲಿ ತೆರಳಿದ್ದು, ರಾತ್ರಿ ಯಾದರೂ ವಾಪಸ್ ಮನೆಗೆ ಬಂದಿರಲಿಲ್ಲ. ಕುಟುಂಬದ ಸದಸ್ಯರು ಹುಡುಕಾಟ ನಡೆಸಿದರೂ ಸುಳಿವು ಸಿಕ್ಕಿರಲಿಲ್ಲ.

ಹುಣಸೂರು ತಾಲೂಕಿನ ಹೊಸರಾಮನ ಹಳ್ಳಿಯ ಲಕ್ಷ್ಮಣ ತೀರ್ಥ ನದಿ ಸೇತುವೆ ಬಳಿ ವಕೀಲನ ಕಾರು ಪತ್ತೆಯಾಗಿತ್ತು. ಅದರಲ್ಲಿ ವಕೀಲ ರಾಜು ಅವರ ಮೊಬೈಲ್, ಪರ್ಸ್ ಸೇರಿದಂತೆ ಇನ್ನಿತರ ವಸ್ತುಗಳು ಇದ್ದವು. ಹಾಗಾಗಿ ಆತ್ಮಹತ್ಯೆ ಶಂಕೆ ವ್ಯಕ್ತವಾಗಿ ಬೆಳಗಿನಿಂದ ಹೊಸರಾಮನಹಳ್ಳಿ ಬಳಿ ಲಕ್ಷ್ಮಣ ತೀರ್ಥ ನದಿಯಲ್ಲಿ ಅಗ್ನಿಶಾಮಕ ಸಿಬ್ಬಂದಿ ಶೋಧ ಕಾರ್ಯ ನಡೆಸಿತ್ತು. ಸಂಜೆ ವೇಳೆಗೆ ಮೃತದೇಹ ದೊರೆತಿದ್ದು, ಆತ್ಮಹತ್ಯೆ ಮಾಡಿಕೊಂಡಿರಬಹುದು ಎಂದು ಶಂಕಿಸಿರುವ ಬಿಳಿಕೆರೆ ಪೊಲೀಸರು ತನಿಖೆ ಮುಂದುವರೆಸಿದ್ದಾರೆ.

ಕೆ.ರಾಜು ಪತ್ನಿ ವಸಂತಲಕ್ಷ್ಮೀ ಅವರು ಇಂದು ಬೆಳಗ್ಗೆ ಪೊಲೀಸ್ ಠಾಣೆಯಲ್ಲಿ ನಾಪತ್ತೆ ಪ್ರಕರಣ ದಾಖಲಿಸಿದ್ದರು. ಸಾವಿಗೆ ನಿಖರ ಕಾರಣ ತಿಳಿದು ಬಂದಿಲ್ಲ.

ನಾಮ ನಿರ್ದೇಶಿತ ಸದಸ್ಯರು, ಸಂಘ-ಸಂಸ್ಥೆಗಳ ಸದಸ್ಯರೊಡಗೂಡಿ

ಎಸ್‌ಸಿ, ಎಸ್‌ಟಿ ಸಮುದಾಯದ ಕುಂದು–ಕೊರತೆ ಸಭೆ

ತಿ.ನರಸೀಪುರ, ಅ.30– ನಾಮನಿರ್ದೇಶಿತ ಸದಸ್ಯರು ಸೇರಿದಂತೆ ದಲಿತ ಸಂಘಟನೆಗಳ ಮುಖಂಡರು ಹಾಗೂ ಸಂಘ ಸಂಸ್ಥೆಗಳ ಅಧ್ಯಕ್ಷರನ್ನು ಆಹ್ವಾನಿಸಿ ಈ ಹಿಂದಿನಂತೆಯೇ ಪ.ಜಾತಿ ಮತ್ತು ಪ.ಪಂಗಡ ಸಮುದಾಯಗಳ ಕುಂದು ಕೊರತೆಗಳ ಸಭೆಯನ್ನು ನಡೆಸಲು ತಾಲೂಕು ಪಂಚಾಯಿತಿ ಸಭಾಂಗಣದಲ್ಲಿ ನಡೆದ ಪೂರ್ವ ಸಿದ್ಧತಾ ಸಭೆಯಲ್ಲಿ ನಿರ್ಧರಿಸಲಾಯಿತು.

ಪಟ್ಟಣದ ತಾಲೂಕು ಪಂಚಾಯಿತಿ ಸಭಾಂಗಣದಲ್ಲಿ ತಹಸೀಲ್ದಾರ್ ಅವರು ಕರೆಯಲಾಗಿದ್ದ ಸಭೆಯಲ್ಲಿ ಸದಸ್ಯರ ಆಯ್ಕೆ ಸಂಬಂಧ ಒಮ್ಮತ ಮೂಡದ ಹಿನ್ನೆಲೆಯಲ್ಲಿ ಈ ಹಿಂದಿನ ಸಭೆಯ ಮಾದರಿಯಲ್ಲೇ ಸಭೆ ನಡೆಸಲು ತೀರ್ಮಾನಿಸಲಾಯಿತು.

ಸಭೆಯ ಆರಂಭದಲ್ಲಿ ಎಸ್.ಆರ್.ಶಶಿಕಾಂತ್ ಸೋಸಲೆ ಮಾತನಾಡಿ, ತಾಲೂಕಿನಲ್ಲಿ ಸಂಘಟನೆಗಳು ಹಾಗೂ ಸಂಘಗಳ ಸಂಖ್ಯೆ ಹೆಚ್ಚಿರುವುದರಿಂದ ಎಲ್ಲರೂ ಸಮುದಾಯ ಪರ ಧ್ವನಿಯೆತ್ತುವವರೆ. ಒಬ್ಬರನ್ನು ಬಿಟ್ಟು, ಮತ್ತೊಬ್ಬರನ್ನು ಸದಸ್ಯರನ್ನಾಗಿ ಮಾಡುವುದು ಕ್ಲಿಷ್ಟಕರ. ಹಾಗಾಗಿ ಎಲ್ಲರಿಗೂ ಸಭೆಯಲ್ಲಿ ಭಾಗವಹಿಸಲು ಅವಕಾಶ ನೀಡಬೇಕು ಎಂದು ಒತ್ತಾಯಿಸಿದರು.



ಪೂರ್ವಭಾವಿ ಸಭೆಯಲ್ಲಿ ತಹಸೀಲ್ದಾರ್ ಟಿ.ಜಿ.ಸುರೇಶಾಚಾರ್ ಮಾತನಾಡಿದರು.

ತಹಸೀಲ್ದಾರ್ ಟಿ.ಜಿ.ಸುರೇಶಾಚಾರ್ ಮಾತನಾಡಿ, ಎಸ್ಸಿ/ಎಸ್ಟಿ ಹಿತರಕ್ಷಣಾ ಸಮಿತಿ ಸಭೆಗೆ ಸದಸ್ಯರನ್ನು ಆಯ್ಕೆ ಮಾಡಲು ಸಭೆ ಕರೆದಿದ್ದೇವೆ. ಒಮ್ಮತ ಮೂಡದಿದ್ದರೆ, ನಾಮ ನಿರ್ದೇಶಿತ ಸದಸ್ಯರು ಸೇರಿದಂತೆ ಸಮಾಜ ಕಲ್ಯಾಣ ಇಲಾಖೆಯಲ್ಲಿರುವ 40 ಮುಖಂಡರನ್ನು ಆಹ್ವಾನಿಸಿ, ಸಭೆ ನಡೆಸಲಾಗುತ್ತದೆ. ಸಭೆಯ ದಿನವನ್ನು ಸದ್ಯದಲ್ಲಿಯೇ ತಿಳಿಸಲಾಗುವುದು ಎಂದು ತಿಳಿಸಿದರು.

ಸಭೆಯಲ್ಲಿ ಸಮಾಜ ಕಲ್ಯಾಣ ಅಧಿಕಾರಿ ವಿನೂತನ್, ಎಸ್ಸಿ/ಎಸ್ಟಿ ಉತ್ತರ ಕ್ಷಣ ಸಮಿತಿ ಸದಸ್ಯರಾದ ಮೂಗೂರು ಜಗದೀಶ ಮೂರ್ತಿ, ಸಿ.ಸೋಮಣ್ಣ, ಕೆಬ್ಬೆಹುಂಡಿ ಮಹೇಶ, ತಲಕಾಡು ಪಾರ್ವತಮ್ಮ, ಮಹದೇವಮ್ಮ ಕರೋಹಟ್ಟಿ ಮಹದೇವಯ್ಯ, ರಾಮಲಿಂಗಯ್ಯ, ಮೂಗೂರು ಸಿದ್ದರಾಜು, ಆಲಗೂಡು ಶಿವಕುಮಾರ್, ತುಂಬಲ ಮಂಜುನಾಥ್, ಹೊನ್ನನಾಯಕ, ಕುಕ್ಕುರು ಪ್ರಸನ್ನ, ಡಿ. ಶಂಕರ್, ಚಿಕ್ಕಯ್ಯ, ಸಿ.ಮಹದೇವ, ಎ.ಶಿವಕುಮಾರ್(ಬಡ್ಡು) ಇನ್ನಿತರರು ಇದ್ದರು.

ಚರ್ಚಾ ಸ್ಪರ್ಧೆಯಲ್ಲಿ ಆದಿಚುಂಚನಗಿರಿ ಕಾಲೇಜು ವಿದ್ಯಾರ್ಥಿಗೆ ದ್ವಿತೀಯ ಸ್ಥಾನ



ಹೆಚ್.ಡಿ.ಕೋಟೆ: ಆದಿಚುಂಚನಗಿರಿ ಪ್ರಥಮ ದರ್ಜೆ ಕಾಲೇಜು ಬಿಎ ವಿದ್ಯಾರ್ಥಿ ಸ್ನೇಹ ಚರ್ಚಾ ಸ್ಪರ್ಧೆಯಲ್ಲಿ ದ್ವಿತೀಯ ಸ್ಥಾನ ಪಡೆದಿದ್ದಾರೆ. ಮೈಸೂರು ವಿಶ್ವವಿದ್ಯಾನಿಲಯ ವಿದ್ಯಾರ್ಥಿ ಕ್ಷೇಮ ಪಾಲನ ನಿರ್ದೇಶನಾಲಯದಿಂದ ಸಹಕಾರ ವಿಷಯ ಕುರಿತು ಚರ್ಚಾ ಸ್ಪರ್ಧೆಯನ್ನು ಆಯೋಜಿಸಲಾಗಿತ್ತು. ಹೆಚ್.ಡಿ.ಕೋಟೆ ಪಟ್ಟಣದ ಆದಿಚುಂಚನಗಿರಿ ಪ್ರಥಮ ದರ್ಜೆ ಕಾಲೇಜು ಪ್ರಥಮ ಬಿಎ ವಿದ್ಯಾರ್ಥಿನಿ ಸ್ನೇಹಾ ಭಾಗವಹಿಸಿ ಮೈಸೂರು ವಿಶ್ವವಿದ್ಯಾನಿಲಯಕ್ಕೆ ದ್ವಿತೀಯ ಸ್ಥಾನವನ್ನು ಪಡೆದಿದ್ದಾರೆ.

ವಿದ್ಯಾರ್ಥಿನಿಯ ಸಾಧನೆಯನ್ನು ಮೆಚ್ಚಿ ಮೈಸೂರು ಶಾಖಾ ಮಠದ ಪೂಜ್ಯ ಶ್ರೀ ಶ್ರೀ ಸೋಮೇಶ್ವರ ನಾಥಸ್ವಾಮೀಜಿ ಅವರು ಅಭಿನಂದಿಸಿದ್ದಾರೆ. ಕಾಲೇಜಿನ ಆಡಳಿತ ಅಧಿಕಾರಿ ಪ್ರೊ.ಕೆ.ಪಿ.ಬಸವೇಗೌಡರು, ಹರ್ಷ ವ್ಯಕ್ತಪಡಿಸಿದ್ದಾರೆ. ಕಾಲೇಜಿನ ಪ್ರಾಂಶುಪಾಲ ಡಾ.ಜೆ.ಎನ್.ವೆಂಕಟೇಶ್, ಸಾಂಸ್ಕೃತಿಕ ಸಮಿತಿಯ ಸದಸ್ಯರಾದ ಬಿ.ಕಲ್ಲೇಶ್ ಗೌಡ, ಚೆನ್ನಕೇಶವನಾಯಕ, ಸಿದ್ದರಾಜು, ಮಂಜು, ಚಿತ್ರ, ಚಂದನ, ನವೀನ, ರವೀಶ ಮೆಚ್ಚುಗೆ ವ್ಯಕ್ತಪಡಿಸಿ ಅಭಿನಂದಿಸಿದರು.

ವಸತಿ ಶಾಲೆಯ ಪ್ರತಿಭಾನ್ವಿತರಿಗೆ ಪ್ರತಿಭಾ ಪುರಸ್ಕಾರ



ಪ್ರತಿಭಾ ಪುರಸ್ಕಾರ ಕಾರ್ಯಕ್ರಮವನ್ನು ವಿಧಾನಪರಿಷತ್ ಸದಸ್ಯ ಯತೀಂದ್ರ ಸಿದ್ದರಾಮಯ್ಯ ಉದ್ಘಾಟಿಸಿದರು.

ತಿ.ನರಸೀಪುರ, ಅ.30– ವಿದ್ಯಾರ್ಥಿಗಳು ಜೀವನವನ್ನು ಉತ್ತಮವಾಗಿ ರೂಪಿಸಿಕೊಂಡು, ದೇಶದ ಸತ್ಪ್ರಜೆಗಳಾಗಬೇಕು ಎಂದು ವಿಧಾನಪರಿಷತ್ ಸದಸ್ಯ ಡಾ. ಯತೀಂದ್ರ ಸಿದ್ದರಾಮಯ್ಯ ಹೇಳಿದರು.

ವರುಣ ವಿಧಾನಸಭಾ ಕ್ಷೇತ್ರದ ಎಸ್. ಹೊಸಕೋಟೆ ಗ್ರಾಮದಲ್ಲಿರುವ ಮುರಾರ್ಜಿ ದೇಸಾಯಿ ವಸತಿ ಶಾಲೆಯಲ್ಲಿ ತಾಲೂಕಿನ ವಿವಿಧ ವಸತಿ ಶಾಲೆಗಳಲ್ಲಿ ವ್ಯಾಸಂಗ ಮಾಡಿ ಕಳೆದ ಸಾಲಿನ ಪಿಯುಸಿ ತರಗತಿಯಲ್ಲಿ ಉನ್ನತ ಶ್ರೇಣಿಯಲ್ಲಿ ತೇರ್ಗಡೆ ಹೊಂದಿದ ವಿದ್ಯಾರ್ಥಿಗಳಿಗೆ ಪ್ರತಿಭಾ ಪುರಸ್ಕಾರ ಹಾಗೂ ನಗದು ಬಹುಮಾನ ವಿತರಿಸಿ ಮಾತನಾಡಿದ ಅವರು, ವಿದ್ಯಾರ್ಥಿಗಳು ಉತ್ತಮ ಭವಿಷ್ಯದ ಸಲುವಾಗಿ ಶೈಕ್ಷಣಿಕವಾಗಿ ಉತ್ತಮ ಪ್ರಗತಿ ಸಾಧಿಸಬೇಕು. ಈ ನಿಟ್ಟಿನಲ್ಲಿ ಸರಕಾರಿ ವಸತಿ ಶಾಲೆಗಳಲ್ಲಿ ಗುಣಮಟ್ಟದ ಶಿಕ್ಷಣ ಲಭ್ಯವಿದ್ದು, ಪ್ರತಿಯೊಬ್ಬರೂ ತಮ್ಮ ಮಕ್ಕಳಿಗೆ ಉತ್ತಮ ಶಿಕ್ಷಣ ಕೊಡಿಸುವ ಮೂಲಕ ಸಾಮಾಜಿಕ ಹಾಗೂ ಆರ್ಥಿಕವಾಗಿ ಪ್ರಗತಿ ಸಾಧಿಸಲು ಮುಂದಾಗಬೇಕು ಎಂದರು.

ಹೊಸಕೋಟೆ ಗ್ರಾಮ ಪಂಚಾಯಿತಿ ಅಧ್ಯಕ್ಷೆ ಇಂದ್ರಾಣಿ ಕುಮಾರ್ ಮಾತನಾಡಿ, ಪ್ರತಿಭಾವಂತ ವಿದ್ಯಾರ್ಥಿಗಳಿಗೆ ಪ್ರೋತ್ಸಾಹ ನೀಡುವುದರೊಂದಿಗೆ ಎಲ್ಲಾ ವಿದ್ಯಾರ್ಥಿಗಳಿಗೆ ಪ್ರೇರಣೆ ನೀಡುವುದು ಹಾಗೂ ಅವರು ಇನ್ನಷ್ಟು ಸಾಧನೆ ಮಾಡುವಂತೆ ಪ್ರೋತ್ಸಾಹಿಸುವುದು ಕಾರ್ಯಕ್ರಮದ ಮುಖ್ಯ ಉದ್ದೇಶವಾಗಿದೆ. ಮಕ್ಕಳ ಬೆಳವಣಿಗೆಯಲ್ಲಿ ಪೋಷಕರ ಶ್ರಮವೂ ಇರುತ್ತದೆ. ಹಾಗಾಗಿ ವಿದ್ಯಾರ್ಥಿಗಳು ಉನ್ನತ ಸ್ಥಾನ ಪಡೆದ ಮೇಲೆ ತಂದೆ–ತಾಯಿ ಹಾಗೂ ಬೆಳೆಸಿದ ಸಮಾಜವನ್ನು ಮರೆಯಬಾರದು ಎಂದು ಕಿವಿಮಾತು ಹೇಳಿದರು.

ಇದೇ ಸಂದರ್ಭ ಸಾಧಕ ವಿದ್ಯಾರ್ಥಿಗಳಿಗೆ 10 ಸಾವಿರ ರೂ. ಪ್ರತಿಭಾ ಪುರಸ್ಕಾರದ ಚೆಕ್‌ಗಳನ್ನು ವಿತರಿಸಲಾಯಿತು. ಸಮಾಜ ಕಲ್ಯಾಣ ಇಲಾಖೆ ಜಂಟಿ ನಿರ್ದೇಶಕ ರಂಗೇಗೌಡ, ಉಪವಿಭಾಗಾಧಿಕಾರಿ ಆಶಪ್ಪ, ಮೃಗಾಲಯ ಪ್ರಾಧಿಕಾರದ ಅಧ್ಯಕ್ಷ ರಂಗಸ್ವಾಮಿ, ಹೊಸಕೋಟೆ ಗ್ರಾಮ ಪಂಚಾಯಿತಿ ಅಧ್ಯಕ್ಷೆ ಇಂದ್ರಾಣಿ ಕುಮಾರ್, ಉಪಾಧ್ಯಕ್ಷೆ ಮಹದೇವಿ ಶ್ರೀಕಂಠ, ಕಾಲೇಜಿನ ಪ್ರಾಂಶುಪಾಲ ಮಹೇಂದ್ರ, ಪೋಷಕರಾದ ನಾಗೇಂದ್ರ, ಮರಡಿ ಹುಂಡಿ ಪುಟ್ಟಸ್ವಾಮಿ, ಸಹಕಾರ ಸಂಘದ ಅಧ್ಯಕ್ಷ ಸುಂದರ್, ಗ್ರಾಪಂ ಸದಸ್ಯ ಮಹಾದೇವ, ಕಾಲೇಜಿನ ಸಿಬ್ಬಂದಿ, ಪೋಷಕರು ಹಾಗೂ ವಿದ್ಯಾರ್ಥಿಗಳು ಭಾಗವಹಿಸಿದ್ದರು.

ಹೆಡಿಯಾಲ ಪಿಎಸಿಸಿಎಸ್‌ನಲ್ಲಿ ಕಾಂಗ್ರೆಸ್ ಜಯಭೇರಿ

ಮಲ್ಕುಂಡಿ: ನಂಜನಗೂಡು ತಾಲೂಕಿನ ಹೆಡಿಯಾಲ ಗ್ರಾಮದ ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘದ ನಿರ್ದೇಶಕರ ಸ್ಥಾನಕ್ಕೆ ನಡೆದ ಚುನಾವಣೆಯಲ್ಲಿ ಕಾಂಗ್ರೆಸ್ ಬೆಂಬಲಿತರು ಜಯಭೇರಿ ಭಾರಿಸಿದ್ದಾರೆ.

ಸಂಘದ ಕಛೇರಿಯಲ್ಲಿ ನಡೆದ ನಿರ್ದೇಶಕರ ಚುನಾವಣೆಯಲ್ಲಿ ಕಾಂಗ್ರೆಸ್ ಬೆಂಬಲಿತ 7 ಅಭ್ಯರ್ಥಿಗಳು ಜಯಭೇರಿ ಬಾರಿಸಿದ್ದಾರೆ. ದಿನೇಶ, ಮಂಜುನಾಥ್, ಶಂಭುಲಿಂಗಪ್ಪ, ನಾಗನಾಯಕ, ಕೈಲಾಸ ಗೌಡ, ಮಹದೇವಗೌಡ, ಪುಟ್ಟಮ್ಮ ಕಾಂಗ್ರೆಸ್ ಬೆಂಬಲಿತ ಅಭ್ಯರ್ಥಿಗಳಾಗಿ ಜಯಗಳಿಸಿದ್ದಾರೆ.

ಗ್ರಾಪಂ ಸದಸ್ಯ ಗೋವಿಂದರಾಜು ಮಾತನಾಡಿ, ಕಾಂಗ್ರೆಸ್ ಪಕ್ಷದಲ್ಲಿ ಯಾವುದೇ ಬಂಡಾಯವಿಲ್ಲ. ಕೃಷಿ ಪತ್ತಿನ ಸಹಕಾರ ಸಂಘದ 12 ನಿರ್ದೇಶಕರ ಸ್ಥಾನಕ್ಕೆ ನಡೆದ ಚುನಾವಣೆಯಲ್ಲಿ ಕಾಂಗ್ರೆಸ್ ಪಕ್ಷದ 7 ಅಭ್ಯರ್ಥಿಗಳು ಜಯಗಳಿಸಿದ್ದಾರೆ. ನಮ್ಮ ಶಾಸಕ ದರ್ಶನ್ ಧ್ರುವನಾರಾಯಣ್ ಅವರ ಅಭಿವೃದ್ಧಿ ಕೆಲಸಗಳನ್ನು ಮೆಚ್ಚಿ ಸ್ಥಳೀಯ ಸಹಕಾರ ಚುನಾವಣೆಯಲ್ಲಿ ನಮ್ಮ ಪಕ್ಷದ ಅಭ್ಯರ್ಥಿಗಳನ್ನು ಆಯ್ಕೆ ಮಾಡಿದ್ದಾರೆ ಎಂದು.



ಹೆಡಿಯಾಲ ಪಿಎಸಿಸಿಎಸ್‌ನಲ್ಲಿ ಜಯಭೇರಿ ಬಾರಿಸಿದ ಕಾಂಗ್ರೆಸ್ ಬೆಂಬಲಿತರನ್ನು ಅಭಿನಂದಿಸಲಾಯಿತು.

ಕಾಂಗ್ರೆಸ್ ಪಕ್ಷ ಗ್ಯಾರಂಟಿ ಯೋಜನೆಯನ್ನು ಜಾರಿಗೆ ತಂದು ರಾಜ್ಯದ ಬಡವರಿಗೆ ನೆರವಾಗಿದೆ. ಅದೇ ರೀತಿ ಅಭಿವೃದ್ಧಿ ಕಾರ್ಯವನ್ನು ಚುರುಕಿನಲ್ಲಿ ನಡೆಸುತ್ತಿದ್ದಾರೆ. ಮುಂದಿನ ಸ್ಥಳೀಯ ಚುನಾವಣೆಗಳಲ್ಲಿ ಹೆಚ್ಚಿನ ಅಭ್ಯರ್ಥಿಗಳನ್ನು ಗೆಲ್ಲಿಸುವ ಮೂಲಕ ಸ್ಥಳೀಯವಾಗಿ ಅಧಿಕಾರ ಹಿಡಿಯಲು ಕಾರ್ಯಕರ್ತರು ಶ್ರಮಿಸಬೇಕು ಎಂದು ತಿಳಿಸಿದರು.

ಈ ವೇಳೆ ನಾಗರಾಜೇಗೌಡ, ಸುಬ್ರಹ್ಮಣ್ಯ, ಮಹದೇವಸ್ವಾಮಿ, ಹುಚ್ಚೇಗೌಡ, ಕಾಳಸ್ವಾಮಿ, ಅನ್ವರ್ ಸಾಧಿಕ್, ಸಂಜಯ್ ಪಾಟೀಲ್, ಚಿನ್ನಸ್ವಾಮಿನಾಯಕ, ಪ್ರಕಾಶ್, ಹಾಲೇಗೌಡರು, ನಾಗಮಲ್ಲು ಸೇರಿದಂತೆ ಪ್ರಮುಖರು ಹಾಜರಿದ್ದರು

ನ.6, ದಿಶಾ ಸಮಿತಿ ಸಭೆ

ಮಂಡ್ಯ, ಅ.30– ಜಿಲ್ಲಾ ಅಭಿವೃದ್ಧಿ ಸಮನ್ವಯ ಮತ್ತು ಉಸ್ತುವಾರಿ ಸಮಿತಿ (ದಿಶಾ) ಸಭೆಯನ್ನು ಕೇಂದ್ರ ಸಚಿವ ಹೆಚ್.ಡಿ. ಕುಮಾರಸ್ವಾಮಿ ಅಧ್ಯಕ್ಷತೆಯಲ್ಲಿ ನ.6 ರಂದು ಬೆಳಗ್ಗೆ 11 ಗಂಟೆಗೆ ಜಿಪಂ ಕಾವೇರಿ ಸಭಾಂಗಣದಲ್ಲಿ ಆಯೋಜಿಸಲಾಗಿದ್ದು, ಸದರಿ ಸಭೆಗೆ ಅಧಿಕಾರಿಗಳು ಅಗತ್ಯ ಮಾಹಿತಿಯೊಂದಿಗೆ ಇತರೆ ಸಿಬ್ಬಂದಿಗಳನ್ನು ನಿಯೋಜಿಸದೆ ತಪ್ಪದೇ ಹಾಜರಾಗಬೇಕೆಂದು ಜಿಲ್ಲಾ ಅಭಿವೃದ್ಧಿ ಸಮನ್ವಯ ಮತ್ತು ಉಸ್ತುವಾರಿ ಸಮಿತಿ ಮುಖ್ಯ ಕಾರ್ಯ ನಿರ್ವಾಹಕ ಅಧಿಕಾರಿ ಹಾಗೂ ಸದಸ್ಯ ಕಾರ್ಯದರ್ಶಿ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ನಂ.ಗೂಡಲ್ಲಿ ಅಪ್ಪು ಪುಣ್ಯಸ್ಮರಣೆ




ನಂಜನಗೂಡಿನ ಖಾಸಗಿ ಬಸ್ ನಿಲ್ದಾಣದ ಮುಂಭಾಗ ಚಲನಚಿತ್ರ ನಟ ಪುನೀತ್ ರಾಜಕುಮಾರ್ ಅವರ 4ನೇ ವರ್ಷದ ಪುಣ್ಯಸ್ಮರಣೆಯನ್ನು ಅಭಿಮಾನಿಗಳು ಅಪ್ಪು ಭಾವಚಿತ್ರಕ್ಕೆ ಪುಷ್ಪಾರ್ಚನೆ ಸಲ್ಲಿಸಿ ಗೀತ ಗಾಯನ ಹಾಗೂ ಅನ್ನ ಸಂತರ್ಪಣೆ ಮೂಲಕ ಆಚರಿಸಿದರು. ಈ ಸಂದರ್ಭದಲ್ಲಿ ಯೋಗ ಶಿಕ್ಷಕ ಹಾಗೂ ಈಡಿಗರ ಸಂಘದ ಮುಖಂಡ ಜಿ.ಕೆ. ಮಂಜುನಾಥ್, ಜೂನಿಯರ್ ಕುಮಾರಸ್ವಾಮಿ ಖ್ಯಾತಿಯ ನಾರಾಯಣ್, ಭೈರೋಜಿರಾವ್, ಮಂಜುನಾಥ್, ಟೀ ಅಂಗಡಿ ಶಿವಣ್ಣ, ರವಿಕುಮಾರ್,ಚಂದ್ರು,ಪ್ರದೀಪ್, ನಾರ್ಲೆ ಚಿನ್ನಸ್ವಾಮಿ, ಶಂಕರ್ ಅಶೋಕಪುರಂ, ವಿಕ್ಕಿ ಮೊಬೈಲ್, ಮಂಜು ಸೇರಿದಂತೆ ಹಲವರು ಭಾಗವಹಿಸಿದ್ದರು.

ವಿದ್ಯುತ್ ಬಿಲ್ ಕಟ್ಟುವಂತೆ ಅಂಧ ವೃದ್ಧೆ ಮೇಲೆ ಚೆಸ್ಕಾಂ ಅಧಿಕಾರಿಗಳಿಂದ ಹಲ್ಲೆ ಆರೋಪ

ನಂಜನಗೂಡು: ವಿದ್ಯುತ್ ಬಿಲ್ ಕಟ್ಟುವಂತೆ 85 ವರ್ಷದ ವೃದ್ಧೆಯ ಮೇಲೆ ಚೆಸ್ಕಾಂ ಲೈನ್ ಮ್ಯಾನ್ ಮತ್ತು ಎಇ ಹಲ್ಲೆ ಮಾಡಿರುವ ಆರೋಪ ಕೇಳಿ ಬಂದಿದ್ದು ವೃದ್ಧ ಮಹಿಳೆ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆದು ತಮ್ಮ ಅಳಲು ತೋಡಿಕೊಂಡಿರುವ ಬಗ್ಗೆ ಸಾಮಾಜಿಕ ಜಾಲತಾಣದಲ್ಲಿ ವಿಡಿಯೋ ವೈರಲ್ ಆಗಿದೆ.


ತಾಲೂಕಿನ ಚಿಕ್ಕಹೊಮ್ಮ ಗ್ರಾಮದ 85 ವರ್ಷದ ಅಂದ ವೃದ್ಧ ಮಹಿಳೆ ಮಹದೇವಮ್ಮ ಮನೆಯಲ್ಲಿ ಒಂಟಿಯಾಗಿ ವಾಸ ಮಾಡುತ್ತಿದ್ದು, ಭಾಗ್ಯ ಜ್ಯೋತಿ ಉಚಿತ ವಿದ್ಯುತ್ ಸಂಪರ್ಕವಿದ್ದರೂ ಸಹ, ವಿದ್ಯುತ್ ಬಿಲ್ ಸುಮಾರು 5 ಸಾವಿರ ಬಂದಿದೆ. ವಿದ್ಯುತ್ ಬಿಲ್ ಕಟ್ಟಬೇಕು. ಇಲ್ಲವಾದಲ್ಲಿ ವಿದ್ಯುತ್ ಸಂಪರ್ಕವನ್ನು ಕಡಿತಗೊಳಿಸುತ್ತೇವೆ ಎಂದು ಚೆಸ್ಕಾಂ ಅಧಿಕಾರಿಗಳು ಹೇಳಿ ವಿದ್ಯುತ್ ಸಂಪರ್ಕವನ್ನು ಕಡಿತಗೊಳಿಸಲು ಮುಂದಾದಾಗ ಅಂಧ ಮತ್ತು ವೃದ್ಧ ಮಹಿಳೆ ಮಹದೇವಮ್ಮ ವಿದ್ಯುತ್ ಸಂಪರ್ಕವನ್ನು ಕಡಿತಗೊಳಿಸದಂತೆ ಮನವಿ ಮಾಡಲು ಮುಂದಾದ ವೇಳೆ ಚೆಸ್ಕಾಂ ಲೈನ್ ಮ್ಯಾನ್ ಮತ್ತು ಎಇ ಅಧಿಕಾರಿಗಳು ವೃದ್ಧ ಅಂಧ ಮಹಿಳೆಯ ಮೇಲೆ ತಳ್ಳಿ ನೂಕಿ ಹಲ್ಲೆ ನಡೆಸಿದ್ದಾರೆ ಎಂದು ಆರೋಪ ಕೇಳಿ ಬಂದಿದೆ. ವೃದ್ಧ ಮಹಿಳೆ ಚಾಮರಾಜನಗರ ಜಿಲ್ಲೆಯ ಮೆಡಿಕಲ್ ಕಾಲೇಜು ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆದು ತಮ್ಮ ಅಳಲನ್ನು ತೋಡಿಕೊಂಡಿರುವ ವಿಡಿಯೋ ಸಾಮಾಜಿಕ ಜಾಲತಾಣದಲ್ಲಿ ವೈರಲ್ ಆಗಿದೆ.



ಈ ಬಗ್ಗೆ ಚೆಸ್ಕಾಂ ಸಹಾಯಕ ಕಾರ್ಯಪಾಲಕ ಇಂಜಿನಿಯರ್ ಕಿರಣ್ ಕುಮಾರ್ ಮಾತನಾಡಿ, ವೃದ್ಧೆ ಮಹದೇವಮ್ಮ ರವರ ಮನೆಯಲ್ಲಿ ಭಾಗ್ಯ ಜ್ಯೋತಿ ಉಚಿತ ವಿದ್ಯುತ್ ಸಂಪರ್ಕವಿದೆ, ಆದರೆ ಅವರ ಮನೆಯಲ್ಲಿರುವ ವಿದ್ಯುತ್ ಮೀಟರ್ ಅನ್ನು ಅವನ ಮೊಮ್ಮಗ ತನ್ನ ಮನೆಗೆ ಅಕ್ರಮವಾಗಿ ಅಳವಡಿಕೆ ಮಾಡಿಕೊಂಡಿದ್ದಾನೆ. ಮಹದೇವಮ್ಮ ರವರ ಮನೆಗೆ ಮೀಟರ್ ನಂಬರ್ ಇಲ್ಲದ ಅಕ್ರಮ ವಿದ್ಯುತ್ ಮೀಟರ್ ಅನ್ನು ಅಳವಡಿಸಿ ಅಕ್ರಮ ಸಂಪರ್ಕ ಪಡೆದು ಕೊಂಡಿದ್ದಾನೆ. ಮಹದೇವಮ್ಮ ರವರ ವಿದ್ಯುತ್ ಬಿಲ್ ಯಾವುದೇ ಬಾಕಿ ಇರುವುದಿಲ್ಲ. ಆದ್ದರಿಂದ ನಮ್ಮ ಅಧಿಕಾರಿಗಳು ಅಕ್ರಮ ವಿದ್ಯುತ್ ಸಂಪರ್ಕವನ್ನು ಕಡಿತಗೊಳಿಸಲು ಮುಂದಾಗಿದ್ದಾರೆ. ಈ ವೇಳೆ ವೃದ್ಧೆಯ ಮೇಲೆ ಯಾವುದೇ ಹಲ್ಲೆ ನಡೆಸಿಲ್ಲ. ಈ ಬಗ್ಗೆ ನಾನು ಸಹ ಗ್ರಾಮಕ್ಕೆ ಭೇಟಿ ನೀಡಿ ವೃದ್ಧೆ ಮಹದೇವಮ್ಮರವರಿಂದ ಸ್ಪಷ್ಟನೆ ಕೇಳಿದ್ದು ಅಮು ಸಹ ನನಗೆ ಯಾವುದೇ ಹಲ್ಲೆ ನಡೆಸಿಲ್ಲ. ಆದರೆ ನಾನು ವಿದ್ಯುತ್ ಬಿಲ್ ಕಟ್ಟುತ್ತೇನೆ. ಸಮಯ ಕೊಡಿ ಎಂದು ಮನವಿ ಮಾಡಿದ್ದರೂ ಸಹ ವಿದ್ಯುತ್ ಸಂಪರ್ಕ ಕಡಿತಗೊಳಿಸಿದ್ದಾರೆ ಎಂದು ಹೇಳಿಕೆ ನೀಡಿದ್ದಾರೆ. ಅಲ್ಲದೆ ವೃದ್ಧ ಮಹಿಳೆ ಮಹದೇವಮ್ಮ ರವರ ಮನೆಗೆ ವಿದ್ಯುತ್ ಸಂಪರ್ಕ ಕೊಡಲಾಗಿದೆ ಎಂದು ಸ್ಪಷ್ಟನೆ ನೀಡಿದರು.

ಸಿಎಂ ಸಿದ್ದರಾಮಯ್ಯ ನಿವೃತ್ತಿ ಘೋಷಿಸದೆ ವರುಣದಲ್ಲಿ ಸ್ಪರ್ಧಿಸಿ ಮತ್ತೆ ಸಿಎಂ ಆಗಲಿ

ವರುಣದಲ್ಲಿ ಸಹಿ ಸಂಗ್ರಹ ಅಭಿಯಾನ



ತಿ.ನರಸೀಪುರ, ಅ.30– ಮುಖ್ಯಮಂತ್ರಿ ಸಿದ್ದರಾಮಯ್ಯ ಚುನಾವಣಾ ನಿವೃತ್ತಿ ಘೋಷಿಸದೆ 2028ರ ಸಾರ್ವತ್ರಿಕ ಚುನಾವಣೆಯಲ್ಲಿ ವರುಣ ಕ್ಷೇತ್ರದಿಂದ ಸ್ಪರ್ಧಿಸಿ ಮತ್ತೆ ರಾಜ್ಯದ ಮುಖ್ಯಮಂತ್ರಿಯಾಗಬೇಕೆಂದು ಒತ್ತಾಯಿಸಿರುವ ತಾಲೂಕು ಪಂಚಾಯ್ತಿ ಮಾಜಿ ಉಪಾಧ್ಯಕ್ಷ ಡಾ.ಬಿ.ಮರಯ್ಯ ಈ ಸಂಬಂಧ ವರುಣದಲ್ಲಿ ಸಹಿ ಸಂಗ್ರಹ ಅಭಿಯಾನ ನಡೆಸುವುದಾಗಿ ತಿಳಿಸಿದರು.

ಗುರುವಾರ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, ವರುಣ ಕ್ಷೇತ್ರದಲ್ಲಿ ಸಿದ್ದರಾಮಯ್ಯ ಅವರು ಸ್ಪರ್ಧೆ ಮಾಡಬೇಕೆಂಬುದು ಇಲ್ಲಿನ ಮತದಾರರ ಅಭಿಲಾಷೆಯಾಗಿದ್ದು, ಅದಕ್ಕಾಗಿ ಕ್ಷೇತ್ರ ವ್ಯಾಪ್ತಿಯಲ್ಲಿ ಸಹಿ ಸಂಗ್ರಹ ಅಭಿಯಾನ ನಡೆಸಿ ವರುಣ ಕ್ಷೇತ್ರದಲ್ಲೇ ಸ್ಪರ್ಧೆ ಮಾಡಲು ಒತ್ತಾಯ ಮಾಡಲಾಗುತ್ತದೆ ಎಂದರು.

ಸಿದ್ದರಾಮಯ್ಯ ಅವರು ಮುಂದಿನ ಚುನಾವಣೆಯಲ್ಲಿ ಸ್ಪರ್ಧೆ ಮಾಡುತ್ತಾರೋ, ಇಲ್ಲವೋ ಎಂಬ ಚರ್ಚೆಗಳು ಆರಂಭಗೊಂಡಿದೆ. ಆದರೆ, ರಾಜ್ಯವನ್ನು ಮುನ್ನಡೆಸುವ ಶಕ್ತಿ ಅವರಲ್ಲಿ ಇನ್ನೂ ಇರುವುದರಿಂದ ಅವರು ಮುಂಬರುವ ಚುನಾವಣೆಯಲ್ಲಿ ಸ್ಪರ್ಧೆ ಮಾಡಬೇಕು. ವರುಣ ಕ್ಷೇತ್ರದಿಂದಲೇ ಸ್ಪರ್ಧೆ ಮಾಡಿದಲ್ಲಿ ಕ್ಷೇತ್ರದ ಜನತೆ ಅಭೂತ ಪೂರ್ವ ಗೆಲುವು ತಂದು ಕೊಡಲಿದ್ದಾರೆ ಎಂದು ವಿಶ್ವಾಸ ವ್ಯಕ್ತಪಡಿಸಿದರು.

ರಾಜ್ಯದಲ್ಲಿ ನಿರೀಕ್ಷೆಗೂ ಮೀರಿದ ಅಭಿವೃದ್ಧಿ ಕೆಲಸಗಳಾಗಿವೆ.ಇನ್ನೂ ಹೆಚ್ಚಿನ ಅಭಿವೃದ್ಧಿ ಯಾಗಬೇಕಿದೆ.ಸಿದ್ದರಾಮಯ್ಯ ರವರೇನಾದರೂ ಅಧಿಕಾರ ಹಸ್ತಾಂತರ ಮಾಡಿದರೆ ಕಾಂಗ್ರೆಸ್ ಪಕ್ಷಕ್ಕೆ ಉಳಿಗಾಲ ವಿಲ್ಲ. ಹಾಗಾಗಿ ಸಿದ್ದರಾಮಯ್ಯ ರವರು ಯಾವುದೇ ಊಹಾಪೋಹಗಳಿಗೆ ಕಿವಿಗೊಡದೇ ಮತ್ತೊಮ್ಮೆ ಚುನಾವಣೆಗೆ ಸ್ಪರ್ಧಿಸಿ ನಾಡಿನ ಮುಖ್ಯಮಂತ್ರಿಯಾಗಿ ರಾಜ್ಯದ ಸಮಗ್ರ ಅಭಿವೃದ್ಧಿಗೆ ಮುಂದಾಗಬೇಕು. ನಂತರ ಬೇಕಿದ್ದಲ್ಲಿ ಅವರು ನಿವೃತ್ತರಾಗಲಿ ಎಂದು ಬಿ.ಮರಯ್ಯ ಮನವಿ ಮಾಡಿದರು.

ಮೈಸೂರಿನ ಜೆಎಲ್‌ಬಿ, ಹುಣಸೂರು ರಸ್ತೆಯಲ್ಲಿ

ಫ್ಲೈಓವರ್ ನಿರ್ಮಾಣಕ್ಕೆ ಚಿಂತನೆ



ಒಂದು ವೇಳೆ ಫ್ಲೈಓವರ್‌ಗಳು ಕಾರ್ಯಗತವಾದಲ್ಲಿ ಮಂಗಳೂರು, ಮಡಿಕೇರಿ, ಹಾಸನ, ಕೇರಳ ಕಡೆಯಿಂದ ಬರುವ ವಾಹನಗಳು ಯಾವುದೇ ತಡೆಯಿಲ್ಲದೆ ಮೈಸೂರು ನಗರ ತಲುಪಬಹುದು ಹಾಗೆಯೇ ಸ್ಥಳೀಯ ವಾಹನಗಳೂ ಸಹ ಸುಗಮವಾಗಿ ಸಂಚರಿಸಬಹುದಾಗಿದೆ, ಅಲ್ಲದೆ ಜೆಎಲ್‌ಬಿ ರಸ್ತೆಯಲ್ಲೂ ಟ್ರಾಫಿಕ್ ಜಾಮ್ ಇಲ್ಲದೆ ನಂಜನಗೂಡು ರಸ್ತೆ ಹಾಗೂ ಮಾನಂದವಾಡಿ ರಸ್ತೆಗೆ ಸುಲಭವಾಗಿ ಸಂಪರ್ಕ ಕಲ್ಪಿಸಿದಂತಾಗುತ್ತದೆ.

ಮೈಸೂರು, ಅ. 30(ಆರ್‌ಕೆ)– ಸಾಂಸ್ಕೃತಿಕ ನಗರಿ ಮೈಸೂರಿನ 2 ಪ್ರಮುಖ ರಸ್ತೆಗಳಲ್ಲಿ ಫ್ಲೈಓವರ್ ನಿರ್ಮಿಸಲು ಕರ್ನಾಟಕ ಲೋಕೋಪಯೋಗಿ ಇಲಾಖೆ ಮುಂದಾಗಿದೆ.

ಬೆಂಗಳೂರನ್ನು ಹೊರತುಪಡಿಸಿದರೆ ಅತೀ ವೇಗವಾಗಿ ಬೆಳೆಯುತ್ತಿರುವ ರಾಜ್ಯದ 2ನೇ ಪ್ರಮುಖ ನಗರವಾದ ಮೈಸೂರಿನಲ್ಲಿ ಜನಸಂಖ್ಯೆಗೆ ಅನುಗುಣವಾಗಿ ವಾಹನ ಸಂಚಾರ ದಟ್ಟಣೆಯೂ ಸಹ ಹೆಚ್ಚಾಗುತ್ತಿರುವುದರಿಂದ ಹಾಗೂ ಅಪಘಾತಗಳನ್ನು ನಿಯಂತ್ರಿಸುವ ನಿಟ್ಟಿನಲ್ಲಿ ಝಾನ್ಸಿ ರಾಣಿ ಲಕ್ಷ್ಮೀಬಾಯಿ ರಸ್ತೆ ಹಾಗೂ ಹುಣಸೂರು ರಸ್ತೆಗಳಲ್ಲಿ ಬೆಂಗಳೂರು ಮಾದರಿ ಫ್ಲೈಓವರ್ ನಿರ್ಮಿಸುವ ಯೋಜನೆಗೆ ಲೋಕೋಪಯೋಗಿ ಇಂಜಿನಿಯರ್‌ಗಳು ಉದ್ದೇಶಿಸಿದ್ದಾರೆ.

ಮೈಸೂರು ರೈಲ್ವೆ ನಿಲ್ದಾಣದಿಂದ ರಾಮಸ್ವಾಮಿ ಸರ್ಕಲ್, ಎಲೆತೋಟ ಮಾರ್ಗವಾಗಿ ನಂಜನಗೂಡು ರಸ್ತೆ ಜಂಕ್ಷನ್ (ಜೆಎಸ್‌ಎಸ್ ಕಾಲೇಜು) ಹಾಗೂ ಫೀಲ್ಡ್ ಮಾರ್ಷಲ್ ಕೆ.ಎಂ. ಕಾರ್ಯಪ್ಪ (ಮೆಟ್ರೋಪೋಲ್ ಸರ್ಕಲ್) ಸರ್ಕಲ್‌ನಿಂದ ಪಡುವಾರಹಳ್ಳಿ ಜಂಕ್ಷನ್, ಐಶ್ವರ್ಯ ಪೆಟ್ರೋಲ್‌ಬಂಕ್ ಜಂಕ್ಷನ್ ಮಾರ್ಗವಾಗಿ ಹಿನಕಲ್‌ವರೆಗೆ ಹುಣಸೂರು ರಸ್ತೆಯಲ್ಲಿ ಫ್ಲೈಓವರ್ ನಿರ್ಮಿಸಲು ಉದ್ದೇಶಿಸಲಾಗಿದೆ.

ಕಳೆದ ಆರೇಳು ವರ್ಷಗಳ ಹಿಂದೆ ಹುಣಸೂರು ರಸ್ತೆಯ ಹಿನಕಲ್ ಸಿಗ್ನಲ್ ಲೈಟ್ ಜಂಕ್ಷನ್‌ನಲ್ಲಿ, ವಾಹನ ದಟ್ಟಣೆ ಮತ್ತು ಅಪಘಾತಗಳನ್ನು ತಪ್ಪಿಸುವ ಸಲುವಾಗಿ ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರ (ಪ್ರಸ್ತುತ ಮೈಸೂರು ಅಭಿವೃದ್ಧಿ ಪ್ರಾಧಿಕಾರ) ವು ಮೈಸೂರಿನ ಮೊದಲ ಫ್ಲೈಓವರ್ ಅನ್ನು ನಿರ್ಮಿಸಿತ್ತು. ಈಗ ಉದ್ದೇಶಿಸಿರುವ 2 ರಸ್ತೆಗಳಲ್ಲಿ ಫ್ಲೈಓವರ್ ಯೋಜನೆ ಅನುಷ್ಠಾನಗೊಂಡಲ್ಲಿ ಅವುಗಳ ಸಂಖ್ಯೆ 3ಕ್ಕೆ ಏರಲಿದೆ. ಅದಕ್ಕೆ ಪೂರಕವಾಗಿ ಮೆಟ್ರೋಪೋಲ್ ಸರ್ಕಲ್‌ನಿಂದ ಹಿನಕಲ್ ಫ್ಲೈಓವರ್‌ವರೆಗೆ ಹುಣಸೂರು ರಸ್ತೆ ಹಾಗೂ ರೈಲ್ವೆ ನಿಲ್ದಾಣದಿಂದ ನಂಜನಗೂಡು ರಸ್ತೆ ಜಂಕ್ಷನ್‌ವರೆಗೆ ಜೆಎಲ್‌ಬಿ ರಸ್ತೆಯ ಅಲ್ಲಲ್ಲಿ ಲೋಕೋಪಯೋಗಿ ಇಲಾಖೆ ಇಂಜಿನಿಯರ್‌ಗಳು ಮಣ್ಣಿನ ಪರೀಕ್ಷೆ ಮಾಡುವ ಪ್ರಕ್ರಿಯೆಯಲ್ಲಿ ನಿರತರಾಗಿದ್ದಾರೆ.

ಫ್ಲೈಓವರ್ ನಿರ್ಮಿಸಲು ಅಗತ್ಯವಿರುವ ಪೂರ್ವಭಾವಿ ತಯಾರಿ ನಡೆಸುತ್ತಿರುವ ಅಧಿಕಾರಿಗಳು ಎಲ್ಲೆಲ್ಲಿ ಅಂಡರ್‌ಪಾಸ್, ಮೇಲುಸೇತುವೆ, ಪ್ರವೇಶ ಮತ್ತು ನಿರ್ಗಮನ, ಎಲ್ಲೆಲ್ಲಿ ಮರ ಮತ್ತು ವಿದ್ಯುತ್ ಕಂಬಗಳು ಹಾಗೂ ಇನ್ನಿತರ ಸಂಪರ್ಕ ಕೇಬಲ್‌ಗಳನ್ನು ತೆರವುಗೊಳಿಸಬೇಕೆಂಬುದರ ಬಗ್ಗೆ ಈ ಎರಡು ರಸ್ತೆಗಳಲ್ಲಿ ವಿಡಿಯೋ ಚಿತ್ರೀಕರಣ ಮಾಡಿಕೊಂಡು ಸಮೀಕ್ಷೆ ನಡೆಸುತ್ತಿದ್ದಾರೆ.

ಯೋಜನೆಗೆ ತಗಲುವ ವೆಚ್ಚ, ಎಷ್ಟು ಅವಧಿಯಲ್ಲಿ ಕಾಮಗಾರಿ ಪೂರ್ಣಗೊಳಿಸಬಹುದು, ಅಡ್ಡಿ ಬರಬಹುದಾದ ಪಾರಂಪರಿಕ ಕಟ್ಟಡಗಳು, ವಾಣಿಜ್ಯ ಸಮುಚ್ಚಯಗಳು, ತಾಂತ್ರಿಕ ತೊಂದರೆಗಳು ಮತ್ತು ಇನ್ನಿತರ ಅಂಶಗಳನ್ನು ಗಣನೆಗೆ ತೆಗೆದುಕೊಂಡು ಫ್ಲೈಓವರ್ ನಿರ್ಮಾಣಕ್ಕೆ ಸಮಗ್ರ ಯೋಜನಾ ವರದಿ (ಡಿಪಿಆರ್) ತಯಾರಿಸಿ ಸ್ಥಳೀಯ ಸಂಸದರು, ಶಾಸಕರು, ವಿಧಾನ ಪರಿಷತ್ ಸದಸ್ಯರು ಹಾಗೂ ಸಾರ್ವಜನಿಕರಿಂದ ಅಭಿಪ್ರಾಯ ಪಡೆದು ಸರ್ಕಾರಕ್ಕೆ ಪ್ರಸ್ತಾವನೆ ಸಲ್ಲಿಸುವ ನಿಟ್ಟಿನಲ್ಲಿ ಇಂಜಿನಿಯರ್‌ಗಳು ಕಾರ್ಯೋನ್ಮುಖರಾಗಿದ್ದಾರೆ.

ಈ ಹಿಂದೆ ಆಗಿಂದಾಗ್ಗೆ ಟ್ರಾಫಿಕ್ ಜಾಮ್ ಆಗುತ್ತಿದ್ದು ಅಪಘಾತಗಳು ಸಂಭವಿಸುತ್ತಿದ್ದ ಕಾರಣ ಅತೀ ಹೆಚ್ಚು ವಾಹನದಟ್ಟಣೆ ಇದ್ದ ಹಿನಕಲ್ ಸಿಗ್ನಲ್ ಲೈಟ್ ಜಂಕ್ಷನ್‌ನಲ್ಲಿ ಫ್ಲೈಓವರ್ ಅನ್ನು ನಿರ್ಮಿಸಲಾಯಿತು. ಈಗ ಅಲ್ಲಿ ಯಾವುದೇ ತಡೆಯಿಲ್ಲದೆ ವಾಹನ ಸಂಚಾರ ಸುಗಮವಾಗಿದೆ ಅದೇ ರೀತಿ ಹುಣಸೂರು ರಸ್ತೆ ಮತ್ತು ಜೆಎಲ್‌ಬಿ ರಸ್ತೆಯಲ್ಲೂ ವಾಹನ ಸಂಚಾರ ದಟ್ಟಣೆ ಇರುವುದರಿಂದ ಈ ಎರಡೂ ರಸ್ತೆಗಳಲ್ಲಿ ಸಿಗ್ನಲ್ ಲೈಟ್‌ಗಳ ಸಂಖ್ಯೆಗಳು ಹೆಚ್ಚಾಗಿರುವ ಕಾರಣ ಸಂಚಾರ ದುಸ್ತರವಾಗಿದೆ. ಅದರಲ್ಲೂ ದಸರಾ ಮಹೋತ್ಸವದ ಸಂದರ್ಭದಲ್ಲಂತೂ ಆಗಾಗ್ಗೆ ಟ್ರಾಫಿಕ್ ಜಾಮ್ ಆಗಲಿದೆ.

ಈಗಾಗಲೇ ಮಣಿಪಾಲ್ ಆಸ್ಪತ್ರೆ ಜಂಕ್ಷನ್, ರಿಂಗ್ ರಸ್ತೆಯ ವಿಜಯನಗರ 4ನೇ ಹಂತದ ಬಡಾವಣೆ ಪ್ರವೇಶದ್ವಾರ, ಬೋಗಾದಿ ಸರ್ಕಲ್ ಜಂಕ್ಷನ್, ದಟ್ಟಗಳ್ಳಿಯ ಕೆಇಬಿ ಜಂಕ್ಷನ್‌ಗಳಲ್ಲೂ ಫ್ಲೈಓವರ್ ನಿರ್ಮಿಸಲು ಉದ್ದೇಶಿಸಲಾಗಿದೆಯಾದರೂ ಹಲವು ಕಾರಣಗಳಿಂದಾಗಿ ಈ ಯೋಜನೆ ವಿಳಂಬವಾಗಿರುವುದನ್ನು ಇಲ್ಲಿ ಸ್ಮರಿಸಬಹುದು.

ಮೈಸೂರು ಚಿತ್ರಮಂದಿರಗಳಲ್ಲಿ

ಪದ್ಮ	(ದೂ: 2521923)
ಶಾಸ್ತ್ರಿ (ಕ)	4 ಪ್ರದರ್ಶನಗಳು
ವುಡ್‌ಲ್ಯಾಂಡ್ಸ್	(ದೂ: 2422871)
ಕಾಂತಾರ ಚಾಪ್ಟರ್–1 (ಕ)	4 ಪ್ರದರ್ಶನಗಳು
ಬಾಲಾಜಿ	(ದೂ: 2497199)
ಏಕ್ ದಿವಾನೆ ಕಿ ದಿವಾನಿಯತ್ (ಹಿಂ)	3 ಪ್ರದರ್ಶನಗಳು
ಮಹದೇಶ್ವರ	(ಮೊ:9900820093)
ಕಾಂತಾರ ಚಾಪ್ಟರ್–1 (ಕ)	4 ಪ್ರದರ್ಶನಗಳು
ಗಾಯಿತ್ರಿ	
ಕಾಂತಾರ ಚಾಪ್ಟರ್–1 (ಕ)	4 ಪ್ರದರ್ಶನಗಳು
ರಾಜಕಮಲ್	
ಆರ್ಯನ್ (ತ) + ಬೈಸನ್ (ತ)	2+2 ಪ್ರದರ್ಶನಗಳು
ಸಂಗಂ	
ಬ್ರಾಟ್ (ಕ)	4 ಪ್ರದರ್ಶನಗಳು
ಲಿಡೋ	
ತಮ್ಮ (ಹಿಂ)	4 ಪ್ರದರ್ಶನಗಳು
ತಿಬ್ಬಾದೇವಿ	
–	–
ಪ್ರಭಾ	
ಮಂಡ್ಯ (ಕ)	4 ಪ್ರದರ್ಶನಗಳು

ಡಿಆರ್‌ಸಿ ಸಿನಿಮಾಸ್

ದೂ : 4240422/4241800

ಸ್ಕ್ರೀನ್ 1	ಕಾಂತಾರ ಚಾಪ್ಟರ್ 1(ಕ): ಮ.1.00ಕ್ಕೆ, ರಾ.7.10ಕ್ಕೆ, ರಾ.10.30ಕ್ಕೆ,
	ಡ್ಯೂಡ್ (ತ): ಬೆ.10.10ಕ್ಕೆ, ಸಂ.4.20ಕ್ಕೆ
ಸ್ಕ್ರೀನ್ 2	ಬೈಸನ್ (ತ): ಬೆ.10.00ಕ್ಕೆ, ಸಂಜೆ 4.15ಕ್ಕೆ, ಡೀಸೆಲ್ (ತ): ಮ.1.20ಕ್ಕೆ, ತೆಲುಸು ಕದ (ತೆ): ರಾ.7.35ಕ್ಕೆ. ದಿ ಪೆಟ್ ಡಿಟೆಕ್ಟಿವ್ (ಇ): ರಾ.10.20ಕ್ಕೆ
ಸ್ಕ್ರೀನ್ 3	ಡ್ಯೂಡ್ (ತ): ರಾ.7.20ಕ್ಕೆ, ರಾ. 10.15ಕ್ಕೆ, ಕಾಂತಾರ ಚಾಪ್ಟರ್ 1(ಕ): ಸಂ. 4.00ಕ್ಕೆ, ಪ್ರೇಮಿಗಳ ಗಮನಕ್ಕೆ (ಕ): ಬೆ.10.25ಕ್ಕೆ, ಟೈಮ್ ಪಾಸ್ (ಕ): ಮ.1.15ಕ್ಕೆ
ಸ್ಕ್ರೀನ್ 4	ಕಾಂತಾರ ಚಾಪ್ಟರ್ 1(ಕ): ಬೆ.9ಕ್ಕೆ, ಮ.12.20ಕ್ಕೆ, ಮ.3.40ಕ್ಕೆ, ರಾ.7.05ಕ್ಕೆ, ರಾ.10.30ಕ್ಕೆ.

ನೆಕ್ಸಸ್ ಮಾಲ್

- ಕಾಂತಾರ ಚಾಪ್ಟರ್ 1(ಕ) : ಬೆ: 8.05ಕ್ಕೆ, 9.05ಕ್ಕೆ, 10.25ಕ್ಕೆ, 11.15ಕ್ಕೆ, ಮ: 12.15ಕ್ಕೆ, 2.40ಕ್ಕೆ, 3.40ಕ್ಕೆ, ಸಂಜೆ 6.05ಕ್ಕೆ, 6.55ಕ್ಕೆ, ರಾತ್ರಿ: 7.05ಕ್ಕೆ, 9.30ಕ್ಕೆ, 9.45ಕ್ಕೆ, 10ಕ್ಕೆ, 10.30ಕ್ಕೆ.
- ಕಾಂತಾರ ಚಾಪ್ಟರ್ 1(ಹಿ): ಬೆ: 9.10ಕ್ಕೆ, ಮ.3.10ಕ್ಕೆ.
- ಡ್ಯೂಡ್ (ತ): ಬೆ: 10ಕ್ಕೆ, ಸಂ: 4ಕ್ಕೆ, ರಾ: 10.20ಕ್ಕೆ
- ಟೈಮ್ ಪಾಸ್ (ಕ): ಬೆ: 11.15ಕ್ಕೆ
- ತೆಲುಸು ಕಾದಾ (ತೆ): ಮ: 12.20ಕ್ಕೆ, ರಾತ್ರಿ 7.20ಕ್ಕೆ
- ಬೈಸನ್ ಕಾಳಮಂದಾನ್ (ತ): ಬೆ: ಮ: 12.40ಕ್ಕೆ, ಸಂಜೆ 6.35ಕ್ಕೆ
- ಡೀಸೆಲ್ (ತ): ಮ: 1.40ಕ್ಕೆ
- ಮಹಾಯೋಧ ರಾಮ (ಹಿ): ಮ: 1.50ಕ್ಕೆ
- ಕೆ–ರ್‍ಯಾಂಪ್ (ತೆ): ಸಂ: 4.15ಕ್ಕೆ, ರಾ: 10.10ಕ್ಕೆ
- ಮಿತ್ರ ಮಂಡಳಿ (ತೆ): ಸಂ: 4.40ಕ್ಕೆ
- ಗುಡ್ ಫಾರ್ಚ್ಯೂನ್ (ಇ): ಸಂ: 7.30ಕ್ಕೆ

ಗರುಡ ಮಾಲ್

- ಕಾಂತಾರ ಚಾಪ್ಟರ್ 1(ಕ) : ಬೆ: 8.20ಕ್ಕೆ, 9.05ಕ್ಕೆ, 9.40ಕ್ಕೆ, 11.30ಕ್ಕೆ, ಮ: 12.15ಕ್ಕೆ, 2.55ಕ್ಕೆ, 3.40ಕ್ಕೆ, ಸಂ: 6.20ಕ್ಕೆ, 7.05ಕ್ಕೆ, ರಾ: 9.45ಕ್ಕೆ, 10.30ಕ್ಕೆ
- ಪ್ರೇಮಿಗಳ ಗಮನಕ್ಕೆ (ಕ): ಬೆ: 11.05ಕ್ಕೆ
- ಡ್ಯೂಡ್ (ತ): ಮ: 12.50ಕ್ಕೆ, ರಾ: 7.10ಕ್ಕೆ
- ಟೈಮ್ ಪಾಸ್ (ಕ): ಮ: 1.50ಕ್ಕೆ
- ಬೈಸನ್ ಕಾಳಮಂದಾನ್ (ತ): ಮ: 3.40ಕ್ಕೆ, ರಾ.10.05ಕ್ಕೆ
- ತೆಲುಸು ಕಾದಾ (ತೆ): ಮ: 4.30ಕ್ಕೆ
- ಕೆ–ರ್‍ಯಾಂಪ್ (ತೆ): ರಾ: 7.20ಕ್ಕೆ
- ಮಿತ್ರ ಮಂಡಳಿ (ತೆ): ರಾ: 10.15ಕ್ಕೆ

ಸೂಚನೆ : ಸಿನಿಮಾ ಮಾರ್ಗದರ್ಶಿಯಲ್ಲಿ ಮಾಹಿತಿಯನ್ನು ಪರಿಪೂರ್ಣಗೊಳಿಸಲು ನಾವು ಸಾಧ್ಯವಾದಷ್ಟೂ ಪ್ರಯತ್ನಿಸುತ್ತಿದ್ದೇವೆ. ಆದರೂ ಕೆಲವೊಮ್ಮೆ ಮಾಹಿತಿ ಅಲಭ್ಯತೆಯಿಂದ ಲೋಪಗಳು ಉಂಟಾಗುವ ಸಾಧ್ಯತೆಯಿದ್ದು, ಸಾರ್ವಜನಿಕರು ಸಹಕರಿಸಬೇಕಾಗಿ ಕಳಕಳಿ ಮನವಿ.

ಬುರುಡೆ ಗ್ಯಾಂಗ್‌ಗೆ ತಾತ್ಕಾಲಿಕ ರಿಲೀಫ್

ನ.12ರವರೆಗೆ ಎಸ್‌ಐಟಿ ತನಿಖೆಗೆ ಹೈಕೋರ್ಟ್ ತಡೆ

ಬೆಂಗಳೂರು, ಅ30– ಧರ್ಮಸ್ಥಳ ಕೇಸ್‌ನಲ್ಲಿ ಬುರುಡೆ ಗ್ಯಾಂಗ್‌ಗೆ ತಾತ್ಕಾಲಿಕ ರಿಲೀಫ್ ಸಿಕ್ಕಿದೆ. ನ.12ರವರೆಗೆ ತನಿಖೆಗೆ ತಡೆ ನೀಡಿ ಹೈಕೋರ್ಟ್ ಆದೇಶ ನೀಡಿದೆ.

ಧರ್ಮಸ್ಥಳ ಗ್ರಾಮದಲ್ಲಿ ಶವ ಹೂತಿಟ್ಟ ಪ್ರಕರಣ ರದ್ದು ಕೋರಿ ಗಿರೀಶ್ ಮಟ್ಟಣ್ಣನವರ್, ಮಹೇಶ್ ಶೆಟ್ಟಿ ತಿಮರೋಡಿ, ಜಯಂತ್.ಟಿ ಹಾಗೂ ವಿಠಲ್ ಗೌಡ ಸಲ್ಲಿಸಿದ್ದ ಅರ್ಜಿ ವಿಚಾರಣೆ ಇಂದು ಹೈಕೋರ್ಟ್‌ನ ನ್ಯಾ.ಮಹಮ್ಮದ್ ನವಾಜ್ ನೇತೃತ್ವದ ಏಕಸದಸ್ಯ ಪೀಠದಲ್ಲಿ ನಡೆಯಿತು. ಅರ್ಜಿದಾರರ ಪರ ವಕೀಲರು, ವಾದ ಮಂಡಿಸಿ, 9 ಬಾರಿ ನೋಟಿಸ್ ನೀಡಿದ್ದು, 9 ಬಾರಿಯೂ ವಿಚಾರಣೆಗೆ ಹಾಜರಾಗಿದ್ದಾರೆ. ಬೆಳಗ್ಗೆಯಿಂದ ಸಂಜೆಯ ತನಕ ತನಿಖಾಧಿಕಾರಿ ಮುಂದೆ ವಿಚಾರಣೆಗೆ ಒಳಪಟ್ಟಿದ್ದಾರೆ. 150 ಗಂಟೆಗೂ ಹೆಚ್ಚು ಕಾಲ ವಿಚಾರಣೆಯಲ್ಲಿ ಭಾಗಿಯಾಗಿದ್ದಾರೆ. ಬೇರೆ ಬೇರೆ ಸೆಕ್ಷನ್‌ಗಳಲ್ಲಿ ವಿಚಾರಣೆಗೆ ಕರೆಯುತ್ತಾ ಇದ್ದಾರೆ. ಈ ಪ್ರಕರಣದಲ್ಲಿ ಅರ್ಜಿದಾರರು ಹೇಳುವುದು ಇನ್ನೇನು ಇಲ್ಲ ಎಂದು ವಾದ ಮಾಡಿದರು. ಅರ್ಜಿದಾರರು ಆರೋಪಿಗಳಾಗಿದ್ದಾರಾ ಎಂದು ಜಡ್ಜ್ ಪ್ರಶ್ನೆ ಮಾಡಿದರು. ಇದಕ್ಕೆ ಉತ್ತರಿಸಿದ ವಕೀಲರು ಆರೋಪಿಗಳು ಆಗಿಲ್ಲ, ಸಾಕ್ಷಿಗಳು ಆಗಿಲ್ಲ ಎಂದರು.

ರಾಜಕೀಯ ದ್ವೇಷ, ಧರ್ಮ ದ್ವೇಷ ಎಲ್ಲಾ ಇದರಲ್ಲಿ ಇದೆ. ನೋಟಿಸ್ ಕೊಟ್ಟು ಬೆಳಗ್ಗೆ ಇಂದ ಸಂಜೆ ತನಕ ಕೂರಿಸುತ್ತಿದ್ದಾರೆ. ಇದಕ್ಕೆ ವಿಚಾರಣೆಗೆ ಯಾಕೆ ಹೋಗಬೇಕು? ಪ್ರಕರಣ ದಾಖಲಿಸುವಾಗ ಪೊಲೀಸರು ಪ್ರಕ್ರಿಯೆ ಪಾಲಿಸಿಲ್ಲ ಎಂದು ಇದೇ ವೇಳೆ ಅರ್ಜಿದಾರರ ಪರ ವಕೀಲರು ವಾದಿಸಿದರು. ಈಗಾಗಲೇ ಸಾಕಷ್ಟು ನೋಟಿಸ್ ನೀಡಿದ್ದೀರಿ ಅಲ್ವಾ ಎಂದು ಸರ್ಕಾರಿ ಪರ ವಕೀಲ ಜಗದೀಶ್‌ಗೆ ಜಡ್ಜ್ ಪ್ರಶ್ನೆ ಮಾಡಿದರು.

ಪ್ರತಿವಾದ ಆರಂಭಿಸಿದ ಎಸ್.ಪಿ.ಪಿ ಜಗದೀಶ್, 164 ಹೇಳಿಕೆಯನ್ನು ಚಿನ್ನಯ್ಯ ಮ್ಯಾಜಿಸ್ಟ್ರೇಟ್ ಮುಂದೆಯೇ ನೀಡಿದ್ದಾನೆ. ಇದೇ ಚಾಂಪಿಯನ್‌ಗಳು ದೂರು ದಾಖಲಿಸಲು ಎಸ್ಪಿ, ಸರ್ಕಾರವನ್ನು ಭೇಟಿ ಮಾಡಿ ತನಿಖೆಗೆ ಒತ್ತಾಯಿಸಿದ್ದರು. ಇದೇ ವ್ಯಕ್ತಿಗಳು ದೂರುದಾರಿಗೆ ಆಶ್ರಯ ನೀಡಿದ್ದರು. ಇದೇ ವ್ಯಕ್ತಿಗಳಿಂದ ತಪ್ಪು ಮಾಹಿತಿ ನೀಡಿದ್ದಾಗಿ ಚಿನ್ನಯ್ಯ ಹೇಳಿದ್ದಾನೆ. ಅರ್ಜಿದಾರರು ತನಿಖೆ ನಡೆಸುವಾಗ ಕೂಡ ತೊಂದರೆ ಮಾಡುವ ಪ್ರಯತ್ನ ಮಾಡಿದ್ದಾರೆ ಎಂದು ವಾದ ಮಂಡಿಸಿದರು. ವಾದ ಪ್ರತಿವಾದ ಆಲಿಸಿದ ನ್ಯಾಯಾಧೀಶರು, ಮುಂದಿನ ವಿಚಾರಣೆವರೆಗೂ ತನಿಖೆಗೆ ತಡೆ ನೀಡಿ ನವೆಂಬರ್ 12ಕ್ಕೆ ವಿಚಾರಣೆ ಮುಂದೂಡಿದರು.

ನ.10ರವರೆಗೆ ಆನ್‌ಲೈನ್‌ನಲ್ಲಿ ಸಾಮಾಜಿಕ, ಶೈಕ್ಷಣಿಕ ಸಮೀಕ್ಷೆ

ಬೆಂಗಳೂರು, ಅ.30– ರಾಜ್ಯ ಸರ್ಕಾರದ ಸಾಮಾಜಿಕ ಶೈಕ್ಷಣಿಕ ಸಮೀಕ್ಷೆಯಲ್ಲಿ ಭಾಗಿಯಾಗದೇ ಇರುವವರು ಮತ್ತು ಈವರೆಗೆ ಮಾಹಿತಿ ನೀಡಲು ಸಾಧ್ಯವಾಗದೇ ಇರುವವರು ನವೆಂಬರ್ 10ರವೆಗೆ ಆನ್‌ಲೈನ್ ಮೂಲಕ ವಿವರಗಳನ್ನು ನಮೂದಿಸಬಹುದಾಗಿದೆ.

ಕರ್ನಾಟಕ ರಾಜ್ಯ ಹಿಂದುಳಿದ ವರ್ಗಗಳ ಆಯೋಗವು ನಡೆಸುತ್ತಿರುವ ಸಮೀಕ್ಷೆಯ ಮನೆ ಮನೆ ಭೇಟಿ ಹಂತವು ಶುಕ್ರವಾರಕ್ಕೆ (ಅ.31) ಕೊನೆಗೊಳ್ಳಲಿದೆ. ಆದರೆ, ಆನ್‌ಲೈನ್ ಮೂಲಕ ಜನರು ಸ್ವಯಂ ಮಾಹಿತಿ ದಾಖಲಿಸುವ ದಿನಾಂಕವನ್ನು ನ.10ರವರೆಗೆ ವಿಸ್ತರಿಸಿ, ಆಯೋಗವು ಗುರುವಾರ ಆದೇಶಿಸಿದೆ. https://kscbcselfdeclaration.karnataka.gov.in ಲಿಂಕ್ ಮೂಲಕ ಸಮೀಕ್ಷೆಯಲ್ಲಿ ಭಾಗಿಯಾಗಬಹುದಾಗಿದೆ. ಜನರು ತಮ್ಮ ಮನೆಗೆ ನೀಡಲಾಗಿರುವ ಯುಎಚ್‌ಐಡಿ ಅಥವಾ ವಿದ್ಯುತ್ ಮೀಟರ್‌ನ ಆರ್‌ಆರ್ ಸಂಖ್ಯೆಯನ್ನು ಬಳಸಿಕೊಂಡು ಈ ಪೋರ್ಟಲ್‌ನಲ್ಲಿ ಮಾಹಿತಿ ತುಂಬಬಹುದಾಗಿದೆ. ಹೆಚ್ಚಿನ ಮಾಹಿತಿಗೆ 80507 70004 ಸಂಖ್ಯೆಯ ಸಹಾಯವಾಣಿಗೆ ಕರೆ ಮಾಡಬಹುದು ಎಂದು ಪ್ರಕಟಣೆ ತಿಳಿಸಿದೆ.

ದಡ್ಡರ ಗುಂಪಿನಲ್ಲಿ ಬುದ್ಧಿವಂತ ಎನಿಸಿಕೊಳ್ಳುವುದಕ್ಕಿಂತ ಜ್ಞಾನಿಗಳಿಂದ ಪಂಡಿತ ಎಂದು ಗುರುತಿಸಲ್ಪಡಬೇಕು

ಶ್ರೀ ಸತ್ಯಧ್ಯಾನ ವಿದ್ಯಾಪೀಠದ ಕುಲಪತಿ ಡಾ. ಮಾಹುಲಿ ವಿದ್ಯಾಸಿಂಹಾಚಾರ್ಯ ಅಭಿಮತ

ಮೈಸೂರು, ಅ.30– ದಡ್ಡರ ಗುಂಪಿನಲ್ಲಿ ನಾವು ಬುದ್ಧಿವಂತ ಎನಿಸಿಕೊಳ್ಳುವುದಕ್ಕಿಂತ ಜ್ಞಾನಿಗಳು ನಮ್ಮನ್ನು ಪರಿಣಿತ, ಪಂಡಿತ ಎಂದು ಗುರುತಿಸುವ ಮಟ್ಟಕ್ಕೆ ಬೆಳೆಯಬೇಕು. ಅದೇ ನಿಜವಾದ ಸಾಧನೆ ಎಂದು ಮುಂಬೈನ ಶ್ರೀ ಸತ್ಯ ಧ್ಯಾನ ವಿದ್ಯಾಪೀಠದ ಕುಲಪತಿ, ಮಹಾ ಮಹೋಪಾಧ್ಯಾಯ ಡಾ. ಮಾಹುಲಿ ವಿದ್ಯಾಸಿಂಹಾಚಾರ್ಯ ನುಡಿದರು.



ಶ್ರೀರಾಮಪುರದ ಶ್ರೀ ವೆಂಕಟೇಶ ಧ್ಯಾನ ಕೇಂದ್ರದಲ್ಲಿ ಹಮ್ಮಿಕೊಂಡಿದ್ದ ಜ್ಞಾನಸತ್ರ 'ಗೀತಾಭಾಷ್ಯ ಒಂದು ವಿಶೇಷ ಚಿಂತನ' ಸರಣಿ ಕಾರ್ಯಕ್ರಮದಲ್ಲಿ ಡಾ. ಮಾಹುಲಿ ವಿದ್ಯಾಸಿಂಹಾಚಾರ್ಯ ಉಪನ್ಯಾಸ ನೀಡಿದರು.

ಮೈಸೂರಿನ ಶ್ರೀರಾಂಪುರದ ಶ್ರೀ ವೆಂಕಟೇಶ ಧ್ಯಾನ ಕೇಂದ್ರದಲ್ಲಿ ಹಮ್ಮಿಕೊಂಡಿರುವ ಜ್ಞಾನಸತ್ರ 'ಗೀತಾಭಾಷ್ಯ ಒಂದು ವಿಶೇಷ ಚಿಂತನ' ಸರಣಿ ಕಾರ್ಯಕ್ರಮದಲ್ಲಿ ಅವರು ಉಪನ್ಯಾಸ ನೀಡಿದರು.

ಏನೂ ತಿಳಿಯದವರ ಮಧ್ಯದಲ್ಲಿ ಎಂದೂ ಇರಬಾರದು. ಆ ಸ್ಥಳದಲ್ಲಿ ನಮಗೆ ತಿಳಿದ ಅಲ್ಪ ಸಲ್ಪವೂ ಮರೆತುಹೋಗುತ್ತದೆ. ಅಪ್ರಬುದ್ಧರು ಇಲ್ಲ ಸಲ್ಲದ ಸಂಗತಿಗಳ ಬಗ್ಗೆ ಸದಾ ಗಲಾಟೆಯನ್ನಷ್ಟೇ ಮಾಡುತ್ತಾರೆ. ಇದರಿಂದ ಜೀವನದ ಅಮೂಲ್ಯ ಕ್ಷಣಗಳು ಕಳೆದು ಹೋಗುತ್ತವೆ. ಯಾವ ಫಲವೂ ಲಭಿಸದು. ಹಾಗಾಗಿ ಸಜ್ಜನರ ಸಂಘ ಮಾಡಬೇಕು ಎಂದರು.

ಸದಾ ಪ್ರಾಜ್ಞರ ಸಮೂಹದಲ್ಲಿ ಇದ್ದ ವ್ಯಕ್ತಿ ಅಭ್ಯುದಯದ ಕಡೆಗೆ ಸಾಗುತ್ತಾನೆ. ಆತನಿಗೆ ಈ ಪ್ರಕ್ರಿಯೆಗೆ ಬೇಕಾದ ಪೂರಕ, ಪ್ರೇರಕ ವಾತಾವರಣ ಅಲ್ಲಿ ತಾನಾಗಿಯೇ ದೊರಕುತ್ತದೆ ಎಂದು ಅವರು ಹೇಳಿದರು.

ಶ್ರವಣ, ಮನನ, ಜ್ಞಾನ, ಧ್ಯಾನಾದಿಗಳು ನಮ್ಮನ್ನು ಸನ್ಮಾರ್ಗದಲ್ಲಿ ಮುಂದೆ ಮುಂದೆ ನಡೆಯುವಂತೆ ಮಾಡುತ್ತವೆ. ಜೀವನದ ಸಾರ್ಥಕತೆಗೆ ಮತ್ತು ಮೋಕ್ಷ ಸಾಧನೆಗೆ ಈ ಹಾದಿಯಲ್ಲೇ ಸಾಗಬೇಕು ಎಂದು ವೇದಗಳು ಹೇಳಿದ್ದು, ಅವುಗಳಿಂದ ವಿಮುಖರಾಗಿ ಮಾನವ ಜನ್ಮವನ್ನು ಹಾನಿ ಮಾಡಿಕೊಳ್ಳಬಾರದು ಎಂದರು.

ಯಾರ್‍ಯಾದ್ದೋ ಪ್ರೀತಿಗಿಂತ ಭಗವಂತ ಪ್ರೀತಿಯನ್ನು ಅಪೇಕ್ಷಿಸಿದರೆ ಅದರಲ್ಲಿ ಯಾವುದೇ ತಪ್ಪು ಇಲ್ಲ. ಇದರ ಜತೆ ಜತೆಗೇ ದೇವರ ಪ್ರೀತಿಗಾಗಿ ನಾವು ಏನೆಲ್ಲಾ ಉತ್ತಮ ಕಾರ್ಯಗಳನ್ನು ಮಾಡಬಹುದೋ ಅದನ್ನೆಲ್ಲಾ ಆಯಾ ಕ್ಷಣದಲ್ಲೇ ಮಾಡಬೇಕು ಎಂದರು. ಪಂಡಿತರಾದ ಬಾದರಾಯಣಾಚಾರ್ಯ, ವ್ಯಾಸತೀರ್ಥಾಚಾರ್ಯ, ಹೇಮಂತ ಆಚಾರ್ಯ ಗುಡಿ ಸೇರಿದಂತೆ ನೂರಾರು ವಿದ್ವಾಂಸರು ಹಾಜರಿದ್ದರು.

ಜಸ್ಟೀಸ್ ಸೂರ್ಯಕಾಂತ್ ಸುಪ್ರೀಂಕೋರ್ಟ್ ಮುಂದಿನ ಮುಖ್ಯ ನ್ಯಾಯಮೂರ್ತಿ




ನವದೆಹಲಿ. ಅ.30– ಸುಪ್ರೀಂಕೋರ್ಟ್ ಮುಖ್ಯ ನ್ಯಾಯಮೂರ್ತಿ ಬಿ.ಆರ್. ಗವಾಯಿ ಅವರು ಮುಂಬರುವ ನವೆಂಬರ್ 23ರಂದು ನಿವೃತ್ತಿ ಹೊಂದುತ್ತಿರುವ ಹಿನ್ನೆಲೆಯಲ್ಲಿ ರಾಷ್ಟ್ರಪತಿ ದ್ರೌಪದಿ ಮುರ್ಮು ಅವರು ಜಸ್ಟೀಸ್ ಸೂರ್ಯಕಾಂತ್ ಅವರನ್ನು ಮುಂದಿನ ಸಿಜೆಐ ಆಗಿ ನೇಮಕ ಮಾಡಿದ್ದಾರೆ.

ನ್ಯಾ. ಸೂರ್ಯಕಾಂತ್ ಅವರು ಪ್ರಸ್ತುತ ಸುಪ್ರೀಂ ಕೋರ್ಟ್‌ನ ಎರಡನೇ ಹಿರಿಯ ನ್ಯಾಯಾಧೀಶರಾಗಿದ್ದಾರೆ. ನ.24ರಂದು ಜಸ್ಟೀಸ್ ಸೂರ್ಯಕಾಂತ್ ಅವರು ಸಿಜೆಐ ಆಗಿ ಪ್ರಮಾಣವಚನ ಸ್ವೀಕರಿಸಲಿದ್ದಾರೆ. ಕೇಂದ್ರ ಕಾನೂನು ಮತ್ತು ನ್ಯಾಯ ಸಚಿವ ಅರ್ಜುನ್ ರಾಮ್ ಮೇಘವಾಲ್ ಅವರು ರಾಷ್ಟ್ರಪತಿಗಳು ಜಸ್ಟೀನ್ ಸೂರ್ಯಕಾಂತ್ ಅವರನ್ನು ಸಿಜೆಐ ಆಗಿ ನೇಮಕ ಮಾಡಿರುವುದನ್ನು ದೃಢಪಡಿಸಿದ್ದಾರೆ.

ಭಾರತದ ಸಂವಿಧಾನವು ನೀಡಿರುವ ಅಧಿಕಾರವನ್ನು ಚಲಾಯಿಸಿ ರಾಷ್ಟ್ರಪತಿಗಳು ಭಾರತದ ಸುಪ್ರೀಂಕೋರ್ಟ್‌ನ ನ್ಯಾಯಾಧೀಶರಾದ ನ್ಯಾ. ಸೂರ್ಯಕಾಂತ್ ಅವರನ್ನು 2025ರ ನ.24 ರಿಂದ ಜಾರಿಗೆ ಬರುವಂತೆ ಭಾರತದ ಮುಖ್ಯ ನ್ಯಾಯಮೂರ್ತಿಯಾಗಿ ನೇಮಕ ಮಾಡಲು ಆದೇಶ ಹೊರಡಿಸಿದ್ದಾರೆ ಎಂದು ಕೇಂದ್ರ ಕಾನೂನು ಸಚಿವ ಅರ್ಜುನ್ ರಾಮ್ ಮೇಘವಾಲ್ ತಮ್ಮ ಅಧಿಕೃತ ಎಕ್ಸ್ ಅಕೌಂಟ್‌ನಲ್ಲಿ ಪೋಸ್ಟ್ ಮಾಡಿದ್ದಾರೆ. ಈ ವಾರದ ಆರಂಭದಲ್ಲಿ ನ್ಯಾ. ಸೂರ್ಯಕಾಂತ್ ಅವರ ಹೆಸರನ್ನು ಭಾರತದ ಮುಂದಿನ ಮುಖ್ಯ ನ್ಯಾಯಮೂರ್ತಿಯಾಗಿ ಪ್ರಸ್ತಾಪಿಸಿ, ಪ್ರಸ್ತುತ ಸಿಜೆಐ ಬಿಆರ್ ಗವಾಯಿ ಕೇಂದ್ರ ಸರ್ಕಾರಕ್ಕೆ ಪತ್ರ ಬರೆದಿದ್ದರು. 53ನೇ ಸಿಜೆಐ ಆಗಿ, ನ್ಯಾ. ಸೂರ್ಯಕಾಂತ್ ಫೆಬ್ರವರಿ 9, 2027ರವರೆಗೆ ಅಧಿಕಾರದಲ್ಲಿರಲಿದ್ದಾರೆ.

ಕರ್ನಾಟಕ ಕಾರ್ಯನಿರತ ಪತ್ರಕರ್ತರ ಸಂಘದ ರಾಜ್ಯಾಧ್ಯಕ್ಷರಾಗಿ ಶಿವಾನಂದ ತಗಡೂರು ಪುನರಾಯ್ಕೆ



ಬೆಂಗಳೂರು, ಅ.30–ರಾಜ್ಯ ಕಾರ್ಯನಿರತ ಪತ್ರಕರ್ತರ ಸಂಘದ ಅಧ್ಯಕ್ಷರಾಗಿ ಶಿವಾನಂದ ತಗಡೂರು ಅವರು ಅವಿರೋಧವಾಗಿ ಆಯ್ಕೆಯಾಗಿದ್ದಾರೆ. ಇದರೊಂದಿಗೆ ಅವರು 3ನೇ ಬಾರಿಗೆ ಅಧ್ಯಕ್ಷಗಾದಿ ಅಲಂಕರಿಸಿದಂತಾಗಿದೆ. ಉಳಿದಂತೆ ಉಪಾಧ್ಯಕ್ಷರಾಗಿ ಅಜ್ಜಮಾಡ ರಮೇಶ್ ಕುಟ್ಟಪ್ಪ, ಹೆಚ್.ಬಿ. ಮದನ ಗೌಡ, ಮತ್ತೀಕೆರೆ ಜಯರಾಂ, ಪ್ರಧಾನ ಕಾರ್ಯದರ್ಶಿಯಾಗಿ ಜೆ.ಸಿ. ಲೋಕೇಶ್, ಕಾರ್ಯದರ್ಶಿಗಳಾಗಿ ಪುಂಡಲೀಕ ಬಿ.ಬಾಳೋಜಿ, ಸೋಮಶೇಖರ ಕೆರಗೋಡು, ಲಿಂಗಪ್ಪ ಚಾವಡಿ ಮತ್ತು ಖಜಾಂಚಿಯಾಗಿ ವಾಸುದೇವ ಹೊಳ್ಳ ಅವಿರೋಧವಾಗಿ ಆಯ್ಕೆಯಾಗಿದ್ದಾರೆ ಎಂದು ಚುನಾವಣಾಧಿಕಾರಿ ಎನ್.ರವಿಕುಮಾರ್ ತಿಳಿಸಿದ್ದಾರೆ.

ಮೈಸೂರಿನ 12 ಪ್ರಮುಖ ರಸ್ತೆಗಳಿಗೆ ವೈಟ್ ಟ್ಯಾಪಿಂಗ್

ಲೋಕೋಪಯೋಗಿ ಇಲಾಖೆಯಿಂದ 400 ಕೋಟಿ ವೆಚ್ಚದ ಕಾಮಗಾರಿಗೆ ಟೆಂಡರ್

ಮೈಸೂರು, ಅ. 30 (ಆರ್‌ಕೆ)– ಮೈಸೂರು ನಗರದ 12 ಪ್ರಮುಖ ರಸ್ತೆಗಳಿಗೆ ವೈಟ್ ಟ್ಯಾಪಿಂಗ್ (ಪೋರ್ಟ್‌ಲ್ಯಾಂಡ್ ಸಿಮೆಂಟ್ ಕಾಂಕ್ರಿಟ್) ಮಾಡುವ ಯೋಜನೆಗೆ ಸದ್ಯದಲ್ಲೇ ಚಾಲನೆ ದೊರೆಯಲಿದೆ.



2025ರ ಏಪ್ರಿಲ್ ಮಾಹೆಯಲ್ಲಿ ಚಾಮರಾಜನಗರ ಜಿಲ್ಲೆ, ಹನೂರು ತಾಲೂಕು ಮಲೈಮಹದೇಶ್ವರ ಬೆಟ್ಟದಲ್ಲಿ ನಡೆದ ವಿಶೇಷ ಸಂಪುಟ ಸಭೆಯಲ್ಲಿ ಮುಖ್ಯಮಂತ್ರಿ ಸಿದ್ದರಾಮಯ್ಯ, ಮೈಸೂರಿನ 12 ಪ್ರಮುಖ ರಸ್ತೆಗಳಿಗೆ ಪೋರ್ಟ್‌ಲ್ಯಾಂಡ್ ಸಿಮೆಂಟ್ ಕಾಂಕ್ರಿಟ್ ಹಾಕುವ ಯೋಜನೆಗೆ ಅನುಮೋದನೆ ನೀಡಿ, ಅದಕ್ಕಾಗಿ 393.4 ಕೋಟಿ ರೂ. ಅನುದಾನವನ್ನು ಮೀಸಲಿರಿಸಿದ್ದರು. ಅದರಂತೆ ಲೋಕೋಪಯೋಗಿ ಇಲಾಖೆ ಮೈಸೂರು ಸರ್ಕಲ್ ಅಧಿಕಾರಿಗಳು 400 ಕೋಟಿ ರೂ. ಎಸ್ಟಿಮೇಟ್‌ನೊಂದಿಗೆ ಸಮಗ್ರ ಯೋಜನಾ ವರದಿ (ಡಿಪಿಆರ್) ತಯಾರಿಸಿ ಸರ್ಕಾರಕ್ಕೆ ಪ್ರಸ್ತಾವನೆ ಸಲ್ಲಿಸಿದ್ದರು.

ಈ ಮೊದಲೇ ಘೋಷಿಸಿದಂತೆ ಮುಖ್ಯಮಂತ್ರಿಗಳು ವೈಟ್‌ಟಾಪಿಂಗ್ ಅನುಮೋದನೆ ನೀಡಿದ ಹಿನ್ನಲೆಯಲ್ಲಿ ಮೈಸೂರಿನ ಪಿಡಬ್ಲ್ಯೂಡಿ ಇಂಜಿನಿಯರ್‌ಗಳು ಇದೀಗ 46.9 ಕಿ.ಲೊ. ಮೀಟರ್ ಉದ್ದದ 12 ರಸ್ತೆಗಳನ್ನು ಸಿಮೆಂಟ್ ಕಾಂಕ್ರಿಟ್ ರಸ್ತೆಗಳನ್ನಾಗಿ ಪರಿವರ್ತಿಸುವ ಕಾಮಗಾರಿಗೆ ಟೆಂಡರ್ ಕರೆದಿದ್ದಾರೆ. ಸದ್ಯದಲ್ಲೇ ಟೆಂಡರ್ ತೆರೆಯಲಿದ್ದು ತಾಂತ್ರಿಕ ಅರ್ಹತೆ ಹೊಂದಿದ ಟೆಂಡರ್‌ದಾರರಿಗೆ ಹಣಕಾಸು ಅನುಮೋದನೆ ಪಡೆದು ಕಾರ್ಯಾದೇಶ (Work Order) ನೀಡಲಾಗುವುದು.

ದಾಸಪ್ಪ ಸರ್ಕಲ್‌ಯಿಂದ ರಾಯಲ್‌ಇನ್ ಬಳಿಯ ರಿಂಗ್ ರೋಡ್ ಜಂಕ್ಷನ್‌ವರೆಗೆ ಕೆಆರ್‌ಎಸ್ ರಸ್ತೆ, ಅರಮನೆ ಪಶ್ಚಿಮ ದ್ವಾರದಿಂದ ರಮಾವಿಲಾಸ ರಸ್ತೆ–ಏಕಲವ್ಯ ಸರ್ಕಲ್, ಕುಕ್ಕರಹಳ್ಳಿಕೆರೆ ರಸ್ತೆ ಮೂಲಕ ಬೋಗಾದಿ ಜಂಕ್ಷನ್‌ವರೆಗೆ, ರೈಲ್ವೆ ನಿಲ್ದಾಣದಿಂದ ಇರ್ವಿನ್‌ರಸ್ತೆ ಮೂಲಕ ಕೆಎಸ್‌ಆರ್‌ಟಿಸಿ ಗ್ರಾಮಾಂತರ ಬಸ್ ನಿಲ್ದಾಣದವರೆಗೆ, ರೈಲ್ವೆ ನಿಲ್ದಾಣದಿಂದ ಜೆಎಲ್‌ಬಿ ರಸ್ತೆ ಎಲೆ ತೋಟದ ಮೂಲಕ ನಂಜನಗೂಡು ರಸ್ತೆ ಜಂಕ್ಷನ್‌ವರೆಗೆ, ಫೌಂಟನ್ ಸರ್ಕಲ್‌ನಿಂದ ಸರ್ಕಾರಿ ಅತಿಥಿಗೃಹ–ಬಿಎನ್‌ರಸ್ತೆ ಮೂಲಕ ಹಾರ್ಡಿಂಜ್ ಸರ್ಕಲ್‌ವರೆಗೆ, ಜೆಎಲ್‌ಬಿ ರಸ್ತೆ ಜಂಕ್ಷನ್‌ನಿಂದ ಮಾನಂದವಾಡಿ ರಸ್ತೆ ಮೂಲಕ ಶ್ರೀರಾಂಪುರ ಬಳಿ ರಿಂಗ್‌ರಸ್ತೆ ಜಂಕ್ಷನ್, ಛತ್ರಿ ಮರದಿಂದ ನಜರ್‌ಬಾದ್ ಠಾಣೆ ಸರ್ಕಲ್‌ವರೆಗೆ ಸೇರಿದಂತೆ ಒಟ್ಟು 12 ರಸ್ತೆಗಳನ್ನು ವೈಟ್ ಟ್ಯಾಪಿಂಗ್ ಮಾಡಿ ಉನ್ನತೀಕರಣಗೊಳಿಸಲು ಲೋಕೋಪಯೋಗಿ ಇಲಾಖೆ ಅಧಿಕಾರಿಗಳು ಯೋಜನೆ ರೂಪಿಸಿದ್ದಾರೆ.

20 ವರ್ಷಗಳ ಕಾಲ ರಸ್ತೆ ಸುಭದ್ರ..!

ಯುಜಿಡಿ, ಯುಜಿ ಕೇಬಲ್, ವಾಟರ್ ಸಪ್ಲೈ ಇನ್ನಿತರೆ ಕಾಮಗಾರಿಗಳನ್ನು ಪೂರ್ಣಗೊಳಿಸಿಯೇ ವೈಟ್ ಟ್ಯಾಪಿಂಗ್ ಕಾಮಗಾರಿ ಕೈಗೊಳ್ಳಲಾಗುವುದು. ವೈಟ್ ಟ್ಯಾಪಿಂಗ್ ಕಾಮಗಾರಿಯಾದ ರಸ್ತೆಗಳಲ್ಲಿ ಮುಂದಿನ 20 ವರ್ಷ ಯಾವುದೇ ಕಾಮಗಾರಿಗಳು ನಡೆಯುವುದಿಲ್ಲ. 20 ವರ್ಷಗಳ ಕಾಲ ಯಾವುದೇ ಯುಜಿಡಿ, ಯುಜಿ ಕೇಬಲ್ ಇನ್ನಿತರೆ ಸಮಸ್ಯೆಗಳು ಬರುವುದಿಲ್ಲ ಎಂಬುದು ಖಾತರಿ ಆದ ಮೇಲೆಯೇ ವೈಟ್ ಟ್ಯಾಪಿಂಗ್ ಮಾಡಲಾಗುವುದು. ಮೈಸೂರಿನ ಪ್ರಮುಖ 12 ರಸ್ತೆಗಳ ವೈಟ್ ಟ್ಯಾಪಿಂಗ್ ಕಾಮಗಾರಿಗೆ ಈಗಾಗಲೇ ಟೆಂಡರ್ ಪ್ರಕ್ರಿಯೆ ಮುಗಿದಿದ್ದು, ಹಣಕಾಸು ಇಲಾಖೆ ಅನುಮತಿ ದೊರೆತ ಬಳಿಕ ಕಾಮಗಾರಿ ಆರಂಭವಾಗಲಿದೆ ಎಂದು ಲೋಕೋಪಯೋಗಿ ಇಲಾಖೆ ಇಂಜಿನಿಯರೊಬ್ಬರು 'ಮೈಸೂರು ಮಿತ್ರ'ನಿಗೆ ಮಾಹಿತಿ ನೀಡಿದರು.

ಒಮ್ಮೆ ಪೋರ್ಟ್‌ಲ್ಯಾಂಡ್ ಸಿಮೆಂಟ್ ಕಾಂಕ್ರಿಟ್ ಮಾಡಿದ ಈ ರಸ್ತೆಗಳು ಸುಮಾರು 25–30 ವರ್ಷಗಳವರೆಗೆ ಬಾಳಿಕೆ ಬರಲಿದ್ದು, ಪದೇ ಪದೆ ರಿಪೇರಿ ಮಾಡುವ ಅಗತ್ಯವಿರುವುದಿಲ್ಲ. ಕಾಂಕ್ರಿಟ್ ಬಾಕ್ಸ್ ಡ್ರೇನ್, ವಿದ್ಯುತ್ ದೀಪ ಹಾಗೂ ನೀರಿನ ಕೊಳವೆ ಮಾರ್ಗಗಳನ್ನೂ ಡ್ಯಾಮೇಜ್ ಆಗದಂತೆ ಶಾಶ್ವತ ಸುರಕ್ಷತೆ ಒದಗಿಸಲಾಗುವುದು ಎಂದು ಲೋಕೋಪಯೋಗಿ ಇಲಾಖೆ ಅಧಿಕಾರಿಗಳು 'ಮೈಸೂರು ಮಿತ್ರ'ನಿಗೆ ತಿಳಿಸಿದ್ದಾರೆ.

ಸಿದ್ದರಾಮಯ್ಯ ಮೊದಲ ಬಾರಿ ಮುಖ್ಯಮಂತ್ರಿ ಆಗಿದ್ದಾಗ ಮೈಸೂರಿನ ರಾಮಸ್ವಾಮಿ ಸರ್ಕಲ್‌ನಿಂದ ಚಾಮರಾಜ ಜೋಡಿ ರಸ್ತೆ, ಗನ್‌ಹೌಸ್, ಹಾರ್ಡಿಂಜ್ ಸರ್ಕಲ್, ಕೆಆರ್ ಸರ್ಕಲ್, ಸಯ್ಯಾಜಿರಾವ್ ರಸ್ತೆ, ಹೈವೆ ಸರ್ಕಲ್ ಮಾರ್ಗವಾಗಿ ಬನ್ನಿಮಂಟಪದ ಎಲ್‌ಐಸಿ ಕಚೇರಿ ಜಂಕ್ಷನ್‌ವರೆಗೆ ಇದ್ದ ಡಾಂಬರ್ ರಸ್ತೆಯನ್ನು ಸಿಮೆಂಟ್ ಕಾಂಕ್ರಿಟ್ ರಸ್ತೆಯನ್ನಾಗಿ ಉನ್ನತೀಕರಿಸಲಾಗಿತ್ತು. 8 ವರ್ಷ ಕಳೆದರೂ ಈ ಕಾಂಕ್ರಿಟ್ ರಸ್ತೆ ಸದೃಢವಾಗಿರುವುದನ್ನು ಇಲ್ಲಿ ಸ್ಮರಿಸಬಹುದಾಗಿದೆ.

ಸಂತ ಜೋಸೆಫರ ಕಾಲೇಜಲ್ಲಿ ರಕ್ತದಾನ ಶಿಬಿರ



ಎಡ್ವರ್ಡ್ ವಿಲಿಯಂ ಸಲ್ಡಾನಾ ವಿದ್ಯಾರ್ಥಿಗೆ ಪ್ರಮಾಣ ಪತ್ರ ವಿತರಿಸಿದರು.

ಮೈಸೂರು, ಅ.30(ವಿವಿಹೆಚ್)– ಮೈಸೂರಿನ ಜಯಲಕ್ಷ್ಮಿಪುರಂನ ಸಂತ ಜೋಸೆಫರ ಪ್ರಥಮ ದರ್ಜೆ ಕಾಲೇಜಿನಲ್ಲಿ ಸಂತ ಜೋಸೆಫ್ ಆಸ್ಪತ್ರೆ ಹಾಗೂ ಯೂತ್ ರೆಡ್‌ಕ್ರಾಸ್ ಘಟಕದ ವತಿಯಿಂದ ಬುಧವಾರ ರಕ್ತದಾನ ಶಿಬಿರ ಆಯೋಜಿಸಲಾಗಿತ್ತು.

ಶಿಬಿರ ಉದ್ಘಾಟಿಸಿ ಮಾತನಾಡಿದ ಎಂಡಿಇಎಸ್ ಕಾರ್ಯದರ್ಶಿ ಎಡ್ವರ್ಡ್ ವಿಲಿಯಂ ಸಲ್ಡಾನಾ, ರಕ್ತದಾನ ಜೀವ ಉಳಿಸುವ ನಿಟ್ಟಿನಲ್ಲಿ ಮಹತ್ತರ ಪಾತ್ರವನ್ನು ವಹಿಸುತ್ತದೆ. ರಕ್ತವನ್ನು ಮತ್ತೊಬ್ಬರಿಗೆ ನೀಡುವುದನ್ನು ದಾನ ಎನ್ನುವುದಕ್ಕಿಂತ ಸಾರ್ಥಕತೆ ಎಂದು ಪರಿಗಣಿಸಬೇಕು ಎಂದು ರಕ್ತದಾನದ ಮಹತ್ವ ಕುರಿತು ತಿಳಿಸಿದರು.

ಸಂತ ಜೋಸೆಫರ ಪ್ರಥಮ ದರ್ಜೆ ಕಾಲೇಜಿನ ಬಿಎಸ್ಸಿ, ಬಿಸಿಎ, ಬಿಬಿಎ, ಬಿಕಾಂ ಸೇರಿದಂತೆ ಸುಮಾರು 88 ವಿದ್ಯಾರ್ಥಿಗಳು ಹಾಗೂ ಇಬ್ಬರು ಸಹಾಯಕ ಪ್ರಾಧ್ಯಾಪಕರು ರಕ್ತದಾನ ಮಾಡಿದರು.

ರಕ್ತದಾನ ಮಾಡಿ ಸ್ಫೂರ್ತಿ ಮೆರೆದ ವಿದ್ಯಾರ್ಥಿಗಳಿಗೆ ಪ್ರಮಾಣಪತ್ರ, ಹಣ್ಣು, ಒಆರ್‌ಎಸ್ ಜ್ಯೂಸ್ ವಿತರಿಸಲಾಯಿತು.

ಕಾಲೇಜು ಆಡಳಿತ ಮಂಡಳಿಯ ಖಜಾಂಚಿ ನವೀನ್ ಕುಮಾರ್, ಕಾಲೇಜಿನ ಪ್ರಾಂಶುಪಾಲ ಎಚ್.ಎನ್.ಚಂದ್ರಶೇಖರ್ ಯೂತ್ ರೆಡ್ ಕ್ರಾಸ್ ಘಟಕದ ಕಾರ್ಯಕ್ರಮಾಧಿಕಾರಿ ಜಯಸೂರ್ಯ ಎನ್.ಸಿ., ಸಂತ ಜೋಸೆಫರ ಆಸ್ಪತ್ರೆಯ ಡಾ. ಮಹಮದ್ ಇಬ್ರಾಹಿಂ, ಸಹಾಯಕ ಪ್ರಾಧ್ಯಾಪಕ ಎನ್.ಸಿ. ಜಯಸೂರ್ಯ, ಕಾಲೇಜು ಸಿಬ್ಬಂದಿ, ವಿದ್ಯಾರ್ಥಿಗಳು, ಉಪನ್ಯಾಸಕರು, ಎನ್‌ಎಸ್‌ಎಸ್ ವಿದ್ಯಾರ್ಥಿಗಳು ಈ ವೇಳೆ ಉಪಸ್ಥಿತರಿದ್ದರು.

CALLIGRAPHY
(Beautiful Handwriting)
Two months short term classes
Every months admission date 1st & 10th
Offline & Online Classes
Admission Open at
KALA SPANDANA
Mahila Samaj, JLB Road.
Contact: S. Narayan, 9980337759

HOUSE FOR SALE
Architect designed
Near St. Joseph School, Mysore
20x40 @ 38 Lakhs
30x50 @ 71 Lakhs
CALL: 8123387555 7259348777

24ನೇ ವರ್ಷದ ಪುಣ್ಯಸ್ಮರಣೆ



ದಿ|| ಸುರೇಶ್.ಎಂ.ಎಸ್
ಮರಣ: 31–10–2001
ನೀವು ನಮ್ಮನ್ನಗಲಿ ಇಂದಿಗೆ 24 ವರ್ಷವಾದರೂ ಸದಾ ನಿಮ್ಮನ್ನು ಸ್ಮರಿಸುತ್ತಾ.
ನಿಮ್ಮ ನೆನಪಿನಲ್ಲಿ: **ಪುನೀತ್.ಎಂ.ಎಸ್.**
ಮೈಸೂರು ನಗರ ಬಿಜೆಪಿ ಕಾರ್ಯದರ್ಶಿ ಹಾಗೂ ಕುಟುಂಬವರ್ಗದವರು. ಮಂಚೇಗೌಡನ ಕೊಪ್ಪಲು. ಮೈಸೂರು



PRIME LAND FOR SALE
1 ACRE
on Bannur Main Road, from Devegowda Circle Ring Road 12kms to Mysore.
SUITABLE FOR :
Hotel, Club, Resort, Golf Resort, Villa Residence, Farm House.
Call: 99160 13715 / 95384 68799

ಮೈಸೂರಿನಲ್ಲಿ DTCP APPROVED ಬಡಾವಣೆಗಳಲ್ಲಿ ನಿವೇಶನಗಳು ದೊರೆಯುತ್ತವೆ
1) ಟಿ–ನರಸೀಪುರ ಮುಖ್ಯರಸ್ತೆ,
2) ಹೆಚ್ ಡಿ ಕೋಟೆ ಮುಖ್ಯರಸ್ತೆ,
3) ಕೆಲ್ಲಹಳ್ಳಿ, ಫೆರಿಫೆರಲ್ ರಿಂಗ್ ರಸ್ತೆ,
ಬ್ಯಾಂಕ್ ಸಾಲ ಸೌಲಭ್ಯ ದೊರೆಯುತ್ತದೆ
ಶ್ರೀ ರಮಣಶ್ರೀ ಡೆವಲಪರ್ಸ್
7411914135

ಶ್ರೀ ಸಂಜೀವಿನಿ ಗೋಲ್ಡ್ ಕಂಪನಿ
ನೀವು ಗಿರವಿ ಇಟ್ಟ ಚಿನ್ನಾಭರಣ ಬಿಡಿಸಿ ಉಳಿದ ಹಣವನ್ನು ನಿಮ್ಮ ಸ್ಥಳದಲ್ಲೇ ನೀಡಲಾಗುತ್ತದೆ.
ಒಂದು ಗ್ರಾಂ ಚಿನ್ನಕ್ಕೆ– ₹ 10,800(24CT)
9108146123

HOUSE FOR SALE IN POLICE LAYOUT
As per your requirement
Architect designed
20x30 House at 57 lakhs
20x40 House at 76 lakhs
30x40 House at 108 lakhs
Call: 9663906675

ಇಂದಿನಿಂದ ಕನ್ನಡ ರಾಜ್ಯೋತ್ಸವದ ಪ್ರಯುಕ್ತ
31.10.2025
ಪ್ರಭಾ ಮೈಸೂರು, ದಿನ 4 ಆಟಗಳು



10.30, 1.30, 4.30, 7.30

ಹಸಿರು ನಮ್ಮ ಉಸಿರು

ಕಡೆ 3 ದಿನ ಮಾತ್ರ (2.11.2025)
ಮೈಸೂರಿನ ಸಮಸ್ತ ಜನತೆಗೆ ಧನ್ಯವಾದಗಳು
ಜೆಮಿನಿ ಸರ್ಕಸ್
ಕಾರಂಜಿಕೆರೆ ಬಳಿ, ಮೃಗಾಲಯದ ಹಿಂಭಾಗ, ನಜರ್ ಬಾದ್, ಮೈಸೂರು



ಆಫ್ರಿಕನ್, ಚೈನೀಸ್, ರಷ್ಯನ್, ಇಂಡಿಯನ್ ಕಲಾವಿದರಿಂದ ಸಾಹಸಗಳು, ರೋಬೋಟ್ ಪ್ರಾಣಿಗಳೊಂದಿಗೆ ಸೆಲ್ಫಿ ತೆಗೆದುಕೊಳ್ಳಲು ಚಂದ.
ಪ್ರವೇಶ ದರ: Rs. 150/-, Rs. 250/- Rs. 350/- & Rs. 400/-
ದಿನ 3 ಆಟಗಳು – 1ಕ್ಕೆ, 4ಕ್ಕೆ, 7ಕ್ಕೆ
ಮುಂಗಡ ಬುಕ್ಕಿಂಗ್ ಸಂಪರ್ಕಿಸಿ: 79070-89704

MUDA APPROVED
Khata Ready
SHOURYA LAYOUT
69 projects — Designing your Dreams
Vee2 Developers
ADJOINING VIJAYANAGAR 4TH STAGE
20X30 Site
₹ 27 LAKHS ONLY
8088-707-707

ಅಭಿನಂದನೆಗಳು



ಬ್ರಾಹ್ಮಣ ಧರ್ಮ ಸಹಾಯ ಸಭಾ (ರಿ), ಕಲ್ಯಾಣ ಭವನ, ತ್ಯಾಗರಾಜ ರಸ್ತೆ, ಮೈಸೂರು, ಇದರ 2025–2028ನೇ ಸಾಲಿನ ಅವಧಿಗೆ ನಡೆದ ಆಡಳಿತ ಮಂಡಳಿಯ ಚುನಾವಣೆಯಲ್ಲಿ ಜಯಗಳಿಸಿದ ನಮ್ಮ ಸಂಸ್ಥೆಯ ಅಧ್ಯಕ್ಷರಾದ
ಶ್ರೀ ಬಿ.ಎಸ್.ಶ್ರೀನಾಥ್ ರವರಿಗೆ ಹಾರ್ದಿಕ ಅಭಿನಂದನೆಗಳು
ಶುಭಕೋರುವವರು : ಉಪಾಧ್ಯಕ್ಷರು ಹಾಗೂ ಆಡಳಿತ ಮಂಡಳಿಯ ಸದಸ್ಯರು ಮತ್ತು ಸಿಬ್ಬಂದಿ ವರ್ಗದವರು. ದಿವ್ಯ ಸಮಾಜ ನಿರ್ಮಾಣ ಕ್ರೆಡಿಟ್ ಕೋ– ಆಪರೇಟಿವ್ ಸೊಸೈಟಿ ಲಿ., ಮೈಸೂರು.

5ನೇ ವಾರ ಯಶಸ್ವಿ ಪ್ರದರ್ಶನ
ಗಾಯತ್ರಿ ಟಾಕೀಸ್
ಕಾಂತಾರ (ಕನ್ನಡ)
ದೈವಿಕ ಚಲನಚಿತ್ರದ ದೃಶ್ಯಗಳು ಮತ್ತು ಸೌಂಡ್ ಅನ್ನು ಥಿಯೇಟರ್‌ನಲ್ಲಿ ದೊಡ್ಡ ಪರದೆಯ ಮೇಲೆ ಅನುಭವಿಸಿ... ಮನೆಯ ಟಿವಿಯಲ್ಲಲ್ಲಾ...
Balcony 150, First Class -100
ದಿನ ನಾಲ್ಕು ಪ್ರದರ್ಶನ
10:15, 1.30, 5:00, 8:15
ಆನ್‌ಲೈನ್ ಟಿಕೆಟ್ಸ್ ಬುಕ್ ಮೈ ಷೋ ನಲ್ಲಿ ಲಭ್ಯವಿದೆ





1% ನೆಟ್ ಪ್ರಾಫಿಟ್
1 ಸೀರೆ ಖರೀದಿಸಿ, 1 ಸೀರೆ ಉಚಿತ ಪಡೆಯಿರಿ
2 ಸೀರೆ ಖರೀದಿಸಿ, 1 ಸೀರೆ ಉಚಿತ ಪಡೆಯಿರಿ
"ಸೀರೆಗಳ ಸಂಭ್ರಮ"
ವಿಳಾಸ : ಕುವೆಂಪುನಗರ KSRTC ಬಸ್ ಡಿಪೋ ಪಕ್ಕ, ಬಸ್ ನಿಲ್ದಾಣ, ಮೈಸೂರು
ಸಂಪರ್ಕಿಸಿ: 9980620678, 7411749410

ಇಂಪೀರಿಯಲ್ ಸಿಟಿ
ಮೆಗಾ ರೆಸಿಡೆನ್ಸಿಯಲ್ ವಿಲ್ಲಾ ಟೌನ್‌ಶಿಪ್
ಮೈಸೂರು - ಹುಣಸೂರು ಮುಖ್ಯರಸ್ತೆ, ಮೈಸೂರು
HP HYLAND PROPERTIES
ಕೇವಲ ₹749/ ಪ್ರತಿ ಚದರ ಅಡಿ
ಬುಕಿಂಗ್ ಪ್ರಾರಂಭವಾಗಿದೆ
ಇಲವಾಲ ಸ್ಯಾಟ್‌ಲೈಟ್ ಬಸ್ ನಿಲ್ದಾಣದಿಂದ ಕೇವಲ 4 ಕೀ.ಮೀ
MUDA LIMITS
ಸುಲಭ 4 ಕಂತುಗಳ ಸೌಲಭ್ಯವಿದೆ
30x40 | 30x50
40x60 | 50x80
ಅಳತೆಯ ಎಲ್ಲಾ ಸೌಲಭ್ಯಗಳನ್ನು ಒಳಗೊಳ್ಳುವ ನಿವೇಶನಗಳು
ಹೈಲ್ಯಾಂಡ್ ಪ್ರಾಪರ್ಟೀಸ್
ಕಾಳಿದಾಸ ರಸ್ತೆ, ವಿಜಯನಗರ 1ನೇ ಹಂತ, ಮೈಸೂರು
88840 71010
90713 86615

MONTESSORI / KINDERGARTEN NURSERY TEACHERS TRAINING
SIX MONTHS COURSE, REGUALAR/CORRESPONDENCE
SSLC PASS / PUC / ANY DEGREE, DIPLOMA CERTIFICATE & EXAM BY MHRD NEW DELHI REGISTERED BOARD
100 % JOB ASSURED @ ANY PUBLIC OR PRIVATE SCHOOLS
JNANA GANGOTRI CONVENT
Rajendra Nagara Mysore-570 007. CALL: 9243580672

ಸೈಟು ಮಾರಾಟಕ್ಕಿದೆ
40x60, 59x70
ಕಮರ್ಷಿಯಲ್ ಸೈಟ್ ಮಾರಾಟಕ್ಕಿದೆ
ವಿಳಾಸ : ಆರ್.ಎಸ್. ನಾಯ್ಡುನಗರ, ಬಸ್ ನಿಲ್ದಾಣದ ಎದುರು, ಮೈಸೂರು.
9980620678

2&3 BHK Flats @ RK Nagar FOR SALE
2. 20x30 & 30x40 MUDA Approved Sites Near Rainbow School Bogadi



3.30x40 Sites Near RT Nagar, BSNL Layout @ Just 22 L
Bookings Open
Properties Available in City Surrounding
Commercial Properties Available
PRAKRUTHI PROPERTIES
95386 90359, 90359 90359

mysilkerae
KALENI SILK INDUSTRY
ಅಪ್ಪಟ ಚಿನ್ನದ ಜರಿಯ ಸೀರೆಗಳು FACTORY SALE
100% PURE SILK / GOLD ZARI SAREES
UP TO 30% DISCOUNT
Woven on traditional looms exclusively with pure silk from the historic region of Mysore.
KALENI SILK INDUSTRY
263, Hebbal Industrial Area, Opp. to Annapurna Aahar Hotel, Mysore-570018
9019949145 / 9845817295 / 9019348989

SITE FOR SALE
Site size 60x40
Address : Sy. No. 16/1, 16/2, 16/3, Site No.13, SkyTop Green City Layout, Karakanahalli Village, Yelwala Hobli, Mysore.
Near RMP Backside
Katha 9 & 11A available.
Call : 99000 69764

ನಿವೃತ್ತರಿಗೆ ಉದ್ಯೋಗವಕಾಶ ಸೆಮಿನಾರ್
ರಾಜ್ಯ / ಕೇಂದ್ರ ಸರಕಾರದ ಹಾಗೂ ಸಾರ್ವಜನಿಕ ಸಂಸ್ಥೆಯಿಂದ ನಿವೃತ್ತರಾದ ನೌಕರರಿಗೆ ಉದ್ಯೋಗವಕಾಶದ ಸೆಮಿನಾರ್ ಏರ್ಪಡಿಸಲಾಗಿದೆ. ಸ್ಥಳ: ಮೌರ್ಯ ರೆಸಿಡೆನ್ಸಿ ಹೋಟೆಲ್, ದಿನಾಂಕ: 03–11–2025, ಸಮಯ: ಬೆಳಗ್ಗೆ 11 ಗಂಟೆಗೆ, ವಿದ್ಯಾಹರ್ತೆ: ಎಸ್.ಎಸ್.ಎಲ್.ಸಿ ಹಾಗೂ ಯಾವುದೇ ಪದವಿ, ದಾಖಲಾತಿಗಳು: 1. ಪಾನ್‌ಕಾರ್ಡ್, 2.ಆಧಾರ್ ಕಾರ್ಡ್, 3.ಫೋಟೋ 4. ಮಾರ್ಕ್ಸ್ ಕಾರ್ಡ್ 5. ಬ್ಯಾಂಕ್ ಪಾಸ್‌ಪುಸ್ತಕ 1st Page. Followed by lunch:
7022034200

MUDA APPROVED SITES FOR SALE
Last 6
30X40 EAST FACING
Available.
Location: Adjacent J P Nagar, At Mysore-Ooty Road & Ring Road Junction.
Price @ Rs 77,35,641 onwards
Call: 96200 33222

FARMICO EARTH PRIVATE LIMITED

OFF.NO-1006, 10TH FLOOR, HUBTOWN SOLARIS, N.S PHADKE ROAD, SAIWADI, NEAR GOKHLE FLY OVER, ANDHERI (E), MUMBAI-400069
CIN: U43121MH2025PTC459455 Email:farmicoearth@gmail.com

ಕಾನೂನು ಸೂಚನೆ

FARMICO ಅರ್ಥ್ ಪ್ರೈವೇಟ್ ಲಿಮಿಟೆಡ್ ಕಂಪನಿಗಳ ಕಾಯಿದೆ 2013 ರ ಅಡಿಯಲ್ಲಿ ತನ್ನ ನೋಂದಾಯಿತ ಕಚೇರಿಯನ್ನು ಆಫೀಸ್ ನಂ. 1006, 10 ನೇ ಮಹಡಿ, ಹಬ್‌ಟೌನ್ ಸೋಲಾರಿಸ್, N.S ನಲ್ಲಿ ಹೊಂದಿದೆ ಎಂದು ಸಾರ್ವಜನಿಕರಿಗೆ ಈ ಮೂಲಕ ಸೂಚನೆ ನೀಡಲಾಗಿದೆ, ಫಡ್ಕೆ ರಸ್ತೆ, ಸಾಯಿವಾಡಿ, ಅಂಧೇರಿ (ಇ), ಗೋಖಲೆ ಫ್ಲೈಓವರ್ ಹತ್ತಿರ, ಮುಂಬೈ 400069, ಅದರ ಅಧಿಕೃತ ಪ್ರತಿನಿಧಿ ಶ್ರೀ. ರಾಹುಲ್ ವಿಶಿಂದಾಸ್ ರಾವ್ಲಾನಿ S/o ಶ್ರೀ ವಿಶಿಂದಾಸ್ ರಾವ್ಲಾನಿ ಮೂಲಕ ಸರ್ವೆ ನಂ. 1) ಆಸ್ತಿಯನ್ನು ಖರೀದಿಸಲು ಉದ್ದೇಶಿಸಿದ್ದಾರೆ, ಸೈ ನಂ. – 89/2 ಅಳತೆಯ ಅಂದಾಜು 32 ಗುಂಟಾಗಳು, 3) ಸೈ ನಂ.–138 ಅಂದಾಜು 3 ಎಕರೆ 03 ಗುಂಟಾಗಳು ,4) ಸೈ ನಂ.–125 ಅಳತೆಯ ಅಂದಾಜು 3 ಎಕರೆ 34 ಗುಂಟಾಗಳು 5) ಸುಮಾರು 147 ಅಂದಾಜು ಜಿ. 6) ಸೈ ನಂ–136 ಅಳತೆಯ ಅಂದಾಜು 1 ಎಕರೆ 25 ಗುಂಟಾಗಳು, 7) ಸೈ ನಂ.–113/1 ಅಂದಾಜು 2 ಎಕರೆ 17 ಗುಂಟಾಗಳು, 8) ಸೈ ನಂ. 113/2 ಅಳತೆಯ ಅಂದಾಜು 3 ಎಕರೆ 12 ಗುಂಟಾಗಳು, ಸುಮಾರು 12 ಗುಂಟಾಗಳು, 9) ಕರ್ನಾಟಕ, ಚಾಮರಾಜನಗರ ಜಿಲ್ಲೆ, ಹರದನಹಳ್ಳಿ ಹೋಬಳಿ, ಚೌಡಹಳ್ಳಿ ಗ್ರಾಮದಲ್ಲಿರುವ ಎಕರೆ 20 ಗುಂಟಾಗಳು, ಮತ್ತು 10) ಸೈ ನಂ–104/1 ಅಂದಾಜು 4 ಎಕರೆ ಅಳತೆ, 11) ಸೈ ನಂ – 104/2 ಅಳತೆ, ಸುಮಾರು 3 ಎಕರೆ ವಿಹಾರ ಹಳ್ಳಿ, ಗ್ರಾ. ಪಂ. ಹೋಬಳಿ, ಚಾಮರಾಜನಗರ ಜಿಲ್ಲೆ, ಕರ್ನಾಟಕ ರಾಕಾಂಟೂರ್ ಗ್ರಾನೈಟ್ ಲಿಮಿಟೆಡ್‌ನಿಂದ ಅದರ ಅಧಿಕೃತ ಪ್ರತಿನಿಧಿ ಶ್ರೀ ರಾಜೀವ್ ವಶಿಷ್ಟ್ S/O ರಾಮ್ ಧನ್ ವಶಿಷ್ಟ್ ಮೂಲಕ ನಂ. 57, ಸುಷ್ಮಾ ಇನ್ಫಿನಿಯಮ್, 4 ನೇ ಮಹಡಿ, ಜಿರಾಕ್‌ಪುರ, ಚಂಡೀಗಢ 160018 ನಲ್ಲಿ ನೋಂದಾಯಿತ ಕಚೇರಿಯನ್ನು ಹೊಂದಿದೆ. ಹೇಳಲಾದ ಆಸ್ತಿಯನ್ನು ಬ್ಯಾಂಕ್ ಆಫ್ ಮಹಾರಾಷ್ಟ್ರ ದಲ್ಲಿ ಅಡಮಾನ ಇರಿಸಲಾಗಿದೆ, ಅವರಲ್ಲದೆ ಯಾವುದೇ ಇತರ ವ್ಯಕ್ತಿ (ಗಳು) ಸದರಿ ಆಸ್ತಿಗೆ ಸಂಬಂಧಿಸಿದಂತೆ ಯಾವುದೇ ಹಕ್ಕು, ಹಕ್ಕು, ಹಕ್ಕು, ಹಿತಾಸಕ್ತಿ, ಹಕ್ಕು ಅಥವಾ ಆಕ್ಷೇಪಣೆಯನ್ನು ಹೊಂದಿದ್ದರೆ, ಈ ಸೂಚನೆಯನ್ನು ಪ್ರಕಟಿಸಿದ ದಿನಾಂಕದಿಂದ 7 (ಏಳು) ದಿನಗಳಲ್ಲಿ ತಮ್ಮ ಆಕ್ಷೇಪಣೆಗಳನ್ನು ಸಂಬಂಧಿತ ಪೋಷಕ ದಾಖಲೆಗಳೊಂದಿಗೆ ತಿಳಿಸಲು ಮತ್ತು ಸಲ್ಲಿಸಲು ಈ ಮೂಲಕ ಕರೆ ನೀಡಲಾಗಿದೆ. ನಿಗದಿತ ಸಮಯದೊಳಗೆ ಯಾವುದೇ ಆಕ್ಷೇಪಣೆಗಳನ್ನು ಸ್ವೀಕರಿಸದಿದ್ದರೆ, ಹೇಳಲಾದ ಆಸ್ತಿಯ ವಿರುದ್ಧ ಯಾವುದೇ ಕ್ಲೈಮ್‌ಗಳಿಲ್ಲ ಎಂದು ಭಾವಿಸಲಾಗುತ್ತದೆ ಮತ್ತು ಖರೀದಿದಾರರು ಅದರ ಪ್ರಕಾರ ವ್ಯವಹಾರವನ್ನು ಮುಂದುವರಿಸುತ್ತಾರೆ.

ಸಂಪರ್ಕಿಸಿ: ರಾಹುಲ್ ವಿಶಿಂದಾಸ್ ರಾವ್ಲಾನಿ
ಮೊ: 9985769000

Sd/- Authorised Signature
FARMICO EARTH PRIVATE LIMITED

ಸ್ಥಾಪನೆ : 1916 RBI License No. UBD KA 844P, Dt.28.01.1987

ದಿ ಮುಸ್ಲಿಂ ಕೋ–ಆಪರೇಟಿವ್ ಬ್ಯಾಂಕ್ ನಿ.,

ಶಾಖೆಗಳು: 1) ಉದಯಗಿರಿ 2) ರಾಜೀವ್‌ನಗರ 3) ಹುಣಸೂರು
ಮುಖ್ಯ ಶಾಖೆ: ನ್ಯೂ ಸಯ್ಯಾಜಿ ರಾವ್ ರಸ್ತೆ, ಮೈಸೂರು–570021

ನಿಯಮ ಸೆಕ್ಷನ್ 13(4) ರ ಅಡಿಯಲ್ಲಿ ನಿಯಮ 8(1) – ಪರಿಶಿಷ್ಟ IV
ಕಬ್ಜೆ (ಸ್ವಾಧೀನ) ವಹಿಸುವ ಬಗೆಗಿನ ತಿಳುವಳಿಕೆ ನೋಟೀಸ್

ಕೆಳಸಹಿದಾರರು ದಿ ಮುಸ್ಲಿಂ ಕೋ–ಆಪರೇಟಿವ್ ಬ್ಯಾಂಕ್ ನಿ., ಮೈಸೂರು ಇದರ ಅಧಿಕಾರ ಹೊಂದಿದ ಅಧಿಕಾರಿಯಾಗಿದ್ದು ಹಣಕಾಸು ಸ್ವತ್ತುಗಳ ಪ್ರತಿಭೂತಿ ಹಿತಾಸಕ್ತಿ ಮತ್ತು ಪುನರ್ ನಿರ್ಮಾಣ ಭದ್ರತೆ ಮತ್ತು ಭದ್ರತಾ ಹಿತಾಸಕ್ತಿ [ನಿಯಮ, 2002 (2002ರ 54)] ರ ಅನ್ವಯ ಸೆಕ್ಷನ್ 13(12)ರ [ನಿಯಮ 3] ಅನ್ನು ಓದಿಕೊಂಡಂತೆ ಭದ್ರತಾ ಹಿತಾಸಕ್ತಿ (ಅನುಷ್ಠಾನ) ನಿಯಮ 2002ರ ಅನ್ವಯ ಈ ಕೆಳಗಿನ ಸಾಲಗಾರರಿಗೆ ಸೆಕ್ಷನ್ 13(2) ರ ಅಡಿ ತಗಾದೆ ಸೂಚನೆಯನ್ನು ನೀಡಿದ್ದು, ನೋಟೀಸ್‌ನಲ್ಲಿ ತಿಳಿಸಿರುವ ಮೊತ್ತವನ್ನು ಈ ನೋಟೀಸ್ ನೀಡಿದ 60 ದಿನಗಳ ಒಳಗೆ ಸೂಚಿಸಿರುವ ಮೊಬಲಗನ್ನು ಬಡ್ಡಿಯೊಂದಿಗೆ ಮರು ಪಾವತಿಸುವಂತೆ ಸೂಚಿಸಲಾಗಿತ್ತು.

ಸಾಲಗಾರರುಗಳು ಸಾಲದ ಹಣವನ್ನು ಮರು ಪಾವತಿ ಮಾಡಲು ವಿಫಲರಾಗಿದ್ದು ಸಾಲಗಾರರುಗಳಿಗೆ ಮತ್ತು ಸಮಸ್ತ ಸಾರ್ವಜನಿಕರಿಗೆ ಈ ಮೂಲಕ ಸೂಚಿಸುವುದೇನೆಂದರೆ ಕೆಳ ಸಹಿದಾರರು ಈ ಕೆಳಗೆ ವಿವರಿಸಿರುವ ಸ್ಥಿರಾಸ್ತಿಗಳನ್ನು ಸೆಕ್ಷನ್ 13(4) ಕಾಯಿದೆ ನಿಯಮ 8 ಮತ್ತು 9 ಅನ್ನು ಓದಿಕೊಂಡಂತೆ ಭದ್ರತಾ ಹಿತಾಸಕ್ತಿ ಜಾರಿ ಕಾಯಿದೆ ಅನ್ವಯ ಪ್ರದತ್ತವಾದ ಅಧಿಕಾರವನ್ನು ಚಲಾಯಿಸಿ ಈ ಕೆಳಕಂಡ ದಿನಾಂಕದಂದು ವಿವರಿಸಲಾಗಿರುವ ಸ್ವತ್ತುಗಳನ್ನು ವಶಪಡಿಸಿಕೊಂಡಿರುತ್ತಾರೆ.

ನಿರ್ದಿಷ್ಟವಾಗಿ ಸಾಲಗಾರರುಗಳಿಗೆ, ಕಾನೂನುಬದ್ಧ ಉತ್ತರಾಧಿಕಾರಿಗಳಿಗೆ ಮತ್ತು ಸಮಸ್ತ ಸಾರ್ವಜನಿಕರಿಗೆ ಈ ಮೂಲಕ ಎಚ್ಚರಿಕೆ ನೀಡುವುದೇನೆಂದರೆ ಯಾರೊಬ್ಬರೂ ಸಹ ಸದರಿ ಸ್ವತ್ತುಗಳ ಬಗ್ಗೆ ವ್ಯವಹರಿಸಬಾರದು ಮತ್ತು ಸದರಿ ಸ್ವತ್ತಿನ ಬಗ್ಗೆ ಯಾವುದೇ ವ್ಯವಹಾರ ನಡೆಸಿದ್ದೆ ಆದರೆ ದಿ ಮುಸ್ಲಿಂ ಕೋ–ಆಪರೇಟಿವ್ ಬ್ಯಾಂಕ್ ನಿ., ಮೈಸೂರು ಈ ಬ್ಯಾಂಕಿಗೆ ಬಾಕಿ ಇರುವ ಮೊತ್ತ ಮತ್ತು ಇದರ ಮೇಲಿನ ಬಡ್ಡಿ ಬಾಕಿ ಚುಕ್ತ ಮಾಡುವುದಕ್ಕೆ ಅದು ಒಳಪಟ್ಟಿರುತ್ತದೆ.

ಕಾಯಿದೆ ಸೆಕ್ಷನ್ 13(8) ರ ನಿಬಂಧನೆಗಳಿಗೆ ಸಂಬಂಧಿಸಿದಂತೆ ಲಭ್ಯವಿರುವ ಸಮಯಕ್ಕೆ ತಮ್ಮ ಸ್ವತ್ತುಗಳನ್ನು ಪಡೆದುಕೊಳ್ಳಲು ಸಾಲಗಾರರ ಗಮನಕ್ಕೂ ತರಲಾಗಿದೆ.

ಕ್ರಮ ಸಂಖ್ಯೆ	ಸಾಲಗಾರರು ಮತ್ತು ಜಾಮೀನುದಾರರ ಹೆಸರು	ಸ್ಥಿರಾಸ್ತಿ ವಿವರ	ಡಿಮ್ಯಾಂಡ್ ನೋಟೀಸ್ ದಿನಾಂಕ	ಸ್ವಾಧೀನಪಡಿಸಿ ಕೊಂಡಿರುವ ದಿನಾಂಕ	ಬಾಕಿ ಇರುವ ಮೊತ್ತ (ರೂ.ಗಳಲ್ಲಿ)
1.	1) ಶ್ರೀ ಅಬ್ದುಲ್ ವಾಹಿದ್ ಬಿನ್ ಕೆ. ಅಬ್ದುಲ್ ವಹಾಬ್ 2) ಶ್ರೀಮತಿ ಅಫ್ಸರ್ ನಯಾಜಿ ಕೋಂ ಅಬ್ದುಲ್ ವಾಹಿದ್ ಮನೆ ನಂ.2041, ಬೇರ್ಕ ಮಕಾನ್, ಅಶೋಕ ವೆಸ್ಟ್ ಕ್ರಾಸ್ 15, ಲಷ್ಕರ್ ಮೊಹಲ್ಲಾ, ಮೈಸೂರು.	ಮೈಸೂರು ಸಿಟಿ, ಎನ್.ಆರ್. ಮೊಹಲ್ಲಾ, ಕೆಸರೆ 2ನೇ ಸ್ಟೇಜ್, ಕಾರ್ಪೊರೇಶನ್ ಮನೆ ನಂ.60. <u>ವಿಸ್ತೀರ್ಣ:</u> ಪೂರ್ವ–ಪಶ್ಚಿಮ: 20.00 ಅಡಿಗಳು ಮತ್ತು ಉತ್ತರ–ದಕ್ಷಿಣ: 33.00. <u>ಚಕ್ಕುಬಂಧಿ:</u>– **ಪೂರ್ವಕ್ಕೆ:** 59ನೇ ನಂಬರಿನ ಸ್ವತ್ತು, **ಪಶ್ಚಿಮಕ್ಕೆ:** 61ನೇ ನಂಬರಿನ ಸ್ವತ್ತು, **ಉತ್ತರಕ್ಕೆ:** 109ನೇ ನಂಬರಿನ ಸ್ವತ್ತು, **ದಕ್ಷಿಣಕ್ಕೆ:** ರಸ್ತೆ.	05.08.2025 ಎನ್‌ಪಿಎ ದಿನಾಂಕ 08.04.2025	24.10.2025	ಖಾತೆ ಸಂಖ್ಯೆ ಹೆಚ್‌ಪಿ–9373 ರೂ.9,35,349/– + ದಿನಾಂಕ 04.08.2025 ರಿಂದ ಬಡ್ಡಿ ಇದರೊಂದಿಗೆ ಪ್ರಾಸಂಗಿಕ ಖರ್ಚು, ವೆಚ್ಚಗಳು, ಪ್ರಭಾರಗಳು ಇತ್ಯಾದಿ
2.	1) ಶ್ರೀ ಇಮ್ರಾನ್ ಷರೀಫ್ ಬಿನ್ ಸಲೀಮ್ ಷರೀಫ್ ಮನೆ ನಂ.216, ಮಹದೇವಪುರ ಮುಖ್ಯರಸ್ತೆ, ಅಜೀಜ್‌ಸೇಠ್ ನಗರ, ಮೈಸೂರು–19.	ಮೈಸೂರು ಸಿಟಿ, ನಜರ್‌ಬಾದ್ ಮೊಹಲ್ಲಾ, ಬೀಡಿ ಕಾರ್ಮಿಕರ ಕಾಲೋನಿ, ಕೆ.ಎಂ. ಹಳ್ಳಿ ಎಕ್ಸ್‌ಟೆನ್‌ಶನ್, ಅಜೀಜ್‌ಸೇಠ್ ನಗರ, ಮನೆ ನಂ. ಎಲ್‌ಐಜಿ–632. <u>ವಿಸ್ತೀರ್ಣ:</u> ಪೂರ್ವ–ಪಶ್ಚಿಮ: 12.20 ಮೀಟರ್‌ಗಳು ಮತ್ತು ಉತ್ತರ–ದಕ್ಷಿಣ: 6.5 ಮೀಟರ್‌ಗಳು. <u>ಚಕ್ಕುಬಂಧಿ:</u>– **ಪೂರ್ವಕ್ಕೆ:** ರಸ್ತೆ, **ಪಶ್ಚಿಮಕ್ಕೆ:** ಮನೆ ನಂ.665, **ಉತ್ತರಕ್ಕೆ:** ಮನೆ ನಂ.633, **ದಕ್ಷಿಣಕ್ಕೆ:** ಮನೆ ನಂ.631.	05.08.2025 ಎನ್‌ಪಿಎ ದಿನಾಂಕ 06.04.2025	24.10.2025	ಖಾತೆ ಸಂಖ್ಯೆ ಹೆಚ್‌ಎನ್–338 ರೂ.6,81,900/– + ದಿನಾಂಕ 04.08.2025 ರಿಂದ ಬಡ್ಡಿ ಇದರೊಂದಿಗೆ ಪ್ರಾಸಂಗಿಕ ಖರ್ಚು, ವೆಚ್ಚಗಳು, ಪ್ರಭಾರಗಳು ಇತ್ಯಾದಿ
3.	ಶ್ರೀ ಇಮ್ತಿಯಾಜ್ ಅಹ್ಮದ್ ಬಿನ್ ಫೈರೋಜ್ ಅಹ್ಮದ್ ಮನೆ ನಂ.1528, ಮುಸ್ಲಿಂ ಬ್ಲಾಕ್, ಹುಣಸೂರು ಟೌನ್, ಮೈಸೂರು ಜಿಲ್ಲೆ.	<u>ಭಾಗ–1</u>: ಮೈಸೂರು ಜಿಲ್ಲೆ, ಹುಣಸೂರು ಟೌನ್, 1ನೇ ಡಿವಿಜನ್, ಖಾಜಿ ಮೊಹಲ್ಲಾ, ಮುನಿಸಿಪಾಲಿಟಿ ಖಾತಾ ಅಸೆಸ್‌ಮೆಂಟ್ ನಂ.772/1495/ಎ/1, <u>ವಿಸ್ತೀರ್ಣ:</u> ಪೂರ್ವ–ಪಶ್ಚಿಮ: 30.00 ಅಡಿಗಳು ಮತ್ತು ಉತ್ತರ–ದಕ್ಷಿಣ: 37.5 ಅಡಿಗಳು. <u>ಚಕ್ಕುಬಂಧಿ:</u>– **ಪೂರ್ವಕ್ಕೆ:** ಅಮೀರ್ ಅಹ್ಮದ್ ರವರ ಸ್ವತ್ತು, **ಪಶ್ಚಿಮಕ್ಕೆ:** ಮುನೀರ್ ಅಹ್ಮದ್ ಮತ್ತು ಖಾಲಿ ಜಮೀನು, **ಉತ್ತರಕ್ಕೆ:** ಅರ್ಜಿದಾರರ ಸ್ವತ್ತು, **ದಕ್ಷಿಣಕ್ಕೆ:** ಅಸೆಸ್‌ಮೆಂಟ್ ನಂ.768/1495/2 ಹೊಂದಿರುವ ಸ್ವತ್ತು. <u>ಭಾಗ–2</u>: ಮೈಸೂರು ಜಿಲ್ಲೆ, ಹುಣಸೂರು ಟೌನ್, 1ನೇ ಡಿವಿಜನ್, ಖಾಜಿ ಮೊಹಲ್ಲಾ, ಮುನಿಸಿಪಾಲಿಟಿ ಖಾತಾ ಅಸೆಸ್‌ಮೆಂಟ್ ನಂ.768/1495/2/1, <u>ವಿಸ್ತೀರ್ಣ:</u> ಪೂರ್ವ–ಪಶ್ಚಿಮ: 30.00 ಅಡಿಗಳು ಮತ್ತು ಉತ್ತರ–ದಕ್ಷಿಣ: 30.00 ಅಡಿಗಳು. <u>ಚಕ್ಕುಬಂಧಿ:</u>– **ಪೂರ್ವಕ್ಕೆ:** ಅಮೀರ್ ಅಹ್ಮದ್ ರವರ ಸ್ವತ್ತು, **ಪಶ್ಚಿಮಕ್ಕೆ:** ಅರ್ಜಿದಾರರ ಸ್ವತ್ತು, **ಉತ್ತರಕ್ಕೆ:** ಅಸೆಸ್‌ಮೆಂಟ್ ನಂ.772/1495/ಎ ಹೊಂದಿರುವ ಸ್ವತ್ತು, **ದಕ್ಷಿಣಕ್ಕೆ:** ಚರ್ಚ್. <u>ಭಾಗ–3</u>: ಮೈಸೂರು ಜಿಲ್ಲೆ, ಹುಣಸೂರು ಟೌನ್, 1ನೇ ಡಿವಿಜನ್, ಮುಸ್ಲಿಂ ಬ್ಲಾಕ್, ಮುನಿಸಿಪಾಲಿಟಿ ಖಾತಾ ಅಸೆಸ್‌ಮೆಂಟ್ ನಂ.829/1527/2/1, <u>ವಿಸ್ತೀರ್ಣ:</u> ಪೂರ್ವ–ಪಶ್ಚಿಮ: 40.00 ಅಡಿಗಳು ಮತ್ತು ಉತ್ತರ–ದಕ್ಷಿಣ: 25.00 ಅಡಿಗಳು. <u>ಚಕ್ಕುಬಂಧಿ:</u>– **ಪೂರ್ವಕ್ಕೆ:** ಫೈರೋಜ್ ಅಹ್ಮದ್ ರವರ ಸ್ವತ್ತು, **ಪಶ್ಚಿಮಕ್ಕೆ:** ಖಲೀಲ್ ಅಹ್ಮದ್ ರವರ ಸ್ವತ್ತು, **ಉತ್ತರಕ್ಕೆ:** 10 ಅಡಿಗಳ ರಸ್ತೆ, **ದಕ್ಷಿಣಕ್ಕೆ:** ಸುಬ್ಬ ರವರ ಸ್ವತ್ತು.	13.01.2025 ಎನ್‌ಪಿಎ ದಿನಾಂಕ 31.04.2025	24.10.2025	ಖಾತೆ ಸಂಖ್ಯೆ ಹೆಚ್‌ಪಿ–172 ರೂ.32,52,642/– + ದಿನಾಂಕ 13.01.2025 ರಿಂದ ಬಡ್ಡಿ ಇದರೊಂದಿಗೆ ಪ್ರಾಸಂಗಿಕ ಖರ್ಚು, ವೆಚ್ಚಗಳು, ಪ್ರಭಾರಗಳು ಇತ್ಯಾದಿ

ದಿನಾಂಕ: 30.10.2025
ಸ್ಥಳ: ಮೈಸೂರು

ಸಹಿ/– ಅಧಿಕೃತ ಅಧಿಕಾರಿ
ದಿ ಮುಸ್ಲಿಂ ಕೋ–ಆಪರೇಟಿವ್ ಬ್ಯಾಂಕ್ ಲಿಮಿಟೆಡ್, ಮೈಸೂರು.